ಶುಕ್ರವಾರ, ನವೆಂಬರ್ 24, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 324 | ಪುಟ 16

www.prajavani.net

prajavani.net | prajavani | Prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಬ್ಯಾಡ್ ಮ್ಯಾನರ್ಸ್' ಸಿನಿಮಾ ಅಚ್ಚರಿಯ ಗುಚ್ಛ ಎಂದಿದ್ದಾರೆ ನಟ ಅಭಿಷೇಕ್ ಅಂಬರೀಶ್



ಆಳ-ಅಗಲ
ಹಿಂದೆಂದಿಗಿಂತ ಅತ್ಯಗತ್ಯ ಸಂವಿಧಾನ ಜಾಗೃತಿ

ಅತೃಪ್ತರ ಮನವೊಲಿಕೆಗೆ ವಿಜಯೇಂದ್ರ ಯತ್ನ 6

ನಟ ಪ್ರಕಾಶ್ ರಾಜ್‌ಗೆ ಇ.ಡಿ ಸಮನ್ಸ್ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,017 ▼	19,802 ▼	₹63,360 (ಬೆಂಗಳೂರು) ▲	₹75,300 (ಬೆಂಗಳೂರು)	83.34 ▼

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಆದಾಯ ಮೀರಿದ ಆಸ್ತಿ ಗಳಿಕೆ ಪ್ರಕರಣ

ಸಿಬಿಐ ತನಿಖೆ: ಅನುಮತಿ ವಾಪಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆದಾಯ ಮೀರಿದ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ಅನುಮತಿ ನೀಡಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದೆ.

ಉಪ ಮುಖ್ಯಮಂತ್ರಿಯೂ ಆಗಿರುವ ಶಿವಕುಮಾರ್ ಅನುಪಸ್ಥಿತಿಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆ ಈ ತೀರ್ಮಾನ ಕೈಗೊಂಡಿದೆ. ಈ ಪ್ರಕರಣದ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಸಂಪುಟ ಸಭೆಯಲ್ಲಿ ಉಪಸ್ಥಿತರಿದ್ದು ತೀರ್ಮಾನದಲ್ಲಿ ಭಾಗಿಯಾದರೆ, ಹಿತಾಸಕ್ತಿ ಸಂಘರ್ಷದ ಪ್ರಶ್ನೆಯನ್ನು ಸಿಬಿಐಯು ಕೋರ್ಟ್ ಮುಂದಿಡಬಹುದು ಎಂಬ ಕಾರಣಕ್ಕೆ ಅವರು ದೂರ ಉಳಿದರು ಎಂದು ಹೇಳಲಾಗಿದೆ.

ಯಡಿಯೂರಪ್ಪ ನೇತೃತ್ವದ ಸರ್ಕಾರದ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ಇದೇ 29ರಂದು ಹೈಕೋರ್ಟ್‌ನಲ್ಲಿ ನಡೆಯಲಿದೆ. ಅಂದು ನಡೆಯುವ ವಿಚಾರಣೆ ವೇಳೆ ಸಚಿವ ಸಂಪುಟದ ತೀರ್ಮಾನವನ್ನು ಕೋರ್ಟ್‌ಗೆ ಸಲ್ಲಿಸುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ. ಪಾಟೀಲ, 'ಶಿವಕುಮಾರ್ ವಿರುದ್ಧದ ತನಿಖೆಯನ್ನು ಸಿಬಿಐಗೆ ವಹಿಸಲು ಹಿಂದಿನ ಸರ್ಕಾರ ನಿರ್ಣಯ ಕೈಗೊಂಡಿತ್ತು. ಸಿಬಿಐಗೆ ವಹಿಸುವ ಮೊದಲು ವಿಧಾನ ಸಭಾಧ್ಯಕ್ಷರಿಂದ ಒಪ್ಪಿಗೆ ಪಡೆಯಬೇಕಿತ್ತು. ಅದನ್ನು ಪಡೆಯದೇ ಶಿಫಾರಸು ಮಾಡಲಾಗಿತ್ತು. ಹಿಂದಿನ ಸರ್ಕಾರ ಕಾನೂನುಬಾಹಿರವಾಗಿ ನಿರ್ಧಾರ ಕೈಗೊಂಡಿದೆ ಎಂಬ ಕಾರಣಕ್ಕೆ ವಾಪಸ್ ಪಡೆಯಲು ನಿರ್ಧರಿಸಲಾಯಿತು ಎಂದರು.

'ಈ ತೀರ್ಮಾನ ಕೈಗೊಳ್ಳುವ ಮುನ್ನ ಹಿಂದಿನ ಹಾಗೂ ಈಗಿನ ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯವನ್ನೂ ಗಂಭೀರವಾಗಿ ಪರಿಗಣಿಸಲಾಗಿದೆ. ಶುಕ್ರವಾರ ಅಥವಾ ಶನಿವಾರ ಈ ಕುರಿತು ಆದೇಶ ಹೊರಡಿಸಲಾಗುವುದು' ಎಂದರು.

ಪ್ರಕರಣದ ಸಂಬಂಧ, ಅಡ್ವೊಕೇಟ್ ಜನರಲ್ ಶಶಿಕಿರಣ ಶೆಟ್ಟಿ ಅವರು, ತಮ್ಮ ಅಭಿಪ್ರಾಯವನ್ನು ಗೃಹ ಇಲಾಖೆಗೆ ನೀಡಿದ್ದರು. ಅದನ್ನು ಆಧರಿಸಿ, ಸಚಿವ ಸಂಪುಟ ಸಭೆಗೆ ಪ್ರಸ್ತಾವನೆ ಮಂಡಿಸಲಾಗಿತ್ತು.

ಪ್ರಕರಣವೇನು?: ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ, ಶಾಸಕರಾಗಿದ್ದ ಡಿ.ಕೆ. ಶಿವಕುಮಾರ್ ಅವರು ಆದಾಯ ಮೀರಿ ಆಸ್ತಿ ಗಳಿಸಿದ್ದಾರೆ ಎಂದು ಆರೋಪಿಸಿದ್ದ ಪ್ರಕರಣವನ್ನು, 2019ರ ಸೆ. 25ರಂದು ಸಿಬಿಐಗೆ ವಹಿಸಲು ಆದೇಶ ಹೊರಡಿಸಿದ್ದರು. ದೆಹಲಿಯ ವಿಶೇಷ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ 1946 ಅಡಿ ಸೆಕ್ಷನ್ 6 ಹಾಗೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ವಿವಿಧ ಕಲಂಗಳ ಅಡಿಯಲ್ಲಿ 2020ರ ಅ. 3ರಂದು ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು.

'ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವು 2023ರ ಏಪ್ರಿಲ್‌ನಲ್ಲಿ ವಜಾಗೊಳಿಸಿತ್ತು.

ಗುಜರಾತ್ ಶಾಸಕರ ರಕ್ಷಣೆ: ಐ.ಟಿ. ದಾಳಿ

ಗುಜರಾತ್ ವಿಧಾನಸಭೆಯಿಂದ ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು 2017ರಲ್ಲಿ ಚುನಾವಣೆ ನಡೆದಿತ್ತು. ಈ ವೇಳೆ, 'ಆಪರೇಷನ್ ಕಮಲ'ದಿಂದ ಬಚಾವ್ ಮಾಡಲು ಅಲ್ಲಿಂದ ಕರೆತರಲಾಗಿದ್ದ ಶಾಸಕರಿಗೆ ಈಗಲ್‌ಟನ್ ರೆಸಾರ್ಟ್‌ನಲ್ಲಿ 'ರಕ್ಷಣೆ' ನೀಡಲಾಗಿತ್ತು. ಈ ಜವಾಬ್ದಾರಿಯನ್ನು ಶಿವಕುಮಾರ್ ನಿರ್ವಹಿಸಿದ್ದರು. ಆಗ ರೆಸಾರ್ಟ್‌ಗೆ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಬೆಂಗಳೂರು ಮತ್ತಿತರ ಕಡೆಗಳಲ್ಲಿ ನಡೆಸಿದ ದಾಳಿಯಲ್ಲಿ ₹8.59 ಕೋಟಿ ವಶಪಡಿಸಿ ಕೊಂಡಿದ್ದರು. ಆದಾಯ ತೆರಿಗೆ ನೀಡಿದ ಮಾಹಿತಿ ಆಧರಿಸಿ ವಿಚಾರಣೆ ಕೈಗೆತ್ತಿಕೊಂಡಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶಿವಕುಮಾರ್ ಅವರನ್ನು ಬಂಧಿಸಿದ್ದರು. ಇ.ಡಿ ತನಿಖೆ ಆಧರಿಸಿ, ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ನೀಡುವಂತೆ ಕೋರಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು.

ಎಫ್‌ಐಆರ್‌ನಲ್ಲಿ ಏನಿತ್ತು?

2013-18ರ ಐದು ವರ್ಷಗಳಲ್ಲಿ ಶಿವಕುಮಾರ್ ಆಸ್ತಿ ಶೇ 380ರಷ್ಟು ಏರಿಕೆಯಾಗಿದೆ ಎಂದು ಸಿಬಿಐ ತನ್ನ ಎಫ್‌ಐಆರ್‌ನಲ್ಲಿ ಹೇಳಿತ್ತು. ಶಿವಕುಮಾರ್ ಅವರು ಚುನಾವಣಾ ಉದ್ದೇಶಕ್ಕಾಗಿ 2013ರ ಏಪ್ರಿಲ್ 13ರಂದು ಸಲ್ಲಿಸಿದ್ದ ಅಫಿಡವಿಟ್ ಪ್ರಕಾರ ತಮ್ಮ ಆಸ್ತಿ ₹33.92 ಕೋಟಿ. ಇದು ಏಪ್ರಿಲ್ 30, 2018ಕ್ಕೆ ₹162.53 ಕೋಟಿಗೆ ಏರಿತು. ಐದು ವರ್ಷಗಳಲ್ಲಿ ನಿವ್ವಳ ಹೆಚ್ಚಳವು ₹128.6 ಕೋಟಿಯಾಗಿದೆ. ಗೊತ್ತಿರುವ ಆದಾಯದ ಮೂಲಗಳಿಗಿಂತ ಹೆಚ್ಚಿದ ಆದಾಯ ₹74.93 ಕೋಟಿ ಎಂದು ಎಫ್‌ಐಆರ್ ಉಲ್ಲೇಖಿಸಿತ್ತು.



'ಕುದಿ' ಕಂಬಳ

ಕಂಬಳಕ್ಕಿಂತ ಮೊದಲು ನಡೆಸುವ ಅಭ್ಯಾಸ ಓಟ 'ಕುದಿ ಕಂಬಳ'ದಲ್ಲಿ ಭಾಗವಹಿಸಿದ ಕೋಣಗಳು 'ಬೆಂಗಳೂರು ಕಂಬಳ ನಮ್ಮ ಕಂಬಳ'ದ ಜೋಡುಕರೆಯಲ್ಲಿ ಗುರುವಾರ ಓಡಿದ ದೃಶ್ಯ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ನಿರ್ಧಾರ: ಪಂಜಾಬ್ ರಾಜ್ಯಪಾಲರಿಗೆ ನಿರ್ದೇಶನ

'ರಾಜ್ಯಪಾಲರು ಅನಿರ್ದಿಷ್ಟಾವಧಿಗೆ ಮಸೂದೆ ಬಾಕಿ ಉಳಿಸುವಂತಿಲ್ಲ'

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: ಶಾಸಕಾಂಗದ ಭಾಗವೂ ಆಗಿರುವ ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕುವುದನ್ನು ತಡೆಹಿಡಿಯಬಾರದು. ಆ ಮೂಲಕ, ಚುನಾಯಿತ ಶಾಸನಸಭೆಯ ಕಾರ್ಯನಿರ್ವಹಣೆಗೆ ತೊಡಕಾಗಬಾರದು ಎಂದು ಸುಪ್ರಿಂಕೋರ್ಟ್ ಹೇಳಿದೆ.

ರಾಜ್ಯಪಾಲರು ರಾಜ್ಯವೊಂದರ ಸಾಂವಿಧಾನಿಕ ಮುಖ್ಯಸ್ಥರು. ಅವರು ಕೂಡ ಕೆಲ ಸಾಂವಿಧಾನಿಕ ಅಧಿಕಾರಗಳನ್ನು ಹೊಂದಿರುತ್ತಾರೆ. ಆದರೆ, ಯಾವುದೇ ಕ್ರಮ ತೆಗೆದುಕೊಳ್ಳದೆಯೇ ಮಸೂದೆಗಳನ್ನು ಅನಿರ್ದಿಷ್ಟಾವಧಿಗೆ ಬಾಕಿ ಉಳಿಸಿಕೊಳ್ಳುವ ಅಧಿಕಾರ ಹೊಂದಿಲ್ಲ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಹೇಳಿದೆ.

ಜೂನ್ 19 ಹಾಗೂ 20ರಂದು ನಡೆದ ವಿಧಾನಸಭೆ ಅಧಿವೇಶನದಲ್ಲಿ ಅನುಮೋದಿಸಲಾದ ಮಸೂದೆಗಳ ಕುರಿತು ನಿರ್ಧರಿಸುವಂತೆ ಪಂಜಾಬ್ ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರಿಗೆ ನಿರ್ದೇಶನ ನೀಡಿದೆ.

ಅಧಿವೇಶನದಲ್ಲಿ ಅನುಮೋದಿಸಿದ್ದ ನಾಲ್ಕು ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕುತ್ತಿಲ್ಲ ಎಂದು ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಇತ್ಯರ್ಥಪಡಿಸಿರುವ ನ್ಯಾಯಪೀಠ, ನವೆಂಬರ್ 10ರಂದು ನೀಡಿರುವ ಆದೇಶದಲ್ಲಿ ಈ ಮಾತು ಹೇಳಿದೆ.

27 ಪುಟಗಳ ಆದೇಶದ ಪ್ರತಿಯನ್ನು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಗುರುವಾರ ಅಪ್‌ಲೋಡ್ ಮಾಡಲಾಗಿದೆ.

'ಜೂನ್ 19 ಹಾಗೂ 20ರಂದು ನಡೆದಿದ್ದ ವಿಧಾನಸಭೆ ಅಧಿವೇಶನ ಕಾನೂನುಬದ್ಧ ಹಾಗೂ ಸದನದ ಕಲಾಪಗಳು ಸಿಂಧುವಾಗಿವೆ ಎಂಬುದಾಗಿ ಘೋಷಿಸಬೇಕು' ಎಂದೂ ಪಂಜಾಬ್ ಸರ್ಕಾರ ಕೋರಿತ್ತು.

9ನೇ ಪುಟ ನೋಡಿ

₹7.5 ಲಕ್ಷ ಲಂಚ: ಬೆಸ್ಕಾಂ ಸಿಜಿಎಂ ಬಂಧನ

ಬೆಂಗಳೂರು: ವಿದ್ಯುತ್ ಸಂಪರ್ಕ ಬದಲಾವಣೆ ಮಾಡಲು ₹7.50 ಲಕ್ಷ ಲಂಚ ಪಡೆಯುತ್ತಿದ್ದ ಆರೋಪದಡಿ ಬೆಸ್ಕಾಂ ಮುಖ್ಯ ಪ್ರಧಾನ ವ್ಯವಸ್ಥಾಪಕ ಎಂ.ಎಲ್. ನಾಗರಾಜ್ ಹಾಗೂ ಕಾರು ಚಾಲಕ ಮುರುಳಿಕೃಷ್ಣ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

'ಬೆಸ್ಕಾಂ ಕಾರ್ಯಾಚರಣೆ (ಎಲೆಕ್ಟ್ರಿಕಲ್) ವಿಭಾಗದ ಎಂ.ಎಲ್. ನಾಗರಾಜ್ ಪರವಾಗಿ ಚಾಲಕ ಮುರುಳಿಕೃಷ್ಣ ₹7.50 ಲಕ್ಷ ಲಂಚ ಪಡೆಯುತ್ತಿದ್ದರು. ಅದೇ ಸಂದರ್ಭದಲ್ಲಿ ದಾಳಿ ಮಾಡಿ ಪುರಾವೆ ಸಮೇತ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದರು.

'ವಿದ್ಯುತ್ ಗುತ್ತಿಗೆದಾರ ಬಿ.ಎನ್. ಪ್ರತಾಪ್ ಅವರು ವಿದ್ಯುತ್ ಸಂಪರ್ಕವೊಂದನ್ನು ವಾಣಿಜ್ಯ ಬಳಕೆಯಿಂದ ಕೈಗಾರಿಕೆ ಬಳಕೆಗೆ ಬದಲಾವಣೆ ಮಾಡಲು ಕೋರಿದ್ದರು. ನಾಗರಾಜ್, ಲಂಚಕ್ಕೆ ಬೇಡಿಕೆ ಇರಿಸಿದ್ದರು. ಬೇಸತ್ತ ಪ್ರತಾಪ್ ಅವರು ದೂರು ನೀಡಿದ್ದರು. ಅದರನ್ವಯ ನಾಗರಾಜ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು' ಎಂದು ಹೇಳಿದರು.

'ಪ್ರತಾಪ್ ಅವರು ಹಣದ ಸಮೇತ ನಾಗರಾಜ್ ಕಚೇರಿಗೆ ಹೋಗಿದ್ದರು. ವಾಹನ ನಿಲುಗಡೆ ಜಾಗದಲ್ಲಿದ್ದ ಚಾಲಕನ ಕೈಗೆ ಹಣ ನೀಡುವಂತೆ ನಾಗರಾಜ್ ಹೇಳಿದ್ದರು. ಅದರಂತೆ ಪ್ರತಾಪ್, ಚಾಲಕನಿಗೆ ಹಣ ಕೊಟ್ಟಿದ್ದರು. ಅದೇ ವೇಳೆ ಚಾಲಕನನ್ನು ಹಿಡಿದುಕೊಳ್ಳಲಾಯಿತು. ಆತನ ಹೇಳಿಕೆ ಆಧರಿಸಿ ನಾಗರಾಜ್ ಅವರನ್ನೂ ಬಂಧಿಸಲಾಯಿತು' ಎಂದರು.

ಒತ್ತುವರಿ ಪರಿಶೀಲನೆಗೆ ಸೂಚನೆ

ಮಾಕಳಿ ಕೆರೆಯ 3 ಎಕರೆ 31 ಗುಂಟೆ ಜಾಗ • ಕೃಷಿ ಸಚಿವರ ಮೇಲೆ ದೂರು

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಮಾಕಳಿ ಗ್ರಾಮದಲ್ಲಿ 3 ಎಕರೆ 31 ಗುಂಟೆ ಕೆರೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ದೂರು ಸಲ್ಲಿಕೆಯಾಗಿದೆ. ಈ ಸಂಬಂಧ, ಪರಿಶೀಲನೆ ನಡೆಸುವಂತೆ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ ಅವರು, ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಮಗ್ಗುಲಲ್ಲೇ ಇರುವ ಹಿಮಾಲಯ ಡ್ರಗ್ ಹೌಸ್ ಸಮೀಪದ ಕೆರೆ ಅಂಗಳ ಒತ್ತುವರಿ ಮಾಡಲಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಈ ಜಮೀನು ₹100 ಕೋಟಿ ಬೆಲೆ ಬಾಳುತ್ತದೆ ಎಂದೂ ದೂರಿನಲ್ಲಿ ಹೇಳಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿ, ಗೋಪಿನಾಥ್ ತಿಮ್ಮಪ್ಪ ಗೌಡ ಅವರು ಇದೇ 18ರಂದು ಮುಖ್ಯ ಕಾರ್ಯದರ್ಶಿಗೆ ದೂರು ಸಲ್ಲಿಸಿದ್ದಾರೆ. ದೂರಿನ ಜೊತೆಗೆ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಿಂದ ಪಡೆದ ನಕ್ಷೆ, ದಿಶಾಂಕ್ ಆ್ಯಪ್‌ನಿಂದ ಪಡೆದ ದಾಖಲೆ ಮತ್ತು ಪಹಣಿ (ಆರ್‌ಟಿಸಿ) ಪ್ರತಿಯನ್ನೂ ಸಲ್ಲಿಸಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿಗೂ ಗೋಪಿನಾಥ್ ಪ್ರತ್ಯೇಕ ದೂರು ಸಲ್ಲಿಸಿದ್ದಾರೆ. ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸುವಂತೆ, ರಾಜ್ಯ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಎಂಜಿನಿಯರ್‌ಗೆ ಇಲಾಖೆ ಕಾರ್ಯದರ್ಶಿ ಸೂಚಿಸಿದ್ದಾರೆ. ಈ ಎರಡೂ ದೂರುಗಳ ಪ್ರತಿಗಳೂ 'ಪ್ರಜಾವಾಣಿ' ಲಭ್ಯವಾಗಿವೆ.

ದೂರಿನಲ್ಲಿ ಏನಿದೆ: 'ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಸಿದ್ಧಪಡಿಸಿರುವ ಮಾಕಳಿ ಗ್ರಾಮದ ನಕ್ಷೆಯಲ್ಲಿ ಸರ್ವೆ ನಂಬರ್ 13ರಲ್ಲಿ ಕೆರೆ ಇರುವ ಬಗ್ಗೆ ಸ್ಪಷ್ಟವಾಗಿದೆ. ಈ ಜಾಗದ ಮಾಲೀಕತ್ವವು 2021ರ ಏಪ್ರಿಲ್ 27ರಂದು ನೋಂದಾಯಿತ ದಾನಪತ್ರದ (ಸಂಖ್ಯೆ ಡಿಎಸ್‌ಪಿ-1-00523-2021-22) ಮೂಲಕ ವರ್ಗಾವಣೆಯಾಗಿದೆ. ಎನ್. ಚಲುವರಾಯಸ್ವಾಮಿ ಅವರು ತಮ್ಮ ಸಹೋದರ ಲಕ್ಷ್ಮೀ ಕಾಂತ ಅವರಿಂದ ಈ ಜಾಗವನ್ನು ದಾನವಾಗಿ ಪಡೆದಿದ್ದಾರೆ.

ಲಕ್ಷ್ಮಿಕಾಂತ ಅವರು ಎ.ಎಚ್. ತಿಮ್ಮರಾಯಪ್ಪ ಅವರಿಂದ 2007ರ ಮಾರ್ಚ್ 3ರಂದು ಬೆಂಗಳೂರು ಉತ್ತರ ಉಪ ನೋಂದಣಿ ಕಚೇರಿಯಲ್ಲಿ (ಪೀಣ್ಯ) ನೋಂದಾಯಿತ ಡೀಡ್ (ಸಂಖ್ಯೆ ಬಿಎಲ್‌ಎನ್-1-69587-2006-07) ಮೂಲಕ ಈ ಜಾಗವನ್ನು ಸ್ವಾಧೀನಕ್ಕೆ ಪಡೆದುಕೊಂಡಿದ್ದರು. ಅದಕ್ಕೆ ಮೊದಲು, ತಿಮ್ಮರಾಯಪ್ಪ ಅವರು ತಮ್ಮ ಪಹಣಿಯಲ್ಲಿ ಆರ್‌ಆರ್ 317ನಲ್ಲಿ (ಎಂಆರ್ ನಂ 11/1981-82) ಈ ಜಾಗದ ಸ್ವಾಧೀನ ಹೊಂದಿದ್ದರು.

9ನೇ ಪುಟ ನೋಡಿ

'ಜಮೀನು ಮೌಲ್ಯ ₹100 ಕೋಟಿ'

'ಸದ್ಯ ಈ ಜಾಗದ ಮೌಲ್ಯ ಸುಮಾರು ₹100 ಕೋಟಿಯಷ್ಟಿದೆ. ಜಾಗವು ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ ಮೌಲ್ಯ ಇನ್ನಷ್ಟು ಹೆಚ್ಚಲಿದೆ. ಕೆರೆ ಜಾಗ ಒತ್ತುವರಿ ತೆರವಿಗೆ ತಕ್ಷಣ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ, ಈ ಜಾಗದಲ್ಲಿ ಕಾನೂನು ಉಲ್ಲಂಘಿಸಿ ನಿರ್ಮಿಸಿದ ಶೆಡ್ಡ್, ವೇರ್‌ಹೌಸ್‌ಗಳನ್ನು ತೆರವು ಮಾಡಬೇಕು. ದಾಖಲೆಗಳಲ್ಲಿ ಅಕ್ರಮವಾಗಿ ಜಾಗದ ಮಾಲೀಕರ ಹೆಸರು ನಮೂದಿಸಿದ ಕಂದಾಯ ಅಧಿಕಾರಿಗಳ ವಿರುದ್ಧವೂ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದೂ ಗೋಪಿನಾಥ್ ಅವರು ಆಗ್ರಹಿಸಿದ್ದಾರೆ.

'ತನಿಖೆ ಮಾಡಲಿ ಬಿಡಿ'



ಆ ರೀತಿ ಏನೂ ಇಲ್ಲ. ಜಾಗದ ಮಾಲೀಕರಿಂದ ತೆಗೆದುಕೊಂಡಿರುವುದು ಅಷ್ಟೆ. ಸುಮ್ಮನೆ ಆರೋಪ ಮಾಡುತ್ತಾರೆ. ಈ ಜಾಗದ ಪಕ್ಕದಲ್ಲಿರುವ ಹಿಮಾಲಯ ಡ್ರಗ್ ಹೌಸ್ ಸೇರಿದಂತೆ ಇಡೀ ಪ್ರದೇಶ ಸ್ವಲ್ಪ ಸಮಸ್ಯೆಯಲ್ಲಿದೆ. ಬೇರೆಯವರಿಂದ ಬಂದಿರುವುದು. ನನ್ನ ಸ್ನೇಹಿತರಿಗೆ (ಎಚ್‌.ಡಿ. ಕುಮಾರಸ್ವಾಮಿ) ಯಾವುದೂ ಸಿಗುತ್ತಿಲ್ಲವಲ್ಲ. ಅದಕ್ಕೆ ಹುಡುಕುತ್ತಿದ್ದಾರೆ. ತನಿಖೆ ಮಾಡಲಿ. ತೊಂದರೆ ಇಲ್ಲ.

ಎನ್. ಚಲುವರಾಯಸ್ವಾಮಿ, ಕೃಷಿ ಸಚಿವ

38 ದಿನಗಳಲ್ಲಿ 10.44 ಟಿಎಂಸಿ ಅಡಿ ಕಾವೇರಿ ನೀರು ಬಿಡಲು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಮಾರ್ಪಡಿಸಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ನವೆಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಕರ್ನಾಟಕ ಪಾಲನೆ ಮಾಡಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಗುರುವಾರ ಶಿಫಾರಸು ಮಾಡಿದೆ. ಇದರ ಪ್ರಕಾರ, ಕರ್ನಾಟಕವು ತಮಿಳುನಾಡಿಗೆ ಮುಂದಿನ 38 ದಿನಗಳಲ್ಲಿ ಒಟ್ಟು 10.44 ಟಿಎಂಸಿ ಅಡಿ ನೀರು ಬಿಡಬೇಕಿದೆ.

ಕಾವೇರಿ ನ್ಯಾಯಮಂಡಳಿಯ 2007ರ ಫೆ.5ರ ಅಂತಿಮ ತೀರ್ಪಿನ ಅನ್ವಯ ಸಾಮಾನ್ಯ ಜಲವರ್ಷದಲ್ಲಿ ಕಾವೇರಿಯಿಂದ ತಮಿಳುನಾಡಿಗೆ 192 ಟಿಎಂಸಿ ಅಡಿ ಹರಿಸಬೇಕು. ಈ ನೀರಿನ ಪ್ರಮಾಣದ ಹಂಚಿಕೆಯನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿತ್ತು. ಪ್ರತಿವರ್ಷ 177.25 ಟಿಎಂಸಿ ಅಡಿ ನೀರು ಹರಿಸುವಂತೆ ಸುಪ್ರೀಂ ಕೋರ್ಟ್ 2018ರ ಫೆ. 16ರಂದು ತೀರ್ಪು ನೀಡಿತ್ತು. ಈ ಆದೇಶದ ಪ್ರಕಾರ, ನವೆಂಬರ್ ತಿಂಗಳಲ್ಲಿ 15 ಟಿಎಂಸಿ ಹಾಗೂ ಡಿಸೆಂಬರ್‌ನಲ್ಲಿ 7 ಟಿಎಂಸಿ ಅಡಿ ನೀರು ಬಿಡಬೇಕು. ರಾಜ್ಯವು ಈ ವರ್ಷ ನವೆಂಬರ್ ತಿಂಗಳಲ್ಲಿ 11.50 ಟಿಎಂಸಿ ನೀರು ಬಿಟ್ಟಿದೆ. ಉಳಿದ ಎಂಟು ದಿನಗಳಲ್ಲಿ 3.5 ಟಿಎಂಸಿ ನೀರು ಬಿಡಬೇಕು. ಸಮಿತಿಯ ಶಿಫಾರಸಿನ ಪ್ರಕಾರ, ರಾಜ್ಯವು ಪ್ರತಿದಿನ 3,216 ಕ್ಯೂಸೆಕ್ ಕಾವೇರಿ ನೀರನ್ನು ಹರಿಸಬೇಕಿದೆ.

6ನೇ ಪುಟ ನೋಡಿ

ಪ್ರಾಂಜಲ್ ಮನೆಯಲ್ಲಿ ಮಡುಗಟ್ಟಿದ ಶೋಕ 7

ಸಲಿಂಗ ಮದುವೆ ತೀರ್ಪು: ಅರ್ಜಿ ಪರಿಶೀಲನೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿದ ತೀರ್ಪಿನ ಮರುಪರಿಶೀಲನೆಗೆ ಕೋರಿ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಗುರುವಾರದ ಕಲಾಪದ ಸಂದರ್ಭದಲ್ಲಿ ಪ್ರಸ್ತಾಪಿಸಲಾಯಿತು.



ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಅರ್ಜಿದಾರರ ಪರವಾಗಿ ಮಾಡಿದ ಮನವಿಯನ್ನು ಪರಿಗಣಿಸಿ, ಪುನರ್ ಪರಿಶೀಲನಾ ಅರ್ಜಿಯಲ್ಲಿನ ಅಂಶಗಳನ್ನು ನ್ಯಾಯಾಲಯದಲ್ಲಿಯೇ ಆಲಿಸಬೇಕು ಎಂದು ಹೇಳಿದೆ.

'ಪುನರ್ ಪರಿಶೀಲನಾ ಅರ್ಜಿಯನ್ನು ನಾನು ಪರಿಶೀಲಿಸಿಲ್ಲ. ಅರ್ಜಿಯನ್ನು ನಾನು ಸಂವಿಧಾನ ಪೀಠದ ನ್ಯಾಯಮೂರ್ತಿಗಳ ಜೊತೆ ಹಂಚಿಕೊಳ್ಳುವೆ' ಎಂದು ಸಿಜೆಐ ಹೇಳಿದರು.

'ತಾರತಮ್ಯ ಆಗಿದೆ ಎಂಬುದನ್ನು ಎಲ್ಲ ನ್ಯಾಯಮೂರ್ತಿಗಳು (ಸಂವಿಧಾನ ಪೀಠದಲ್ಲಿ ಇದ್ದವರು) ಒಪ್ಪಿದ್ದಾರೆ. ತಾರತಮ್ಯ ಆಗಿದೆ ಎಂದಾದರೆ ಅದಕ್ಕೆ ಪರಿಹಾರವೂ ಇರಬೇಕು. ಬಹಳ ದೊಡ್ಡ ಸಂಖ್ಯೆಯ ಜನರ ಜೀವನ ಇದರ ಮೇಲೆ ನಿಂತಿದೆ. ಅರ್ಜಿಯನ್ನು ನ್ಯಾಯಾಲಯದಲ್ಲಿ ಆಲಿಸಬೇಕು ಎಂದು ಮನವಿ ಮಾಡಿದ್ದೇವೆ' ಎಂದು ರೋಹಟಗಿ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ವಿಧಿವಿಧಾನಗಳ ಪ್ರಕಾರ, ತೀರ್ಪಿನ ಪುನರ್ ಪರಿಶೀಲನಾ ಅರ್ಜಿಯನ್ನು ಸಂಬಂಧಪಟ್ಟ ನ್ಯಾಯಮೂರ್ತಿಗಳು ತಮ್ಮ ಕೊಠಡಿಯಲ್ಲಿಯೇ ಪರಿಶೀಲಿಸುತ್ತಾರೆ. ಆಗ ವಕೀಲರಿಗೆ ಮೌಖಿಕವಾಗಿ ವಾದ ಮಂಡಿಸಲು ಅವಕಾಶ ಇರುವುದಿಲ್ಲ.

ಆದರೆ, ಅತ್ಯಂತ ವಿಶೇಷವಾದ ಪ್ರಕರಣಗಳಿಗೆ ಸಂಬಂಧಿಸಿದ ಪುನರ್ ಪರಿಶೀಲನಾ ಅರ್ಜಿಗಳನ್ನು ನ್ಯಾಯಾಲಯದಲ್ಲಿಯೇ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುತ್ತದೆ.

25 ಟನ್ ತೂಕದ ಕೊರೆಯುವ ಯಂತ್ರ ಇರಿಸಿದ ಜಾಗದಲ್ಲಿ ಬಿರುಕು

ಸಿಲ್ಕ್ಯಾರಾ: ಕಾರ್ಮಿಕರ ರಕ್ಷಣಾ ಕಾರ್ಯ ಮತ್ತೆ ಸ್ಥಗಿತ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿರುವ 41 ಕಾರ್ಮಿಕರ ರಕ್ಷಣೆಗೆ ನಡೆಯುತ್ತಿರುವ ಕಾರ್ಯಾಚರಣೆ ಗುರುವಾರ ನಿರ್ಣಾಯಕ ಘಟ್ಟ ತಲುಪಿತ್ತು. ಆದರೆ, ಕೊರೆಯುವ ಯಂತ್ರವನ್ನು ಇರಿಸಿರುವ ಜಾಗದಲ್ಲಿ ರಾತ್ರಿಯ ವೇಳೆಗೆ ಬಿರುಕು ಉಂಟಾದ ಕಾರಣದಿಂದಾಗಿ ಇಡೀ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಬೇಕಾಯಿತು.

ಸುರಂಗ ಕೊರೆಯುವುದನ್ನು ಪುನರಾರಂಭಿಸುವ ಮೊದಲು 25 ಟನ್ ತೂಕದ ಕೊರೆಯುವ ಯಂತ್ರ ಇರುವ ಜಾಗವನ್ನು ದುರಸ್ತಿಪಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕೊರೆಯುವ ಯಂತ್ರವು ಮೂರನೇ ಬಾರಿಗೆ ಕೆಲವು ಸಮಸ್ಯೆ ಎದುರಿಸುತ್ತಿದೆ. ಎಚ್ಚರಿಕೆಯಿಂದ ಕೆಲಸ ನಡೆಯುತ್ತಿದೆ. ಅವಸರದಲ್ಲಿ ಕೆಲಸ ಮಾಡಿದರೆ, ಕೆಲಸವು ಸಂಕೀರ್ಣಗೊಳ್ಳಬಹುದು' ಎಂದು ಸುರಂಗ ವಿಷಯಗಳ ತಜ್ಞ ಅರ್ನಾಲ್ಡ್ ಡಿಕ್ಸ್ ತಿಳಿಸಿದರು.

ಕೊರೆಯುವ ಯಂತ್ರಕ್ಕೆ ಬುಧವಾರ ರಾತ್ರಿ ಕಬ್ಬಿಣದ ಮೆಶ್ ಅಡ್ಡಿಯಾಗಿ ಕಾರ್ಯಾಚರಣೆ ಆರು ತಾಸು ಸ್ಥಗಿತಗೊಂಡಿತು. ಅದನ್ನು ತೆರವುಗೊಳಿಸಿದ ಬಳಿಕ ಗುರುವಾರ ಬೆಳಿಗ್ಗೆ ಮತ್ತೆ ಕೆಲಸ ಆರಂಭಗೊಂಡಿತು.

'ಮತ್ತೆ ಯಾವುದೇ ಅಡೆತಡೆ ಎದುರಾಗದಿದ್ದರೆ ಕಾರ್ಮಿಕರು ಶುಕ್ರವಾರ ಬೆಳಿಗ್ಗೆ ಹೊರಬರುವ ನಿರೀಕ್ಷೆ ಇದೆ' ಎಂದು ಅಧಿಕಾರಿಗಳು ಗುರುವಾರ ರಾತ್ರಿ ಮಾಧ್ಯಮಗಳಿಗೆ ತಿಳಿಸಿದ್ದಾರೆ. ಕಾರ್ಮಿಕರ ರಕ್ಷಣೆಗಾಗಿ ಹಗಲು–ರಾತ್ರಿ ನಡೆಯುತ್ತಿರುವ ಕಾರ್ಯಾಚರಣೆ 12ನೇ ದಿನ ಪ್ರವೇಶಿಸಿದೆ.

ಈ ನಡುವೆ ಕಾರ್ಮಿಕರ ಜೊತೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮಾತನಾಡಿದ್ದಾರೆ. ಶೀಘ್ರ ಸುರಕ್ಷಿತವಾಗಿ ಹೊರಗೆ ಕರೆಸಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ.

60 ಮೀ.ವರೆಗೂ ವಿಸ್ತರಣೆ: ರಂಧ್ರ ಕೊರೆಯುತ್ತ ಸಾಗಿದಂತೆಲ್ಲ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ.

7ನೇ ಪುಟ ನೋಡಿ



ಕಾರ್ಮಿಕರ ಸುರಕ್ಷತೆಗಾಗಿ ಸ್ಥಳೀಯರು ಸಿಲ್ಕ್ಯಾರಾ ಸುರಂಗದ ಪ್ರವೇಶದ್ವಾರದಲ್ಲಿ ದೇವರನ್ನು ಪಲ್ಲಕ್ಕಿಯಲ್ಲಿ ಹೊತ್ತು ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

ಕಾರ್ಮಿಕರ ಹೊರತರಲು ವೀಲ್ ಸ್ಟ್ರೆಚರ್

'ದೊಡ್ಡ ಪೈಪ್‌ಗಳ ಮೂಲಕ ವೀಲ್ ಸ್ಟ್ರೆಚರ್‌ಗಳಲ್ಲಿ ಕಾರ್ಮಿಕರನ್ನು ಹೊರಗೆ ತರಲಾಗುವುದು. 800 ಮಿಲಿ ಮೀಟರ್ ವ್ಯಾಸದ ಪೈಪ್‌ಗಳ ಮೂಲಕ ಕಾರ್ಮಿಕರು ಒಬ್ಬೊಬ್ಬರಾಗಿ ತೆವಳಿಕೊಂಡು ಹೊರ ಬರುವ ಆಯ್ಕೆಯನ್ನು ರಕ್ಷಣಾ ಸಿಬ್ಬಂದಿ ಪರಿಗಣಿಸಿದ್ದರು. ಆದರೆ, ಸೂರ್ಯನ ಬೆಳಕು ಮತ್ತು ಸರಿಯಾದ ಊಟವಿಲ್ಲದೆ ಸುರಂಗದಲ್ಲಿ 12 ದಿನ ಕಳೆದಿದ್ದು, ನಿಶ್ಯಕ್ತರಾಗಿರುವುದರಿಂದ ಕಾರ್ಮಿಕರು ತೆವಳಿಕೊಂಡು ಹೊರಬರುವುದು ಕಷ್ಟ' ಎಂದು ಎನ್‌ಡಿಆರ್‌ಎಫ್ ಮಹಾನಿರ್ದೇಶಕ ಅತುಲ್ ಕರ್ವಾಲ್ ಹೇಳಿದರು.

ಪೈಪ್ ಮೂಲಕ ಎನ್‌ಡಿಆರ್‌ಎಫ್ ಸಿಬ್ಬಂದಿ ನಿಗದಿತ ಸ್ಥಳ ತಲುಪಿದಾಗ ಸ್ಟ್ರೆಚರ್‌ಗಳನ್ನು ಬಳಸಿ ಕಾರ್ಮಿಕರನ್ನು ಒಬ್ಬೊಬ್ಬರಾಗಿ ಕಳುಹಿಸುತ್ತಾರೆ. ಸಿಬ್ಬಂದಿ ಸ್ಟ್ರೆಚರ್ ಅನ್ನು ಹಗ್ಗದಿಂದ ಎಳೆಯುವ ವೇಳೆ ವೆಲ್ಡಿಂಗ್ ಮಾಡಿದ ಪೈಪ್‌ಗಳು ತಗುಲಿ ಗಾಯವಾಗುವುದನ್ನು ತಪ್ಪಿಸಲು ಪ್ರತಿಯೊಬ್ಬ ಕಾರ್ಮಿಕರನ್ನು ಸ್ಟ್ರೆಚರ್ ಮೇಲೆ ಮಲಗುವಂತೆ ಮಾಡಲಾಗುವುದು ಎಂದು ತಿಳಿಸಿದರು.

'800 ಮಿಲಿ ಮೀಟರ್ ವ್ಯಾಸದ ಪೈಪ್ ಅನ್ನು ರಕ್ಷಣಾ ಸಿಬ್ಬಂದಿ ಸ್ವಚ್ಛಗೊಳಿಸಲಿದ್ದು, ಸ್ಟ್ರೆಚರ್‌ಗಳ ಚಲನೆಗೆ ಯಾವುದೇ ಅಡ್ಡಿ ಇರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲಾಗುವುದು. ಪೈಪ್‌ಗಳು ಸುಮಾರು 32 ಇಂಚು ಅಗಲವಾಗಿವೆ. 22-24 ಇಂಚುಗಳಷ್ಟು ಅಗಲವಿದ್ದರೂ ಅವುಗಳ ಮೂಲಕ ಕಾರ್ಮಿಕರನ್ನು ಹೊರಗೆ ತರಬಹುದು' ಎಂದು ಕರ್ವಾಲ್ ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬೆಂಗಳೂರಿಗೆ ಚಿರತೆ ಕಾರ್ಯಪಡೆ

ಬೆಂಗಳೂರು: ಚಿರತೆ ಹಾವಳಿ ಹೆಚ್ಚಾಗಿರುವ ಬೆಂಗಳೂರು ಜಿಲ್ಲೆಯ ಭಾಗಗಳಲ್ಲಿ ಕಾರ್ಯಾಚರಣೆ ನಡೆಸಲು ಚಿರತೆ ಕಾರ್ಯಪಡೆ ಹಾಗೂ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿರುವ ಒಂಬತ್ತು ಜಿಲ್ಲೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಚಿರತೆ ಕಾರ್ಯಪಡೆ ಬೆಂಗಳೂರು ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಅರಣ್ಯ ಇಲಾಖೆಯ ಸಿಬ್ಬಂದಿ ಹಾಗೂ ಲಭ್ಯವಿರುವ ಸಲಕರಣೆ, ಸಂಪನ್ಮೂಲ ಬಳಸಿಕೊಂಡು ಕೆಲಸ ಮಾಡಲು ಸೂಚಿಸಲಾಗಿದೆ.

ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಿರುವ ಜಿಲ್ಲೆಗಳಾದ ಕೋಲಾರ–ಗೀತಾಂಜಲಿ, ತುಮಕೂರು–ಸ್ಮಿತಾ ಬಿಜ್ಜೂರು, ಬೆಂಗಳೂರು ಗ್ರಾಮಾಂತರ–ವನಶ್ರೀ ವಿಪಿನ್ ಸಿಂಗ್, ರಾಮನಗರ–ಅನಿಲ್‌ಕುಮಾರ್ ರತನ್, ಹಾಸನ–ಕುಮಾರ್ ಪುಷ್ಕರ್, ಚಿಕ್ಕಮಗಳೂರು–ವಿಜಯ್ ಮೋಹನ್‌ರಾಜ್, ಮೈಸೂರು–ಸಾಸ್ವತಿ ಮಿಶ್ರಾ, ಚಾಮರಾಜನಗರ–ಬಿಶ್ವಜಿತ್ ಮಿಶ್ರಾ, ಕೊಡಗು–ಬ್ರಿಜೇಶ್ ಕುಮಾರ್ ಅವರನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ನೋಡಲ್ ಅಧಿಕಾರಿಗಳು ವಾರದಲ್ಲಿ 3 ದಿನ ಜಿಲ್ಲೆಗಳಿಗೆ ಭೇಟಿ ನೀಡಬೇಕು.

ಜಿಲ್ಲಾಮಟ್ಟದ ಅಧಿಕಾರಿಗಳ ಜತೆ ಸಭೆ ನಡೆಸಬೇಕು. ಸಂಘರ್ಷ ತಡೆಗೆ ಯೋಜನೆ ರೂಪಿಸಬೇಕು ಎಂದು ಸೂಚಿಸಲಾಗಿದೆ.

₹450 ಕೋಟಿ ವೆಚ್ಚದಲ್ಲಿ ನಿರ್ಮಾಣ: ಉದ್ಘಾಟನೆ ಇಂದು

ಸುರಕ್ಷತೆಗಾಗಿ ಕಮಾಂಡ್

ಪ್ರಜಾವಾಣಿ ವಾರ್ತೆ



ಕಮಾಂಡೊ ಕೇಂದ್ರಕ್ಕೆ ಗುರುವಾರ ಭೇಟಿ ನೀಡಿದ ಕಮಿಷನರ್ ಬಿ. ದಯಾನಂದ್ ಅವರು ವ್ಯವಸ್ಥೆಯನ್ನು ಪರಿಶೀಲಿಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಮಹಿಳೆಯರ ಸುರಕ್ಷತೆ, ತುರ್ತು ಸಂದರ್ಭಗಳಲ್ಲಿ ತ್ವರಿತ ಸ್ಪಂದನೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ನಗರದ ಕಮಿಷನರ್ ಕಚೇರಿ ಬಳಿ ಸುಸಜ್ಜಿತ ಕಮಾಂಡ್ ಕೇಂದ್ರ ನಿರ್ಮಿಸಲಾಗಿದೆ.

ಕೇಂದ್ರ ಸರ್ಕಾರ ನಿರ್ಭಯಾ ನಿಧಿಯಡಿ ರೂಪಿಸಲಾದ ₹ 450 ಕೋಟಿ ವೆಚ್ಚದ ಸುರಕ್ಷಿತ ನಗರ ಯೋಜನೆಯಡಿ ಬಹುಮಹಡಿ ಕಟ್ಟಡದಲ್ಲಿ ಕಮಾಂಡ್ ಕೇಂದ್ರ ನಿರ್ಮಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಗೃಹ ಸಚಿವ ಜಿ. ಪರಮೇಶ್ವರ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

'ನಗರದಲ್ಲಿ ಮಹಿಳೆಯರ ಮೇಲಾಗುವ ದೌರ್ಜನ್ಯ ಹಾಗೂ ಕಿರುಕುಳ ಪ್ರಕರಣಗಳನ್ನು ತಡೆಯಲು ಕೇಂದ್ರ ಸ್ಥಾಪಿಸಲಾಗಿದೆ. ಸುರಕ್ಷಿತ ನಗರವೆಂದು ಮಹಿಳೆಯರಲ್ಲಿ ಧೈರ್ಯ ಮೂಡಿಸುವ ಉದ್ದೇಶ ಕೇಂದ್ರದ್ದಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪಾದಚಾರಿಗಳ ಸುಲಿಗೆ, ಕಳ್ಳತನ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಅಪರಾಧಗಳನ್ನು ನಿಯಂತ್ರಿಸುವ ಸಕಲ ಸೌಲಭ್ಯವೂ ಕೇಂದ್ರದಲ್ಲಿದೆ. ಯಾವುದೇ ಅಪರಾಧ ನಡೆದರೂ ತ್ವರಿತವಾಗಿ ಸ್ಪಂದಿಸುವ ವ್ಯವಸ್ಥೆ ಸಹ ಇದೆ' ಎಂದು ತಿಳಿಸಿದರು.

ಕಮಾಂಡ್ ಕೇಂದ್ರದ ಕಾರ್ಯಾಚರಣೆ: 'ನಗರದ ಸೂಕ್ಷ್ಮ ಹಾಗೂ ಅತೀ ಸೂಕ್ಷ್ಮ ಸ್ಥಳಗಳಲ್ಲಿ 'ನೇತ್ರಾ' ಹೆಸರಿನಲ್ಲಿ 3,500 ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 2024ರ ಮಾರ್ಚ್ ಒಳಗಾಗಿ ಹೊಸದಾಗಿ 4,500 ಕ್ಯಾಮೆರಾ ಅಳವಡಿಸಲಾಗುವುದು. 35 ಸಾರ್ವಜನಿಕ ಸ್ಥಳಗಳಲ್ಲಿ ಕ್ಯಾಮೆರಾ ಹಾಗೂ ಧ್ವನಿ ಗ್ರಹಿಕೆ ಸಲಕರಣೆ ಸಮೇತ ಐಸ್‌ಲ್ಯಾಂಡ್ ನಿರ್ಮಿಸಲಾಗಿದೆ. ಕ್ಯಾಮೆರಾ ಹಾಗೂ ಐಸ್‌ಲ್ಯಾಂಡ್ ನಿರ್ವಹಣೆಯು ಕಮಾಂಡ್ ಕೇಂದ್ರದಿಂದ ಆಗಲಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕಮಾಂಡ್ ಕೇಂದ್ರದಲ್ಲಿ ದಿನದ 24 ಗಂಟೆಯೂ ಸಿಬ್ಬಂದಿ ಕೆಲಸ ಮಾಡಲಿದ್ದಾರೆ. ಕ್ಯಾಮೆರಾಗಳ ಮೂಲಕ ಸ್ಥಳಗಳ ಮೇಲೆ ನಿಗಾ ವಹಿಸಲಿದ್ದಾರೆ. ಕಿರುಕುಳ, ಅಸಭ್ಯ ವರ್ತನೆ, ದೌರ್ಜನ್ಯ ಹಾಗೂ ಇತರೆ ಸಂಕಷ್ಟದ ಸಂದರ್ಭದಲ್ಲಿ ಮಹಿಳೆಯರ ಕರೆಗಳಿಗೆ ಕಮಾಂಡ್ ಸಿಬ್ಬಂದಿ ತ್ವರಿತವಾಗಿ ಸ್ಪಂದಿಸಲಿದ್ದಾರೆ. ಕೆಲ ನಿಮಿಷಗಳಲ್ಲಿ ಹೊಯ್ಸಳ ಗಸ್ತು ವಾಹನಗಳು ಘಟನಾ ಸ್ಥಳಕ್ಕೆ ತಲುಪುವ ವ್ಯವಸ್ಥೆ ಇದೆ' ಎಂದರು.

'ಮಹಿಳೆಯರು ಹೆಚ್ಚಾಗಿ ಓಡಾಡುವ ಬಸ್ ನಿಲ್ದಾಣಗಳು, ಕಾಲೇಜು, ಉದ್ಯಾನ, ಕಚೇರಿಗಳ ಬಳಿ ವಿಶೇಷ ನಿಗಾ ವಹಿಸಲಾಗುತ್ತಿದೆ. ಯಾವುದೇ ಕರೆ ಬಂದರೂ ತುರ್ತಾಗಿ ಸ್ಪಂದಿಸಲಾಗುವುದು' ಎಂದು ಹೇಳಿದರು.

'ಜಟಾಪಟಿಗೆ ಕಾರಣವಾಗಿದ್ದ ಗುತ್ತಿಗೆ'

ಬೆಂಗಳೂರು ನಗರ ಹೆಚ್ಚುವರಿ ಕಮಿಷನರ್ (ಆಡಳಿತ) ಆಗಿದ್ದ ಹೇಮಂತ್ ನಿಂಬಾಳ್ಕರ್ ಅಧ್ಯಕ್ಷತೆಯಲ್ಲಿದ್ದ ಸುರಕ್ಷಿತ ನಗರ ಯೋಜನೆ ಟೆಂಡರ್ ಆಹ್ವಾನ ಸಮಿತಿ, ಮೊದಲ ಹಂತದಲ್ಲಿ ಕೆಲಸಕ್ಕೆ ₹ 612 ಕೋಟಿಗೆ ಗುತ್ತಿಗೆ ನೀಡಿತ್ತು. 'ಟೆಂಡರ್ ಹಂಚಿಕೆಯಲ್ಲಿ ಅಕ್ರಮ ನಡೆದಿದೆ' ಎಂದು ಡಿ.ರೂಪಾ ಆರೋಪಿಸಿದ್ದರು.

ಇದೇ ವಿಚಾರವಾಗಿ ರೂಪಾ ಮತ್ತು ನಿಂಬಾಳ್ಕರ್ ನಡುವೆ ಜಟಾಪಟಿ ನಡೆದಿತ್ತು. ಇದೀಗ ಅದೇ ಯೋಜನೆಯಡಿ ಕಮಾಂಡ್ ಕೇಂದ್ರ ನಿರ್ಮಾಣ ಹಾಗೂ ಇತರೆ ಕೆಲಸಗಳು ₹ 450 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿವೆ.

ಅಂಚೆ ಮೂಲಕ ಮತದಾರರ ಗುರುತಿನ ಚೀಟಿ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ನೋಂದಣಿಗೆ ವಿಶೇಷ ಅಭಿಯಾನ ನಗರದಲ್ಲಿ ನಡೆಯುತ್ತಿದೆ ಎಂದು ಬಿಬಿಎಂಪಿ ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ತಿಳಿಸಿದರು.

ಮತದಾರರ ಅಂತಿಮ ಪಟ್ಟಿಯನ್ನು ಜ.5ರಂದು ಪ್ರಕಟಿಸಲಾಗುವುದು. 28 ವಿಧಾನಸಭೆ ಕ್ಷೇತ್ರಗಳ ಮತದಾರರ ಗುರುತಿನ ಚೀಟಿಗಳನ್ನು ಅಂಚೆ ಮೂಲಕ ವಿತರಿಸಲಾಗುತ್ತಿದೆ. ಬೆಂಗಳೂರು ಕೇಂದ್ರದಲ್ಲಿ 44 ಸಾವಿರ, ಬೆಂಗಳೂರು ಉತ್ತರದಲ್ಲಿ 52 ಸಾವಿರ, ಬೆಂಗಳೂರು ದಕ್ಷಿಣದಲ್ಲಿ 42 ಸಾವಿರ ಹಾಗೂ ಬೆಂಗಳೂರು ನಗರದಲ್ಲಿ 97 ಸಾವಿರ ಮತದಾರರ ಗುರುತಿನ ಚೀಟಿಗಳನ್ನು ವಿತರಿಸುವ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ 15 ದಿನಗಳಲ್ಲಿ ಎಲ್ಲರಿಗೂ ಮತದಾರರ ಗುರುತಿನ ಚೀಟಿ ತಲುಪಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದರು.

ಯುವ ಮತದಾರರಲ್ಲಿ ಮನವಿ: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿಯೂ 18 ವರ್ಷ ತುಂಬಿದ ಯುವ ಮತದಾರರು ಸ್ವಯಂಪ್ರೇರಿತವಾಗಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಬೇಕು. ಇತರರ ಹೆಸರನ್ನೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿಸಲು ಪ್ರೇರಣೆ ನೀಡಬೇಕು ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್, ಬಿಬಿಎಂಪಿ ಚುನಾವಣಾ ವಿಭಾಗದ ಸಹಾಯಕ ಆಯುಕ್ತ ಅಜಯ್ ಇದ್ದರು.

ಸುಮಾ ದೇಸಾಯಿಗೆ ವಿದ್ವಾನ್ ರಂಗನಾಥ ಶರ್ಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸುಮಾ

ಬೆಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷತ್ತು ವಾರ್ಷಿಕವಾಗಿ ನೀಡುವ ಮಹಾ-ಮಹೋಪಾಧ್ಯಾಯ ವಿದ್ವಾನ್ ರಂಗನಾಥ ಶರ್ಮ ಪ್ರಶಸ್ತಿಗೆ ಪ್ರಾಧ್ಯಾಪಕಿ ಸುಮಾ ಶಿವಾನಂದ ದೇಸಾಯಿ ಅವರನ್ನು ಆಯ್ಕೆ ಮಾಡಲಾಗಿದೆ.

ಬೆಳಗಾವಿ ಜಿಲ್ಲೆ ಕೌಜಲಗಿಯ ಸುಮಾ ದೇಸಾಯಿ ಪ್ರಾಧ್ಯಾಪಕಿ, ಸಂಶೋಧಕಿ. ಸಂಸ್ಕೃತ ಭಾರತಿಯಲ್ಲಿ ಕಾರ್ಯ ನಿರ್ವಹಿಸುತ್ತಾ ರಾಷ್ಟ್ರೀಯ ಸಂಸ್ಕೃತ ಸೆಮಿನಾರ್‌ಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಂಸ್ಕೃತ ಸಂಭಾಷಣಾ ಶಿಬಿರ, ಆನ್‌ಲೈನ್ ಪಾಠಗಳನ್ನು ನಡೆಸುತ್ತಿರುವ ಸುಮಾ ಅವರು ಕೌಜಲಗಿಯ ಬನಶಂಕರಿ ಗೋ ಸಂವರ್ಧನ ಕೇಂದ್ರದಲ್ಲಿ ಪತಿ ಶಿವಾನಂದ ದೇಸಾಯಿ ಜೊತೆ ಕಾರ್ಯ ನಿರ್ವಹಿಸುತ್ತಿದ್ದಾರೆ.

ಡಿ.3ರಂದು ಬೆಳಿಗ್ಗೆ 10.30ಕ್ಕೆ ಬಾಗಲಕೋಟೆ ಬಿ.ವಿ.ವಿ. ಸಂಘದ ಪಾಲಿಟೆಕ್ನಿಕ್ ಸೆಮಿನಾರ್ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರಶಸ್ತಿಯು ₹ 25 ಸಾವಿರ ನಗದು, ಶಾರದಾ ಮೂರ್ತಿಯನ್ನು ಒಳಗೊಂಡಿರುತ್ತದೆ ಎಂದು ಸಂಘಟಕರು ತಿಳಿಸಿದ್ದಾರೆ.

ಎಎಪಿ ಸಂಸ್ಥಾಪನಾ ದಿನಾಚರಣೆ 26ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ ಆದ್ಮಿ ಪಕ್ಷ (ಎಎಪಿ) 11 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಇದೇ 26ರಂದು ಪಕ್ಷದ ಸಂಸ್ಥಾಪನ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವ ಮತ್ತು ಸಂವಿಧಾನ ದಿನಾಚರಣೆಯನ್ನು ಜಯನಗರದ ಎಂಇಎಸ್ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್, 'ಎಎಪಿಯ ಯೋಜನೆಗಳನ್ನು ಬಿಜೆಪಿ ಮತ್ತು ಕಾಂಗ್ರೆಸ್ ನಕಲು ಮಾಡಿದ್ದರೂ ಯಾವುದೇ ಬದಲಾವಣೆ ತಂದಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳನ್ನು ಪರಿಚಯಿಸಿದ್ದು ಕೂಡ, ದೆಹಲಿ ಮಾದರಿಯನ್ನು ನೋಡಿ. ಅರವಿಂದ್ ಕೇಜ್ರಿವಾಲ್ ಅವರು ಉಚಿತ ಯೋಜನೆಗಳ್ನು ಬಜೆಟ್‌ನಲ್ಲಿ ಹಣಕಾಸಿನ ವ್ಯತ್ಯಯವಾಗದಂತೆ ನೋಡಿಕೊಂಡು ನೀಡಲಾಗಿದೆ' ಎಂದು ತಿಳಿಸಿದರು.

'ಬಿಜೆಪಿ ಕೂಡ ಇಂದು ಎಎಪಿಯ ಬೆಳವಣಿಗೆಯಿಂದ ಆತಂಕಗೊಂಡಿದ್ದು, ಪಕ್ಷದ ಮುಖಂಡರಾದ ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್ ಮತ್ತು ಸಂಜಯ್ ಸಿಂಗ್ ಅವರನ್ನು ಜೈಲಿಗೆ ಹಾಕಿ, ಪಕ್ಷವನ್ನು ಕಟ್ಟಿಹಾಕಲು ಬಿಜೆಪಿ ಷಡ್ಯಂತ್ರ ಮಾಡುತ್ತಿದೆ' ಎಂದು ಆರೋಪಿಸಿದರು.

ಒಕ್ಕಲಿಗ ನಿಗಮಕ್ಕೆ ಸಂಗಾ ಎಂ.ಡಿ

ಪ್ರಜಾವಾಣಿ ವಾರ್ತೆ



ಸಂಗಾ

ಬೆಂಗಳೂರು: ರಮೇಶ್ ಸಂಗಾ ಅವರನ್ನು ಕರ್ನಾಟಕ ಒಕ್ಕಲಿಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿಯಾಗಿದ್ದ ಸಂಗಾ ಅವರು ಇದೇ ವರ್ಷದ ಆಗಸ್ಟ್‌ನಲ್ಲಿ ನಡೆದ ಚುನಾವಣೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ–1, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು–560002

ಸಂಖ್ಯೆ: ಬೃ.ಬೆಂ.ಮ.ಪಾ/ಮು.ಆಯುಕ್ತರು/ಪಿಎಸ್‌ಆರ್(ಜಿ)/2169/2023–24 ದಿನಾಂಕ: 22.11.2023

ಪ್ರಕಟಣೆ

ನಮೂನೆ–1 (ಸೆಕ್ಷನ್ 14ಬಿ(4)(1))

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ (4) ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, ಅನುಮೋದಿತ ಮಾಸ್ಟರ್ ಪ್ಲಾನ್‌ನ ಪ್ರಸ್ತಾವನೆಗಳು ಅಥವಾ ಸ್ಥಳೀಯ ಪ್ರಾಧಿಕಾರದ ಪ್ರಸ್ತಾವನೆಗಳ ಅನುಷ್ಠಾನಕ್ಕಾಗಿ **"ಆರ್‌ಎಂಪಿ–2015 ರಂತೆ 45.00 ಮೀಟರ್ ಅಗಲದ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಿಂದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದವರೆಗೆ ಮಾಗಡಿ ಮುಖ್ಯರಸ್ತೆಯನ್ನು ನಿರ್ಮಾಣ ಮತ್ತು ಅಗಲೀಕರಣ ಮಾಡುವ ಕಾಮಗಾರಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ** ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ. ಭೂ ಮಾಲೀಕರು ಹಾಗೂ ಸಾರ್ವಜನಿಕ ಉದ್ದೇಶಕ್ಕೆ ಅವಶ್ಯಕವಾಗಿ ಬೇಕಾಗಿರುವ ಪ್ರದೇಶಗಳ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ತಮ್ಮ ಸಂಬಂಧಪಟ್ಟ ದಾಖಲೆಗಳ ಪ್ರತಿಗಳೊಂದಿಗೆ ಅಂದರೆ, (1) ಕ್ರಯ/ವಿಭಾಗ/ ಇತರೆ ಡೀಡ್‌ಗಳ ಟೈಟಲ್, (2) ತಹಲ್‌ವರೆಗಿನ ಪಹಣಿಗಳು, (3) ಮ್ಯುಟೇಷನ್ ಪ್ರತಿ, (4) ತೆರಿಗೆ ಪಾವತಿ ರಸೀದಿಗಳು, (5) ಕೃಷಿಯೇತರ ಬಳಕೆಗಾಗಿ ಭೂ ಪರಿವರ್ತನಾ ಆದೇಶ ಪ್ರತಿ, (6) ಕಂದಾಯ ರೇಖಾಚಿತ್ರ (7) ಆಕಾರ್ ಬಂದ್ ಇತ್ಯಾದಿಗಳನ್ನು ಖುದ್ದಾಗಿ ಈ ಕೆಳಗೆ ನಮೂದಿಸಿರುವ ವಿಳಾಸದಲ್ಲಿ ಅವರ ಸ್ವತ್ತಿಗೆ ಸಂಬಂಧಿಸಿದಂತೆ ಈ ಪ್ರಕಟಣೆಯ 30 ದಿನಗಳೊಳಗಾಗಿ ಆಸಕ್ತಿಯನ್ನು ತೋರ್ಪಡಿಸತಕ್ಕದ್ದು.

ಭೂ ಮಾಲೀಕರು/ಆಸಕ್ತ ವ್ಯಕ್ತಿಗಳು ಹಾಜರಾಗಿ ಹಾಗೂ ಅವರ ಹಕ್ಕುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಎಲ್‌ಎಕ್ಯೂ & ಟಿಡಿಆರ್) ಕೊಠಡಿ ಸಂ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೆಂಗಳೂರು–560002	**ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ** ರಾಜರಾಜೇಶ್ವರಿನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ	ಪ್ರಕಟಣೆಯ ದಿನಾಂಕದಿಂದ 30 ದಿನಗಳು ಸಮಯ: ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ

ಅನುಸೂಚಿತ ಸ್ವತ್ತುಗಳಂತೆ ಯಾರ ಸ್ವತ್ತುಗಳು ಸ್ವಾಧೀನಕೊಳ್ಳಪಡುತ್ತವೋ ಅಂತಹ ಸ್ವತ್ತಿನ ಮಾಲೀಕರು/ಆಸಕ್ತ ವ್ಯಕ್ತಿಗಳು ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಒಪ್ಪಿಗೆ ನೀಡತಕ್ಕದ್ದು.

ಸೌಲಭ್ಯ ಹಕ್ಕುಗಳ ಪ್ರಯೋಜನ ನಿಯಮಗಳ ಕಾಯ್ದೆ – 2016ರಂತೆ ಸ್ವಾಧೀನಕ್ಕೊಳಪಡುವ ಭೂಮಿಗಳ ಷೆಡ್ಯೂಲ್ ಸ್ವತ್ತುಗಳ ಭೂ ಮಾಲೀಕರು / ಆಸಕ್ತ ವ್ಯಕ್ತಿಗಳಿಗೆ ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗಾಗಿ ಆಯ್ಕೆ ನೀಡಲಾಗುತ್ತದೆ. ಅಭಿವೃದ್ಧಿ ಹಕ್ಕುಗಳಂತೆ (ಪರಿಗಣಿಸಲಾಗದ ಭೂಮಿಯಲ್ಲಿ) ನಿರ್ಮಾಣಗೊಂಡಿರುವ ಕಟ್ಟಡದಲ್ಲಿ ಒಂದು ಬಾರಿ ಕಟ್ಟಡ ಪ್ರದೇಶವನ್ನು ಒಪ್ಪಿಸಿದ ಮೇಲೆ ಒಪ್ಪಿಸಲಾದ ಕಟ್ಟಡ ಪ್ರದೇಶದ ಮೌಲ್ಯದ ಅಂದಾಜಿನಂತೆ ಪ್ರದೇಶದ ಮಾರುಕಟ್ಟೆ ಮೌಲ್ಯವನ್ನು ಭಾಗಿಸಿದಾಗ ಆರ್ಥಿಕ ಪರಿಹಾರಗಳ ಬದಲಾಗಿ ಸ್ವಾಧೀನಕ್ಕೊಳಪಟ್ಟ ಭೂಮಿಯ ಎರಡರಷ್ಟು ಭೂಪ್ರದೇಶವನ್ನು ಭೂ ಮಾಲೀಕರು ಪಡೆಯುತ್ತಾರೆ. ಮೂಲ ಪ್ಲಾಟ್ ಮತ್ತು ಸ್ವೀಕರಿಸಿದ ಪ್ಲಾಟ್‌ಗಳಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನ ಮಾಡುವುದರೊಂದಿಗೆ ಪರಿಗಣಿಸಲಾಗದ ಭೂಮಿಯನ್ನು ಬಳಸಬಹುದಾಗಿದೆ. ಪರಿಗಣಿಸಲಾದ ಭೂಮಿಯು ಎಫ್‌ಎಆರ್‌ಗೆ ಅರ್ಹವಾಗಿದ್ದು, ನಿಯಮಗಳಲ್ಲಿ ತಿಳಿಸಿರುವ ನಿಯಮ ಮತ್ತು ಷರತ್ತುಗಳಂತೆ ಸ್ವೀಕರಿಸಲಾದ ಪ್ಲಾಟ್‌ಗಳಲ್ಲಿ ಹೆಚ್ಚುವರಿ ಬಿಲ್ಟಪ್ ಪ್ರದೇಶವಾಗಿ ಬಳಸಬಹುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಡೆಪ್ಯೂಟಿ ಕಮಿಷನರ್‌ರವರ ಕಚೇರಿ (ಎಲ್‌ಎಕ್ಯೂ & ಟಿಡಿಆರ್), ಬೃ.ಬೆಂ.ಮಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

"ಆರ್‌ಎಂಪಿ–2015 ರಂತೆ 45.00 ಮೀಟರ್ ಅಗಲದ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಿಂದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದವರೆಗೆ ಮಾಗಡಿ ಮುಖ್ಯರಸ್ತೆಯನ್ನು ನಿರ್ಮಾಣ ಮತ್ತು ಅಗಲೀಕರಣ ಮಾಡಲು ಅವಶ್ಯಕವಿರುವ ಭೂಸ್ವಾಧೀನ ಪ್ರಕ್ರಿಯೆ

ಜಿಲ್ಲೆಯ ಹೆಸರು: **ಬೆಂಗಳೂರು ನಗರ** ತಾಲ್ಲೂಕಿನ ಹೆಸರು: **ಬೆಂಗಳೂರು ಉತ್ತರ** ಗ್ರಾಮದ ಹೆಸರು: **ಶ್ರೀಗಂಧಕಾವಲ್ ಮತ್ತು ಹೇರೋಹಳ್ಳಿ**

Sl. No.	Sy. No/ Khatha No.	Type of Land: Vacant	Type of Land: Built up	Nature of Land: Agriculture	Nature of Land: Converted undeveloped	Nature of Land: Approved Layout / developed Land Building Site	Dimension of the Land/ Plot & Extent in Sq.M: Dimension	Extent	Boundaries of the Land / Plot: North	South	East	West	Building Details: Extent in Sq.M	Type of Construction & No.of Floors	Floor Area Ratio	Present Activity on Land/ Building (Specify Specific activity such as Shop, Office, Factory, Apartment, Individual house etc.,	Market (guide -lines) value of the land Per Sq.M: Agriculture/B-Khatha	Converted Undeveloped	A-Khatha, Developed Site	Name and address of the owner of the plot/Land for Which DRC is to be issued/ Already Issues
1.	ಸರ್ವೆ ನಂ.12	ಖಾಲಿ ಜಾಗ			-			1173.45	ಮಾಗಡಿ ಮುಖ್ಯರಸ್ತೆ	ಸರ್ವೆ ನಂ.12ರ ಉಳಿದ ಭಾಗ	ಸರ್ವೆ ನಂ.12ರ ಉಳಿದ ಭಾಗ	ಸರ್ವೆ ನಂ.13	-	-		-	12,355/-	42,000/-	60,000/-	ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್
2.	ಸರ್ವೆ ನಂ.30	ಖಾಲಿ ಜಾಗ			-			432.30	ಮಾಗಡಿ ಮುಖ್ಯರಸ್ತೆ	ಸರ್ವೆ ನಂ.30ರ ಉಳಿದ ಭಾಗ	ಸರ್ವೆ ನಂ.13	ಸರ್ವೆ ನಂ.31	-	-		-	8,648/-	24,500/-	35,000/-	ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್
3.	ಸರ್ವೆ ನಂ.31	ಖಾಲಿ ಜಾಗ			-			683.93	ಮಾಗಡಿ ಮುಖ್ಯರಸ್ತೆ & ಸರ್ವೆ ನಂ.30	ಸರ್ವೆ ನಂ.31ರ ಉಳಿದ ಭಾಗ	ಸರ್ವೆ ನಂ.30	ಸರ್ವೆ ನಂ.32	-	-		-	8,648/-	24,500/-	35,000/-	ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್
4.	ಸರ್ವೆ ನಂ.32	ಖಾಲಿ ಜಾಗ			-			1494.59	ಮಾಗಡಿ ಮುಖ್ಯರಸ್ತೆ	ಸರ್ವೆ ನಂ.32ರ ಉಳಿದ ಭಾಗ	ಸರ್ವೆ ನಂ.31	ಸರ್ವೆ ನಂ.43	-	-		-	8,648/-	24,500/-	35,000/-	ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್
5.	ಸರ್ವೆ ನಂ.43	ಖಾಲಿ ಜಾಗ			-			51.00	ಮಾಗಡಿ ಮುಖ್ಯರಸ್ತೆ	ಸರ್ವೆ ನಂ.43ರ ಉಳಿದ ಭಾಗ	ಸರ್ವೆ ನಂ.32	ಸರ್ವೆ ನಂ.37	-	-		-	8,648/-	24,500/-	35,000/-	ಜಮನ್‌ಲಾಲ್ ಬಜಾಜ್ ಸೇವಾ ಟ್ರಸ್ಟ್
Total Extent acquired in Sq.mtr								3835.27												

• ಸ್ವತ್ತಿನ ಮಾರುಕಟ್ಟೆ ಮೌಲ್ಯವು ಸ್ವತ್ತಿನ ಪರಿವರ್ತನೆ ಮತ್ತು ಅಭಿವೃದ್ಧಿಯ ಸ್ಥಿತಿಗತಿಗಳ ಆಧಾರದ ಮೇಲೆ ನಮೂನೆ 3ರ ಹಂತದಲ್ಲಿ ಸ್ವತ್ತಿನ ಮಾಲೀಕರು ಸಲ್ಲಿಸುವ ದಾಖಲೆಗಳ ಮೇಲೆ ಅವಲಂಬಿಸಿರುತ್ತದೆ. • ಕಟ್ಟಡದ ಮೌಲ್ಯ ಮತ್ತು ಅಭಿವೃದ್ಧಿ ಹಕ್ಕುಗಳ ಪ್ರಯೋಜನಾ ನಿಯಮ 2016ರ ಆಧಾರದಲ್ಲಿ ನಮೂನೆ 3ರ ಸಾರ್ವಜನಿಕ ಪ್ರಕಟಣೆ ಹಂತದ ಸಮಯದಲ್ಲಿ ಪರಿಶೀಲಿಸಲಾಗುವುದು.

ಸಹಿ/– ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೇಂದ್ರ ಮತ್ತು ರಾಜ್ಯ ಸರ್ಕಾರದ ತಿಕ್ಕಾಟದಿಂದಾಗಿ ಕುಂಟುತ್ತಿರುವ ಉಪನಗರ ರೈಲು ಯೋಜನೆ

‘ಕೆ–ರೈಡ್’ ಕಾಮಗಾರಿ: ‘ಪ್ರಭಾರ’ವೇ ವಿಳಂಬ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರೈಲ್ವೆಯ ಮಹತ್ವದ ಯೋಜನೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯ ಬೆಂಗಳೂರು ಉಪನಗರ ಯೋಜನೆ, ‘ಪ್ರಭಾರ’ ವ್ಯವಸ್ಥಾಪಕ ನಿರ್ದೇಶಕರಿಂದ ಕುಂಟುತ್ತಿದೆ.

ಈ ಯೋಜನೆ ಜಾರಿಯಾಗಿ 37 ತಿಂಗಳು ಕಳೆದರೂ ಕಾಮಗಾರಿ ನಿರೀಕ್ಷಿತ ಮಟ್ಟದಲ್ಲಿ ಸಾಗುತ್ತಿಲ್ಲ. ಈ ಅವಧಿಯಲ್ಲಿ ಇಬ್ಬರು ಅಧಿಕಾರಿಗಳು ಪ್ರಭಾರವಾಗಿ ವ್ಯವಸ್ಥಾಪಕ ನಿರ್ದೇಶಕ ಹುದ್ದೆ ಹೊಂದಿದ್ದರು. ಇದೀಗ ಎನ್. ಮಂಜುಳಾ ಅವರಿಗೆ ಹೆಚ್ಚುವರಿ ಹೊಣೆ ನೀಡಲಾಗಿದೆ.

ಜನದಟ್ಟಣೆ, ವಾಹನದಟ್ಟಣೆಯಿಂದಾಗಿ ಬೆಂಗಳೂರಿನಲ್ಲಿ ಸಂಚಾರವೇ ಪ್ರಯಾಸಕರವಾಗಿರುವುದನ್ನು ತಪ್ಪಿಸಲು, ಉಪನಗರ ರೈಲು ಯೋಜನೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಕೋವಿಡ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಹೊಂದಾಣಿಕೆ ಕೊರತೆ ಇನ್ನಿತರ ಕಾರಣಗಳಿಂದ 2 ವರ್ಷ ಕಾಮಗಾರಿ ಆರಂಭವೇ ಆಗಿರಲಿಲ್ಲ. ಕಾರಿಡಾರ್–2 (ಚಿಕ್ಕಬಾಣಾವರ – ಬೈಯಪ್ಪನಹಳ್ಳಿ) 2022ರ ಡಿಸೆಂಬರ್‌ನಲ್ಲಿ ಕಾಮಗಾರಿ ಆರಂಭವಾಯಿತು. ಆದರೆ, ಕಾರಿಡಾರ್–1 (ಬೆಂಗಳೂರು ನಗರ– ದೇವನಹಳ್ಳಿ), ಕಾರಿಡಾರ್–3 (ಹೀಲಲಿಗೆ–ರಾಜಾನುಕುಂಟೆ) ಮತ್ತು ಕಾರಿಡಾರ್–4 (ಕೆಂಗೇರಿ–ವೈಟ್‌ಫೀಲ್ಡ್) ಕಾಮಗಾರಿಗಳಿಗೆ ಇನ್ನೂ ಚಾಲನೆ ದೊರೆತಿಲ್ಲ.

ಆರಂಭದಲ್ಲಿ ರೈಲ್ವೆಯವರೇ ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕರು (ಎಂ.ಡಿ) ಇದ್ದರು. ಕಾಮಗಾರಿ ಆರಂಭವಾಗುವ ಹೊತ್ತಿಗೆ ಅವರು ವರ್ಗಾವಣೆಯಾದರು. ಆ ಜಾಗಕ್ಕೆ ಹೆಚ್ಚುವರಿಯಾಗಿ ಎರಡು–ಮೂರು ಹುದ್ದೆಗಳನ್ನು ನಿರ್ವಹಿಸುತ್ತಿದ್ದ ಗೌರವ್ ಗುಪ್ತ ಅವರಿಗೆ ಎಂ.ಡಿ ಹುದ್ದೆಯ ಜವಾಬ್ದಾರಿಯನ್ನೂ ನೀಡಲಾಯಿತು. ತಾಂತ್ರಿಕತೆಯ ಬಗ್ಗೆ ಅವರಿಗೆ ಗೊತ್ತಿದ್ದರಿಂದ ಉತ್ತಮವಾಗಿಯೇ ನಿರ್ವಹಣೆ ಮಾಡಿದರು. ಆದರೆ, ಬೇರೆ ಹೊಣೆಗಾರಿಕೆಗಳ ಕಡೆಯೂ ಗಮನ ಹರಿಸಬೇಕಿದ್ದರಿಂದ ಇಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ಆಗಿಲ್ಲ. ಈಗ ಅವರಿಗೂ ವರ್ಗಾವಣೆಯಾಗಿದೆ.

‘ವ್ಯವಸ್ಥಾಪಕ ನಿರ್ದೇಶಕರ ಒಂದು ಸಹಿ ಬೇಕಿದ್ದರೂ ವಿಕಾಸಸೌಧಕ್ಕೆ ಹೋಗಿ ಕಾಯಬೇಕು. ಇದರಲ್ಲೇ ಸಮಯ ವ್ಯರ್ಥವಾಗುತ್ತಿದೆ. 4 ಕಾರಿಡಾರ್‌ಗಳಲ್ಲಿ 3 ಕಾರಿಡಾರ್‌ಗಳ ಕೆಲಸ ಶುರುವಾಗಿಲ್ಲ. ವ್ಯವಸ್ಥಾಪಕ ನಿರ್ದೇಶಕರು ದೆಹಲಿ–ಬೆಂಗಳೂರಿಗೆ ಆಗಾಗ್ಗೆ ನಡೆಯುವ ಮೀಟಿಂಗ್‌ಗಳಲ್ಲಿ ಭಾಗವಹಿಸಬೇಕು. ಹೆಚ್ಚುವರಿಯಾಗಿ ಹೊಣೆ ಹೊತ್ತರವರಿಗೆ ಅಷ್ಟು ಸಮಯ ಸಿಗುವುದಿಲ್ಲ. ಅದಕ್ಕಾಗಿ ಪೂರ್ಣ ಪ್ರಮಾಣದ ಎಂ.ಡಿ ಬೇಕು’ ಎಂದು ಕೆ–ರೈಡ್‌ನ ಹಿರಿಯ ಅಧಿಕಾರಿಗಳು ಅಭಿಪ್ರಾಯಪಟ್ಟರು.



ಹೆಬ್ಬಾಳದಲ್ಲಿ ನಡೆಯುತ್ತಿರುವ ಬೆಂಗಳೂರು ಉಪನಗರ ರೈಲು ಕಾಮಗಾರಿ ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಏಳೆಂಟು ವರ್ಷ ಬೇಕು



2026ರ ಒಳಗೆ ಉಪನಗರ ರೈಲು ಯೋಜನೆ ಪೂರ್ಣಗೊಳ್ಳುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಕಾರಿಡಾರ್–2 ಮಾತ್ರ ಶೇ 15ರಷ್ಟು ಕಾಮಗಾರಿಗಳಾಗಿವೆ. ಎಲ್ಲ ನಾಲ್ಕು ಕಾಮಗಾರಿಗಳನ್ನು ಪರಿಗಣಿಸಿದರೆ ಶೇ 4ರಷ್ಟು ಕಾಮಗಾರಿಯಷ್ಟೇ ನಡೆದಿದೆ. ಈಗಿನ ವೇಗವನ್ನು ನೋಡಿದರೆ ನಾಲ್ಕು ಕಾರಿಡಾರ್ ಪೂರ್ಣಗೊಳ್ಳಲು ಏಳೆಂಟು ವರ್ಷಗಳು ಬೇಕಾಗುತ್ತದೆ. ಬೆನ್ನತ್ತಿ ಕೆಲಸ ಮಾಡಿಸುವ ಅಧಿಕಾರಿಗಳು ಬೇಕು.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ

‘ವಿಸಿಟಿಂಗ್ ಎಂ.ಡಿ’ ಬೇಡ



₹ 15 ಸಾವಿರ ಕೋಟಿಗೂ ಅಧಿಕ ವೆಚ್ಚದ ಕಾಮಗಾರಿಗಳನ್ನು ನಡೆಸುವ ಸಂಸ್ಥೆಗೆ ಪೂರ್ಣ ಪ್ರಮಾಣದ ಎಂ.ಡಿ ಇಲ್ಲ ಎನ್ನುವುದು ಈ ಯೋಜನೆಗೆ ಸರ್ಕಾರಗಳು ಎಷ್ಟು ಪ್ರಾಮುಖ್ಯ ನೀಡಿವೆ ಎಂಬುದನ್ನು ತೋರಿಸುತ್ತದೆ. ಶೇ 20ರಷ್ಟು ಕೇಂದ್ರ ಸರ್ಕಾರ, ಶೇ 20ರಷ್ಟು ರಾಜ್ಯ ಸರ್ಕಾರ ಅನುದಾನ ಒದಗಿಸುತ್ತದೆ. ಉಳಿದ ಶೇ 60ರಷ್ಟು ವೆಚ್ಚವನ್ನು ಬಾಹ್ಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬೇಕು. ವಿದೇಶಿ ಬ್ಯಾಂಕ್‌ಗಳ ಜೊತೆಗೆ ಸಂವಹನ ನಡೆಸಬೇಕು. ಅದಕ್ಕೆಲ್ಲ ಕಾಯಂ ಎಂಡಿ ಬೇಕು. ಹಿಂದಿನ ಎಂಡಿ ಸಮರ್ಥರಿದ್ದರೂ ಅವರಿಗೆ ಸಮಯ ಸಾಕಾಗುತ್ತಿರಲಿಲ್ಲ. ಹೊಸ ಎಂಡಿ ಕಾರ್ಯವೈಖರಿ ಹೇಗಿದೆ ಎಂಬುದು ಗೊತ್ತಿಲ್ಲ. ಹೊಸಬರನ್ನೇ ಮುಂದುವರಿಸುವುದಿದ್ದರೂ ಪರವಾಗಿಲ್ಲ, ಅವರಿಗೆ ಬೇರೆ ಹೊಣೆಗಳನ್ನು ನೀಡಬಾರದು. ಇಲ್ಲದೇ ಇದ್ದರೆ ಅವರೂ ‘ವಿಸಿಟಿಂಗ್ ಎಂ.ಡಿ’ಯಾಗಬೇಕಾಗುತ್ತದೆ.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಮಂಜುಳಾ ನೂತನ ಎಂ.ಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಯಾಗಿದ್ದ ಎನ್. ಮಂಜುಳಾ ಅವರಿಗೆ ‘ಕೆ–ರೈಡ್’ ಎಂ.ಡಿಯಾಗಿ ಹೆಚ್ಚುವರಿ ಹೊಣೆ ನೀಡಲಾಗಿದೆ.



ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ (ಡಿಪಿಎಆರ್) ಹೆಚ್ಚುವರಿ ಕಾರ್ಯದರ್ಶಿ ಆಗಿರುವವರೇ ‘ಕೆ–ರೈಡ್’ ಎಂ.ಡಿ ಆಗಿರುತ್ತಾರೆ. ಇಲ್ಲಿವರೆಗೆ ಗೌರವ್ ಗುಪ್ತ ಅವರು ಡಿಪಿಎಆರ್ ಕಾರ್ಯದರ್ಶಿಯಾಗಿದ್ದರು. ಅವರನ್ನು ವರ್ಗಾವಣೆ ಮಾಡಲಾಗಿದ್ದು, ಈ ಹುದ್ದೆಗೆ ಎನ್. ಮಂಜುಳಾ ಬಂದಿರುವುದರಿಂದ ಕೆ–ರೈಡ್ ಜವಾಬ್ದಾರಿಯೂ ಬಂದಿದೆ.

ಇಂದಿನಿಂದ ‘36ನೇ ಲಾ ಏಷಿಯಾ’ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾರ್ ಅಸೋಸಿಯೇಷನ್ ಆಫ್ ಇಂಡಿಯಾದ ವತಿಯಿಂದ ಇದೇ 24ರಿಂದ 27ರವರೆಗೆ ‘36ನೇ ಲಾ ಏಷಿಯಾ’ ಸಮ್ಮೇಳನವು ನಗರದ ಫೋರ್ ಸೀಸನ್ ಹೋಟೆಲ್‌ನಲ್ಲಿ ನಡೆಯಲಿದೆ.

ನ.24ರಂದು (ಶುಕ್ರವಾರ) ಸಂಜೆ 4ರಿಂದ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಾರ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ಪ್ರಶಾಂತ್ ಕುಮಾರ್, ಉಪಾಧ್ಯಕ್ಷರಾದ ಹಿರಿಯ ವಕೀಲ ಎಸ್.ಎಸ್. ನಾಗಾನಂದ್, ಲಾಏಷಿಯಾದ ಅಧ್ಯಕ್ಷೆ ಮೆಲಿಸ್ಸಾ ಕೆ. ಪಾಂಗ್, ಪ್ರಧಾನ ಕಾರ್ಯದರ್ಶಿ ಗಾರ್ಡನ್ ಹ್ಯೂಸ್ ಎ.ಎಂ., ಎಂ.ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಷನ್‌ನ ಅಧ್ಯಕ್ಷೆ ಸೌಮ್ಯ ಸ್ವಾಮಿನಾಥನ್ ಭಾಗವಹಿಸಲಿದ್ದಾರೆ.

ನ. 25ರಂದು ಬೆಳಿಗ್ಗೆ 8ರಿಂದ 10ಗಂಟೆವರೆಗೆ ನಡೆಯುವ ಉದ್ಘಾಟನಾ ಗೋಷ್ಠಿಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ಎಸ್.ಎಸ್. ನಾಗಾನಂದ್ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10.30ರಿಂದ ನಡೆಯುವ ಗೋಷ್ಠಿಯಲ್ಲಿ ಕೌಟುಂಬಿಕ ವ್ಯಾಜ್ಯಗಳಿಗೆ ಸಂಬಂಧಿಸಿದ ಕಾನೂನುಗಳು, ಮಾನವ ಹಕ್ಕುಗಳು ಮತ್ತು ಕಾನೂನಿನ ನಿಯಮಗಳು, ವ್ಯಾಪಾರ–ವಹಿವಾಟಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಚರ್ಚೆ ನಡೆಯಲಿದೆ.

ನ. 26ರಂದು ನಡೆಯುವ ಪರಿಸರಕ್ಕೆ ಸಂಬಂಧಿಸಿದ ಕಾನೂನು ಮತ್ತು ಕ್ರಿಮಿನಲ್ ಕಾನೂನುಗಳು ಹಾಗೂ ಮಹಿಳಾ ವಕೀಲರ ಬಗ್ಗೆ ಗೋಷ್ಠಿಗಳು ನಡೆಯಲಿವೆ.

ನ. 27ರಂದು 11ಕ್ಕೆ ದ್ವಿತೀಯ ಗೋಷ್ಠಿಯಲ್ಲಿ ಲಾಏಷಿಯಾ ಚುನಾಯಿತ ಅಧ್ಯಕ್ಷ ಶ್ಯಾಮ್ ದಿವಾನ್ ಹಾಗೂ ಇತಿಹಾಸಕಾರ ರಾಮಚಂದ್ರ ಗುಹಾ ಅವರು ‘ಮಹಾತ್ಮ ಗಾಂಧಿ ಇಂದಿಗೂ ಏಕೆ ಪ್ರಸ್ತುತ’ ಎಂಬ ವಿಷಯದ ಮೇಲಿನ ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಮಧ್ಯಾಹ್ನ 12.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಲಾ ಏಷಿಯಾ ಪ್ರಧಾನ ಕಾರ್ಯದರ್ಶಿ ಗಾರ್ಡನ್ ಹ್ಯೂಸ್ ಎ.ಎಂ., ಅಟಾರ್ನಿ ಜನರಲ್ ಆಫ್ ಇಂಡಿಯಾ ಆರ್. ವೆಂಕಟರಮಣಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 11ಕ್ಕೆ ‘ಅಣಕು ನ್ಯಾಯಾಲಯ ಸ್ಪರ್ಧೆ’ಯ ಅಂತಿಮ ಸುತ್ತಿನ ಸ್ಪರ್ಧೆ ರಾಮಯ್ಯ ಕಾಲೇಜ್ ಆಫ್ ಲಾನಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನೇಪಾಳ: ‘ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ’ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನೇಪಾಳದ ಕಠ್ಮಂಡುವಿನಲ್ಲಿ ‘ಅಂತರರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ’ವನ್ನು ನ.25ರಂದು ಆಯೋಜಿಸಲಾಗಿದೆ.

ಕಠ್ಮಂಡುವಿನಲ್ಲಿರುವ ಪಶುಪತಿ ದೇವಾಲಯ ಆವರಣದಲ್ಲಿ ಕರ್ನಾಟಕ ರಾಜ್ಯೋತ್ಸವ ಶನಿವಾರ ನಡೆಯಲಿದ್ದು, ಮೈಸೂರು ಮಹಾರಾಜ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.



‘ಮೈಸೂರು ಮಹಾರಾಜರ ಪತ್ನಿ ತ್ರಿಶಿಖಾಕುಮಾರಿ ಒಡೆಯರ್, ಐಪಿಎಸ್ ಅಧಿಕಾರಿ ರೂಪಾ ಡಿ. ಮೌದ್ಗಿಲ್, ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತ ಮಂಜುನಾಥ ಸ್ವಾಮಿ, ಕಂದಾಯ ವಿಭಾಗದ ಲಕ್ಷ್ಮೀದೇವಿ, ಹಿರಿಯ ವಕೀಲ ಶ್ರೀನಿವಾಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಗಾಯಕಿ ಅನುರಾಧಾ ಭಟ್ ಅವರ ಸಂಗೀತ ಕಾರ್ಯಕ್ರಮವನ್ನೂ ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಬಿಬಿಎಂಪಿಯ ಉಪ ಆರೋಗ್ಯಾಧಿಕಾರಿ ಡಾ. ಕಲಾವತಿ ದೇವಿ ಅವರಿಗೆ ಸನ್ಮಾನ ಮಾಡಲಾಗುತ್ತದೆ. ಸಂಘದ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದರು.

ಹೊಗೇನಕಲ್: ತಮಿಳುನಾಡಿನಿಂದ 2ನೇ ಹಂತದ ಯೋಜನೆ ಅನುಷ್ಠಾನ

ಪ್ರಜಾವಾಣಿ ವಾರ್ತೆ

ಚೆನ್ನೈ: ಧರ್ಮಪುರಿ ಹಾಗೂ ಕೃಷ್ಣಗಿರಿ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಹೊಗೇನಕಲ್ ಯೋಜನೆಯ 2ನೇ ಹಂತವನ್ನು ತಮಿಳುನಾಡು ಸರ್ಕಾರ ಶೀಘ್ರವೇ ಅನುಷ್ಠಾನಗೊಳಿಸಲಿದೆ.

ತಾನು ಸಲ್ಲಿಸಿದ್ದ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ನಗರ ವ್ಯವಹಾರಗಳ ಸಚಿವಾಲಯವು ನ.8 ರಂದು ಅನುಮೋದನೆ ನೀಡಿದ ಬೆನ್ನಲ್ಲೇ, ತಮಿಳುನಾಡು ಸರ್ಕಾರ 2ನೇ ಹಂತದ ಯೋಜನೆ ಅನುಷ್ಠಾನಕ್ಕೆ ಮುಂದಾಗಿದೆ.

ಒಟ್ಟು ₹ 7,890 ಕೋಟಿ ವೆಚ್ಚದ ಯೋಜನೆ ಇದಾಗಿದ್ದು, ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆಯ (ಜೆಐಸಿಎ) ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಜೆಐಸಿಎ, ಈ ಯೋಜನೆಗೆ ₹4,902 ಕೋಟಿ ಸಾಲ ರೂಪದ ನೆರವು ನೀಡಲಿದೆ.

ಹಣಕಾಸು ಸಚಿವಾಲಯವು ನವದೆಹಲಿಯಲ್ಲಿರುವ ಜಪಾನ್ ರಾಯಭಾರ ಕಚೇರಿಗೆ ನ.22ರಂದು ಪತ್ರ ಬರೆದಿದ್ದು, ಜೆಐಸಿಎ ಪರಿಷ್ಕೃತ ಯೋಜನೆಯಲ್ಲಿ ಹೊಗೇನಕಲ್ ಯೋಜನೆಯನ್ನು ಸೇರ್ಪಡೆ ಮಾಡುವಂತೆ ಕೋರಿದೆ.

ಹಿಂದುಳಿದಿರುವ ಹಾಗೂ ಬರಕ್ಕೆ ತುತ್ತಾಗುವ ಧರ್ಮಪುರಿ ಹಾಗೂ ಕೃಷ್ಣಗಿರಿ ಜಿಲ್ಲೆಗಳಿಗೆ ನಿರಂತರ ಹಾಗೂ ಫ್ಲೋರೈಡ್ ಅಂಶ ಮುಕ್ತ ನೀರು ಪೂರೈಕೆ ಹೊಗೇನಕಲ್ ಯೋಜನೆಯ 2ನೇ ಹಂತದ ಉದ್ದೇಶ. ಕರ್ನಾಟಕದ ಗಡಿಗೆ ಹೊಂದಿಕೊಂಡಿರುವ ಕೈಗಾರಿಕಾ ನಗರ ಹೊಸೂರಿಗೆ ನೀರು ಪೂರೈಸುವುದನ್ನು ಈ ಯೋಜನೆಯು ಒಳಗೊಂಡಿದೆ.

ಕರ್ನಾಟಕದ ವಿರೋಧದ ನಡುವೆಯೇ ತಮಿಳುನಾಡು ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. 2ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಕಾನೂನುಬದ್ಧ ಹಕ್ಕು ತನಗಿರುವುದಾಗಿಯೂ ತಮಿಳುನಾಡು ಹೇಳುತ್ತಿದೆ.

ಕೇಬಲ್ ಸಂಕಷ್ಟ– ಅವಘಡದ ಆತಂಕ

ನಗರದ ಪಾದಚಾರಿ ಮಾರ್ಗಗಳು ನಾಗರಿಕರಿಗೆ ಸುರಕ್ಷಿತವಲ್ಲ ಎಂಬ ಆರೋಪ ಆಗಾಗ್ಗೆ ಕೇಳಿಬರುತ್ತಿದೆ. ವ್ಯಾಪಾರಿಗಳು, ಕೇಬಲ್‌ಗಳು, ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್‌ಗಳು ಈ ಮಾರ್ಗವನ್ನು ಆವರಿಸಿಕೊಂಡಿರುತ್ತವೆ. ಇದರಿಂದ ಸಾಕಷ್ಟು ಅಪಘಾತಗಳೂ ಸಂಭವಿಸಿವೆ. ಕಾಡುಗೋಡಿಯಲ್ಲಿ ವಿದ್ಯುತ್ ತಂತಿ ಪಾದಚಾರಿ ಮಾರ್ಗದ ಮೇಲೆ ಬಿದ್ದು ತಾಯಿ–ಮಗು ಸುಟ್ಟು ಹೋಗಿದ್ದು ಇತ್ತೀಚಿನ ದುರಂತ. ಇಂತಹ ಅವಘಡಗಳಾದಾಗ ಬಿಬಿಎಂಪಿ, ಬೆಸ್ಕಾಂ ಹಾಗೂ ಇತರೆ ಇಲಾಖೆಗಳು ಒಂದಷ್ಟು ಕೆಲಸ ಮಾಡಿ, ನಂತರ ಸುಮ್ಮನಾಗುತ್ತವೆ. ಪಾದಚಾರಿ ಮಾರ್ಗದಲ್ಲಿ ಓಡಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಕ್ರಮ ಕೈಗೊಳ್ಳುವುದಿಲ್ಲ. ನಾಗರಿಕರ ಸಾವಿರಾರು ದೂರು, ನ್ಯಾಯಾಲಯಗಳ ಆದೇಶಗಳೂ ಪಾದಚಾರಿ ಮಾರ್ಗಗಳನ್ನು ಸುರಕ್ಷಿತವಾಗಿರಿಸಿಲ್ಲ. ಜನನಿಬಿಡ ಪಾದಚಾರಿ ಮಾರ್ಗಗಳಲ್ಲಿ ಕೈಗೆಟಕುವಂತಹ ಮಟ್ಟದಲ್ಲಿ ಟ್ರಾನ್ಸ್‌ಫಾರ್ಮರ್, ವಿದ್ಯುತ್ ತಂತಿಗಳಿವೆ. ಇಂತಹ ಕೆಲವು ಸ್ಥಳಗಳಲ್ಲಿನ ಚಿತ್ರಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

ಚಿತ್ರ ಕಳುಹಿಸಿ: ನಗರದ ಹಲವೆಡೆ ವಿದ್ಯುತ್ ಕಂಬಗಳಿಗೆ ಕೇಬಲ್‌ಗಳನ್ನು ಸುತ್ತಲಾಗಿದೆ. ಪಾದಚಾರಿ ಮಾರ್ಗದಲ್ಲಿ ನಾಗರಿಕರಿಗೆ ಇವು ಸಂಕಷ್ಟ ಉಂಟುಮಾಡಿವೆ. ಅಂತಹ ಅಪಾಯಕಾರಿ ಸ್ಥಳಗಳ ಚಿತ್ರಗಳನ್ನು ವಿಳಾಸದೊಂದಿಗೆ ವಾಟ್ಸ್‌ಆ್ಯಪ್ ಮಾಡಿ... 96060 38256


ಎಸ್‌.ಪಿ ರಸ್ತೆ ಸಮೀಪದ ತಿಗಳರಪೇಟೆ ಪೈಲ್ವಾನ್ ಟಿ. ಅಣ್ಣಯ್ಯಪ್ಪ ಮುಖ್ಯರಸ್ತೆಯಲ್ಲಿ ಕೈಗೆ ಎಟುಕುವ ಮಟ್ಟದಲ್ಲಿರುವ ವಿದ್ಯುತ್ ಕಂಬದ ವೈರ್‌ಗಳು... ಚಿತ್ರ: ಎಸ್‌.ಕೆ. ದಿನೇಶ್


ಕುಮಾರಕೃಪಾ ಪಾರ್ಕ್ ಪಶ್ಚಿಮದಲ್ಲಿ ಪಾದಚಾರಿ ಮಾರ್ಗಕ್ಕೆ ಹೊಂದಿಕೊಂಡಂತೆ ತೆರೆದುಕೊಂಡಿರುವ ಬೃಹತ್ ಕೇಬಲ್ ಚಿತ್ರ: ಬಿ.ಕೆ. ಜನಾರ್ಧನ್



ಸೇಂಟ್ ಜೋಸೆಫ್ಸ್ ಪಿಯು ಕಾಲೇಜಿನ ಸಮೀಪದ ರೆಸಿಡೆನ್ಸಿ ರಸ್ತೆಯ ಪಾದಚಾರಿ ಮಾರ್ಗದ ಮೇಲೆಯೇ ಕೇಬಲ್‌ಗಳನ್ನು ಹರಡಿರುವುದು ಚಿತ್ರ: ಪುಷ್ಕರ್ ವಿ


ರೇಸ್‌ಕೋರ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಾಲಿಗೆ ತಾಗುವಂತಿರುವ ವಿದ್ಯುತ್ ವೈರ್‌ಗಳು


ಕುಮಾರಕೃಪಾ ಪಾರ್ಕ್ ಪಶ್ಚಿಮದಲ್ಲಿ ಪಾದಚಾರಿ ಮಾರ್ಗದಲ್ಲಿ ಕೆಳಮಟ್ಟದಲ್ಲಿರುವ ಟ್ರಾನ್ಸ್‌ಫಾರ್ಮರ್


ಬೊಮ್ಮನಹಳ್ಳಿಯ ಬೇಗೂರು ಮುಖ್ಯರಸ್ತೆಯಲ್ಲಿರುವ ಸಿಗ್ನಲ್ ಬಳಿಯ ಪಾದಚಾರಿ ಮಾರ್ಗದಲ್ಲಿ ವಿದ್ಯುತ್ ಕಂಬಕ್ಕೆ ಸುತ್ತಲಾಗಿರುವ ಕೇಬಲ್‌ಗಳು.

ಆರ್.ಡಿ. ಪಾಟೀಲಗೆ ಮತ್ತೆ ನ್ಯಾಯಾಂಗ ಬಂಧನ


ಆರ್.ಡಿ. ಪಾಟೀಲ

ಕಲಬುರಗಿ: ಕಳೆದ ಅಕ್ಟೋಬರ್ 28ರಂದು ನಡೆದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದಂತೆ ಬಂಧಿತನಾಗಿರುವ ಪ್ರಮುಖ ಆರೋಪಿ ಅಫಜಲಪುರದ ಆರ್.ಡಿ. ಪಾಟೀಲ ಪೊಲೀಸ್ ಕಸ್ಟಡಿಯ ಅವಧಿ ಅಂತ್ಯವಾದ ಹಿನ್ನೆಲೆಯಲ್ಲಿ ಇಲ್ಲಿನ ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯವು ಮತ್ತೆ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಪ್ರಕರಣವನ್ನು ಸರ್ಕಾರ ಸಿಐಡಿಗೆ ಹಸ್ತಾಂತರಿಸಿತ್ತು. ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿ ತನಿಖೆಗಾಗಿ ವಶಕ್ಕೆ ಪಡೆದುಕೊಂಡಿದ್ದರು. ಮಾಹಿತಿ ಸಂಗ್ರಹಿಸಿದ ಬಳಿಕ ಗುರುವಾರ ಆರ್.ಡಿ. ಪಾಟೀಲನನ್ನು ಸಿಐಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ನ್ಯಾಯಾಧೀಶ ಸಂತೋಷ ಶ್ರೀವಾಸ್ತವ ಅವರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು.

ಇದುವರೆಗೆ ಕಲಬುರಗಿಯ ಅಶೋಕ ನಗರ ಠಾಣೆಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ವಿಚಾರಣೆ ನಡೆಸಿ ಮಾಹಿತಿ ಸಂಗ್ರಹಿಸಿದ್ದರು. ವಿಶ್ವವಿದ್ಯಾಲಯ ಠಾಣೆಯಲ್ಲಿ ದಾಖಲಾದ ಎಫ್‌ಐಆರ್‌ಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ಮತ್ತೆ ತಮ್ಮ ವಶಕ್ಕೆ ನೀಡುವಂತೆ ಸಿಐಡಿ ಪರ ವಕೀಲರು ಶುಕ್ರವಾರ ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ.

2024: ಸಾರ್ವತ್ರಿಕ ರಜಾ ದಿನಗಳ ಪಟ್ಟಿ

ಬೆಂಗಳೂರು: 2024ನೇ ಸಾಲಿನ ಸಾರ್ವತ್ರಿಕ ರಜಾ ದಿನಗಳ ಪಟ್ಟಿಗೆ ರಾಜ್ಯ ಸಚಿವ ಸಂಪುಟ ಸಭೆ ಗುರುವಾರ ಒಪ್ಪಿಗೆ ನೀಡಿದೆ.

ಎಲ್ಲ ಎರಡನೇ ಶನಿವಾರ, ನಾಲ್ಕನೇ ಶನಿವಾರ ಮತ್ತು ಕೆಳಕಂಡ ದಿನಗಳು ಸಾರ್ವತ್ರಿಕ ರಜಾದಿನಗಳಾಗಿವೆ. ಈ ಪಟ್ಟಿಯಲ್ಲಿ ಭಾನುವಾರಗಳಂದು ಬರುವ ಅಂಬೇಡ್ಕರ್ ಜಯಂತಿ (ಏ. 14), ಮಹಾವೀರ ಜಯಂತಿ (ಏಪ್ರಿಲ್ 21), ಎರಡನೇ ಶನಿವಾರ ಬರುವ ವಿಜಯದಶಮಿ (ಅ. 12) ನಮೂದಿಸಿಲ್ಲ.

ಜ.15	ಉತ್ತರಾಯಣ ಪುಣ್ಯಕಾಲ, ಮಕರ ಸಂಕ್ರಾಂತಿ
ಜ.26	ಗಣರಾಜ್ಯೋತ್ಸವ
ಮಾರ್ಚ್ 8	ಮಹಾಶಿವರಾತ್ರಿ
ಮಾರ್ಚ್ 29	ಗುಡ್ ಫ್ರೈಡೇ
ಏ.9	ಯುಗಾದಿ
ಏ.11	ರಂಜಾನ್
ಮೇ 1	ಕಾರ್ಮಿಕ ದಿನ
ಮೇ 10	ಬಸವ ಜಯಂತಿ
ಜೂನ್ 17	ಬಕ್ರೀದ್
ಜುಲೈ 17	ಮೊಹರಂ ಕಡೇ ದಿನ
ಆ.15	ಸ್ವಾತಂತ್ರ್ಯ ದಿನ
ಸೆ.7	ವರಸಿದ್ಧಿ ವಿನಾಯಕ ವ್ರತ
ಸೆ.16	ಈದ್ ಮಿಲಾದ್
ಅ.2	ಗಾಂಧಿ ಜಯಂತಿ
ಅ.11	ಮಹಾನವಮಿ, ಆಯುಧ ಪೂಜೆ
ಅ.17	ವಾಲ್ಮೀಕಿ ಜಯಂತಿ
ಅ.31	ನರಕ ಚತುರ್ದಶಿ
ನ.1	ಕನ್ನಡ ರಾಜ್ಯೋತ್ಸವ
ನ.2	ಬಲಿಪಾಡ್ಯಮಿ, ದೀಪಾವಳಿ
ನ.18	ಕನಕದಾಸ ಜಯಂತಿ
ಡಿ.25	ಕ್ರಿಸ್‌ಮಸ್

ಸುಂದರೇಶನ್ ನೇಮಕಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಕೀಲ ಸೋಮಶೇಖರ್ ಸುಂದರೇಶನ್ ಅವರನ್ನು ಬಾಂಬೆ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡಲು ಕೇಂದ್ರ ಸರ್ಕಾರವು ಗುರುವಾರ ಸಮ್ಮತಿ ನೀಡಿದೆ. ಇವರ ಹೆಸರನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ 10 ತಿಂಗಳಿಗೂ ಹಿಂದೆ ಮರು ಶಿಫಾರಸು ಮಾಡಿತ್ತು.

ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಪ್ರಕರಣಗಳು ಸೇರಿದಂತೆ ಹಲವು ವಿಷಯಗಳ ಬಗ್ಗೆ ಸುಂದರೇಶನ್ ಅವರು ತಮ್ಮ ಅಭಿಪ್ರಾಯವನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡಿದ್ದಾರೆ ಎಂಬ ಕಾರಣ ನೀಡಿ ಕೇಂದ್ರ ಸರ್ಕಾರವು ಅವರ ಹೆಸರನ್ನು ಈ ಹಿಂದೆ ವಾಪಸ್ ಕಳುಹಿಸಿತ್ತು.

ಸುಂದರೇಶನ್ ಅವರ ಹೆಸರನ್ನು ಕೊಲಿಜಿಯಂ 2022ರ ಫೆಬ್ರುವರಿಯಲ್ಲಿ ಮೊದಲ ಬಾರಿ ಶಿಫಾರಸು ಮಾಡಿತ್ತು. ಆದರೆ 2022ರ ನವೆಂಬರ್‌ನಲ್ಲಿ ಕೇಂದ್ರವು ಇವರ ಹೆಸರನ್ನು ಮರುಪರಿಶೀಲಿಸಬೇಕು ಎಂದು ಹೇಳಿತ್ತು. ಕೊಲಿಜಿಯಂ ಈ ವರ್ಷದ ಜನವರಿಯಲ್ಲಿ ಸುಂದರೇಶನ್ ಅವರ ಹೆಸರನ್ನು ಮತ್ತೆ ಶಿಫಾರಸು ಮಾಡಿತು. ಈಗ ಅವರ ಹೆಸರಿಗೆ ಕೇಂದ್ರ ಒಪ್ಪಿಗೆ ನೀಡಿದೆ.

ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಕೊಲಿಜಿಯಂ ಮರು ಶಿಫಾರಸು ಮಾಡಿದ ಹೆಸರನ್ನು ಕೇಂದ್ರವು ಒಪ್ಪಿಕೊಳ್ಳಲೇಬೇಕು ಎಂಬುದು ನಿಯಮ. ‘ಎಲ್ಲ ಪ್ರಜೆಗಳಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ. ಅಭ್ಯರ್ಥಿಯೊಬ್ಬರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದರೆ ಅವರು ಸಾಂವಿಧಾನಿಕ ಹುದ್ದೆಯನ್ನು ಹೊಂದಲು ಅನರ್ಹರಾಗುವುದಿಲ್ಲ’ ಎಂದು ಮರು ಶಿಫಾರಸು ಮಾಡುವ ಸಂದರ್ಭದಲ್ಲಿ ಕೊಲಿಜಿಯಂ ಹೇಳಿತ್ತು.

ಅಮೆರಿಕದಲ್ಲಿ ಗುಂಡಿನ ದಾಳಿ ಭಾರತೀಯ ವಿದ್ಯಾರ್ಥಿ ಸಾವು

ವಾಷಿಂಗ್ಟನ್(ಪಿಟಿಐ): ಅಮೆರಿಕದಲ್ಲಿ ಪಿಎಚ್‌.ಡಿ ಅಧ್ಯಯನ ಮಾಡುತ್ತಿದ್ದ ಭಾರತ ಮೂಲದ ವಿದ್ಯಾರ್ಥಿಯನ್ನು ಗುಂಡಿಟ್ಟು ಹತ್ಯೆ ಮಾಡಲಾಗಿದೆ.

26 ವರ್ಷದ ಆದಿತ್ಯ ಅದ್ಲಖಾ ಹತ್ಯೆಯಾದ ವಿದ್ಯಾರ್ಥಿ. ಆದಿತ್ಯ, ಸಿನ್‌ಸಿನಾಟಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಮಾಲೆಕ್ಯೂಲರ್ ಅಂಡ್ ಡೆವಲೆಪ್‌ಮೆಂಟಲ್ ಬಯೊಲಾಜಿ ವಿಷಯದಲ್ಲಿ ಪಿಎಚ್‌.ಡಿ ಮಾಡುತ್ತಿದ್ದ ಎಂದು ಡಬ್ಲ್ಯುಎಕ್ಸ್‌ಐಎಕ್ಸ್ ಟಿವಿ ವರದಿ ಮಾಡಿದೆ.

‘ನ.9ರಂದು ಈ ಘಟನೆ ನಡೆದಿದ್ದು, ಕಾರಿನಲ್ಲಿದ್ದ ಆದಿತ್ಯ ಅವರತ್ತ ಗುಂಡು ಹಾರಿಸಲಾಯಿತು. ಗಂಭೀರವಾಗಿ ಗಾಯಗೊಂಡಿದ್ದ ಆದಿತ್ಯ ಅವರನ್ನು ಯುಸಿ ಮೆಡಿಕಲ್ ಸೆಂಟರ್‌ನಲ್ಲಿ ದಾಖಲಿಸಲಾಗಿತ್ತು. ಎರಡು ದಿನಗಳ ನಂತರ ಅವರು ಮೃತಪಟ್ಟರು’ ಎಂದು ಹ್ಯಾಮಿಲ್ಟನ್ ಕೌಂಟಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಘಟನೆಗೆ ಸಂಬಂಧಿಸಿ ಈ ವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

‘ದೃಢ ಸಂಕಲ್ಪ ಯಶಸ್ಸಿನ ಸೂತ್ರ’

ಪ್ರಜಾವಾಣಿ ವಾರ್ತೆ


ಬಿಜಿಎಸ್ ಮತ್ತು ಎಸ್‌ಜೆಬಿ ಸಂಸ್ಥೆಯ ಪ್ರಾಧ್ಯಾಪಕ ಡಾ.ಶಾಂತಕುಮಾರ್ ಹಾಗೂ ಸವಿತಾ ಸುವರ್ಣ ಅವರಿಗೆ ‘ಸೇವಾರತ್ನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಆದಿ ಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಕಾಶನಾಥ ಸ್ವಾಮೀಜಿ, ನಟ ಯಶ್, ಶಾಸಕ ಎಸ್‌.ಟಿ.ಸೋಮಶೇಖರ್ ಇದ್ದಾರೆ

ಕೆಂಗೇರಿ: ‘ದೃಢ ಸಂಕಲ್ಪ ಹಾಗೂ ಶ್ರಮದೊಂದಿಗೆ ಸರಳತೆ, ಸಜ್ಜನಿಕೆ ಮೈಗೂಡಿಸಿಕೊಂಡರೆ ಯಶಸ್ಸು ನಮ್ಮದಾಗುತ್ತದೆ’ ಎಂದು ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಬಿಜಿಎಸ್ ಸಮೂಹ ಸಂಸ್ಥೆಗಳ ವತಿಯಿಂದ ಆಯೋಜಿಸಲಾಗಿದ್ದ ಬಿಜಿಎಸ್ ಸಂಸ್ಥಾಪಕರ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶಿಕ್ಷಣಕ್ಕೆ ನೀಡುವ ಮಹತ್ವ ಕ್ರೀಡೆಗೂ ದೊರೆಯಬೇಕು. ಕ್ರೀಡೆ ನಮ್ಮ ಮಾನಸಿಕ ಹಾಗೂ ದೈಹಿಕ ಆರೋಗ್ಯ ವೃದ್ದಿಸುವುದರೊಂದಿಗೆ ದೇಶದ ಬೆಳವಣಿಗೆಯಲ್ಲೂ ಪ್ರಮುಖ ಪಾತ್ರ ವಹಿಸಲಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್‌. ಗೋವಿಂದರಾಜು ಹೇಳಿದರು.

ಚಿತ್ರನಟ ಯಶ್ ಮಾತನಾಡಿ, ‘ಒಬ್ಬ ವ್ಯಕ್ತಿಯ ಅವಿರತ ಶ್ರಮ, ಬದ್ಧತೆಯಿಂದ ಒಂದು ಉತ್ತಮ ಸಂಸ್ಥೆ ರೂಪುಗೊಳ್ಳಲು ಸಾಧ್ಯ. ಅದೇ ರೀತಿ ಬಾಲಗಂಗಾಧರ ಸ್ವಾಮೀಜಿ ಅವರ ಅವಿರತ ಪ್ರಯತ್ನದಿಂದ ಬಿಜಿಎಸ್ ದೇಶದ ಉನ್ನತ ಶಿಕ್ಷಣ ಸಂಸ್ಥೆಯಾಗಿ ರೂಪುಗೊಂಡಿದೆ’ ಎಂದು ಶ್ಲಾಘಿಸಿದರು.

ಬಿಜಿಎಸ್ ಸಂಸ್ಥೆಯ ಸಾಧಕ ಪ್ರಾಧ್ಯಾಪಕರಾದ ಸವಿತಾ ಸುವರ್ಣ ಹಾಗೂ ಶಾಂತಕುಮಾರ್ ಅವರಿಗೆ ಸೇವಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಿಜಿಎಸ್ ಮತ್ತು ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಶಾಸಕ ಎಸ್‌.ಟಿ.ಸೋಮಶೇಖರ್ ಇದ್ದರು.


ವಿದ್ಯಾರತ್ನ ಪ್ರಶಸ್ತಿ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ರಾಜ್ಯದ 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಜನ್ಮಭೂಮಿ ಸಾಂಸ್ಕೃತಿಕ ನಾಗರಿಕ ವೇದಿಕೆ ವತಿಯಿಂದ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿದ್ಯಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿ ಮಹೇಂದ್ರ ಮುನೋಟ್, ವೇದಿಕೆಯ ಸದಸ್ಯರಾದ ಕೃಷ್ಣಪ್ಪ, ಹರಿಕೃಷ್ಣ ಇದ್ದರು.

ನಗರದಲ್ಲಿ ಇಂದು

ಸುವರ್ಣ ಕರ್ನಾಟಕ ಸಂಭ್ರಮ: ಅತಿಥಿಗಳು: ಎಸ್‌. ಪಿನಾಕಪಾಣಿ, ಯಲ್ಲೂರಿ ಫಣಿ, ಮಹಾಬಲೇಶ ಸಿ., ಆಯೋಜನೆ ಮತ್ತು ಸ್ಥಳ: ಚೈತನ್ಯ ಟೆಕ್ನೋ ಶಾಲೆ, ಬನ್ನೇರುಘಟ್ಟ, ಬೆಳಿಗ್ಗೆ 8

ಉದ್ಯೋಗ ಮೇಳ: ಆಯೋಜನೆ ಮತ್ತು ಸ್ಥಳ: ಅಶೋಕ ಪಾಲಿಟೆಕ್ನಿಕ್ ಮತ್ತು ಐಟಿಐ ಕ್ಯಾಂಪಸ್, ಕಮ್ಮಗೊಂಡನಹಳ್ಳಿ, ಜಾಲಹಳ್ಳಿ, ಬೆಳಿಗ್ಗೆ 9ರಿಂದ

ಅಂತರ ಶಾಲೆಗಳ ನಡುವೆ ನೃತ್ಯ ಸ್ಪರ್ಧೆ: ಆಯೋಜನೆ: ಡೆಕ್ಕನ್ ಹೆರಾಲ್ಡ್, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30

ಆರ್‌. ದಯಾನಂದ ಸಾಗರ್, ಚಂದ್ರಮ್ಮ ದಯಾನಂದ ಸಾಗರ್ ಸ್ಮರಣಾರ್ಥ ‘ಕೀಟ ಸಾಮ್ರಾಜ್ಯ, ನಾಣ್ಯ ಸಂಗ್ರಹ ಪ್ರದರ್ಶನ: ಅತಿಥಿಗಳು: ತೇಜಸ್ವಿ ಸೂರ್ಯ, ವಿ.ಟಿ. ಸಣ್ಣವೀರಪ್ಪನವರ, ಎಚ್‌.ಕೆ. ರಾಮರಾವ್, ಡಾ. ಸಿ.ಎನ್‌. ಮಂಜುನಾಥ್, ಆನಂದರಾಜ್ ಎ., ಎನ್‌. ರಾಜ್, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಪದವಿ ಪೂರ್ವ ಕಾಲೇಜು, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 9.30ರಿಂದ

‘18ನೇ ಲಾಏಷಿಯಾ’ ಅಣಕು ನ್ಯಾಯಾಲಯ ಸ್ಪರ್ಧೆಯ ಉದ್ಘಾಟನೆ: ಆಯೋಜನೆ ಮತ್ತು ಸ್ಥಳ: ದ್ವಾರಕಾ ಹಾಲ್, ಎಂ.ಎಸ್‌. ರಾಮಯ್ಯ ಕ್ಯಾಂಪಸ್, ಬೆಳಿಗ್ಗೆ 10

‘ಇಂದಿರಾ ರತ್ನ’ ದತ್ತಿ ಪ್ರಶಸ್ತಿ ಪ್ರದಾನ, ಕರ್ನಾಟಕ ರಾಜ್ಯೋತ್ಸವ ಆಚರಣೆ, ಪತ್ರಿಕೆ ಬಿಡುಗಡೆ: ಅಪರ್ಣಾ ವಸ್ತಾರೆ, ಪ್ರಶಸ್ತಿ ಪುರಸ್ಕೃತರು: ಆರ್‌. ಹಂಸಾ, ಆಶಯ ಭಾಷಣ: ಎಚ್‌.ಎಲ್‌. ಪುಷ್ಪ, ಉಪಸ್ಥಿತಿ: ಎಂ.ಎಲ್‌. ಅಶೋಕ್, ಅಧ್ಯಕ್ಷತೆ: ಎಸ್‌. ಎನ್‌. ವೆಂಕಟೇಶ್, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು, ಯಲಹಂಕ ಉಪನಗರ, ಬೆಳಿಗ್ಗೆ 10.30


‘ಸಾಹಿತ್ಯ ಮತ್ತು ಸಿನಿಮಾ’ ಉಪನ್ಯಾಸ: ರಘುನಾಥ ಚ.ಹ., ಅಧ್ಯಕ್ಷತೆ: ಲಿಂಗರಾಜಯ್ಯ, ಉಪಸ್ಥಿತಿ: ಹರೀಶ್ ಅಪ್ಪಾರೆಡ್ಡಿ, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಪದವಿ ಕಾಲೇಜು, ರಾಜಾಜಿನಗರ, ಬೆಳಿಗ್ಗೆ 10.30

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ವಿ. ನಾಗೇಂದ್ರ ಪ್ರಸಾದ್, ವನ್ಶಿಕಾ ಕಶ್ಯಪ, ಮಹಿತ ವಿ., ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10


ಚಂದ್ರಶೇಖರ ಕಂಬಾರ

ವಾರ್ಷಿಕೋತ್ಸವ, ವೈಕುಂಠ ಏಕಾದಶಿ, ಶ್ರೀನಿವಾಸ ಕಲ್ಯಾಣ ಮಹೋತ್ಸವ: ಶ್ರೀದೇವಿ ಮತ್ತು ಭೂದೇವಿ ವೆಂಕಟರಮಣ ಸ್ವಾಮಿಗೆ ದಂಪತಿ ಸಹಿತ ಧಾರೆ, ಹನುಮ ಜಯಂತಿ, ಅನ್ನ ಸಂತರ್ಪಣೆ, ಆಯೋಜನೆ ಮತ್ತು ಸ್ಥಳ: ಶನೈಶ್ವರಸ್ವಾಮಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್, ಜ್ಞಾನಭಾರತಿ 2ನೇ ಹಂತ, ಮಧ್ಯಾಹ್ನ 12.30ರಿಂದ

ಪ್ರಾಕೃತಿಕ ಕೃಷಿ ಸಮ್ಮೇಳನ: ಅತಿಥಿ: ಶ್ರೀಶ್ರೀ ರವಿಶಂಕರ್ ಗುರೂಜಿ, ಆಯೋಜನೆ ಮತ್ತು ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಕನಕಪುರ ರಸ್ತೆ, ಬೆಳಿಗ್ಗೆ 10ರಿಂದ


ಶ್ರೀಶ್ರೀ ರವಿಶಂಕರ್ ಗುರೂಜಿ

ಕರ್ನಾಟಕ ರಾಜ್ಯೋತ್ಸವ: ಅಧ್ಯಕ್ಷತೆ: ದಿಲೀಪ್ ವೈ., ಅತಿಥಿಗಳು: ಜಿ.ಬಿ. ಹರೀಶ್, ಸಾಲುಮರದ ಸುರೇಶ್, ಆಯೋಜನೆ ಮತ್ತು ಸ್ಥಳ: ಎಡಿಇ ಸಾಂಸ್ಕೃತಿಕ ಸಂಘ, ಮಧ್ಯಾಹ್ನ 1.30

‘ರೂಪಕಂ’ ಸಂಗೀತ ಕಛೇರಿ: ಪಿಟೀಲು: ಕುಮರೇಶ್ ರಾಜಗೋಪಾಲನ್, ಮೃದಂಗ: ಜಯಚಂದ್ರ ರಾವ್, ಘಟ್ಟ: ತಿರುಚ್ಚಿ ಕೃಷ್ಣಸ್ವಾಮಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಜಯನಗರ, ಸಂಜೆ 7


ಕುಮರೇಶ್ ರಾಜಗೋಪಾಲನ್

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ನಿರಂಜನ್ ವಾನಳ್ಳಿ, ಡಬ್ಲ್ಯು ಸೆಲ್ವಮೂರ್ತಿ, ಅಧ್ಯಕ್ಷತೆ: ಟಿ. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಅಕಾಡೆಮಿ, ಕಲ್ಯಾಣನಗರ, ಮಧ್ಯಾಹ್ನ 2.30

ರಾಜ್ಯಮಟ್ಟದ ಬಾಲಕರ ಅಥ್ಲೆಟಿಕ್ಸ್ ಕ್ರೀಡಾಕೂಟದ ಸಮಾರೋಪ: ಅಧ್ಯಕ್ಷತೆ: ಎನ್‌. ರಾಜು, ಅತಿಥಿ: ಅರ್ಜುನ್ ದೇವಯ್ಯ, ಉಪಸ್ಥಿತಿ: ಯು. ಜಯರಾಮ್, ಆರ್‌. ಕೃಷ್ಣಮೂರ್ತಿ, ಈರೇಗೌಡ ಬಿ.ಜಿ., ಬಸವರಾಜು ಟಿ.ಆರ್‌., ಮುರಳೀಧರ್ ಎಂ., ಗಿರೀಶ್ ಸಿ. ಗೋಲಾ, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಕಂಠೀರವ ಕ್ರೀಡಾಂಗಣ, ಸಂಪಂಗಿರಾಮ ನಗರ, ಮಧ್ಯಾಹ್ನ 3

ಜಿಲ್ಲಾಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ: ಅತಿಥಿಗಳು: ಶ್ರೀನಿವಾಸ್ ಜಿ. ಕಪ್ಪಣ್ಣ, ಆನಂದರಾಜ್, ಉಪಸ್ಥಿತಿ: ಆರ್‌. ರಾಜಗೋಪಾಲ್, ಪುರುಷೋತ್ತಮ, ಹೊ.ನ. ನೀಲಕಂಠೇಗೌಡ, ಅಧ್ಯಕ್ಷತೆ: ಸೆಬಾಸ್ಟಿನ್ ಮಥಾಯ್, ಆಯೋಜನೆ: ಶಾಲಾ ಶಿಕ್ಷಣ ಇಲಾಖೆ, ಸ್ಥಳ: ಕ್ರೈಸ್ಟ್ ಪಿ.ಯು. ಕಾಲೇಜು, ಹೊಸೂರು ರಸ್ತೆ, ಮಧ್ಯಾಹ್ನ 3

ವಾರ್ಷಿಕೋತ್ಸವ: ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ಪ್ರಧಾನ ಕಳಸ ಪ್ರತಿಷ್ಠಾಪನೆ, ಮಹಾಮಂಗಳಾರತಿ ಮತ್ತು ತೀರ್ಥಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ: ವಿಶ್ವಪ್ರಿಯ ಬಲಮುರಿ ಗಣಪತಿ ದೇವಸ್ಥಾನ ಸೇವಾ ಸಮಿತಿ, ವಿಶ್ವಪ್ರಿಯನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ವಿಶ್ವಪ್ರಿಯನಗರ, ಸಂಜೆ 4ರಿಂದ

ವಾರ್ಷಿಕೋತ್ಸವ, ಪ್ರಶಸ್ತಿ ಪ್ರದಾನ: ಸುಮಾ ಸುಧೀಂದ್ರ, ಪ್ರಶಸ್ತಿ ಪುರಸ್ಕೃತರು: ಸುಮಿತ್ರಾ ನಿತಿನ್, ಸಿ. ಚೆಲುವರಾಜು, ಸನ್ಮಾನ: ಮುಷ್ಣಂ ವಿ. ರಾಜಾರಾವ್, ವಾಸುದೇವರಾವ್, ಗಾಯನ: ಸುಮಿತ್ರ ನಿತಿನ್, ಪಿಟೀಲು: ಬಿ.ಕೆ. ರಘು, ಮೃದಂಗ: ಸಿ. ಚೆಲುವರಾಜು, ಘಟ್ಟ: ಎಸ್‌. ಶ್ರೀಶೈಲ, ಆಯೋಜನೆ ಮತ್ತು ಸ್ಥಳ: ಶ್ರೀರಾಮ ಲಲಿತ ಕಲಾ ಮಂದಿರ, ಬನಶಂಕರಿ 2ನೇ ಹಂತ, ಸಂಜೆ 4ರಿಂದ

ನರಸಿಂಹಮೂರ್ತಿ ಹೂವಿನಹಳ್ಳಿ ಅವರ ‘ಚಂಡ ವ್ಯಾಘ್ರರು’ ಕಾದಂಬರಿ ಬಿಡುಗಡೆ: ರಘುನಾಥ ಚ.ಹ., ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಪುಸ್ತಕ ಪರಿಚಯ: ಎನ್‌. ಸಿ. ಮಹೇಶ್, ಉಪಸ್ಥಿತಿ: ಎನ್‌.ಎಸ್‌. ಸತೀಶ್, ಆಯೋಜನೆ: ಪ್ರೇರಣ ಪ್ರಕಾಶನ, ಸ್ಥಳ: ಶೇಷಾದ್ರಿಪುರ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 5

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸುಶ್ಮಿತಾ ಸಿಂಗ್, ಅತಿಥಿಗಳು: ರೇವತಿ ನರಸಿಂಹಮೂರ್ತಿ, ಎಸ್‌. ನಂಜುಂಡ ರಾವ್, ಆಯೋಜನೆ: ರಜಿನಿ ಸಂಗೀತ ನೃತ್ಯಾಲಯ, ಸ್ಥಳ: ಬೆಂಗಳೂರು ಗಾಯನ ಸಮಾಜ, ಶ್ರೀಕೃಷ್ಣರಾಜ ರಸ್ತೆ, ಸಂಜೆ 5.30

ನಮ್ಮ ಕರಾವಳಿ ಉತ್ಸವ: ಆಯೋಜನೆ: ಕರಾವಳಿ ಕುಟುಂಬ, ಸ್ಥಳ: ಪ್ರೆಸ್ಟಿಜ್ ಪಲ್ಕಾನ್ ಸಿಟಿ, ಕೋಣನಕುಂಟೆ, ಸಂಜೆ 6

ಶಂಕರನಾಗ್ ನಾಟಕೋತ್ಸವದ ಸಮಾರೋಪ: ಅತಿಥಿಗಳು: ಮೈಮ್ ರಮೇಶ್, ಅಕ್ಷೈ ಪದ್ಮಶಾಲಿ, ಮಾಗಡಿ ಗಿರೀಶ್, ರಾಘವೇಂದ್ರ, ಪ್ರಮೋದ್ ಶೆಟ್ಟಿ, ಶ್ರೀನಾಥ್, ಆಯೋಜನೆ: ರಂಗಪಯಣ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ ರಸ್ತೆ, ಸಂಜೆ 6

ಮಯೂರ, ಸುಧಾ ಓದಿರಿ

ಸರ್ಕಾರಗಳಿಗೆ ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಲಹೆ

‘ಜನತೆಗೆ ದುಡಿಯುವ ಮಾರ್ಗ ತೋರಿಸಲಿ’

ಪ್ರಜಾವಾಣಿ ವಾರ್ತೆ


ನ್ಯಾಮತಿ ತಾಲ್ಲೂಕು ರಾಮೇಶ್ವರ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ಧಾರ್ಮಿಕ ಕಾರ್ಯಕ್ರಮವನ್ನು ಶಾಸಕ ಡಿ.ಜಿ. ಶಾಂತನಗೌಡ ಉದ್ಘಾಟಿಸಿದರು. ಸಾಣೇಹಳ್ಳಿ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಇದ್ದಾರೆ.

ರಾಮೇಶ್ವರ (ನ್ಯಾಮತಿ): ‘ಸರ್ಕಾರಗಳು ಕಾಯಕವೇ ಕೈಲಾಸ ಎಂಬ ತತ್ವದಡಿ ಮುನ್ನಡೆಯಬೇಕೇ ಹೊರತು, ಬೇಡಿ ಬದುಕುವ ಪರಿಸ್ಥಿತಿಗೆ ಜನರನ್ನು ನೂಕಬಾರದು. ಜನತೆಗೆ ದುಡಿಯುವ ದಾರಿ ತೋರಬೇಕು. ಇಲ್ಲವಾದಲ್ಲಿ ಅವರು ಬೇಡಿ ಬದುಕುವ ದಾರಿ ಹಿಡಿಯುತ್ತಾರೆ’ ಎಂದು ಸಾಣೇಹಳ್ಳಿ ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ.ಟ್ರಸ್ಟ್ ಸವಳಂಗ ವಲಯ, ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ಹಾಗೂ ರಾಮೇಶ್ವರ ಗ್ರಾಮದ ವತಿಯಿಂದ ತಾಲ್ಲೂಕಿನ ರಾಮೇಶ್ವರ ಗ್ರಾಮದಲ್ಲಿ ಗುರುವಾರ ನಡೆದ ಸಾಮೂಹಿಕ ಸತ್ಯ ನಾರಾಯಣಸ್ವಾಮಿ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಯಾವುದೇ ಸರ್ಕಾರಗಳು ಹಸಿದವರಿಗೆ ನಿತ್ಯವೂ ಅನ್ನವನ್ನು ನೀಡುವ ಬದಲು, ಅನ್ನವನ್ನು ದುಡಿಯುವ ಮಾರ್ಗವನ್ನು ತೋರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹಿಂದಿಗಿಂತ ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ. ಆದರೆ ನೈತಿಕ ನೆಲೆಗಟ್ಟು ಕುಸಿದಿದೆ’ ಎಂದು ವಿಷಾದ ವ್ಯಕ್ತಪಡಿಸಿದರು.

‘ಭೂತಾಯಿಯನ್ನು ಪೂಜಿಸುವವರು ಕಡಿಮೆಯಾಗುತ್ತಿದ್ದಾರೆ. ಪೂಜಿಸುವುದು ಮುಖ್ಯವಲ್ಲ. ನೈತಿಕತೆಯನ್ನು ಪೂಜಿಸುವ ಕೆಲಸ ಆಗಬೇಕಿದೆ. ಸರ್ಕಾರ ವಿವಿಧ ಯೋಜನೆಗಳ ಅಡಿ ನೀಡಿದ ಹಣವನ್ನು ಗಂಡಸರು ಕುಡಿದು ಹಾಳು ಮಾಡುತ್ತಿದ್ದಾರೆ. ಸ್ವ-ಸಹಾಯ ಸಂಘಗಳ ಸದಸ್ಯೆಯರು ಮದ್ಯಪಾನ ವಿರೋಧಿಸುವ ನಿಟ್ಟಿನಲ್ಲಿ ನಿಮ್ಮ ಊರಿನಲ್ಲಿರುವ ಮದ್ಯದ ಅಂಗಡಿಗಳ ತೆರವಿಗೆ ಸಂಘಟಿತ ಹೋರಾಟ ನಡೆಸಬೇಕು’ ಎಂದು ಸಲಹೆ ನೀಡಿದರು.

‘ಸರ್ಕಾರಗಳು ಮಾಡುವ ಕೆಲಸವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ’ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ಒಕ್ಕೂಟದ ಪದಾಧಿಕಾರಿಗಳ ಜವಾಬ್ದಾರಿ ಹಸ್ತಾಂತರ, ಜಾಗತಿಕ ಲಿಂಗಾಯತ ಮಹಾಸಭಾ ಪದಾಧಿಕಾರಿಗಳ ಘೋಷಣೆ ಮಾಡಲಾಯಿತು. ಪೂಜಾ ಸಮಿತಿ ಅಧ್ಯಕ್ಷ ಮಲ್ಲೇಶಪ್ಪ ಬಿ. ಬಾವಿಮನೆ ಅಧ್ಯಕ್ಷತೆ ವಹಿಸಿದ್ದರು. ಸಿದ್ದನಮಠದ ಯುಗಧರ್ಮ ರಾಮಣ್ಣ ತತ್ವಪದಗಳನ್ನು ಹಾಡಿದರು. ಗ್ರಾಮದ ಹಿರಿಯ ಡಿ.ತೀರ್ಥಲಿಂಗಪ್ಪ ಮಾತನಾಡಿದರು.

ಗ್ರಾಮಾಭಿವೃದ್ಧಿ ಸಂಸ್ಥೆಯ ತಾಲ್ಲೂಕು ಯೋಜನಾಧಿಕಾರಿ ಬಾಬು, ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಎಂ. ಹಾಲಾರಾಧ್ಯ, ಶಿವ ಬ್ಯಾಂಕ್ ಅಧ್ಯಕ್ಷ ಚಂದ್ರೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸವಿತಾ, ಎನ್‌.ಮಲ್ಲೇಶಪ್ಪ, ಡಿ.ಎಸ್‌.ಮಲ್ಲೇಶಪ್ಪ, ವಲಯ ಮೇಲ್ವಿಚಾರಕ ಜಿ.ಎಸ್‌.ಮಧುಸೂದನ, ಸೇವಾ ಪ್ರತಿನಿಧಿ ವೇದಾವತಿ ,ಶ್ವೇತಾ, ಎಚ್‌.ರವಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಇದ್ದರು.

'ಶಕ್ತಿ' ಉಚಿತ ಪ್ರಯಾಣ ನಮ್ಮ ಪ್ರಮಾಣ 100 ಕೋಟಿ

ಕರ್ನಾಟಕ ಸರ್ಕಾರ



ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಹಿಳಾ ಸಬಲೀಕರಣದ ಪಯಣದಲ್ಲಿ ಮಹತ್ವದ ಮೈಲಿಗಲ್ಲು





ಸಾರಿಗೆ ಸಂಸ್ಥೆಗಳ ಅಪಘಾತ ರಹಿತ ಚಾಲಕರಿಗೆ ಮಾನ್ಯ ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ

ದಿನಾಂಕ : 24-11-2023 | ಸಮಯ : ಮಧ್ಯಾಹ್ನ 12.00 ಗಂಟೆಗೆ | ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ ಬೆಂಗಳೂರು

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಕಳೆದ 6 ತಿಂಗಳಲ್ಲಿ 40 ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿರುತ್ತವೆ.

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ

- ದಿನಾಂಕ: 11.06.2023 ರಿಂದ 23.11.2023 ವರೆಗಿನ ಅವಧಿಯಲ್ಲಿ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಒಟ್ಟಾರೆ 178.67 ಕೋಟಿ ಪ್ರಯಾಣಿಕರು ಪ್ರಯಾಣಿಸಿದ್ದು, ಈ ಪೈಕಿ 100.47 ಕೋಟಿ ಮಹಿಳಾ ಪ್ರಯಾಣಿಕರಾಗಿರುತ್ತಾರೆ.
- ಪ್ರತಿ ದಿನ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಪ್ರಯಾಣಿಸುವ ಒಟ್ಟು ಪ್ರಯಾಣಿಕರ ಪ್ರಮಾಣದಲ್ಲಿ ಮಹಿಳಾ ಪ್ರಯಾಣಿಕರ ಪ್ರಮಾಣವು ಶೇಕಡ 56.23
- ಶಕ್ತಿ ಯೋಜನೆಗೆ ಪೂರ್ವ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ಪ್ರತಿ ದಿನ 84 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದು, ಪ್ರಸ್ತುತ 1.08 ಕೋಟಿ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.
- ಇದುವರೆಗಿನ ಅವಧಿಯಲ್ಲಿ ಮಹಿಳಾ ಪ್ರಯಾಣಿಕರ ಶೂನ್ಯ ಟಿಕೆಟ್ ಮೌಲ್ಯ ರೂ.2397.80 ಕೋಟಿಗಳಾಗಿದೆ.

ಕಳೆದ 6 ತಿಂಗಳಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಅನುಷ್ಠಾನಗೊಳಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳು

ಕೆಎಸ್‌ಆರ್‌ಟಿಸಿ

- 40 ಹವಾ ನಿಯಂತ್ರಣ ರಹಿತ "ಪಲ್ಲಕ್ಕಿ" ಸ್ಲೀಪರ್ ವಾಹನಗಳ ಸೇರ್ಪಡೆ.
- ಮೇಲ್ದರ್ಜೆಗೇರಿಸಿದ 100 ನೂತನ ಕರ್ನಾಟಕ ಸಾರಿಗೆ ಪಾಯಿಂಟ್-ಪಾಯಿಂಟ್ ಬಸ್ಸುಗಳ ಸೇರ್ಪಡೆ.
- 700 ಹಳೆಯ ಬಸ್ಸುಗಳನ್ನು ಪುನಃಶ್ಚೇತನಗೊಳಿಸಲಾಗಿದೆ.
- "ನಮ್ಮ ಕಾರ್ಗೋ" ಸರಕು ಸಾಗಣೆ ಸೇವೆಗಾಗಿ 20 ಟ್ರಕ್ಕುಗಳ ಸೇರ್ಪಡೆ.
- ಕಾರ್ಮಿಕರ ಹೃದಯ ಸಂಬಂಧಿ ತಪಾಸಣೆಗಾಗಿ ಶ್ರೀ ಜಯದೇವ ಹೃದ್ರೋಗ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು, ಪ್ರತಿ ವರ್ಷ ರೂ.2.55 ಕೋಟಿ ಪಾವತಿಸಿ, 21000 ಸಿಬ್ಬಂದಿಗಳಿಗೆ ಆರೋಗ್ಯ ತಪಾಸಣೆ.
- ನೌಕರರ ಕುಟುಂಬ ಕಲ್ಯಾಣ ಯೋಜನೆಯ ಪರಿಹಾರ ಮೊತ್ತವನ್ನು ರೂ.3 ಲಕ್ಷ ದಿಂದ ರೂ.10 ಲಕ್ಷಕ್ಕೆ ಹೆಚ್ಚಿಸಲಾಗಿದೆ.
- ರೂ.1 ಕೋಟಿಗಳ ಅಪಘಾತ ಪರಿಹಾರ ಸಾರಿಗೆ ಸುರಕ್ಷಾ ವಿಮಾ ಯೋಜನೆ (ON/OFF ROAD ACCIDENT) ಜಾರಿ, ಇದುವರೆವಿಗೂ 9 ಕಾರ್ಮಿಕರ ಅವಲಂಬಿತರಿಗೆ ತಲಾ ರೂ.1 ಕೋಟಿ ಪರಿಹಾರ ಮೊತ್ತ ವಿತರಣೆ.
- ಸಂಸ್ಥೆಯ ಸಿಬ್ಬಂದಿಗಳ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿ ವೇತನದ ಧನಸಹಾಯ ಮೊತ್ತವನ್ನು ಹೆಚ್ಚಿಸಿ, ಆನ್‌ಲೈನ್ ವ್ಯವಸ್ಥೆಯೊಂದಿಗೆ "ವಿದ್ಯಾ ಚೇತನ" ಯೋಜನೆ ಜಾರಿ ಮಾಡಲಾಗಿದೆ.
- 300 ತಾಂತ್ರಿಕ ಸಹಾಯಕರು ಹಾಗೂ 2000 ಚಾಲಕ-ಕಂ-ನಿರ್ವಾಹಕರ ನೇಮಕಾತಿಗೆ ಚಾಲನೆ.
- ನೌಕರರು ಸೇವೆಗೆ ಸೇರಿದ ದಿನಾಂಕದಿಂದ ನಿವೃತ್ತಿ ಆಗುವವರೆಗೆ ಸಂಪೂರ್ಣ ಸೇವಾ ಮಾಹಿತಿ ನಿರ್ವಹಣೆಗಾಗಿ "ಸಾರಿಗೆ ಮಿತ್ರ" HRMS ಜಾರಿ.
- ಪ್ರಾದೇಶಿಕ ಕಾರ್ಯಾಗಾರಗಳ ಕ್ಯಾಂಟೀನ್, ಮುದ್ರಣಾಲಯ, ಕ್ರೀಡಾ ಸಂಕೀರ್ಣ ಮೇಲ್ದರ್ಜೆಗೇರಿಸಲಾಗಿದೆ.

ಬಿಎಂಟಿಸಿ

- ಸಾರ್ವಜನಿಕ ಪ್ರಯಾಣಿಕರ ಹಿತದೃಷ್ಟಿಯಿಂದ ಹಾಗೂ ಬಸ್ಸುಗಳ ಆಗಮನ, ನಿರ್ಗಮನ ಮತ್ತು ಇತರೆ ಸಾರಿಗೆ ಮಾಹಿತಿಯು ತಮ್ಮ ಬೆರಳ ತುದಿಯಲ್ಲಿ ಲಭ್ಯವಿರುವಂತೆ ಸಂಸ್ಥೆಯು ನಿರ್ಭಯ ಯೋಜನೆಯಡಿಯಲ್ಲಿ "ನಮ್ಮ ಬಿ.ಎಂ.ಟಿ.ಸಿ" ಮೊಬೈಲ್ ಆ್ಯಪ್ (Mobile Application) ಬಿಡುಗಡೆ ಮಾಡಿದೆ.
- ಸಂಸ್ಥೆಯು ಹಲವು ಬ್ಯಾಂಕ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ್ ಹಾಗೂ ಯೂನಿಯನ್ ಬ್ಯಾಂಕ್) ಗಳೊಂದಿಗೆ ಕಾರ್ಪೊರೇಟ್ ಸ್ಯಾಲರಿ ಪ್ಯಾಕೆಜ್ ಯೋಜನೆಯಡಿ, ಬೆಂ.ಮ.ಸಾ. ಸಂಸ್ಥೆಯ ಸಿಬ್ಬಂದಿಗಳಿಗೆ ಅಪಘಾತ ವಿಮೆ ರೂ.50 ಲಕ್ಷ ಹಾಗೂ ಸ್ವಾಭಾವಿಕ ಮರಣದ ಪ್ರಕರಣಗಳಲ್ಲಿ ಕನಿಷ್ಠ ರೂ.1 ಲಕ್ಷ ದಿಂದ ಗರಿಷ್ಠ ರೂ.6 ಲಕ್ಷದವರೆಗೂ ವೇತನ ಅನುಸಾರ ವಿಮಾ ಪರಿಹಾರ ಮೊತ್ತದ ವಿಮಾ ಪರಿಹಾರವನ್ನು ದಿವಂಗತರ ಅವಲಂಬಿತರಿಗೆ ನೀಡಲು ಒಡಂಬಡಿಕೆಯನ್ನು ಮಾಡಿಕೊಂಡಿದೆ.
- ಅನುಕಂಪದ ಆಧಾರದ ಮೇಲೆ 200 ಅವಲಂಬಿತರಿಗೆ ನೇಮಕಾತಿ ಆದೇಶವನ್ನು ನೀಡಲಾಗಿದೆ.
- ಅಪಘಾತ ರಹಿತ ಚಾಲನಾ ಸೇವೆ ಸಲ್ಲಿಸಿದ 1166 ಸಿಬ್ಬಂದಿಗಳನ್ನು ಅಪಘಾತ ರಹಿತ ಬೆಳ್ಳಿ ಪದಕ ವಿಜೇತರಾಗಿ ಆಯ್ಕೆ ಮಾಡಿ ಸದರಿ ಚಾಲಕರಿಗೆ ಬೆಳ್ಳಿ ಪದಕ ವಿತರಿಸುವ ಪ್ರಕ್ರಿಯೆ ಜಾರಿಯಲ್ಲಿದೆ.
- ಸಂಸ್ಥೆಯ ಸೇವೆಗಳನ್ನು ಉತ್ತಮ ಹಾಗೂ ಪರಿಣಾಮಕಾರಿಯಾಗಿ ಕಾರ್ಯಾಚರಣೆಗೊಳಿಸುವ ದೃಷ್ಟಿಯಿಂದ ಹಾಲಿಯಿರುವ ವಲಯಗಳನ್ನು ವಿಭಜಿಸಿ ನೂತನ "ವಾಯುವ್ಯ ವಲಯ" ವನ್ನು ಸೃಜಿಸಲಾಗಿದೆ.
- ಸಂಸ್ಥೆಯ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಹಿರಿಯ/ಘಟಕ ವ್ಯವಸ್ಥಾಪಕರು ತಮ್ಮ ದೈನಂದಿನ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಸಲುವಾಗಿ, ಅಧಿಕಾರಿಗಳಿಗೆ ಎರ್ಟಿಗಾ ಕಾರು ಹಾಗೂ ಬಿ.ಎಸ್-VI ಬೊಲೆರೋ ಜೀಪ್‌ಗಳನ್ನು ಒದಗಿಸಲಾಗಿರುತ್ತದೆ.

ವಾಯವ್ಯ ಸಾರಿಗೆ

- 50 ಗ್ರಾಮಾಂತರ ಬಸ್ಸುಗಳ ಲೋಕಾರ್ಪಣೆ.
- 375 ಗ್ರಾಮಾಂತರ ಬಸ್ಸುಗಳು, 100 ನಗರ ಸಾರಿಗೆ ಬಸ್ಸುಗಳು ಹಾಗೂ 24 ಪ್ರತಿಷ್ಠಿತ ಬಸ್ಸುಗಳ ಖರೀದಿಗೆ ಅನುಮೋದನೆ.
- ಹುಬ್ಬಳ್ಳಿ ಗೋಕುಲ ರಸ್ತೆಯ ಹೊಸ ಬಸ್ ನಿಲ್ದಾಣದ ಮೇಲ್ದರ್ಜೆಗೇರಿಸುವ ಕಾಮಗಾರಿಗೆ (ರೂ.23.48 ಕೋಟಿ) ಹಾಗೂ ಧಾರವಾಡ ನಗರ ಸಾರಿಗೆ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ (ರೂ.13.11 ಕೋಟಿ) ಅನುಮೋದನೆ.
- ಬೆಳಗಾವಿ ಜಿಲ್ಲೆ ಅಥಣಿಯಲ್ಲಿ ರೂ.5 ಕೋಟಿ ವೆಚ್ಚದಲ್ಲಿ ನೂತನ ಬಸ್ ಘಟಕ ನಿರ್ಮಾಣ ಹಾಗೂ ಅಥಣಿ ತಾಲ್ಲೂಕಿನ ಕೊಕಟನೂರಿನಲ್ಲಿ ರೂ.1 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ನಿರ್ಮಾಣ.
- ನಗದು ರಹಿತ ವ್ಯವಹಾರ ಉತ್ತೇಜಿಸಲು ರಾಜ್ಯದಲ್ಲಿಯೇ ಮೊದಲ ಬಾರಿಗೆ ಬಸ್ಸುಗಳಲ್ಲಿ ಯುಪಿಐ ವ್ಯವಸ್ಥೆ ಹಾಗೂ ಬೆಳಗಾವಿ ನಗರ ಸಾರಿಗೆ ಬಸ್ಸುಗಳಲ್ಲಿ ಆರ್.ಎಫ್.ಐ.ಡಿ. ಆಧಾರಿತ ಟ್ರಾವೆಲ್ ಕಾರ್ಡ್ ವ್ಯವಸ್ಥೆ ಜಾರಿಗೆ.
- ನೌಕರರು ಸೇವೆಯಲ್ಲಿದ್ದಾಗ ಅಪಘಾತದಿಂದ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ ಮತ್ತು ಅಂಗ ನ್ಯೂನ್ಯತೆಗಳಿಗೆ ಒಳಗಾದಲ್ಲಿ ನೌಕರರಿಗೆ ಗರಿಷ್ಠ ವೈಯಕ್ತಿಕ ಅಪಘಾತ ವಿಮೆ ಯೋಜನೆಯನ್ನು SBI ಬ್ಯಾಂಕ್ ರೂ. 50 ಲಕ್ಷ ಮೊತ್ತದ ಅಪಘಾತ ವಿಮಾ ಪರಿಹಾರ ಯೋಜನೆ ಜಾರಿಗೆ.
- ಅಪಘಾತ ರಹಿತ 238 ಚಾಲಕರಿಗೆ ಬೆಳ್ಳಿ ಪದಕ ವಿತರಣೆ.
- ಅನುಕಂಪದ ಆಧಾರದಲ್ಲಿ 60 ಸಿಬ್ಬಂದಿಗಳ ನೇಮಕಾತಿ.

ಕಲ್ಯಾಣ ಕರ್ನಾಟಕ ಸಾರಿಗೆ

- 621 ಹೊಸ ವಾಹನಗಳ (612 ಗ್ರಾಮಾಂತರ, 2 ವೋಲ್ವೋ, 2 ಎ.ಸಿ ಹಾಗೂ 5 ನಾನ್ ಎ.ಸಿ ಸ್ಲೀಪರ್) ಸೇರ್ಪಡೆ.
- ರೂ. 100 ಕೋಟಿ ಅನುದಾನದಿಂದ ಮತ್ತು ಆಂತರಿಕ ಸಂಪನ್ಮೂಲ ಹಾಗೂ ಇನ್ನಿತರ ಮೂಲಗಳಿಂದ 300 ಡೀಸೆಲ್ ವಾಹನಗಳನ್ನು ಖರೀದಿಸಲು ಯೋಜನೆ.
- 150 ಎಲೆಕ್ಟ್ರಿಕಲ್ ವಾಹನಗಳನ್ನು GCC ಆಧಾರದ ಮೇಲೆ ಸೇರ್ಪಡೆಗೊಳಿಸಲು ಕ್ರಮ.
- 925 ಚಾಲಕ, 694 ಚಾಲಕ-ಕಂ-ನಿರ್ವಾಹಕ ಒಟ್ಟು 1,619 ಹುದ್ದೆಗಳ ಭರ್ತಿಗಾಗಿ ನೇಮಕಾತಿ ಪ್ರಕ್ರಿಯೆ ಜನವರಿ-2024 ರೊಳಗೆ ಕ್ರಮ.
- 300 ನಿರ್ವಾಹಕರ ನೇಮಕಾತಿಗೆ ಕ್ರಮ ವಹಿಸಲಾಗುತ್ತಿದೆ.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 36 ಹಿಂಬಾಕಿ ಹುದ್ದೆಗಳ ನೇಮಕಾತಿಗಾಗಿ ಕ್ರಮ.
- ಕಾಮಗಾರಿ ಅಭಿವೃದ್ಧಿ:
  - ನಲವತವಾಡ, ಕುಷ್ಟಗಿ, ಕಾರಟಗಿಯಲ್ಲಿ ಹೊಸ ಬಸ್ ನಿಲ್ದಾಣಗಳು ಹಾಗೂ ವಿಜಯಪುರ, ಸಿಂಧಗಿ ವಸತಿ ಗೃಹಗಳ ಕಾಮಗಾರಿ ಪೂರ್ಣಗೊಳಿಸಲಾಗಿದೆ.
  - ಸೂಪರ್ ಮಾರ್ಕೆಟ್, ಕಲಬುರಗಿ, ರಾಯಚೂರು ನಗರ ಸಾರಿಗೆ, ಹೂವಿನ ಹಡಗಲಿ, ದೇವರಹಿಪ್ಪರಗಿ, ಸಿರವಾರ ಮತ್ತು ನಾಗಠಾಣ ಬಸ್ ನಿಲ್ದಾಣಗಳ ಕಾಮಗಾರಿ ಪ್ರಗತಿಯಲ್ಲಿದೆ.
- 31 ಹವಾ ನಿಯಂತ್ರಣ ರಹಿತ (ಅಮೋಘ ವರ್ಷ), 2 ಹವಾ ನಿಯಂತ್ರಿತ (ಕಲ್ಯಾಣ ಸಾರಿಗೆ) ಹಾಗೂ 4 ಮಲ್ಟಿ ಆಕ್ಸಲ್ ವೋಲ್ವೋ ಹವಾ ನಿಯಂತ್ರಿತ ಸ್ಲೀಪರ್ (ಕಲ್ಯಾಣ ರಥ) ವಾಹನಗಳನ್ನು ಸೇರ್ಪಡೆಗೊಳಿಸಲಾಗುವುದು.

ಸಾರಿಗೆ ಸಂಸ್ಥೆಗಳ ಸಮಗ್ರ ಅಭಿವೃದ್ಧಿಗಾಗಿ 5675 ಬಸ್ಸುಗಳ ಸೇರ್ಪಡೆ ಹಾಗೂ 8719 ಸಿಬ್ಬಂದಿಗಳ ನೇಮಕಾತಿಗಾಗಿ ಸರ್ಕಾರ ಅನುಮತಿಸಿದೆ.

ಶಕ್ತಿ ಗ್ಯಾರಂಟಿಗೆ | ಸುರಕ್ಷತೆ, ವಿಶ್ವಾಸಾರ್ಹ ಹಾಗೂ ಐಷಾರಾಮಿ ಪ್ರಯಾಣದ ಪ್ರತೀಕ. | ಶತಕೋಟಿ ಸಂಭ್ರಮ

ಪದವೀಧರ, ಶಿಕ್ಷಕರ ಕ್ಷೇತ್ರಗಳ ಮತದಾರರ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಪದವೀಧರ ಕ್ಷೇತ್ರ ಹಾಗೂ ನಾಲ್ಕು ಶಿಕ್ಷಕರ ಕ್ಷೇತ್ರಗಳ ಮತದಾರರ ಕರಡು ಪಟ್ಟಿಯನ್ನು ರಾಜ್ಯ ಚುನಾವಣೆ ಆಯೋಗ ಗುರುವಾರ ಪ್ರಕಟಿಸಿದೆ.

ಕೇಂದ್ರ ಚುನಾವಣೆ ಆಯೋಗದ ವೇಳಾಪಟ್ಟಿಯಂತೆ ಹೊಸದಾಗಿ (ಡಿ-ನೊವೊ) ಮತದಾರರ ಪಟ್ಟಿಯನ್ನು ಸಿದ್ಧಗೊಳಿಸಬೇಕಿದ್ದು, ಡಿ.30ರಂದು ಅಂತಿಮ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ರಾಜ್ಯದ ಮುಖ್ಯ ಚುನಾವಣೆ ಅಧಿಕಾರಿ ಮನೋಜ್‌ಕುಮಾರ್ ಮೀನಾ ತಿಳಿಸಿದ್ದಾರೆ.

ಅರ್ಜಿ 18 ಅಥವಾ 19 ಅನ್ನು ನ.6ರವರೆಗೆ ಸ್ವೀಕರಿಸಲಾಗಿದ್ದು, ಅದರಂತೆ ಕರಡು ಪಟ್ಟಿಯನ್ನು ಪ್ರಕಟಿಸಲಾಗಿದೆ. ಡಿ.9ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಿದವರು ಪಟ್ಟಿಯಲ್ಲಿ ಹೆಸರಿರುವುದರ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಅರ್ಹ ಶಿಕ್ಷಕರು ಹಾಗೂ ಪದವೀಧರರು ಡಿ.9ರವರೆಗೆ ಅರ್ಜಿ ಸಲ್ಲಿಸಬಹುದು ಎಂದು ಮಾಹಿತಿ ನೀಡಿದ್ದಾರೆ.

ಈಶಾನ್ಯ, ನೈರುತ್ಯ, ಬೆಂಗಳೂರು ಪದವೀಧರರ ಕ್ಷೇತ್ರ ಹಾಗೂ ಆಗ್ನೇಯ, ನೈರುತ್ಯ ಶಿಕ್ಷಕರ ಕ್ಷೇತ್ರಗಳ ಸದಸ್ಯರ ಅವಧಿ 2024ರ ಜೂನ್ 6ರಂದು ಮುಗಿಯಲಿದೆ. ನೈರುತ್ಯ ಪದವೀಧರರ ಕ್ಷೇತ್ರದ ಸದಸ್ಯ ಆಯನೂರು ಮಂಜುನಾಥ ಅವರು ರಾಜೀನಾಮೆ ನೀಡಿರುವುದರಿಂದ ಸ್ಥಾನ ಏ.19ರಿಂದ ಖಾಲಿ ಉಳಿದಿದೆ.

ದಕ್ಷಿಣ ಶಿಕ್ಷಕರ ಕ್ಷೇತ್ರದ ಸದಸ್ಯ ಪುಟ್ಟಣ್ಣ ಅವರು ರಾಜೀನಾಮೆ ನೀಡಿದ್ದರಿಂದ ಮಾರ್ಚ್ 16ರಿಂದ ಖಾಲಿ ಉಳಿದಿದೆ. ಈ ಎರಡೂ ಕ್ಷೇತ್ರಗಳಿಗೆ ಡಿ-ನೊವೊ ಪ್ರಕ್ರಿಯೆ ನಡೆಯುತ್ತಿದ್ದರಿಂದ ಮತದಾರರ ಪಟ್ಟಿ ಸಿದ್ಧವಾಗದ ಕಾರಣ ಮರು ಚುನಾವಣೆ ನಡೆದಿರಲಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೀಣಿಸಿದ ಉದ್ಯೋಗ: ಕ್ಯಾಂಪಸ್ ಆಯ್ಕೆಗೆ ಕಂಪನಿಗಳ ನಿರಾಸಕ್ತಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಕಾಲೇಜುಗಳಿಗೇ ಭೇಟಿ ನೀಡಿ ತಮ್ಮ ಕಂಪನಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದ ದೊಡ್ಡ ಉದ್ಯಮ ಸಂಸ್ಥೆಗಳು ಈ ವರ್ಷ ನಿರಾಸಕ್ತಿ ತೋರಿವೆ.

ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿರುವ ರಾಜ್ಯದ ಕೆಲ ಪ್ರತಿಷ್ಠಿತ ಕಂಪನಿಗಳು ಪ್ರತಿ ವರ್ಷ ರಾಜ್ಯದ ಹಲವು ಎಂಜಿನಿಯರಿಂಗ್ ಕಾಲೇಜುಗಳಿಗೆ ಭೇಟಿ ನೀಡಿ ಸಾಮೂಹಿಕವಾಗಿ ಉದ್ಯೋಗದ ಆಹ್ವಾನ ನೀಡುತ್ತಿದ್ದವು. ಅಂತಹ ಎರಡು ಕಂಪನಿಗಳೇ ಪ್ರತಿ ವರ್ಷ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉತ್ತಮ ವೇತನದ ನೇಮಕಾತಿ ಪತ್ರ ನೀಡುತ್ತಿದ್ದವು. ಆದರೆ, ಆ ಎರಡು ಪ್ರತಿಷ್ಠಿತ ಕಂಪನಿಗಳು ಪ್ರಸಕ್ತ ವರ್ಷ ಉದ್ಯೋಗ ಭರವಸೆ ನೀಡಿರುವ ವಿದ್ಯಾರ್ಥಿಗಳ ಸಂಖ್ಯೆ 40 ದಾಟಿಲ್ಲ ಎನ್ನುವುದು ವಿವಿಧ ಕಾಲೇಜುಗಳಲ್ಲಿ ನಡೆದ 'ಕ್ಯಾಂಪಸ್ ಆಯ್ಕೆ'ಯ ಅಂಕಿಅಂಶಗಳಿಂದ ದೃಢಪಟ್ಟಿದೆ.

ರಾಜ್ಯದ ಪ್ರತಿಷ್ಠಿತ ಕಾಲೇಜುಗಳೂ ಸೇರಿದಂತೆ ಬಹುತೇಕ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ಇಂತಹ ಸ್ಥಿತಿಯೇ ಇದೆ. ಹೆಚ್ಚಿನ ಸಂಖ್ಯೆಯ ಕಂಪನಿಗಳು ಕ್ಯಾಂಪಸ್ ಆಯ್ಕೆ ಪ್ರಕ್ರಿಯೆ ನಡೆಸಿದರೂ, ಆಯ್ಕೆಯಾದ ವಿದ್ಯಾರ್ಥಿಗಳ ಸಂಖ್ಯೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 10ರಷ್ಟು ದಾಟಿಲ್ಲ ಎನ್ನುವುದು ಬಹುತೇಕ ಆಡಳಿತ ಮಂಡಳಿಗಳ ಅನಿಸಿಕೆ.

'ಆರಂಭದಲ್ಲಿ ಕಡಿಮೆ ವೇತನ ಶ್ರೇಣಿಗೆ ಹೆಚ್ಚಿನ ವಿದ್ಯಾರ್ಥಿಗಳಿಗೆ ಉದ್ಯೋಗ ನೀಡುತ್ತಿದ್ದ ಕಂಪನಿಗಳು ಈ ಬಾರಿ ಕಡಿಮೆ ಬಂದಿವೆ. ಹಿಂದೆ 250 ವಿದ್ಯಾರ್ಥಿಗಳಿಗೆ ವಾರ್ಷಿಕ ತಲಾ ₹8 ಲಕ್ಷದವರೆಗೂ ಪ್ಯಾಕೇಜ್ ನೀಡಿದ್ದ ಕೆಲ ಕಂಪನಿಗಳು ಕಂಪ್ಯೂಟರ್, ಮಾಹಿತಿ ವಿಜ್ಞಾನದ ವಿದ್ಯಾರ್ಥಿಗಳಿಗೆ ಕಳೆದ ಬಾರಿಯ ಮೊತ್ತಕ್ಕಿಂತ ಶೇ 30ರಷ್ಟು ಹೆಚ್ಚಿನ ವೇತನ ನೀಡಿದರೂ, 20ರಿಂದ 30 ವಿದ್ಯಾರ್ಥಿಗಳನ್ನಷ್ಟೇ ಆಯ್ಕೆ ಮಾಡಿಕೊಂಡಿವೆ. ಇದರಿಂದ ಹೆಚ್ಚಿನ ವಿದ್ಯಾರ್ಥಿಗಳಿಗೆ ನಿರಾಸೆಯಾಗಿದೆ' ಎನ್ನುತ್ತಾರೆ ನಗರದ ಪ್ರತಿಷ್ಠಿತ ಕಾಲೇಜೊಂದರ ಪ್ರಾಧ್ಯಾಪಕ.

'ಕೃತಕ ಬುದ್ಧಿಮತ್ತೆ ಸೇರಿದಂತೆ ಆಧುನಿಕ ತಂತ್ರಜ್ಞಾನದ ವೇಗದ ಪ್ರಗತಿ ಮಾನವ ಅವಲಂಬಿತ ಉದ್ಯೋಗದ ಅವಕಾಶಗಳನ್ನು ಕಡಿಮೆ ಮಾಡಿದೆ. ಕಾರ್ಪೊರೇಟ್ ಕಂಪನಿಗಳ ನಿರೀಕ್ಷೆಯೂ ಹೆಚ್ಚಿದೆ. ವೇತನ ಶ್ರೇಣಿಯಲ್ಲಿ ಏರಿಕೆ ಕಂಡರೂ, ಸಾಮೂಹಿಕ ನೇಮಕಾತಿ ಕುಂಠಿತವಾಗಿದೆ. ಹಿಂದಿನ ವರ್ಷಗಳಲ್ಲಿ ಆಗಸ್ಟ್ ವೇಳೆಗೆ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಗಳೇ ಪೂರ್ಣಗೊಳ್ಳುತ್ತಿದ್ದವು' ಎನ್ನುತ್ತಾರೆ ಎಂ.ಎಸ್.ರಾಮಯ್ಯ ಕಾಲೇಜಿನ ತರಬೇತಿ ಮತ್ತು ನಿಯೋಜನೆ ಅಧಿಕಾರಿ ಎಂ.ಸವಿತಾ ರಾಣಿ.

'ಬಹುತೇಕ ಕಂಪನಿಗಳು ಆನ್‌ಲೈನ್ ಮೂಲಕವೇ ನೇಮಕಾತಿ ಪ್ರಕ್ರಿಯೆಗಳಿಗೆ ಒತ್ತು ನೀಡುತ್ತಿರುವ ಕಾರಣ ಕ್ಯಾಂಪಸ್ ಆಯ್ಕೆಯ ಪರಿಕಲ್ಪನೆಗಳು ಬದಲಾಗುತ್ತಿವೆ' ಎನ್ನುತ್ತಾರೆ ನಾಗಾರ್ಜುನ ಕಾಲೇಜಿನ ಪ್ರಾಂಶುಪಾಲ ಬಿ.ಬಿ.ರವಿಶಂಕರ್.

ಸುದ್ದಿ 2 ನಿಮಿಷ

ಟಿಇಟಿ ಫಲಿತಾಂಶ: 64,830 ವಿದ್ಯಾರ್ಥಿಗಳು ಅರ್ಹ

ಬೆಂಗಳೂರು: ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) 2023ನೇ ಸಾಲಿನ ಫಲಿತಾಂಶ ಪ್ರಕಟವಾಗಿದ್ದು, ಎರಡೂ ಪತ್ರಿಕೆಗಳಿಂದ ಪರೀಕ್ಷೆಗೆ ಹಾಜರಾದ 3.01 ಲಕ್ಷ ವಿದ್ಯಾರ್ಥಿಗಳಲ್ಲಿ 64,830 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಪರೀಕ್ಷೆ ನಡೆಸಲಾಗಿತ್ತು. ಪತ್ರಿಕೆ-1ರಲ್ಲಿ ಪರೀಕ್ಷೆ ಬರೆದಿದ್ದ (1ರಿಂದ 5ನೇ ತರಗತಿಯ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು) 1.27 ಲಕ್ಷ ಅಭ್ಯರ್ಥಿಗಳಲ್ಲಿ 14,922 ಹಾಗೂ ಪತ್ರಿಕೆ-2ರಲ್ಲಿ ಪರೀಕ್ಷೆ ಬರೆದಿದ್ದ (6ರಿಂದ 8ನೇ ತರಗತಿಯ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು) 1.74 ಲಕ್ಷ ಅಭ್ಯರ್ಥಿಗಳಲ್ಲಿ 49,908 ಮಂದಿ ಅರ್ಹತೆ ಪಡೆದಿದ್ದಾರೆ.

ಮಹಿಳೆಯರೇ ಅಧಿಕ: ಪತ್ರಿಕೆ-1ರಲ್ಲಿ 4,139 ಪುರುಷರು, 10,783 ಮಹಿಳೆಯರು ಹಾಗೂ ಪತ್ರಿಕೆ-2ರಲ್ಲಿ 16,268 ಪುರುಷರು, 33,634 ಮಹಿಳೆಯರು ಹಾಗೂ 6 ಲಿಂಗತ್ವ ಅಲ್ಪಸಂಖ್ಯಾತರು ಅರ್ಹತೆ ಪಡೆದಿದ್ದಾರೆ.

ಪಿತ್ತಜನಕಾಂಗದಿಂದ 345 ಕಲ್ಲುಗಳನ್ನು ತೆಗೆದ ವೈದ್ಯರು



ಬೆಂಗಳೂರು: ಇಲ್ಲಿನ ಆಸ್ಟರ್ ಆರ್‌ವಿ ಆಸ್ಪತ್ರೆಯ ಶಸ್ತ್ರಚಿಕಿತ್ಸಕರು ಮಹಿಳೆಯೊಬ್ಬರ ಪಿತ್ತಕೋಶದಲ್ಲಿದ್ದ 345 ಕಲ್ಲುಗಳನ್ನು ಲ್ಯಾಪರೊಸ್ಕೋಪಿಕ್ ಕೊಲೆಸಿಸ್ಟೆಕ್ಟಮಿ ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆದಿದ್ದಾರೆ.

51 ವರ್ಷದ ಮಹಿಳೆ ಒಂದು ತಿಂಗಳಿನಿಂದ ಹೊಟ್ಟೆ ನೋವಿನಿಂದ ಬಳಲುತ್ತಿದ್ದರು. ಪರೀಕ್ಷೆ ಮಾಡಿದಾಗ ಪಿತ್ತಕೋಶ ಬಾತುಕೊಂಡಿರುವುದು ಕಂಡು ಬಂತು. ಪಿತ್ತಕೋಶವನ್ನು ಕೇವಲ 1 ಸೆಂಟಿಮೀಟರ್ ಸೀಳುವ ಮೂಲಕ ಕಲ್ಲುಗಳನ್ನು ತೆಗೆಯಬಹುದಾದ ಲ್ಯಾಪರೊಸ್ಕೋಪಿಕ್ ಕೊಲೆಸಿಸ್ಟೆಕ್ಟಮಿ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದು ಮುಖ್ಯ ಕನ್ಸಲ್ಟೆಂಟ್ ಡಾ. ಗಿರೀಶ್ ಮಾಹಿತಿ ನೀಡಿದರು.

'ಪಿತ್ತಕೋಶದ ಗಾತ್ರ ಮತ್ತು ಕಲ್ಲುಗಳ ಸಂಖ್ಯೆಯಿಂದಾಗಿ ಈ ಶಸ್ತ್ರಚಿಕಿತ್ಸೆಯು ಸವಾಲಿನದ್ದಾಗಿತ್ತು. ಸೂಕ್ಷ್ಮವಾಗಿ ನಿರ್ವಹಿಸುವಲ್ಲಿ ನಮ್ಮ ತಂಡ ಯಶಸ್ವಿಯಾಗಿದೆ. ರೋಗಿಯು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಕನ್ಸಲ್ಟೆಂಟ್ ಜನರಲ್ ಡಾ. ಶಿವಪ್ರಸಾದ್ ಗಿಳಿಯಾರು ಶ್ರೀನಿವಾಸ ವಿವರಿಸಿದರು.

ಜಿ. ಪಂ ಅಧೀನಕ್ಕೆ ಪಿಯು: ಸಂಘಟನೆಗಳ ಪ್ರತಿಭಟನೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರ ಮೇಲುಸ್ತುವಾರಿಯನ್ನು ಜಿಲ್ಲಾ ಪಂಚಾಯಿತಿಗೆ ವಹಿಸುವ ಆದೇಶ ವಿರೋಧಿಸಿ ಗುರುವಾರ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಬೋಧಕೇತರ ನೌಕರರ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಇಲಾಖೆಯ ಘನತೆ, ಗಂಭೀರತೆ ಹಾಗೂ ಪರೀಕ್ಷೆಯ ಪಾವಿತ್ರತೆಯ ಕಾರಣಕ್ಕಾಗಿ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯನ್ನೇ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಮರು ಸೇರ್ಪಡೆ ಮಾಡಬೇಕು. ಶಾಲಾ ಶಿಕ್ಷಣ (ಪದವಿ ಪೂರ್ವ) ಇಲಾಖೆ ಬದಲು ಹಿಂದೆ ಇದ್ದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆ ಎಂದು ಬದಲಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಪಂಚಾಯ್ತಿ ಸಿಇಒ ಅಧೀನಕ್ಕೆ ಪದವಿಪೂರ್ವ ಶಿಕ್ಷಣ ಇಲಾಖೆ ಒಳಪಡಿಸುವ ಇಲಾಖೆಯ ಸುತ್ತೋಲೆ ಹಿಂಪಡೆಯಬೇಕು. ಮೂರು ಪರೀಕ್ಷೆ ನಡೆಸುವುದರಿಂದ ಉಪನ್ಯಾಸಕರಿಗೆ ರಜೆಗಳೇ ಸಿಗುವುದಿಲ್ಲ. ನಿರಂತರ ಕೆಲಸದಿಂದ ಒತ್ತಡಕ್ಕೆ ಒಳಗಾಗುವ ಸಾಧ್ಯತೆ ಇದೆ. ಇದರಿಂದ ಪಾಠಗಳ ಗುಣಮಟ್ಟ ಕುಸಿಯುವ ಆತಂಕ ತಲೆದೋರಲಿದೆ. ಮೂರು ಪರೀಕ್ಷೆಗಳ ಬದಲು ಹಿಂದೆ ಇದ್ದಂತೆ ಮುಖ್ಯ ಪರೀಕ್ಷೆ ಹಾಗೂ ಪೂರಕ ಪರೀಕ್ಷೆ ನಡೆಸಬೇಕು. ಇಲ್ಲವೇ, ಪದವಿಪೂರ್ವ ಶಿಕ್ಷಣವನ್ನು ರಜೆ ರಹಿತ ಇಲಾಖೆ ಎಂದು ಘೋಷಿಸಬೇಕು ಎಂದು ಆಗ್ರಹಿಸಿದರು.

ಉಪನ್ಯಾಸಕರ ಸಂಘದ ಅಧ್ಯಕ್ಷ ನಿಂಗೇಗೌಡ ಎ.ಎಚ್, ಗೌರವಾಧ್ಯಕ್ಷ ತಿಮ್ಮಯ್ಯಪುರ್ಲೆ, ಮೂರು ಸಂಘಟನೆಗಳ ಮುಖಂಡರಾದ ರಾಜಗೋಪಾಲ್, ನಾಗಣ್ಣ, ಪ್ರವೀಣ್ ಮಹಿಷಿ, ಉಪನ್ಯಾಸಕರ ಸಂಘದ ಜಯಣ್ಣ, ಎಸ್.ಆರ್.ವೆಂಕಟೇಶ್, ಬೋಧಕೇತರ ಸಂಘಟನೆಯ ಅಧ್ಯಕ್ಷರಾದ ನಂದೀಶ್ ಕುಮಾರ್, ಮಧುಸೂದನ್ ಮತ್ತಿತರರು ಭಾಗವಹಿಸಿದ್ದರು.

ನಿದ್ದೆಯಿಂದ ಎದ್ದು ಬರುವವರಿಗೆ ನ್ಯಾಯ ನೀಡಲು ಕುಳಿತಿಲ್ಲ: ಹೈಕೋರ್ಟ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐದು ದಶಕ ಗಾಢ ನಿದ್ರೆಯಲ್ಲಿದ್ದು, ಈಗ ದೈವವಾಣಿಯಿಂದ ಎಚ್ಚರಗೊಂಡಂತೆ ಎದ್ದು ನ್ಯಾಯ ಕೇಳಲು ಬಂದವರಿಗೆ ನೆರವು ನೀಡಲು ನಾವು ಇಲ್ಲಿ ಕುಳಿತಿಲ್ಲ. ಅಂತಹದ್ದನ್ನು ನಮ್ಮಿಂದ ನಿರೀಕ್ಷಿಸುವುದೂ ಬೇಡ...'

ಹೀಗೆಂದು ಪುನರ್ವಸತಿ ಕಲ್ಪಿಸುವ ವಿಚಾರವಾಗಿ 50 ವರ್ಷಗಳ ಬಳಿಕ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ವಿಚಾರಣೆ ವೇಳೆ ಹೈಕೋರ್ಟ್ ಚಾಟಿ ಬೀಸಿದೆ.

ಭದ್ರಾ ಮೇಲ್ದಂಡೆ ಯೋಜನೆಗಾಗಿ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರು ಹೋಬಳಿಯ ಗೊಲ್ಲಹಳ್ಳಿ ಗ್ರಾಮದ ಸ್ಥಳಾಂತರಕ್ಕೆ 1962ರಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದ್ದ 20 ಎಕರೆ ಜಮೀನನ್ನು ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಿಂದ ಸಂತ್ರಸ್ತ ಫಲಾನುಭವಿಗಳಿಗೆ ಅನ್ಯಾಯವಾಗಿದೆ. ಈ ವಿಚಾರದಲ್ಲಿ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವಂತೆ ಸ್ಥಳೀಯರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಲೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ಬಂದಿತ್ತು.

ಈ ವೇಳೆ ಅರ್ಜಿದಾರರ ಪರ ವಕೀಲರು, ಗೊಲ್ಲರಹಳ್ಳಿ ಸ್ಥಳಾಂತರಕ್ಕೆ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ. ಸಂತ್ರಸ್ತ ಫಲಾನುಭವಿಗಳು ಪುನರ್ವಸತಿ ಪರಿಹಾರದಿಂದ ವಂಚಿತರಾಗಿದ್ದಾರೆ. ಈ ವಿಚಾರವಾಗಿ ಗ್ರಾಮಸ್ಥರು ಅನೇಕ ಮನವಿಗಳನ್ನು ನೀಡಿದ್ದರು. ಇಲಾಖೆಗಳ ನಡುವೆ ಪತ್ರ ವ್ಯವಹಾರಗಳಷ್ಟೇ ನಡೆದಿವೆ. ನ್ಯಾಯ ಸಿಕ್ಕಿಲ್ಲ. ಈ ಬಗ್ಗೆ 1994ರಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿತ್ತು. ಅದನ್ನು ನ್ಯಾಯಾಲಯ ವಜಾಗೊಳಿಸಿತ್ತು. 2020ರಲ್ಲಿ ಮತ್ತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

'19ನೇ ಶತಮಾನ ಕಳೆದು 20ನೇ ಶತಮಾನದ 20 ವರ್ಷಗಳು ಕಳೆದು ಹೋಗಿವೆ. 50 ವರ್ಷ ಗಾಢ ನಿದ್ದೆಯಲ್ಲಿದ್ದ ಅರ್ಜಿದಾರ ಫಲಾನುಭವಿಗಳು, 'ಈಗ ಕೋರ್ಟ್‌ಗೆ ಹೋಗಲು ಸೂಕ್ತ ಸಮಯ' ಎಂದು ದೈವವಾಣಿ ಕೇಳಿಸಿಕೊಂಡು ನಿದ್ದೆಯಿಂದ ಎದ್ದವರಂತೆ ಕೋರ್ಟ್‌ಗೆ ಬಂದಿದ್ದಾರೆ. ಗಾಢ ನಿದ್ದೆಯಲ್ಲಿದ್ದವರಿಗೆ ಹೈಕೋರ್ಟ್ ನೆರವು ನೀಡುತ್ತದೆ ಎಂದು ನಿರೀಕ್ಷೆ ಮಾಡುತ್ತೀರಾ? ನಿದ್ರಾವಸ್ಥೆಯಲ್ಲಿದ್ದವರಿಗೆ ಸಹಾಯ ಮಾಡಲು ಈ ಕೋರ್ಟ್ ಇಲ್ಲ. ಜಾಗೃತ ಸ್ಥಿತಿಯಲ್ಲಿದ್ದವರಿಗೆ ನೆರವು ನೀಡಬಹುದು. ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ವಿಳಂಬವನ್ನು ಮನ್ನಿಸಬಹುದು. ಆದರೆ, ದಶಕಗಳ ವಿಳಂಬವನ್ನು ಒಪ್ಪಲು ಸಾಧ್ಯವಿಲ್ಲ. ಇದೊಂದೇ ಪ್ರಕರಣ ಅಲ್ಲ, ಇಂತಹ ಅನೇಕ ಅರ್ಜಿಗಳು ಬರುತ್ತಿದೆ. ಈಗ ದೊಡ್ಡ ಮೊತ್ತದ ದಂಡ ವಿಧಿಸಲು ಆರಂಭಿಸಬೇಕೆನಿಸುತ್ತದೆ. ಪಿಐಎಲ್‌ಗಳಿಗೆ ನಮ್ಮ ವಿರೋಧವಿಲ್ಲ. ಆದರೆ, ಇಂತಹ ಪಿಐಎಲ್‌ಗಳಿಗೆ ತೀವ್ರ ಆಕ್ಷೇಪವಿದೆ' ಎಂದು ಹೇಳಿತು.

'ಭ್ರಷ್ಟಾಚಾರಕ್ಕೆ ಅಂಕುಶ: ಲೋಕಾಯುಕ್ತ ಆದ್ಯತೆ ಆಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಯಾಂಗ ಮತ್ತು ಶಾಸಕಾಂಗದ ಮೇಲೆ ಬರುವ ಭ್ರಷ್ಟಾಚಾರ ಮತ್ತು ಕರ್ತವ್ಯಲೋಪದ ಪ್ರಕರಣಗಳನ್ನು ಆದ್ಯತೆಯ ಮೇಲೆ ತೆಗೆದುಕೊಂಡು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ಲೋಕಾಯುಕ್ತರಿಗೆ ಕಾಂಗ್ರೆಸ್ ವಕ್ತಾರ ರಮೇಶ್ ಬಾಬು ಮನವಿ ಸಲ್ಲಿಸಿದ್ದಾರೆ.

'ಪ್ರತಿ ಪ್ರಕರಣಕ್ಕೂ ಕಾಲಮಿತಿ ನಿಗದಿಪಡಿಸಿ ದೂರುಗಳನ್ನು ಇತ್ಯರ್ಥ ಮಾಡಬೇಕು. ಅಕ್ರಮ ಸಂಪತ್ತಿನ ಸಂಬಂಧ ಲೋಕಾಯುಕ್ತ ಪೊಲೀಸರು ಮಾಡುವ ದಾಳಿಗಳನ್ನು ಹೆಚ್ಚಿಸಿ, ಈ ಪ್ರಕರಣಗಳನ್ನು ಆರು ತಿಂಗಳ ಕಾಲಮಿತಿ ಒಳಗೆ ವಿಲೇವಾರಿ ಮಾಡಬೇಕು' ಎಂದು ಅವರು ಆಗ್ರಹಿಸಿದ್ದಾರೆ.

'ಲೋಕಾಯುಕ್ತ ಸಂಸ್ಥೆಯ ಮೇಲೆ ಹೆಚ್ಚು ವಿಶ್ವಾಸ ಇಟ್ಟು ಭ್ರಷ್ಟಾಚಾರ ಮತ್ತು ಕರ್ತವ್ಯಲೋಪ ಪ್ರಕರಣಗಳನ್ನು ಸಾರ್ವಜನಿಕರು ದಾಖಲು ಮಾಡುತ್ತಾರೆ. ಬಹುತೇಕ ಪ್ರಕರಣಗಳಲ್ಲಿ ದೂರುದಾರರಿಗೆ ಮಾಹಿತಿ ಇಲ್ಲದೆ ಪ್ರಕರಣಗಳನ್ನು ಕೈಬಿಡಲಾಗುತ್ತಿದೆ. ಜನ ಸಾಮಾನ್ಯರು ಲೋಕಾಯಕ್ತದ ಮೇಲೆ ವಿಶ್ವಾಸ ಕಳೆದುಕೊಂಡರೆ ಕಾರ್ಯಾಂಗದ ಭ್ರಷ್ಟಾಚಾರ ತಡೆಯಲು ಸಾಧ್ಯವೇ ಇಲ್ಲ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.



ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷ ಐಎಎಸ್ ನಿವೃತ್ತ ಅಧಿಕಾರಿ ಸಿ. ಸೋಮಶೇಖರ ಅವರು ನಿಕಟ ಪೂರ್ವ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣೆ ಅವರಿಂದ ಪರಿಷತ್ತಿನ ಧ್ವಜವನ್ನು ಪಡೆಯುವ ಮೂಲಕ ಅಧಿಕಾರ ಸ್ವೀಕರಿಸಿದರು. ಪರಿಷತ್ತಿನ ಗೌರವ ಸಲಹೆಗಾರರಾದ ಗೊ.ರು. ಚನ್ನಬಸಪ್ಪ, ಲೀಲಾದೇವಿ ಪ್ರಸಾದ್, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಇದ್ದರು.

ಸುವರ್ಣ ಕರ್ನಾಟಕ ವರ್ಷಾಚರಣೆಯಲ್ಲಿ ವಿಜ್ಞಾನಿ ರೂಪಾ ಅಭಿಮತ

'ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೊ ಸಾಧನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇಸ್ರೊ ಮಹತ್ವದ ಸಾಧನೆಗಳನ್ನು ಮಾಡುವ ಯೋಜನೆಗಳನ್ನು ರೂಪಿಸಿದ್ದು, ಇದರ ಯಶಸ್ಸಿಗೆ ವಿಜ್ಞಾನಿಗಳು ಶ್ರಮವಹಿಸುತ್ತಿದ್ದಾರೆ' ಎಂದು ಇಸ್ರೊ ವಿಜ್ಞಾನಿ ಎಂ.ವಿ. ರೂಪಾ ತಿಳಿಸಿದರು.

ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಸುವರ್ಣ ಕರ್ನಾಟಕ ವರ್ಷಾಚರಣೆ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ಕೇಂದ್ರ ಸರ್ಕಾರದ ಪ್ರೋತ್ಸಾಹದಿಂದ ಇನ್ನಷ್ಟು ಸಂಶೋಧನೆಗಳನ್ನು ಮಾಡಲು ಅನುಕೂಲವಾಗಿದೆ. ಹಲವಾರು ಕನ್ನಡಿಗರು ವಿಜ್ಞಾನ-ತಂತ್ರಜ್ಞಾನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ' ಎಂದು ಹೇಳಿದರು.



ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ ಆಯೋಜಿಸಿದ್ದ ಸುವರ್ಣ ಕರ್ನಾಟಕ ವರ್ಷಾಚರಣೆ ಹಾಗೂ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಾಸ್ಯಕಲಾವಿದ ಮಿಮಿಕ್ರಿ ದಯಾನಂದ, ಸಾಹಿತಿ ಕೆ. ಷರಿಫಾ, ಇಸ್ರೊ ವಿಜ್ಞಾನಿ ಎಂ.ವಿ. ರೂಪಾ, ಹಾಗೂ 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ ಅವರನ್ನು ಸನ್ಮಾನಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, 'ಆಂಗ್ಲರು ವಾಸವಿದ್ದ ದಂಡು ಪ್ರದೇಶದಲ್ಲಿ ಇಲ್ಲಿನ ಕನ್ನಡ ಸಂಘಟನೆಗಳು 20 ವರ್ಷಗಳಿಂದ ಕನ್ನಡೇತರರಿಗೆ ನಮ್ಮ ಸಂಸ್ಕೃತಿ, ಕಲೆಯ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿವೆ. ಜೊತೆಗೆ ನಿರಂತರ ಕನ್ನಡದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಮುಂದಿನ ದಿನಗಳಲ್ಲಿ ದಂಡು ಪ್ರದೇಶದಲ್ಲಿ ಕನ್ನಡ ಕಟ್ಟುವ ಕೆಲಸದಲ್ಲಿ ಕಸಾಪ ಒಕ್ಕೂಟಗಳ ಜೊತೆಗೆ ಕೆಲಸ ಮಾಡಲಿದೆ' ಎಂದು ಭರವಸೆ ನೀಡಿದರು.

ರಾಜ್ಯಸಭೆ ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ. ಜಗನ್ನಾಥ ರೆಡ್ಡಿ, ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ.ಜೆ.ಕೆ. ಭಕ್ತವತ್ಸಲಂ, ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು, ಪ್ರಭಾಕರ್ ಇದ್ದರು.

ಹೈ ಪ್ರೊಫೈಲ್ ಹುಡುಗಿಯರ ಜೊತೆ ದೈಹಿಕ ಸಂಪರ್ಕದ ಆಮಿಷ: ಗಂಟೆ ಲೆಕ್ಕದಲ್ಲಿ ಹಣ

‘ಪ್ಲೇಬಾಯ್’ ವಂಚನೆ ಜಾಲ ಸಕ್ರಿಯ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ‘ಹೈ ಪ್ರೊಫೈಲ್ ಹುಡುಗಿಯರೊಂದಿಗೆ ದೈಹಿಕ ಸಂಪರ್ಕ ಹೊಂದಲು ಪ್ಲೇಬಾಯ್‌ಗಳು ಬೇಕಾಗಿದ್ದಾರೆ. ಗಂಟೆಗೆ ₹5 ಸಾವಿರದಿಂದ ₹10 ಸಾವಿರ ನೀಡಲಾಗುವುದು. ನಿಮ್ಮ ವಾಸಸ್ಥಳದ ಸುತ್ತಮುತ್ತಲಿನ ಐಷಾರಾಮಿ ಹೋಟೆಲ್‌ಗಳಲ್ಲಿ ಕೊಠಡಿ ಕಾಯ್ದಿರಿಸಿ ಸಕಲ ವ್ಯವಸ್ಥೆ ಮಾಡಲಾಗುವುದು...’

ಇಂಥ ಜಾಹೀರಾತು, ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಹಾಗೂ ಇತರೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಜಾಹೀರಾತು ನಂಬಿ ಪ್ಲೇಬಾಯ್ (ಪುರುಷ ವೇಶ್ಯಾವಾಟಿಕೆ) ಆಗಲು ಮುಂದಾಗುತ್ತಿರುವ ಯುವಕರು, ನೋಂದಣಿ ಹಾಗೂ ಭೇಟಿ ಶುಲ್ಕದ ಹೆಸರಿನಲ್ಲಿ ಲಕ್ಷ ಲಕ್ಷ ನೀಡಿ ವಂಚನೆಗೀಡಾಗುತ್ತಿದ್ದಾರೆ.

ಬೆಂಗಳೂರು, ಮಂಗಳೂರು, ಹುಬ್ಬಳ್ಳಿ, ದಾವಣಗೆರೆ, ಮೈಸೂರು, ತುಮಕೂರು ಸೇರಿದಂತೆ ಹಲವು ನಗರಗಳ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ಲೇಬಾಯ್ ವಂಚನೆಗೆ ಸಂಬಂಧಪಟ್ಟಂತೆ ದೂರುಗಳು ದಾಖಲಾಗುತ್ತಿವೆ. ₹10 ಸಾವಿರದಿಂದ ₹5 ಲಕ್ಷದವರೆಗೂ ಯುವಕರು ಹಣ ಕಳೆದುಕೊಂಡಿರುವ ಪ್ರಕರಣಗಳು ವರದಿಯಾಗಿವೆ. ಅವಿವಾಹಿತ ಹಾಗೂ ವಿವಾಹಿತರೂ ಸಂತ್ರಸ್ತರ ಪಟ್ಟಿಯಲ್ಲಿದ್ದಾರೆ.

ಮುಖ್ಯಾಂಶಗಳು

- ಸಾಮಾಜಿಕ ಮಾಧ್ಯಮದಲ್ಲಿ ವಂಚಕರ ಜಾಹೀರಾತು
- ನೀಲಿಚಿತ್ರ ವೀಕ್ಷಣೆಯಿಂದ ಪ್ರಚೋದನೆ
- ಜಾಲಕ್ಕೆ ಸಿಲುಕಿ ನೊಂದ ವಿವಾಹಿತ–ಅವಿವಾಹಿತರು

‘ಸಾಮಾಜಿಕ ಮಾಧ್ಯಮಗಳಲ್ಲಿ ಖಾತೆ ಹೊಂದಿರುವ ಯುವಕರನ್ನು ಗುರಿಯಾಗಿಸಿಕೊಂಡು ಪ್ಲೇಬಾಯ್ ಅಸ್ತ್ರ ಬಳಸುತ್ತಿರುವ ಸೈಬರ್ ವಂಚಕರು, ಹಣ ದೋಚುತ್ತಿದ್ದಾರೆ. ಈ ಜಾಲಕ್ಕೆ ಸಿಲುಕಿ ಹಲವು ಯುವಕರು ಹಣ ಕಳೆದು ಕೊಳ್ಳುತ್ತಿದ್ದಾರೆ’ ಎಂದು ಸೈಬರ್ ಕ್ರೈಂ ಠಾಣೆಯೊಂದರ ಇನ್‌ಸ್ಪೆಕ್ಟರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಕಲಿ ಖಾತೆ ಹಾಗೂ ಯಾರದ್ದೊ ದಾಖಲೆ ಬಳಸಿ ಖರೀದಿಸುವ ಸಿಮ್ ಕಾರ್ಡ್‌ಗಳನ್ನು ಸೈಬರ್ ವಂಚಕರು ಬಳಸುತ್ತಿದ್ದಾರೆ. ದೂರುಗಳು ದಾಖಲಾದರೂ ಆರೋಪಿಗಳ ಸುಳಿವು ಪತ್ತೆ ಮಾಡುವುದು ಕಷ್ಟವಾಗುತ್ತಿದೆ. ಒಬ್ಬ ಯುವಕನನ್ನು ವಂಚನೆ ಮಾಡಿದ ನಂತರ ಸಿಮ್‌ಕಾರ್ಡ್ ಎಸೆಯುತ್ತಿದ್ದಾರೆ. ಆರೋಪಿಗಳು ಯಾವುದೇ ಸುಳಿವು ಬಿಟ್ಟುಕೊಡುತ್ತಿಲ್ಲ’ ಎಂದು ಹೇಳಿದರು.

₹ 1.74 ಲಕ್ಷ ನೀಡಿ ಹೋಟೆಲ್‌ಗೂ ಹೋಗಿದ್ದ: ‘ಬೆಂಗಳೂರಿನ ಕೋಣನಕುಂಟೆಯ 35 ವರ್ಷ ವಯಸ್ಸಿನ ನಿವಾಸಿಯೊಬ್ಬರು ಪ್ಲೇಬಾಯ್ ವಂಚನೆ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ. ಅವರ ವಾಟ್ಸ್‌ಆ್ಯಪ್‌ಗೆ ಅ. 17ರಂದು ರುಹಾನಿ ಶರ್ಮಾ ಹೆಸರಿನಲ್ಲಿ ಸಂದೇಶ ಬಂದಿತ್ತು. ‘ನೀವು ಹಣ ಗಳಿಸಲು ಬಯಸುತ್ತಿದ್ದೀರಾ? ಹಾಗಾದರೆ, ನಮ್ಮ ಬಳಿ ಹೈ ಪ್ರೊಫೈಲ್ ಹುಡುಗಿಯರು ಇದ್ದಾರೆ. ಅವರ ಜೊತೆ ದೈಹಿಕ ಸಂಪರ್ಕ ಹೊಂದಿದರೆ, ಗಂಟೆಗೆ ₹ 5 ಸಾವಿರದಿಂದ ₹10 ಸಾವಿರ ನೀಡುತ್ತೇವೆ’ ಎಂಬುದಾಗಿ ಸಂದೇಶದಲ್ಲಿ ಬರೆಯಲಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಆರ್ಥಿಕವಾಗಿ ಸಂಕಷ್ಟದಲ್ಲಿದ್ದ ದೂರುದಾರ, ಪ್ಲೇಬಾಯ್ ಆಗಲು ಮುಂದಾಗಿದ್ದರು. ಸಂದೇಶದಲ್ಲಿದ್ದ ಸಂಖ್ಯೆಗೆ ಕರೆ ಮಾಡಿದ್ದರು. ನೋಂದಣಿ ಶುಲ್ಕದ ಹೆಸರಿನಲ್ಲಿ ಆರೋಪಿಗಳು, ಆರಂಭದಲ್ಲಿ ₹ 1 ಸಾವಿರ ಪಡೆದಿದ್ದರು. ಹುಡುಗಿಯರ ಕೆಲ ಫೋಟೊ ಕಳುಹಿಸಿದ್ದ ಆರೋಪಿಗಳು, ಬೆಂಗಳೂರಿನ ಹೋಟೆಲೊಂದಕ್ಕೆ ಹೋಗುವಂತೆ ದೂರುದಾರರಿಗೆ ಹೇಳಿದ್ದರು. ಇದಕ್ಕೂ ಹಂತ ಹಂತವಾಗಿ ₹ 1.73 ಲಕ್ಷ ಪಡೆದಿದ್ದರು. ದೂರುದಾರ ಹೋಟೆಲ್‌ಗೆ ಹೋದಾಗ, ಯಾರೊಬ್ಬರೂ ಇರಲಿಲ್ಲ. ಆರೋಪಿಗಳ ಮೊಬೈಲ್ ನಂಬರ್ ಸಹ ಸ್ವಿಚ್ ಆಫ್ ಆಗಿತ್ತು. ಇದೇ ರೀತಿಯಲ್ಲಿ ಆರೋಪಿಗಳು, ತಿಂಗಳಿನಲ್ಲಿ 20ಕ್ಕೂ ಹೆಚ್ಚು ಯುವಕರನ್ನು ವಂಚಿಸುತ್ತಿದ್ದಾರೆ. ಕೆಲವರು ದೂರು ನೀಡುತ್ತಿದ್ದು, ಬಹುತೇಕರು ದೂರು ಕೊಡುತ್ತಿಲ್ಲ’ ಎಂದು ಹೇಳಿದರು.

ಪ್ರಚೋದನೆ: ‘ಹಲವು ಯುವಕರು, ನೀಲಿ ಚಿತ್ರಗಳನ್ನು ವೀಕ್ಷಿಸುತ್ತಿದ್ದಾರೆ. ನೀಲಿಚಿತ್ರಗಳ ಜಾಲತಾಣಗಳಲ್ಲಿಯೂ ಪ್ಲೇಬಾಯ್ ಜಾಹೀರಾತುಗಳು ಬರುತ್ತಿವೆ. ಪ್ರಚೋದನಗೆ ಒಳಗಾಗುವ ಯುವಕರು, ಜಾಹೀರಾತು ನಂಬಿ ಕರೆ ಮಾಡಿ ಹಣ ಕಳೆದುಕೊಳ್ಳುತ್ತಿದ್ದಾರೆ. ಯುವಕರು ಹೆಚ್ಚು ಜಾಗೃತಿಯಿಂದ ಇರಬೇಕಿದೆ’ ಎಂದು ತಿಳಿಸಿದರು.

‘ಪ್ಲೇಬಾಯ್‌ಗೂ ಸಂಘ; ಸದಸ್ಯತ್ವ ಹೆಸರಿನಲ್ಲಿ ವಸೂಲಿ’

‘ಡೇಟಿಂಗ್ ಆ್ಯಪ್, ಜಾಲತಾಣ, ಸಾಮಾಜಿಕ ಮಾಧ್ಯಮಗಳಾದ ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಇತರೆ ಆನ್‌ಲೈನ್ ವೇದಿಕೆಗಳಲ್ಲಿ ಆರೋಪಿಗಳು ಜಾಹೀರಾತು ನೀಡುತ್ತಿದ್ದಾರೆ. ಅದನ್ನು ನಂಬಿ ಯಾರಾದರೂ ಸಂಪರ್ಕಿಸಿದರೆ, ‘ಫ್ಯಾಬ್ವಾಲ್ ಇಂಡಿಯಾ ಆನ್‌ಲೈನ್ ಡೇಟಿಂಗ್’ ಸಂಸ್ಥೆ ಹೆಸರಿನಲ್ಲಿ ಕರಪತ್ರಗಳು ಹಾಗೂ ಇತರೆ ದಾಖಲೆಗಳನ್ನು ಕಳುಹಿಸುತ್ತಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದರು.

‘ಪ್ಲೇಬಾಯ್ ನೋಂದಣಿಗೂ ಸಂಘವಿರುವುದಾಗಿ ಹೇಳುವ ಆರೋಪಿಗಳು, ಅದರ ಸದಸ್ಯತ್ವದ ಹೆಸರಿನಲ್ಲಿ ಮೊದಲಿಗೆ ಹಣ ಪಡೆಯುತ್ತಾರೆ. ಸ್ಥಳೀಯ ಹಾಗೂ ವಿದೇಶಿ ಯುವತಿಯರ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಆರೋಪಿಗಳು ಡೌನ್‌ಲೋಡ್ ಮಾಡಿಟ್ಟು ಕೊಂಡಿರುತ್ತಾರೆ. ಅದೇ ಫೋಟೊಗಳನ್ನು ಯುವಕರಿಗೆ ಕಳುಹಿಸಿ ಮತ್ತಷ್ಟು ಹಣ ಪಡೆದು ನಾಪತ್ತೆಯಾಗುತ್ತಿದ್ದಾರೆ. ಯುವತಿಯರ ಫೋಟೊಗಳೂ ದುರ್ಬಳಕೆ ಆಗುತ್ತಿವೆ’ ಎಂದು ಮಾಹಿತಿ ನೀಡಿದರು.

ಮೆಟ್ರೊದಲ್ಲಿ ಭಿಕ್ಷೆ: ಯುವಕನಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ರೈಲಿನಲ್ಲಿ ಭಿಕ್ಷೆ ಬೇಡುತ್ತಿದ್ದ ಯುವಕನಿಗೆ ಬಿಎಂಆರ್‌ಸಿಎಲ್ ಭದ್ರತಾ ಸಿಬ್ಬಂದಿ ₹500 ದಂಡ ವಿಧಿಸಿದ್ದಾರೆ.

ಶ್ರವಣದೋಷವುಳ್ಳ ಕೊಪ್ಪಳದ 20 ವರ್ಷದ ಮಲ್ಲಿಕಾರ್ಜುನ್ ಯಶವಂತಪುರ ನಿಲ್ದಾಣದಲ್ಲಿ ಮೆಟ್ರೊ ಪ್ರಯಾಣದ ಕಾರ್ಡ್ ಖರೀದಿಸಿ ಅದರಲ್ಲಿ ₹150 ತುಂಬಿ ಮೆಟ್ರೊ ರೈಲು ಹತ್ತಿದ್ದರು. ‘ನಾನು ಕಿವುಡ ಮತ್ತು ಮೂಗ’ ಎಂದು ಬರೆದಿರುವ ಫಲಕವನ್ನು ಕುತ್ತಿಗೆಯಲ್ಲಿ ನೇತು ಹಾಕಿಕೊಂಡು ಕೋಚ್‌ನಿಂದ ಕೋಚ್‌ಗೆ ಭೇಟಿ ನೀಡಿ ಭಿಕ್ಷೆ ಬೇಡಿದ್ದರು. ಒಂದು ಗಂಟೆ ಭಿಕ್ಷೆ ಬೇಡಿ ಮಹಾಕವಿ ಕುವೆಂಪು ಮೆಟ್ರೊ ನಿಲ್ದಾಣದಲ್ಲಿ ಇಳಿದು ಹೋಗಿದ್ದರು.



ಮಲ್ಲಿಕಾರ್ಜುನ್

ಯುವಕನೊಬ್ಬ ಭಿಕ್ಷೆ ಬೇಡಿದ ಬಗ್ಗೆ ಮೆಟ್ರೊ ಸಿಬ್ಬಂದಿಗೆ ಸಾರ್ವಜನಿಕರು ಮಾಹಿತಿ ನೀಡಿದ್ದರು. ಮೆಟ್ರೊದ ಎಲ್ಲ ನಿಲ್ದಾಣಗಳ ಸಿಬ್ಬಂದಿಗೆ ಈ ವಿಷಯವನ್ನು ರವಾನಿಸಲಾಗಿತ್ತು. ಮಲ್ಲಿಕಾರ್ಜುನ್ ಯಶವಂತಪುರದಲ್ಲೇ ಎರಡನೇ ಬಾರಿ ಮೆಟ್ರೊ ಹತ್ತಲು ಬಂದಾಗ ಸಿಬ್ಬಂದಿ ಹಿಡಿದು ಪರಿಶೀಲಿಸಿದ್ದಾರೆ. ಆತನ ಜೇಬಿನಲ್ಲಿ ₹960 ಪತ್ತೆಯಾಗಿತ್ತು. ಮೆಟ್ರೊ ಪ್ರಯಾಣಿಕರಿಗೆ ತೊಂದರೆ ಉಂಟು ಮಾಡಿದ್ದಕ್ಕಾಗಿ (ಸೆಕ್ಷನ್ 59) ₹500 ದಂಡ ವಿಧಿಸಲಾಯಿತು. ಬಳಿಕ ಯುವಕನನ್ನು ಇಎನ್‌ಟಿ ತಜ್ಞ ವೈದ್ಯರ ಬಳಿ ಕರೆದುಕೊಂಡು ಹೋಗಿ ಶ್ರವಣದೋಷ ಇರುವುದು ಹೌದೇ ಎಂದು ಪರೀಕ್ಷೆ ನಡೆಸಲಾಯಿತು. ಶ್ರವಣದೋಷ ಇರುವುದು ದೃಢಪಟ್ಟಿದೆ. ಪರೀಕ್ಷೆಯ ಶುಲ್ಕ ₹100 ಅನ್ನು ಬಿಎಂಆರ್‌ಸಿಎಲ್ ಭರಿಸಿದೆ. ಇನ್ನು ಮುಂದೆ ಈ ರೀತಿ ಮಾಡದಂತೆ ತಾಕೀತು ಮಾಡಿ ಕಳುಹಿಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ. ನಮ್ಮ ಮೆಟ್ರೊದಲ್ಲಿ ಇದೇ ಮೊದಲ ಬಾರಿಗೆ ಭಿಕ್ಷೆ ಬೇಡಿರುವ ಪ್ರಕರಣ ದಾಖಲಾಗಿದೆ.



ಕನ್ನಡ ದೀಪ ಆಸ್ಟ್ರೇಲಿಯಾದ ಮೆಲ್ಬರ್ನ್‌ನ ವಿಂಡಮ್ ಪ್ರದೇಶದಲ್ಲಿ ‘ವಿಂಡಮ್ ಕನ್ನಡ ಬಳಗ’ದಿಂದ ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಲಾಯಿತು

ಹುಚ್ಚಾಟಕ್ಕಾಗಿ ಕರೆ: ನಿರ್ದೇಶಕನಿಗೆ ಎಚ್ಚರಿಕೆ

ಯೂಟ್ಯೂಬ್ ಚಾನೆಲ್ ನಡೆಸುತ್ತಿರುವ ಆರೋಪಿ: ಮುಚ್ಚಳಿಕೆ ಬರೆಯಿಸಿಕೊಂಡ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ಮಾಪಕ ಮಹಾದೇವ್ ಅವರಿಗೆ ಯುವತಿ ಹೆಸರಿನಲ್ಲಿ ಹುಚ್ಚಾಟಕ್ಕಾಗಿ ಕರೆ (ಪ್ರ್ಯಾಂಕ್ ಕಾಲ್) ಮಾಡಿದ್ದ ನಿರ್ದೇಶಕ ರವೀಂದ್ರ ಅವರನ್ನು ವಶಕ್ಕೆ ಪಡೆದಿದ್ದ ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು, ಎಚ್ಚರಿಕೆ ನೀಡಿ ಬಿಟ್ಟು ಕಳುಹಿಸಿದ್ದಾರೆ.

‘ನಟ ದರ್ಶನ್ ಅಭಿನಯದ ಚಿಂಗಾರಿ ಸಿನಿಮಾ ನಿರ್ಮಾಪಕ ಮಹಾದೇವ್ ಅವರು ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಂಡು, ರವೀಂದ್ರನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಆರೋಪಿ ರವೀಂದ್ರ, ಯೂಟ್ಯೂಬ್ ಚಾನೆಲ್ ಹೊಂದಿರುವುದಾಗಿ ಗೊತ್ತಾಗಿದೆ. ಪ್ರಸಿದ್ಧ ವ್ಯಕ್ತಿಗಳಿಗೆ ಹುಚ್ಚಾಟಕ್ಕಾಗಿ ಕರೆ ಮಾಡಿ ರವೀಂದ್ರ ಹಾಗೂ ಇತರರು, ಅದರ ಧ್ವನಿ-ಮುದ್ರಣವನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು. ಅ. 28ರಂದು ಮಹಾದೇವ್ ಅವರಿಗೆ ಕರೆ ಮಾಡಿದ್ದ ರವೀಂದ್ರ ಕಡೆಯ ಯುವತಿ, ‘ನನಗೆ ಸಿನಿಮಾದಲ್ಲಿ ಅವಕಾಶ ಕೊಡಿಸುವುದಾಗಿ ₹ 50 ಸಾವಿರ ಪಡೆದುಕೊಂಡಿದ್ದಿರಾ. ಈಗ ಅವಕಾಶ ಕೊಟ್ಟಿಲ್ಲ. ಹಣವನ್ನು ವಾಪಸು ಕೊಡಿ’ ಎಂದಿದ್ದರು.’

‘ಯಾರಿಂದಲೂ ಹಣ ಪಡೆದಿಲ್ಲವೆಂದು ಹೇಳಿ ಮಹಾದೇವ್ ಕರೆ ಕಡಿತಗೊಳಿಸಿದ್ದರು. ಇದಾದ ನಂತರವೂ ಯುವತಿ, ಹಲವು ಬಾರಿ ಕರೆ ಮಾಡಿದ್ದರು. ವಿಷಯ ತಿಳಿದ ಮಹಾದೇವ್ ಅವರ ಮಗ, ದೂರವಾಣಿ ಸಂಖ್ಯೆ ಪರಿಶೀಲಿಸಿದ್ದ. ಅದು ನಿರ್ದೇಶಕ ರವೀಂದ್ರ ಕಚೇರಿಯದ್ದೆಂದು ಗೊತ್ತಾಗಿತ್ತು. ಅವಾಗಲೇ ಠಾಣೆಗೆ ಬಂದು ದೂರು ನೀಡಿದ್ದರು’ ಎಂದು ಹೇಳಿದರು.

‘ಹುಚ್ಚಾಟಕ್ಕಾಗಿ ವಿಡಿಯೊ ಮಾಡುವ ಉದ್ದೇಶದಿಂದ ಕರೆ ಮಾಡಿದ್ದಾಗಿ ನಿರ್ದೇಶಕ ಹೇಳಿಕೊಂಡಿದ್ದಾನೆ. ಮಹಾದೇವ್ ಅವರಿಗೂ ಈ ವಿಷಯ ಗೊತ್ತಾಗಿದೆ. ಹೀಗಾಗಿ, ಆರೋಪಿಯಿಂದ ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಿ ಬಿಟ್ಟು ಕಳುಹಿಸಲಾಗಿದೆ’ ಎಂದು ತಿಳಿಸಿದರು.

ಮುಖ್ಯಾಂಶಗಳು

- ನಿರ್ಮಾಪಕ ಮಹಾದೇವ್ ಅವರಿಗೆ ಯುವತಿ ಹೆಸರಿನಲ್ಲಿ ದೂರವಾಣಿ ಕರೆ
- ಅನ್ನಪೂರ್ಣೇಶ್ವರಿ ನಗರ ಠಾಣೆಯಲ್ಲಿ ದೂರು ದಾಖಲು

ಮಿನಿ ಬಸ್ ಡಿಕ್ಕಿ: ಕೆಐಎ ಭದ್ರತಾ ಸಿಬ್ಬಂದಿ ಸಾವು

ಬೆಂಗಳೂರು: ಚಿಕ್ಕಜಾಲ ಠಾಣೆ ವ್ಯಾಪ್ತಿಯಲ್ಲಿ ಮಿನಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಭದ್ರತಾ ಸಿಬ್ಬಂದಿ ಮೊಹಮ್ಮದ್ ನಬಿ ರೋಷನ್ (21) ಮೃತಪಟ್ಟಿದ್ದಾರೆ.

‘ಕೇರಳದ ರೋಷನ್, ವಿಮಾನ ನಿಲ್ದಾಣದಲ್ಲಿ ಒಂದೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಹುಣಸೆಮಾರನಹಳ್ಳಿ ಬಳಿಯ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ವಾಸವಿದ್ದರು. ಅವರು ದ್ವಿಚಕ್ರ ವಾಹನದಲ್ಲಿ ಬುಧವಾರ ರಾತ್ರಿ ಕೆಲಸಕ್ಕೆ ಹೊರಟಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಹುಣಸೆಮಾರನಹಳ್ಳಿ ಸರ್ವೀಸ್ ರಸ್ತೆಯಲ್ಲಿ ರೋಷನ್ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಇದೇ ಮಾರ್ಗದಲ್ಲಿ ಮಿನಿ ಬಸ್ ಹೊರಟಿತ್ತು. ಅದರ ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ಅದೇ ಮಿನಿ ಬಸ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ರಸ್ತೆಗೆ ಬಿದ್ದಿದ್ದ ರೋಷನ್ ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು.’

‘ತೀವ್ರ ಗಾಯಗೊಂಡಿದ್ದ ರೋಷನ್ ಅವರನ್ನು ಸ್ಥಳೀಯರು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮಿನಿ ಬಸ್ ಚಾಲಕನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಪಾಲಕರ ಕ್ಷಮೆ ಯಾಚಿಸಿದ ಶಿಕ್ಷಕ

ರಿಪ್ಪನ್‌ಪೇಟೆ: ಮೊಟ್ಟೆ ತಿಂದ ಶಾಲಾ ವಿದ್ಯಾರ್ಥಿನಿ ಆರೋಗ್ಯದಲ್ಲಿ ಏರುಪೇರು

ಪ್ರಜಾವಾಣಿ ವಾರ್ತೆ

ರಿಪ್ಪನ್‌ಪೇಟೆ (ಶಿವಮೊಗ್ಗ ಜಿಲ್ಲೆ): ಸಮೀಪದ ಅಮೃತ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ (ಕೆಪಿಎಸ್) ಪೌಷ್ಟಿಕ ಆಹಾರ ಸೇವನೆ ಬಗೆಗಿನ ಪಾಠ ಕೇಳಿ ಪ್ರೇರಣೆಗೊಂಡು, ಮೊದಲ ಬಾರಿಗೆ ಮೊಟ್ಟೆ ಸೇವಿಸಿದ್ದ ವಿದ್ಯಾರ್ಥಿನಿಯ ಆರೋಗ್ಯದಲ್ಲಿ ಏರುಪೇರಾಗಿರುವುದು ಪಾಲಕರ ಆಕ್ರೋಶಕ್ಕೆ ಕಾರಣವಾಗಿತ್ತು.

ಈ ಸಂಬಂಧ ಶಾಲೆಯ ಶಿಕ್ಷಕರೊಬ್ಬರು ಬಾಲಕಿಯ ಪಾಲಕರ ಕ್ಷಮೆ ಯಾಚಿಸಿದ ಪರಿಣಾಮ ವಿವಾದ ಸುಖಾಂತ್ಯಗೊಂಡಿದೆ.

ಶಾಲೆಯ 2ನೇ ತರಗತಿ ವಿದ್ಯಾರ್ಥಿಗಳಿಗೆ ಪೌಷ್ಟಿಕಾಂಶದ ಆಹಾರ ಸೇವನೆ ಬಗ್ಗೆ ಪಾಠ ಮಾಡಿದ್ದ ಶಿಕ್ಷಕ ಪುಟ್ಟನಾಯ್ಕ ಮೊಟ್ಟೆಯ ಮಹತ್ವದ ಬಗ್ಗೆ ಹೇಳಿದ್ದರು ಎನ್ನಲಾಗಿದೆ. ಇದರಿಂದ ಪ್ರೇರಣೆಗೊಂಡು, ಮೊಟ್ಟೆ ತಿನ್ನದ ಕೆಲವು ಮಕ್ಕಳು ಮಧ್ಯಾಹ್ನ ಊಟದ ವೇಳೆ ಚಿಕ್ಕಿಯ ಬದಲು ಮೊಟ್ಟೆ ಸೇವಿಸಿದ್ದರು.

ಸಂಜೆ ಮನೆಗೆ ತೆರಳಿದ್ದ ವಿದ್ಯಾರ್ಥಿನಿ ವಾಂತಿ ಮಾಡಲು ಆರಂಭಿಸಿದ್ದಳು. ಅದನ್ನು ಗಮನಿಸಿದ ಪಾಲಕರು ವೈದ್ಯರ ಬಳಿ ಕರೆದೊಯ್ದಾಗ ಆಹಾರದಲ್ಲಿ ವ್ಯತ್ಯಾಸ ಆಗಿದೆ ಎಂದು ಗೊತ್ತಾಗಿತ್ತು. ಬಾಲಕಿಯನ್ನು ವಿಚಾರಿಸಿದಾಗ, ಶಾಲೆಯಲ್ಲಿ ಮೊಟ್ಟೆ ತಿಂದಿದ್ದಾಗಿ ಹೇಳಿದ್ದಳು ಎಂದು ತಿಳಿದುಬಂದಿದೆ.

ಈ ಬಗ್ಗೆ ಪಾಲಕರು ಬುಧವಾರ ನೀಡಿದ ದೂರಿನ ಅನ್ವಯ ಶಾಲೆಗೆ ಗುರುವಾರ ಭೇಟಿ ನೀಡಿದ್ದ ಡಿಡಿಪಿಐ ಸಿ.ಆರ್. ಪರಮೇಶ್ವರಪ್ಪ, ಹೊಸನಗರ ಬಿಇಒ ಎಚ್.ಆರ್. ಕೃಷ್ಣಮೂರ್ತಿ, ಜಿಲ್ಲಾ ಅಕ್ಷರ ದಾಸೋಹ ವಿಭಾಗದ ಸಹಾಯಕ ನಿರ್ದೇಶಕ ನಾಗರಾಜ್, ಪಾಲಕರು ಹಾಗೂ ಶಾಲೆಯ ಉಳಿದ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು.

‘ಶಿಕ್ಷಕ ಬಲವಂತವಾಗಿ ಮಕ್ಕಳಿಗೆ ಮೊಟ್ಟೆ ತಿನ್ನಿಸಿರಲಿಲ್ಲ. ಪಾಠದಿಂದ ಪ್ರೇರಣೆಗೊಂಡ ಮಕ್ಕಳೇ ಬಿಸಿಯೂಟದ ಅಡುಗೆಯವರಿಂದ ಮೊಟ್ಟೆ ಪಡೆದು ತಿಂದಿದ್ದಾರೆ. ಮಕ್ಕಳು ಊಟ ಮಾಡುವ ವೇಳೆ ಶಿಕ್ಷಕ ಪುಟ್ಟನಾಯ್ಕ ಅಲ್ಲಿ ಇರಲಿಲ್ಲ ಎಂಬುದೂ ವಿಚಾರಣೆವೇಳೆಗೊತ್ತಾಗಿದೆ. ಬಾಲಕಿ ಸಸ್ಯಹಾರಿ. ಆಕೆಯ ಪಾಲಕರ ಭಾವನೆಗಳಿಗೆ ಇದರಿಂದ ನೋವಾಗಿದೆ ಎಂದುಕೊಂಡೇ ಶಿಕ್ಷಕ ಪುಟ್ಟನಾಯ್ಕ ಪಾಲಕರ ಬಳಿ ಕ್ಷಮೆ ಯಾಚಿಸಿದ್ದಾರೆ. ಪ್ರಕರಣ ಸುಖಾಂತ್ಯಗೊಂಡಿದೆ’ ಎಂದು ಬಿಇಒ ಎಚ್.ಆರ್. ಕೃಷ್ಣಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

ನಿಹಾಂಗರಿಂದ ಗುಂಡಿನ ದಾಳಿ: ಒಬ್ಬನ ಸಾವು

ಸುಲ್ತಾನಪುರ ಲೋಧಿ (ಪಂಜಾಬ್) (ಪಿಟಿಐ): ಪಂಜಾಬ್‌ನ ಕಪೂರ್ತಲಾದಲ್ಲಿ ಗುರುವಾರ ನಿಹಾಂಗ್ ಪಂಥದ ಗುಂಪೊಂದು ಅಪ್ರಚೋದಿತವಾಗಿ ನಡೆಸಿದ ಗುಂಡಿನ ದಾಳಿಯಲ್ಲಿ ಗೃಹರಕ್ಷಕ ದಳದ ಸಿಬ್ಬಂದಿಯೊಬ್ಬರು ಮೃತಪಟ್ಟು, ನಾಲ್ವರು ಪೊಲೀಸರು ಗಾಯಗೊಂಡಿದ್ದಾರೆ.

ಘಟನೆ ಸಂಬಂಧ ಐವರನ್ನು ಬಂಧಿಸಲಾಗಿದ್ದು, ಆಯುಧಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಪೂರ್ತಲಾದಲ್ಲಿರುವ ಗುರುದ್ವಾರ ಅಕಾಲ್ ಬಂಗಾ ಸಾಹಿಬ್‌ನ ಮೆರವಣಿಗೆ ನಡೆಸುವ ವಿಚಾರದಲ್ಲಿ ನಿಹಾಂಗರ ಎರಡು ಗುಂಪು ನಡುವಿನ ವಿವಾದವೇ ಈ ದುರ್ಘಟನೆಗೆ ಕಾರಣ ಎಂದು ವಿಶೇಷ ಡಿಜಿಪಿ ಅರ್ಪಿತ್ ಶುಕ್ಲಾ ಹೇಳಿದ್ದಾರೆ.



ನಿಹಾಂಗ ಪಂಥಕ್ಕೆ ಸೇರಿದ ಗುಂಪೊಂದು ಅಪ್ರಚೋದಿತ ಗುಂಡಿನ ದಾಳಿ ನಡೆಸಿದ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿದರು —ಪಿಟಿಐ ಚಿತ್ರ

ಬಾಬಾ ಮಾನಸಿಂಗ್ ನೇತೃತ್ವದ ನಿಹಾಂಗರನ್ನು ಗುರುದ್ವಾರದಿಂದ ಹೊರಗೆ ಕಳಿಸಲು ಪೊಲೀಸರು ಮುಂದಾದಾಗ, ಅಲ್ಲಿದ್ದ ನಿಹಾಂಗರ ಗುಂಪೊಂದು ಪೊಲೀಸರತ್ತ ಅಪ್ರಚೋದಿತ ಗುಂಡಿನ ದಾಳಿ ನಡೆಸಿದೆ.

ಕೊಲೆ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಶುಕ್ಲಾ ತಿಳಿಸಿದ್ದಾರೆ.



ಸುಟ್ಟು ಕರಕಲಾಗಿರುವ ಡಿಯೊ ಸ್ಕೂಟರ್

ಬೈಕಿಗೆ ಬೆಂಕಿ ಇಟ್ಟ ಯುವಕ: ದೂರು

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಶಿವಗಂಗೆ ಪಟ್ಟಣದಲ್ಲಿ ಯುವಕ ಚೇತನ್ ಗುರುವಾರ ತನ್ನ ಡಿಯೊ ಸ್ಕೂಟರ್‌ಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಸುಟ್ಟು ಹಾಕಿದ್ದಾನೆ.

ಚೇತನ್ ಡಿಯೊ ಸ್ಕೂಟರ್ ಖರೀದಿ ಮಾಡಿ 15 ದಿನಗಳಷ್ಟೇ ಆಗಿತ್ತು. ಏಕಾಏಕಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಅದರ ಮುಂದೆ ನಿಂತುಕೊಂಡು ಯಾರಿಗೊ ವಿಡಿಯೊ ಕರೆ ಮಾಡಿ ತೋರಿಸುತ್ತಿದ್ದ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಗೌರಿಬಿದನೂರು: ವಿದ್ಯಾರ್ಥಿಗಳಿದ್ದ ಆಟೊ ಲಾರಿಗೆ ಡಿಕ್ಕಿ–ವಿದ್ಯಾರ್ಥಿನಿ ಸಾವು

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ವಿದ್ಯಾರ್ಥಿಗಳನ್ನು ಕಾಲೇಜಿಗೆ ಕರೆದೊಯ್ಯುತ್ತಿದ್ದ ಆಟೊ ಗುರುವಾರ ಬೆಳಿಗ್ಗೆ ಟ್ರೈಲರ್ ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿನಿಯೊಬ್ಬಳು ಮೃತಪಟ್ಟಿದ್ದಾಳೆ. 11 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 13 ಮಂದಿ ಗಾಯಗೊಂಡಿದ್ದು, ಆಸ್ಪತ್ರೆಗೆ ಸೇರಿಸಲಾಗಿದೆ.

ನಗರದ ನಾಗಪ್ಪ ಬ್ಲಾಕ್ ಸಮೀಪದ ವೇಮನ ವೃತ್ತದ ಬಳಿ ಸಂಭವಿಸಿದ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಎಸ್‌ಎಸ್‌ಇಎ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ, ಗೌಡಸಂದ್ರ ಗ್ರಾಮದ ವನಜಾ (18) ಬೆಂಗಳೂರಿನ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾಳೆ.



ಜಖಂಗೊಂಡಿರುವ ಆಟೊ

ಇದೇ ಕಾಲೇಜಿನ ವಿದ್ಯಾರ್ಥಿನಿಯರಾದ ಸಹನಾ, ವೆನ್ನೆಲಾ, ತ್ರಿವೇಣಿ, ಪವಿತ್ರಾ, ದೀಪಿಕಾ, ರೋಹಿಣಿ, ತನುಜಾ, ಭಾಗ್ಯಮ್ಮ, ಮೇಘನಾ, ನಳಿನಿ, ತಸೀನಾ ಗಾಯಗೊಂಡಿದ್ದಾರೆ. ಆಟೊರಿಕ್ಷಾ ಚಾಲಕ ಶ್ರೀನಿವಾಸ ಮತ್ತು ಕಾರ್ಮಿಕ ಲೋಕೇಶ್ ಕೂಡ ಗಾಯಗೊಂಡಿದ್ದಾರೆ. ಇವರೆಲ್ಲಾ ತಾಲ್ಲೂಕಿನ ದೊಡ್ಡ ಕುರುಗೋಡು ಮತ್ತು ಗೌಡಸಂದ್ರ ಗ್ರಾಮದವರು.

ವಿದುರಾಶ್ವತ್ಥ ಸಮೀಪದ ದೊಡ್ಡ ಕುರುಗೋಡು ಮತ್ತು ಗೌಡಸಂದ್ರ ಸೇರಿದಂತೆ ಇತರ ಗ್ರಾಮಗಳ ವಿದ್ಯಾರ್ಥಿಗಳು ಆಟೊದಲ್ಲಿ ನಗರದ ಎಸ್‌ಎಸ್‌ಇಎ ಪದವಿಪೂರ್ವ ಕಾಲೇಜಿಗೆ ಹೊರಟಿದ್ದರು.

ನಾಗಪ್ಪ ಬ್ಲಾಕ್ ಸಮೀಪದ ವೇಮನ ವೃತ್ತದಲ್ಲಿ ಬೈಪಾಸ್ ರಸ್ತೆಯಿಂದ ವೇಗವಾಗಿ ಬಂದ ಲಾರಿಗೆ ಆಟೊ ಡಿಕ್ಕಿ ಹೊಡೆಯಿತು. ಲಾರಿಯ ಕೆಳಗೆ ಸಿಲುಕಿದ ಆಟೊ ಸಂಪೂರ್ಣ ಜಖಂಗೊಂಡಿದ್ದು, ಅದರಲ್ಲಿದ್ದ ವಿದ್ಯಾರ್ಥಿನಿಯರು ರಕ್ತದ ಮಡುವಿನಲ್ಲಿ ರಸ್ತೆಯಲ್ಲಿ ಬಿದ್ದಿದ್ದರು. ಸ್ಥಳೀಯರು ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದರು.

ಲಂಚಕ್ಕೆ ಬೇಡಿಕೆ: ಕಾನ್‌ಸ್ಟೆಬಲ್ ಅಮಾನತು

ಹಾವೇರಿ: ಶಿಗ್ಗಾವಿ ಪೊಲೀಸ್ ಠಾಣೆಯಲ್ಲಿದ್ದ ವಾಹನವನ್ನು ಮಾಲೀಕರಿಗೆ ನೀಡಲು ಪೊಲೀಸ್ ಕಾನ್‌ಸ್ಟೆಬಲ್ ಲಂಚಕ್ಕೆ ಬೇಡಿಕೆ ಇಟ್ಟಿರುವ ವಿಡಿಯೊ ಗುರುವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ಅವರನ್ನು ಅಮಾನತು ಮಾಡಲಾಗಿದೆ.

ಪೊಲೀಸ್ ಕಾನ್‌ಸ್ಟೆಬಲ್ ರಮೇಶ ಭಜಂತ್ರಿ ಲಂಚ ಕೇಳಿದವರು. ‘ಸಾಹೇಬ್ರಿಗೆ ₹5 ಸಾವಿರ ಮತ್ತು ನನಗೆ ₹2 ಸಾವಿರ ಕೊಡು’ ಎಂದು ಲಂಚ ಕೇಳಿರುವ ದೃಶ್ಯಾವಳಿ ವಿಡಿಯೊದಲ್ಲಿ ಸೆರೆಯಾಗಿದೆ.

‘ವಿಡಿಯೊ ದೃಶ್ಯವಳಿ ನನ್ನ ಗಮನಕ್ಕೆ ಬಂದಿದೆ. ಇಲಾಖೆ ವಿಚಾರಣೆ ಕಾಯ್ದಿರಿಸಿ, ಅವರನ್ನು ಅಮಾನತು ಮಾಡಲಾಗಿದೆ. ಲಂಚ ಪ್ರಕರಣಗಳು ಕಂಡುಬಂದರೆ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು’ ಎಂದು ಎಸ್.ಪಿ ಅಂಶುಕುಮಾರ್ ತಿಳಿಸಿದ್ದಾರೆ.

ಶೀಘ್ರ ಅನ್ನಭಾಗ್ಯ ಸ್ಮಾರ್ಟ್ ಕಾರ್ಡ್

ಕೋಲಾರ: ‘ಪಡಿತದಾರರಿಗೆ ಈಗಿರುವ ಚೀಟಿ ಜೊತೆಗೆ ಶೀಘ್ರವೇ ಅನ್ನಭಾಗ್ಯದ ಸ್ಮಾರ್ಟ್ ಕಾರ್ಡ್ ಕೊಡಲಾಗುವುದು. ಬಿಪಿಎಲ್ ಹಾಗೂ ಎಪಿಎಲ್ ಚೀಟಿದಾರರಿಗೆ ವಿತರಿಸಲಿದ್ದು, ಬಹೂಪಯೋಗಿ ಕಾರ್ಡ್ ಆಗಲಿದೆ’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

‘ಇನ್ನೂ ಏಳು ಲಕ್ಷ ಕಾರ್ಡ್‌ದಾರರು ಬ್ಯಾಂಕ್ ಖಾತೆ ತೆರೆದಿಲ್ಲ. ಅಂಥವರಿಗೆ ಹಣ ತಲುಪಿಲ್ಲ. ಅವರಿಗೂ ಹಣ ಸಂದಾಯ ಮಾಡಲು ಇಲಾಖೆ ಅಧಿಕಾರಿಗಳೇ ಖುದ್ದಾಗಿ ಕಾರ್ಡ್ ಪರಿಶೀಲಿಸುತ್ತಿದ್ದಾರೆ’ ಎಂದು ಗುರುವಾರ ನಗರದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಚನ್ನಪಟ್ಟಣ: ಗೋದಾಮು ವ್ಯವಸ್ಥಾಪಕನ ಬಂಧನ

154 ಟನ್ ಪಡಿತರ ಅಕ್ಕಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಪಟ್ಟಣದ ತಾಲ್ಲೂಕು ವ್ಯವಸಾಯೋತ್ಪನ್ನಗಳ ಸಹಕಾರ ಸಂಘದ (ಟಿಎಪಿಸಿಎಂಎಸ್) ಗೋದಾಮಿನಲ್ಲಿದ್ದ ₹55.04 ಲಕ್ಷ ಮೌಲ್ಯದ 154 ಟನ್ ಪಡಿತರ ಅಕ್ಕಿ ಹಾಗೂ 7 ಟನ್ ರಾಗಿ ಕಳ್ಳತನವಾಗಿದೆ.

ಘಟನೆ ಕುರಿತು ತಾಲ್ಲೂಕು ಆಹಾರ ನಿರೀಕ್ಷಕ ಕೆ. ಚೇತನ್‌ಕುಮಾರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಚನ್ನಪಟ್ಟಣ ಪುರ ಠಾಣೆ ಪೊಲೀಸರು, ಗೋದಾಮಿನ ವ್ಯವಸ್ಥಾಪಕ ಬಿ.ಆರ್. ಚಂದ್ರಶೇಖರ್ ಎಂಬಾತನನ್ನು ಬಂಧಿಸಿದ್ದಾರೆ.

ಸಂಗ್ರಹವಿರುವ ಪಡಿತರ ಪರಿಶೀಲಿಸಲು ಆಹಾರ ನಿರೀಕ್ಷಕರು ಬುಧವಾರ ಗೋದಾಮಿಗೆ ಭೇಟಿ ನೀಡಿದ್ದಾಗ ಅಕ್ಕಿ ಕಳ್ಳತನವಾಗಿರುವುದು ಬೆಳಕಿಗೆ ಬಂದಿದೆ. ಕೂಡಲೇ ಅವರು ಮೇಲಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಸ್ಥಳಕ್ಕೆ ತಹಶೀಲ್ದಾರ್ ಮಹೇಂದ್ರ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕಿ ರಮ್ಯ ಭೇಟಿ ನೀಡಿ ಪರಿಶೀಲಿಸಿದ ಬಳಿಕ, ರಾತ್ರಿ ಪೊಲೀಸರಿಗೆ ದೂರು ಕೊಟ್ಟಿದ್ದಾರೆ. ಅದರ ಬೆನ್ನಲ್ಲೇ, ವ್ಯವಸ್ಥಾಪಕನ ಬಂಧನವಾಗಿದೆ.

₹55.04 ಲಕ್ಷ ಮೌಲ್ಯ: ‘ಗೋದಾಮಿನಿಂದ ಕಳ್ಳತನವಾಗಿರುವ ಅಕ್ಕಿಯು ₹52.49 ಲಕ್ಷ ಹಾಗೂ ರಾಗಿ ₹2.55 ಲಕ್ಷ ಸೇರಿ ಒಟ್ಟು ₹55.04 ಲಕ್ಷ ಮೌಲ್ಯದ್ದಾಗಿದೆ. ಇಲ್ಲಿಂದ ಚನ್ನಪಟ್ಟಣ ತಾಲ್ಲೂಕಿನ 67 ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ವಿತರಣೆಯಾಗುತ್ತಿತ್ತು’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪ ನಿರ್ದೇಶಕಿ ರಮ್ಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸದ್ಯ ಕಳ್ಳತನವಾಗಿರುವ ಅಕ್ಕಿಯು ಕಳೆದ ಮೂರು ವಾರಗಳಿಂದ ಕೇಂದ್ರಿಯ ಭಂಡಾರದಿಂದ ಬಂದಿತ್ತು. ಜೊತೆಗೆ, ರಾಜ್ಯ ಸರ್ಕಾರ ಕೇಂದ್ರದಿಂದ ಖರೀದಿಸಿದ್ದ ಅಕ್ಕಿಯಾಗಿದೆ. ನವೆಂಬರ್ ತಿಂಗಳಿನ ಪಡಿತರ ಈಗಾಗಲೇ ವಿತರಣೆಯಾಗಿದ್ದು, ಸದ್ಯ ಕಳ್ಳತನವಾಗಿರುವ ಅಕ್ಕಿ ಮತ್ತು ರಾಗಿಯನ್ನು ಮುಂದಿನ ಎರಡು ತಿಂಗಳ ವಿತರಣೆಗೆ ಸಂಗ್ರಹಿಸಿಡಲಾಗಿತ್ತು’ ಎಂದು ಹೇಳಿದರು.

ಪ್ರಭಾವಿಗಳು ಭಾಗಿ?: ಟಿಎಪಿಸಿಎಂಎಸ್ ಕಳೆದ ಹತ್ತು ವರ್ಷಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ಅಕ್ಕಿ ವಿತರಿಸುತ್ತಾ ಬಂದಿದೆ. ಸದ್ಯ ಬಂಧಿಸಿರುವ ಗೋದಾಮು ವ್ಯವಸ್ಥಾಪಕ ಚಂದ್ರಶೇಖರ್, ಒಂದೂವರೆ ವರ್ಷದಿಂದ ಇಲ್ಲಿ ಕೆಲಸ ಮಾಡುತ್ತಿದ್ದ. ಸುಮಾರು 3 ಸಾವಿರ ಮೂಟೆಯಷ್ಟು ಅಕ್ಕಿ ಮತ್ತು ರಾಗಿ ಕದ್ದಿರುವ ಕೃತ್ಯದಲ್ಲಿ ಈತನ ಜೊತೆಗೆ, ಕೆಲ ಪ್ರಭಾವಿಗಳು ಭಾಗಿಯಾಗಿರುವ ಶಂಕೆ ಇದೆ. ಎಲ್ಲಾ ಆಯಾಮದಿಂದಲೂ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಜಿಲ್ಲಾಧಿಕಾರಿ ಡಾ.ಅವಿನಾಶ್ ಮೆನನ್ ರಾಜೇಂದ್ರನ್ ಅವರು ಗುರುವಾರ ಗೋದಾಮಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಮ್ಮದೇನೂ ತಪ್ಪಿಲ್ಲ: ಅಧ್ಯಕ್ಷ

ಕೃತ್ಯದ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಟಿಎಪಿಸಿಎಂಎಸ್ ಅಧ್ಯಕ್ಷ ಮೇಹರೀಶ್, ‘ಘಟನೆಗೆ ಸಂಬಂಧಿಸಿದಂತೆ ನಮ್ಮದೇನೂ ತಪ್ಪಿಲ್ಲ. ಪಡಿತರ ವಿತರಣೆಯ ಪರವಾನಗಿಯನ್ನು ಸಂಘಕ್ಕೆ ಕೊಟ್ಟಿದ್ದರೂ, ನೌಕರರ ಮೂಲಕ ನಾವು ವಿತರಿಸುತ್ತಾ ಬಂದಿದ್ದೇವೆ. ಪ್ರತಿ ತಿಂಗಳು ಇಲ್ಲಿಗೆ ಬರುವ ಪಡಿತರದ ಎಲ್ಲಾ ಮಾಹಿತಿಯನ್ನು ಆಹಾರ ಇಲಾಖೆಯವರೇ ಪರಿಶೀಲಿಸುತ್ತಾರೆ. ಅಧಿಕಾರಿಗಳು ಹೇಳಿದ ಬಳಿಕವೇ, ಅಕ್ಕಿ ಕಳ್ಳತನದ ವಿಷಯ ನಮಗೆ ಗೊತ್ತಾಗಿದೆ. ಕೃತ್ಯದಲ್ಲಿ ನಮ್ಮ ಪಾತ್ರವಿಲ್ಲ. ಇಲಾಖೆಯವರೇ ನಿಗಾ ವಹಿಸಬೇಕಿತ್ತು’ ಎಂದರು.

‘ಆಡಳಿತ ಮಂಡಳಿಯೇ ಹೊಣೆ’

ಅಧ್ಯಕ್ಷ ಮೇಹರೀಶ್ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ರೈತ ಸಂಘದ ಮುಖಂಡ ಸಿ. ಪುಟ್ಟಸ್ವಾಮಿ ಅವರು, ‘ನ್ಯಾಯಬೆಲೆ ಅಂಗಡಿಗಳಿಗೆ ಪಡಿತರ ವಿತರಿಸುವ ಪರವಾನಗಿ ಪಡೆದ ಸಂಘದವರು, ಇದೀಗ ತಮ್ಮ ಗೋದಾಮಿನಲ್ಲಿ ಅಕ್ಕಿ ಕಳ್ಳತನವಾಗಿರುವುದಕ್ಕೆ ಆಹಾರ ಇಲಾಖೆಯತ್ತ ಬೆರಳು ತೋರಿಸುತ್ತಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದರು.

ಘಟನೆಗೆ ಸಂಬಂಧಿಸಿದಂತೆ ಟಿಎಪಿಸಿಎಂಎಸ್‌ನ ಪರವಾನಗಿ ರದ್ದುಪಡಿಸಲಾಗುವುದು. ಗೋದಾಮಿನಿಂದಲೇ ನ್ಯಾಯಬೆಲೆ ಅಂಗಡಿಗಳಿಗೆ ಅಕ್ಕಿ ಪೂರೈಸಲಾಗುವುದು

ರಮ್ಯ, ಉಪ ನಿರ್ದೇಶಕಿ, ಆಹಾರ ಇಲಾಖೆ

₹17,901 ಕೋಟಿ ನೆರವು ನೀಡಲು ಕೋರಿಕೆ

ಬರ ಪರಿಹಾರ ಬಿಡುಗಡೆಗೆ ಒತ್ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಬರಗಾಲದಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ ರೈತರಿಗೆ ಪರಿಹಾರ ನೀಡಲು ₹17,901.73 ಕೋಟಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮತ್ತೊಮ್ಮೆ ಮನವಿ ಮಾಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಗುರುವಾರ ಭೇಟಿ ಮಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮನವಿ ಮಾಡಿದರು.

‘ಕೇಂದ್ರ ಸರ್ಕಾರದ 2015ರ ಅಂಕಿಅಂಶದ ಪ್ರಕಾರ, ರಾಜ್ಯದಲ್ಲಿ ಸಣ್ಣ ಹಾಗೂ ಅತಿಸಣ್ಣ ರೈತರು ಶೇ 44ರಷ್ಟಿದ್ದಾರೆ. ಆದರೆ, ಈಗ ರಾಜ್ಯದ ಜನಸಂಖ್ಯೆಯ ಶೇ 70ರಷ್ಟು ಸಣ್ಣ ಹಾಗೂ ಅತಿಸಣ್ಣ ರೈತರು ಇದ್ದಾರೆ. 2015ರ ಅಂಕಿ ಅಂಶ ಪರಿಗಣನೆಗೆ ತೆಗೆದುಕೊಂಡರೆ ರಾಜ್ಯಕ್ಕೆ ₹1,500 ಕೋಟಿಯಷ್ಟು ನಷ್ಟ ಆಗುತ್ತದೆ. ಪರಿಹಾರ ಮಂಜೂರು ಮಾಡುವ ಸಂದರ್ಭದಲ್ಲಿ ಈಗಿನ ಅಂಕಿ ಅಂಶ ಗಣನೆಗೆ ತೆಗೆದುಕೊಳ್ಳುವಂತೆ ಮನವಿ ಮಾಡಲಾಗಿದೆ. ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಕೇಂದ್ರ ಬಿಡುಗಡೆ ಮಾಡಿದ ಹಣವನ್ನು ರೈತರ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡಲಾಗುವುದು ಎಂದು ಅವರು ಹೇಳಿದರು.

‘ಬರ ಪರಿಹಾರ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರ ಮನವಿ ಸಲ್ಲಿಸಿ ಎರಡು ತಿಂಗಳು ಕಳೆದಿವೆ. ಕೇಂದ್ರದ ತಂಡವು ಅಧ್ಯಯನ ನಡೆಸಿ ವರದಿ ನೀಡಿದೆ. ಸಚಿವರ ಸಮಿತಿಯು ಈ ವರದಿಯನ್ನು ಪರಿಶೀಲನೆ ನಡೆಸಲಿದೆ. ಬಳಿಕ ಪರಿಹಾರ ಬಿಡುಗಡೆಯಾಗುವ ವಿಶ್ವಾಸ ಇದೆ’ ಎಂದು ಅವರು ತಿಳಿಸಿದರು.

ಚಲುವರಾಯಸ್ವಾಮಿ ಮಾತನಾಡಿ, ‘ರೈತರ ಬೆಳೆ ವಿಮೆ ಹಣ ಬಿಡುಗಡೆ ಮಾಡಲು ವಿಮಾ ಕಂಪನಿಗಳು ತಡ ಮಾಡುತ್ತಿವೆ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಲಾಗಿದೆ. ಈ ಬಗ್ಗೆ ಸೂಚನೆ ನೀಡುವುದಾಗಿ ಸಚಿವರು ಭರವಸೆ ನೀಡಿದ್ದಾರೆ’ ಎಂದು ತಿಳಿಸಿದರು.

ರೈತರು ಬೆಳೆಯುವ ಎಲ್ಲ ಸಿರಿಧಾನ್ಯಗಳನ್ನೂ ಯಾವುದೇ ನಿಬಂಧನೆ ಇಲ್ಲದೆ ಕನಿಷ್ಠ ಬೆಂಬಲ ಬೆಲೆ ನೀಡಿ ಸರ್ಕಾರವೇ ಖರೀದಿ ಮಾಡಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಲಾಗಿದೆ ಎಂದರು.

ಮುಖ್ಯಾಂಶಗಳು

- ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಮನವಿ ಸಲ್ಲಿಕೆ
- ಕರ್ನಾಟಕದಲ್ಲಿ ಶೇ 70ರಷ್ಟು ಸಣ್ಣ, ಅತಿಸಣ್ಣ ರೈತರು
- ರೈತರ ಖಾತೆಗಳಿಗೆ ನೇರವಾಗಿ ಹಣ ವರ್ಗಾವಣೆ



ನಿರ್ಮಲಾ ಸೀತಾರಾಮನ್ ಅವರಿಗೆ ಕೃಷ್ಣ ಬೈರೇಗೌಡ ಹಾಗೂ ಎನ್. ಚಲುವರಾಯಸ್ವಾಮಿ ಹೂಗುಚ್ಛ ನೀಡಿದರು

ಸ್ನೇಹ ಕಡಿದುಕೊಂಡಿದ್ದಕ್ಕೆ ಕೊಲೆ: ಎಸ್‌ಪಿ ಹೇಳಿಕೆ

ಪ್ರಜಾವಾಣಿ ವಾರ್ತೆ


ಡಾ.ಕೆ. ಅರುಣ್

ಉಡುಪಿ: 'ಕೊಲೆಯಾದ ಯುವತಿ ಅಯ್ನಾಜ್ ಮೇಲಿನ ಅತಿಯಾದ ಅಸೂಯೆ ಹಾಗೂ ದ್ವೇಷ ನಾಲ್ವರ ಕೊಲೆಗೆ ಕಾರಣ ಎಂಬ ವಿಚಾರ ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ಅರುಣ್ ತಿಳಿಸಿದರು.

ನೇಜಾರಿನ ತೃಪ್ತಿ ಲೇಔಟ್‌ನಲ್ಲಿ ನ.11ರಂದು ನಡೆದ ಒಂದೇ ಕುಟುಂಬದ ನಾಲ್ವರ ಕೊಲೆ ಪ್ರಕರಣ ಸಂಬಂಧ ಗುರುವಾರ ಅವರು ಮಾಹಿತಿ ನೀಡಿದರು.

'ಆರೋಪಿ ಪ್ರವೀಣ್ ಅರುಣ್ ಚೌಗಲೆ ಹಾಗೂ ಕೊಲೆಯಾದ ಅಯ್ನಾಜ್ (20) ಮಂಗಳೂರಿನಲ್ಲಿ ಏರ್ ಇಂಡಿಯಾ ಸಂಸ್ಥೆಯಲ್ಲಿ ಸಹೋದ್ಯೋಗಿಗಳಾಗಿದ್ದರು. ಇಬ್ಬರ ಮಧ್ಯೆ 8 ತಿಂಗಳಿನಿಂದ ಸ್ನೇಹವಿತ್ತು. ಯುವತಿಗೆ ಮಂಗಳೂರಿನ ಬಿಜೈನಲ್ಲಿ ಫ್ಲ್ಯಾಟ್ ಬಾಡಿಗೆ ಕೊಡಿಸಲು ಸಹಾಯ ಮಾಡಿದ್ದ ಆತ, ಆಕೆಗೆ ತನ್ನ ಸ್ಕೂಟರ್ ಕೂಡ ನೀಡಿದ್ದ. ತಿಂಗಳ ಹಿಂದೆ ವೈಯಕ್ತಿಕ ಕಾರಣಗಳಿಂದ ಇಬ್ಬರೂ ದೂರವಾಗಿದ್ದರು. ಯುವತಿ ಏಕಾಏಕಿ ಸ್ನೇಹ ಕಡಿದುಕೊಂಡಿದ್ದಕ್ಕೆ, ಮಾತು ಬಿಟ್ಟಿದ್ದಕ್ಕೆ ಮಾನಸಿಕವಾಗಿ ಕುಗ್ಗಿಹೋಗಿದ್ದ. ಕೊಲೆಗೆ ಸಂಚು ರೂಪಿಸಿದ್ದ' ಎಂದು ಎಸ್‌ಪಿ ತಿಳಿಸಿದರು.

'ಯುವತಿ ಅಯ್ನಾಜ್ ಇರುವ ಸ್ಥಳವನ್ನು ಮೊಬೈಲ್ ಆ್ಯಪ್ ಮೂಲಕ ಪತ್ತೆ ಹಚ್ಚಿದ್ದ ಆರೋಪಿಯು ನ.11ರಂದು ಬೆಳಿಗ್ಗೆ ಉಡುಪಿ ತಾಲ್ಲೂಕಿನ ನೇಜಾರಿನ ತೃಪ್ತಿ ಲೇಔಟ್‌ನಲ್ಲಿರುವ ಮನೆಗೆ ಬಂದಿದ್ದಾನೆ. ಮೊದಲು ಅಯ್ನಾಜ್‌ಗೆ ಚಾಕುವಿನಿಂದ ಇರಿದಿದ್ದಾನೆ. ಮಗಳ ಚೀರಾಟ ಕಂಡು ರಕ್ಷಣೆಗೆ ಧಾವಿಸಿದ ತಾಯಿ ಹಸೀನಾಗೂ ಇರಿದಿದ್ದಾನೆ. ಪ್ರತಿರೋಧ ತೋರಿದ ಸಹೋದರಿ ಅಫ್ನಾನ್‌ಗೂ ಚಾಕುವಿನಿಂದ ಚುಚ್ಚಿದ್ದಾನೆ. ಕುಟುಂಬ ಸದಸ್ಯರ ಚೀರಾಟ ಕಂಡು ಮನೆಯ ಅಂಗಳದಲ್ಲಿ ಆಟವಾಡುತ್ತಿದ್ದ 14 ವರ್ಷದ ಅಸೀಮ್ ಮನೆಯೊಳಗೆ ಬಂದಾಗ ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಬಾಲಕನನ್ನೂ ಹತ್ಯೆ ಮಾಡಿದ್ದಾನೆ' ಎಂದು ಘಟನೆಯನ್ನು ಬಿಚ್ಚಿಟ್ಟರು.

'ಕೊಲೆಗೆ ಸಾಕಷ್ಟು ಪೂರ್ವತಯಾರಿ ಮಾಡಿಕೊಂಡಿದ್ದ ಆರೋಪಿ ಸಿಕ್ಕಿಬೀಳಬಾರದು ಎಂಬ ಕಾರಣಕ್ಕೆ ಕಾರನ್ನು ಟೋಲ್‌ಗೇಟ್‌ಗೂ ಹಿಂದೆಯೇ ನಿಲ್ಲಿಸಿ ಬಸ್‌ನಲ್ಲಿ ಉಡುಪಿಗೆ ಬಂದಿದ್ದ. ಕೊಲೆ ಮಾಡಿದ ಬಳಿಕ ರಕ್ತಸಿಕ್ತ ಬಟ್ಟೆಯನ್ನು ಮೂಲ್ಕಿ ಬಳಿಯ ನಿರ್ಜನ ಪ್ರದೇಶದಲ್ಲಿ ಸುಟ್ಟುಹಾಕಿ, ಕೊಲೆಗೆ ಬಳಸಿದ್ದ ಚಾಕುವನ್ನು ತನ್ನ ಮನೆಯ ಅಡುಗೆ ಮನೆಯಲ್ಲಿಯೇ ಇಟ್ಟಿದ್ದ'.

'ಆರೋಪಿ ಪತ್ತೆಗೆ ರಚಿಸಲಾಗಿದ್ದ 11 ತಂಡಗಳು ರಾಜ್ಯ ಸೇರಿದಂತೆ ನೆರೆ ರಾಜ್ಯಗಳಲ್ಲಿ ತೀವ್ರ ಶೋಧ ನಡೆಸಿದ್ದವು. ಬೆಳಗಾವಿ ಜಿಲ್ಲೆ ಕುಡಚಿಯ ಸಂಬಂಧಿಯೊಬ್ಬರ ಮನೆಯಲ್ಲಿ ಆರೋಪಿ ಸಿಕ್ಕಿಬಿದ್ದಿದ್ದಾನೆ. ಮೂರು ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗುವುದು. ಮೃತ ಕುಟುಂಬ ಸದಸ್ಯರ ಮನವಿಯ ಮೇರೆಗೆ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕಕ್ಕೆ ಮನವಿ ಮಾಡಲಾಗಿದೆ' ಎಂದು ಎಸ್‌ಪಿ ಅರುಣ್ ತಿಳಿಸಿದರು.

ಲೋಕಸಭೆ ಚುನಾವಣೆಯಲ್ಲಿ ಮೋದಿ ಕೈ ಬಲಪಡಿಸಲು ಮನವಿ; ಜಾರಕಿಹೊಳಿ ಜೊತೆ 30 ನಿಮಿಷ ಸಮಾಲೋಚನೆ

ಅತೃಪ್ತರ ಮನವೊಲಿಕೆಗೆ ವಿಜಯೇಂದ್ರ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಬಗ್ಗೆ ಅಸಮಾಧಾನಗೊಂಡಿದ್ದ, ಕಾಂಗ್ರೆಸ್‌ನತ್ತ ಮುಖ ಮಾಡಿದ್ದ ಅತೃಪ್ತರನ್ನು ಸಮಾಧಾನ ಪಡಿಸುವ ಯತ್ನವನ್ನು ಮುಂದುವರಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ, ಗುರುವಾರ ಮತ್ತೊಂದು ಸುತ್ತಿನ ಕಾರ್ಯಾಚರಣೆ ನಡೆಸಿದರು.

ವಿರೋಧ ಪಕ್ಷದ ನಾಯಕನ ಆಯ್ಕೆಗಾಗಿ ಇತ್ತೀಚೆಗೆ ನಡೆದಿದ್ದ ಶಾಸಕಾಂಗ ಪಕ್ಷದ ಸಭೆಯಿಂದ ಹೊರ ನಡೆದು ತಮ್ಮ ಪ್ರತಿಭಟನೆ ಪ್ರದರ್ಶಿಸಿದ್ದ ರಮೇಶ ಜಾರಕಿಹೊಳಿ ಮನೆಗೆ ಭೇಟಿ ನೀಡಿದ ವಿಜಯೇಂದ್ರ 30 ನಿಮಿಷ ಸಮಾಲೋಚನೆ ನಡೆಸಿದರು. ಪಕ್ಷದ ಕೆಲವರಿಂದ ತಮಗಾಗಿರುವ ಅವಮಾನ ಹಾಗೂ ಅದರಿಂದಾದ ನಷ್ಟದ ಕುರಿತು ಜಾರಕಿಹೊಳಿ ಅವರು ನಿಷ್ಠುರವಾಗಿಯೇ ತಮ್ಮ ಅಭಿಪ್ರಾಯ ಹೇಳಿದರು. ಎಲ್ಲವನ್ನೂ ಸಮಾಧಾನದಿಂದ ಆಲಿಸಿದ ವಿಜಯೇಂದ್ರ, 'ಎಲ್ಲ ತಪ್ಪನ್ನು ಸರಿ ಮಾಡೋಣ. ಲೋಕಸಭೆ ಚುನಾವಣೆಯಲ್ಲಿ ಪ್ರಧಾನಿ ಮೋದಿಯವರ ಕೈ ಬಲಪಡಿಸಲು ಸಹಕಾರ ನೀಡಿ' ಎಂದು ಕೋರಿದ್ದಾಗಿ ಗೊತ್ತಾಗಿದೆ.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, 'ಅವರು ಕೆಲವು ನೋವು ತೋಡಿಕೊಂಡಿದ್ದಾರೆ. ಸಣ್ಣ ಪುಟ್ಟ ಸಮಸ್ಯೆಗಳ ಬಗ್ಗೆಯೂ ಹೇಳಿದ್ದಾರೆ. ನನ್ನ ಮಾತುಗಳಿಂದ ಅವರಿಗೆ ಸಮಾಧಾನವಾಗಿದೆ ಎಂದುಕೊಂಡಿರುವೆ' ಎಂದರು.

'ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ, ವಿ.ಸೋಮಣ್ಣ, ಅರವಿಂದ ಬೆಲ್ಲದ, ಬಸನಗೌಡ ಪಾಟೀಲ ಯತ್ನಾಳ್ ತಮ್ಮ ಅಭಿಪ್ರಾಯಗಳನ್ನು ಭಿನ್ನವಾಗಿ ವ್ಯಕ್ತಪಡಿಸಿರಬಹುದು. ಅಭಿಪ್ರಾಯ ಹೇಳಲು ಅವರದ್ದೇ ಧಾಟಿ ಇದೆ. ಅದನ್ನು ತಪ್ಪಾಗಿ ತಿಳಿದುಕೊಳ್ಳುವುದಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೈಕಮಾಂಡ್ ವಹಿಸಿದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವೆ' ಎಂದು ಹೇಳಿದರು.

'ಯಡಿಯೂರಪ್ಪ ಅವರು ನನ್ನನ್ನು ನೇಮಕಮಾಡಿಲ್ಲ. ಎಲ್ಲ ವರಿಷ್ಠರೂ ಸೇರಿ ನನ್ನನ್ನು ನೇಮಕ ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ನನ್ನನ್ನು ವಿರೋಧಿಸಿದರೆ ಮೋದಿ ಅವರನ್ನು ವಿರೋಧಿಸಿದಂತೆ ಎಂಬ ಹೇಳಿಕೆ ನೀಡಿದ್ದೆ. ದೇಶದ ಹಿತದೃಷ್ಟಿಯಿಂದ ಎಲ್ಲರೂ ಭಿನ್ನಭಿಪ್ರಾಯ ಮರೆತು ಒಟ್ಟಿಗೆ ಸಾಗಬೇಕಿದೆ' ಎಂದರು.

ಅತೃಪ್ತರ ಭೇಟಿ: ಪಕ್ಷದ ಕೆಲವು ನಿಲುವುಗಳಿಂದ ಬೇಸರಗೊಂಡಿದ್ದ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಮಾಜಿ ಶಾಸಕ ಎಸ್.ಐ. ಚಿಕ್ಕನಗೌಡರ ಅವರು ಯಡಿಯೂರಪ್ಪ ಹಾಗೂ ವಿಜಯೇಂದ್ರ ಅವರನ್ನು ಭೇಟಿಯಾದರು. ಕಾಂಗ್ರೆಸ್ ನಾಯಕರು ನಡೆಸುತ್ತಿರುವ 'ಆಪರೇಷನ್ ಹಸ್ತ'ದಲ್ಲಿ ಇವರ ಹೆಸರುಗಳೂ ಇದ್ದವು.


ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ರಮೇಶ್ ಜಾರಕಿಹೊಳಿ ಹೂಗುಚ್ಛ ನೀಡಿ ಅಭಿನಂದಿಸಿದರು

> **ಸೋಮಣ್ಣ ಒಳ್ಳೆಯ ಸಂಘಟಕ. ಅವರ ಜತೆ ಮಾತನಾಡುತ್ತೇವೆ. ಯಾರೊಬ್ಬರೂ ಪಕ್ಷ ಬಿಟ್ಟು ಹೋಗುವುದಿಲ್ಲ. ಎಲ್ಲರೂ ಒಟ್ಟಾಗಿ ಕೆಲಸ ಮಾಡುತ್ತೇವೆ. ಮುಂದೆ ಪಕ್ಷ ಬಹುಮತ ಪಡೆದು ಅಧಿಕಾರಕ್ಕೆ ಬರಲಿದೆ**
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

> **ಬಿಜೆಪಿ ಮುಖಂಡರಾದ ವಿ. ಸೋಮಣ್ಣ ಮತ್ತು ಅರವಿಂದ ಲಿಂಬಾವಳಿ ಅವರು ಕಾಂಗ್ರೆಸ್ ಪಕ್ಷ ಸೇರುವ ಬಗ್ಗೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿ.ಕೆ. ಶಿವಕುಮಾರ್ ಅವರ ಮಟ್ಟದಲ್ಲಿ ಚರ್ಚೆ ನಡೆಯುತ್ತದೆ**
> **ಜಿ. ಪರಮೇಶ್ವರ,** ಗೃಹ ಸಚಿವ

'ಸಾಕಷ್ಟು ನೋವಿದೆ'

'ಸಾಕಷ್ಟು ನೋವಿದೆ. ಅದನ್ನು ಈಗ ಹೇಳಲು ಸಾಧ್ಯವಿಲ್ಲ. ಸುನಿಲ್‌ಕುಮಾರ್, ಯತ್ನಾಳ್ ಅವರ ಜತೆಯೂ ಚರ್ಚಿಸಿದ್ದೇನೆ. ಲೋಕಸಭಾ ಚುನಾವಣಾ ದೃಷ್ಟಿಯಿಂದ ವಿಜಯೇಂದ್ರ ಹಾಗೂ ಆರ್.ಅಶೋಕ ಅವರಿಗೆ ಸಂಪೂರ್ಣ ಸಹಕಾರ ನೀಡಲು ನಿರ್ಧರಿಸಿದ್ದೇವೆ. ಲೋಕಸಭಾ ಚುನಾವಣೆ ಬಳಿಕ ಮತ್ತೆ ಚರ್ಚೆ ಮಾಡಲಾಗುವುದು' ಎಂದು ರಮೇಶ ಜಾರಕಿಹೊಳಿ ಹೇಳಿದರು.

'ಬೆಳಗಾವಿ ಲೋಕಸಭಾ ಚುನಾವಣೆಯಲ್ಲಿ ನಮ್ಮ ಕುಟುಂಬದಿಂದ ಯಾರೂ ಸ್ಪರ್ಧೆ ಮಾಡುವುದಿಲ್ಲ. ಅಭ್ಯರ್ಥಿ ಆಯ್ಕೆ ಕುರಿತು ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

ಅಶೋಕ– ಎಸ್‌ಟಿಎಸ್ ಭೇಟಿ

ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ವಿಧಾನಸೌಧದ ಅಧಿಕೃತ ಕಚೇರಿಯಲ್ಲಿ ಗುರುವಾರ ಪೂಜೆ ಸಲ್ಲಿಸಿ, ಕೆಲಸ ಆರಂಭಿಸಿದರು. ಇತ್ತೀಚಿನ ದಿನಗಳಲ್ಲಿ ಪಕ್ಷದ ಚಟುವಟಿಕೆಯಿಂದ ದೂರ ಉಳಿದಿದ್ದ ಶಾಸಕ ಎಸ್.ಟಿ. ಸೋಮಶೇಖರ್ ಅವರು, ಕಚೇರಿಗೆ ಭೇಟಿ ನೀಡಿ ಶುಭಾಶಯ ಕೋರಿದರು.

'ಈಗ ಯಾವುದೇ ಅಸಮಾಧಾನ ಇದ್ದರೂ ಅದನ್ನು ಅಶೋಕ ಸರಿ ಮಾಡುತ್ತಾರೆ. ಅವರಿಗೆ ಎಲ್ಲ ರೀತಿಯ ಸಹಕಾರ ನೀಡುವೆ' ಎಂದ ಸೋಮಶೇಖರ್, 'ಕಾಂಗ್ರೆಸ್‌ಗೆ ಸೇರುವುದಿಲ್ಲವೇ' ಎಂಬ ಪ್ರಶ್ನೆಗೆ, ನಗೆ ಬೀರಿ ಹೊರಟರು.

'ನನಗ್ಯಾವ ರೀತಿ ಹೊಡೆತ? ಡಿ.6ರ ನಂತರ ಹೇಳುವೆ'


ವಿ. ಸೋಮಣ್ಣ

ಮೈಸೂರು/ ಚಾಮರಾಜನಗರ: 'ಪಕ್ಷದ ಹೈಕಮಾಂಡ್ ಸೂಚನೆಯಂತೆ ತಲೆ ಮೇಲೆ ಹೊತ್ತು ದುಡಿಮೆ ಮಾಡಿದ ಮೇಲೆ ನನಗೆ ಯಾವ ರೀತಿಯ ಹೊಡೆತ ಬಿದ್ದಿತು ಎಂಬುದನ್ನು ಡಿ.6ರ ನಂತರ ವಿವರಿಸುತ್ತೇನೆ' ಎಂದು ಬಿಜೆಪಿ ಮುಖಂಡ ವಿ.ಸೋಮಣ್ಣ ಹೇಳಿದರು.

ಇಲ್ಲಿ ಪತ್ರಕರ್ತರ ಜೊತೆ ಗುರುವಾರ ಮಾತನಾಡಿದ ಅವರು, 'ಪಕ್ಷದಲ್ಲಿನ ಬೆಳವಣಿಗೆಗಳು ಒಂದು ರೀತಿ ಸೋಮನಹಳ್ಳಿ ಮುದುಕಿ ಕಥೆಯಂತಾಗಿದೆ. ನನ್ನ ಕೋಳಿಯಿಂದಲೇ ಬೆಳಗಾಗುತ್ತದೆ ಎಂದು ಕೆಲವರು ತಿಳಿದಿದ್ದಾರೆ. ಆದರೆ, ಅದು ನಡೆಯುವುದಿಲ್ಲ. ಮುದುಕಿ ಯಾರು, ಕೋಳಿ ಯಾರು ಎಂದು ನೀವೇ ನಿರ್ಧರಿಸಿ' ಎಂದರು. 'ವಿವಿಧ ಪಕ್ಷಗಳೊಂದಿಗೆ ವಿಜಯೇಂದ್ರ ಹಾಗೂ ಅಶೋಕ ಹೊಂದಾಣಿಕೆ ಮಾಡಿಕೊಂಡಿದ್ದಾರೆ' ಎಂಬ ಬಿಜೆಪಿ ನಾಯಕ ಅರವಿಂದ ಲಿಂಬಾವಳಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಅವರ ಮಾತಿಗೆ ನನ್ನ ಸಮ್ಮತಿ ಇದೆ. ಮುಂದೆ ಮನಸ್ಸಿನ ಭಾವನೆಗಳನ್ನೆಲ್ಲಾ ಹೇಳಿಕೊಳ್ಳುತ್ತೇನೆ' ಎಂದರು.

'ರಾಜಕಾರಣ ದೊಂಬರಾಟ ಅಲ್ಲ. ಯಾವುದೇ ಮನೆತನಕ್ಕೆ ಸೀಮಿತವಲ್ಲ. ನಾಟಕ ಕಂಪನಿ ಅಲ್ಲ. ಒಳ ಒಪ್ಪಂದಕ್ಕೆ ಸೀಮಿತವಲ್ಲ' ಎಂದು ಮಾರ್ಮಿಕವಾಗಿ ಹೇಳಿದರು. ಬಿ.ಎಸ್. ಯಡಿಯೂರಪ್ಪ ಸಂಪರ್ಕಿಸಿದ್ದಾರೆಯೇ ಎಂಬ ಪ್ರಶ್ನೆಗೆ, 'ನನ್ನನ್ನು ಯಾರೂ ಸಂಪರ್ಕಿಸಿಲ್ಲ. ನಾನೂ ಸಂಪರ್ಕಿಸಿಲ್ಲ. ಆ ರೀತಿಯ ಪ್ರಯತ್ನವಾಗಿಲ್ಲ' ಎಂದು ಉತ್ತರಿಸಿದರು.

'ಕಾಂಗ್ರೆಸ್‌ಗೆ ಹೋಗುವ ವಿಚಾರ ನನ್ನ ತಲೆಯಲ್ಲಿಲ್ಲ' ಎಂದರು.

'64ರಲ್ಲಿ 62 ವಿದ್ಯೆಯಷ್ಟೆ ಅವರಿಗೆ ಗೊತ್ತಿದೆ. ವಿಜಯೇಂದ್ರಗೆ ಸ್ವಂತ ಬುದ್ಧಿ ಇಲ್ಲ; ಬೇರೆಯವರು ಹೇಳುವುದನ್ನೂ ಕೇಳುವುದಿಲ್ಲ' ಎಂದು ಟೀಕಿಸಿದರು.

'ಇನ್ನೊಬ್ಬರ ಬಳಿ ಹೋಗಿ ಹಲ್ಲು ಕಿಸಿದು, ಪಕ್ಷಕ್ಕೆ ಸೇರಿಸಿಕೊಳ್ಳಿ ಎನ್ನುವಂಥ ಗತಿ ಬಂದಿಲ್ಲ. ನಾನು ಬೆಳೆದಿರುವುದು ಜೆ.ಎಚ್. ಪಟೇಲ್, ದೇವೇಗೌಡ, ರಾಮಕೃಷ್ಣ ಹೆಗಡೆ ಗರಡಿಯಲ್ಲಿ. ಸ್ವಾಭಿಮಾನ, ಸಂಸ್ಕಾರದಿಂದ ಬದುಕಿದ್ದೇನೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೇಳಿದ್ದೆ. ಆದರೆ, ಏನಾಗಿದೆ ಎಂಬುದನ್ನು ಮುಂದೆ ಹೇಳುತ್ತೇನೆ' ಎಂದರು.

'ನನ್ನನ್ನು ಯಾರೊಂದಿಗೂ ಹೋಲಿಕೆ ಮಾಡಬೇಡಿ. ಸೋಮಣ್ಣ ನಿಂತ ನೀರಲ್ಲ, ಹರಿಯುವ ನೀರು. ಅಂತರಾಳದ ನೋವನ್ನು ವರಿಷ್ಠರಿಗೆ ತಿಳಿಸಿದ್ದೇನೆ. ಎಲ್ಲೆಲ್ಲಿ ತಪ್ಪಾಗಿದೆ ಎನ್ನುವ ಮಾಹಿತಿಯನ್ನೂ ನೀಡಿದ್ದೇನೆ' ಎಂದರು.

ಶರಣಬಸವ ಸ್ವಾಮೀಜಿಗಳ ಸಂಸ್ಮರಣೋತ್ಸವದಲ್ಲಿ ಸಿದ್ದರಾಮಯ್ಯ ಘೋಷಣೆ

ಸಿದ್ಧರಾಮೇಶ್ವರ ಅಧ್ಯಯನ ಪೀಠ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ವಚನಕಾರ ಸಿದ್ಧರಾಮೇಶ್ವರ ಅಧ್ಯಯನ ಪೀಠ ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಬಾಗಲಕೋಟೆಯಲ್ಲಿ ಗುರುವಾರ ಸಿದ್ಧರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠದ ಆವರಣದಲ್ಲಿ ನಡೆದ ಶರಣಬಸವ ಸ್ವಾಮೀಜಿಗಳ ಸಂಸ್ಮರಣೋತ್ಸವ, ಗದ್ದುಗೆ ಶಿಲಾಮಂಟಪ ಶಿಲಾನ್ಯಾಸ ಹಾಗೂ ಗುರು ಕುಟೀರ ಉದ್ಘಾಟಿಸಿ ಮಾತನಾಡಿದ ಅವರು, 'ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ಒಂದು ಸ್ಥಾನವನ್ನು ಭೋವಿ ಸಮಾಜದವರಿಗೆ ನೀಡಲಾಗುವುದು. ಭೋವಿ ಸಮಾಜದವರು ಶ್ರಮಜೀವಿಗಳು, ಸಮಾಜಕ್ಕೆ ಆರ್ಥಿಕ ಶಕ್ತಿ ತುಂಬುವ ಕೆಲಸವನ್ನು ಸರ್ಕಾರ ಮಾಡಲಿದೆ' ಎಂದು ಭರವಸೆ ನೀಡಿದರು.

'ಸಿದ್ಧರಾಮೇಶ್ವರರು ನೇರ, ನಿಷ್ಠುರ ವಚನಕಾರರಾಗಿದ್ದರು. ವಚನಗಳ ಮೂಲಕ ಸಮಾಜದ ಅಂಕು–ಡೊಂಕು ತಿದ್ದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ದೊಡ್ಡ ಅಧ್ಯಾಯ. ಬಸವಾದಿ ಶರಣರಿಗಿಂತ ಮುಂಚೆ ಧರ್ಮ ಬೋಧನೆ ಕನ್ನಡದಲ್ಲಿ ಆಗುತ್ತಿರಲಿಲ್ಲ. ಜನರ ಭಾಷೆಯಲ್ಲಿ ತಿಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಧರ್ಮ ನಮಗೋಸ್ಕರ ಇದೆ. ಧರ್ಮಕ್ಕೋಸ್ಕರ ನಾವಲ್ಲ' ಎಂದು ಹೇಳಿದರು.

'ನುಡಿದಂತೆ ನಡೆಯುತ್ತೇನೆ. ಹೇಳಿದ್ದನ್ನು ಮಾಡಿಯೇ ತೀರುತ್ತೇವೆ. ಅಲ್ಲವೇನಪ್ಪಾ?' ಎಂದು ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿ ಅವರನ್ನು ಕೇಳಿದರು. ನಂತರ ಮಾತು ಮುಂದುವರೆಸಿ, 'ನೀನು ಹೇಳದಿರಬಹುದು. ಜನರಿಗೆ ಗೊತ್ತಿದೆ. ಎಲ್ಲರಿಗೂ ನ್ಯಾಯ ಸಿಗಬೇಕು. ಅಧಿಕಾರ ಹಂಚಿಕೆಯಾಗಬೇಕು. ಸಮ ಸಮಾಜ ನಿರ್ಮಾಣವಾಗಬೇಕು' ಎಂದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮಾತನಾಡಿ, 'ಬಸವಣ್ಣನ ನಾಡಿನಲ್ಲಿ ಬಸವಣ್ಣನ ವಿಚಾರ ಜಾರಿಯ ಸರ್ಕಾರ ನೋಡಲು ಸಿಗುವುದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ ಮಾತ್ರ. ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಬಗ್ಗೆ ಅವರು ಚಿಂತನೆ ನಡೆಸುತ್ತಾರೆ. ರಾಜ್ಯದಲ್ಲಿ ಜಾರಿಗೊಳಿಸಿದ್ದ ಗ್ಯಾರಂಟಿ ಯೋಜನೆಗಳು ಈಗ ದೇಶಕ್ಕೇ ಮಾದರಿಯಾಗಿವೆ. ಅನುಭವ ಮಂಟಪ ನಿರ್ಮಾಣ, ಸಿದ್ಧರಾಮೇಶ್ವರರ ಸಾಂಸ್ಕೃತಿಕ ಅಧ್ಯಯನ ಕೇಂದ್ರಕ್ಕೆ ಸರ್ಕಾರ ಅಗತ್ಯ ನೆರವು ನೀಡಬೇಕು' ಎಂದರು.

ಭೋವಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಅರವಿಂದ ಲಿಂಬಾವಳಿ, ಸಚಿವರಾದ ಆರ್.ಬಿ. ತಿಮ್ಮಾಪುರ, ಶಿವರಾಜ ತಂಗಡಗಿ, ಶಾಸಕರಾದ ಮಾನಪ್ಪ ವಜ್ಜಲ, ವಿಜಯಾನಂದ ಕಾಶಪ್ಪನವರ, ವೆಂಕಟೇಶ, ಭೀಮಸೇನ ಚಿಮ್ಮನಕಟ್ಟಿ, ಸಂಸದ ಪಿ.ಸಿ. ಗದ್ದಿಗೌಡರ ಇದ್ದರು.


ಬಾಗಲಕೋಟೆಯಲ್ಲಿ ಗುರುವಾರ ಭೋವಿ ಗುರುಪೀಠದ ಆವರಣದಲ್ಲಿ ನಡೆದ ಶರಣಬಸವ ಸ್ವಾಮೀಜಿ ಗದ್ದುಗೆ ಶಿಲಾನ್ಯಾಸ ಹಾಗೂ ಗುರು ಕುಟೀರ ಉದ್ಘಾಟನೆ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸುತ್ತಿಗೆಯಿಂದ ಕಲ್ಲು ಒಡೆದು ಉದ್ಘಾಟಿಸಿದರು. ಸಚಿವರಾದ ಆರ್‌.ಬಿ. ತಿಮ್ಮಾಪುರ, ಶಿವರಾಜ ತಂಗಡಗಿ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಭೋವಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ಅರವಿಂದ ಲಿಂಬಾವಳಿ ಇದ್ದಾರೆ –ಪ್ರಜಾವಾಣಿ ಚಿತ್ರ

ಟಿಕೆಟ್ ಬಗ್ಗೆ ಹೇಳಲಾಗಲ್ಲ


ಬಾಗಲಕೋಟೆ: ಚಿತ್ರದುರ್ಗದ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಅನ್ನು ಇಂಥವರಿಗೆ ನೀಡುತ್ತೇವೆ ಎಂದು ಹೇಳಲಾಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸಚಿವ ಶಿವರಾಜ ತಂಗಡಗಿ ಮಾತನಾಡುತ್ತಾ, ಒಂದು ಲೋಕಸಭಾ ಕ್ಷೇತ್ರಕ್ಕೆ ಟಿಕೆಟ್ ನೀಡಬೇಕು ಎಂದು ಮನವಿ ಮಾಡಿದ್ದರು. ಸಿದ್ದರಾಮಯ್ಯ ಭಾಷಣದಲ್ಲಿ ಉಳಿದ ಬೇಡಿಕೆ ಈಡೇರಿಸುವುದಾಗಿ ಹೇಳಿದರೂ, ಲೋಕಸಭಾ ಟಿಕೆಟ್ ಬಗ್ಗೆ ಪ್ರಸ್ತಾಪಿಸಲಿಲ್ಲ.

ಆಗ ಸಚಿವ ತಂಗಡಗಿ ಬಂದು, ಚಿತ್ರದುರ್ಗ ಟಿಕೆಟ್ ಅನ್ನು ನೀಡುವುದಾಗಿ ಘೋಷಿಸಬೇಕು ಎಂದು ಕೋರಿದರು. ಹಾಗೆಲ್ಲ, ಇಲ್ಲಿಯೇ ಹೇಳಲು ಆಗುವುದಿಲ್ಲ. ಪಕ್ಷದಲ್ಲಿ ಚರ್ಚೆ ಮಾಡಬೇಕಾಗುತ್ತದೆ ಎಂದರು.

ನಿಧನ ವಾರ್ತೆ

ವೆಂಕಟಸುಬ್ಬು



ಚಿತ್ರದುರ್ಗ: ಹಿರಿಯ ಪತ್ರಕರ್ತ, ಚಿತ್ರದುರ್ಗದ ಧರ್ಮಶಾಲಾ ರಸ್ತೆಯ ನಿವಾಸಿಯಾಗಿದ್ದ ವೆಂಕಟಸುಬ್ಬು ಮೋಕ್ಷಗುಂಡಂ (73) ಗುರುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಚಳ್ಳಕೆರೆಯಲ್ಲಿರುವ ಪುತ್ರನ ಮನೆಯಲ್ಲಿ ಅವರು ವಾಸವಾಗಿದ್ದರು. ಚಳ್ಳಕೆರೆಯ ಮುಕ್ತಿಧಾಮದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು.

10.44 ಟಿಎಂಸಿ ಅಡಿ ನೀರು ಬಿಡಲು ಶಿಫಾರಸು

ಒಂದನೇ ಪುಟದಿಂದ

ಹಾರಂಗಿ, ಹೇಮಾವತಿ, ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಲ್ಲಿ ಕಳೆದ ವರ್ಷ ನವೆಂಬರ್ 23ರಂದು 96.82 ಟಿಎಂಸಿ ಅಡಿ ನೀರಿತ್ತು. ಆದರೆ, ಈ ವರ್ಷ 56 ಟಿಎಂಸಿ ನೀರು ಇದೆ. ಒಳಹರಿವಿನ ಪ್ರಮಾಣ 2,230 ಕ್ಯೂಸೆಕ್ ಇದ್ದರೆ, ಹೊರಹರಿವು 7,840 ಕ್ಯೂಸೆಕ್‌ನಷ್ಟಿದೆ. ಬೆಂಗಳೂರಿನ ಕುಡಿಯುವ ನೀರಿನ ಬೇಡಿಕೆ ಪೂರೈಸಲು ಜೂನ್ ತನಕ 12 ಟಿಎಂಸಿ ಅಡಿ ನೀರು ಬೇಕಿದೆ.

ರಾಜ್ಯದ ಮಳೆ ಕೊರತೆ ಹಾಗೂ ಬರ ಪರಿಸ್ಥಿತಿಯನ್ನು ಗಮನಿಸಿ ಸಮಿತಿಯು ಕಳೆದ ಕೆಲವು ಸಭೆಗಳಲ್ಲಿ ಕರ್ನಾಟಕದ ವಾದಕ್ಕೆ ಮನ್ನಣೆ ನೀಡಿತ್ತು. ಆದರೆ, ಗುರುವಾರದ ಸಭೆಯಲ್ಲಿ ಹಾಗಾಗಲಿಲ್ಲ. ಸುಪ್ರೀಂ ಕೋರ್ಟ್ ಆದೇಶ ಪಾಲನೆಗೆ ಶಿಫಾರಸು ಮಾಡಿದ್ದರಿಂದ ರಾಜ್ಯಕ್ಕೆ ಭಾರಿ ಹಿನ್ನಡೆಯಾಗಿದೆ.

ಸಮಿತಿಯ ಅಧ್ಯಕ್ಷ ವಿನಿತ್ ಗುಪ್ತ ಅಧ್ಯಕ್ಷತೆಯಲ್ಲಿ ಆನ್‌ಲೈನ್ ಮೂಲಕ ನಡೆದ ಸಮಿತಿಯ 90ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಭಾಗಿಯಾದರು.

'ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ನ.22ರ ವರೆಗೆ ಸಂಚಿತ ಒಳಹರಿವಿನ ಕೊರತೆಯು ಶೇ 52ರಷ್ಟು ಇದೆ. ಹವಾಮಾನ ಇಲಾಖೆಯ ಪ್ರಕಾರ, ಅಕ್ಟೋಬರ್ 1ರಿಂದ ತಮಿಳುನಾಡಿನಲ್ಲಿ ಉತ್ತಮ ಮಳೆಯಾಗಿದೆ. ತಮಿಳುನಾಡಿನ ಕುರುವೈ ಬೆಳೆ ಸೆಪ್ಟೆಂಬರ್ ಅಂತ್ಯದಲ್ಲಿ ಕಟಾವು ಆಗಿತ್ತು. ಹೀಗಾಗಿ, ಈ ಬೆಳೆಗೆ ನೀರಿನ ಅವಶ್ಯಕತೆ ಇಲ್ಲ. ಸಾಂಬಾ ಬೆಳೆಯು ಕೊಯಿಲು ಹಂತ ತಲುಪಿದ್ದು, ಡಿಸೆಂಬರ್ ಮೊದಲ ವಾರ ಕೊಯಿಲು ಪೂರ್ಣಗೊಳ್ಳಲಿದೆ' ಎಂದು ಕರ್ನಾಟಕದ ಅಧಿಕಾರಿಗಳು ಗಮನ ಸೆಳೆದರು.

ರಾಜ್ಯದ ನಾಲ್ಕು ಜಲಾಶಯಗಳಿಗೆ ಒಳಹರಿವು ಸ್ಥಗಿತಗೊಂಡಿದೆ. ಈ ಜಲಾಶಯಗಳಲ್ಲಿರುವ ನೀರು ನೀರಾವರಿ, ಕುಡಿಯಲು, ಇತರ ಅಗತ್ಯ ಪೂರೈಸಲು ಸಾಕಾಗುವುದಿಲ್ಲ. ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ. ಈ ಸಂಬಂಧ ಸಮಿತಿಯು ನಿರ್ದೇಶನ ನೀಡಬಾರದು' ಎಂದು ಅವರು ಒತ್ತಾಯಿಸಿದರು.

'ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಕರ್ನಾಟಕವು ಈ ವರ್ಷ ಇಲ್ಲಿಯವರೆಗೆ 155 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕಿತ್ತು. ಆದರೆ, ಹರಿಸಿರುವುದು 63 ಟಿಎಂಸಿ ಅಡಿಯಷ್ಟು. ಸಂಕಷ್ಟ ಸೂತ್ರವನ್ನು ಅನ್ವಯಿಸಿದರೂ 71 ಟಿಎಂಸಿ ನೀರು ಹರಿಸಬೇಕಿತ್ತು. ಈ ಸೂತ್ರದ ಪ್ರಕಾರ, 7 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕಿದೆ. ಹೀಗಾಗಿ, ಮುಂದಿನ 30 ದಿನ ಕರ್ನಾಟಕವು ಪ್ರತಿದಿನವೂ 5,000 ಕ್ಯೂಸೆಕ್ ನೀರು ಬಿಡಬೇಕು' ಎಂದು ತಮಿಳುನಾಡಿನ ಅಧಿಕಾರಿಗಳು ಪಟ್ಟು ಹಿಡಿದರು. ಇದಕ್ಕೆ ಕರ್ನಾಟಕದ ಅಧಿಕಾರಿಗಳು ಒಪ್ಪಲಿಲ್ಲ.

ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ನವೆಂಬರ್ ಉಳಿದ ಅವಧಿ ಹಾಗೂ ಡಿಸೆಂಬರ್ ತಿಂಗಳಲ್ಲಿ ನಿಗದಿತ ಪ್ರಮಾಣದ ಹರಿವನ್ನು ಕರ್ನಾಟಕವು ಖಚಿತಪಡಿಸಬೇಕು ಎಂದು ಸಮಿತಿಯು ಶಿಫಾರಸು ಮಾಡಿತು.

'4 ಜಲಾಶಯಗಳಿಂದ ಹೊರಹರಿವು ಸಂಪೂರ್ಣ ನಿಂತಿದೆ. ಆದರೆ, ಈ ಜಲಾಶಯಗಳ ಕೆಳ ಪ್ರದೇಶದಲ್ಲಿ (ಅಂದರೆ ಬಿಳಿಗುಂಡ್ಲುವರೆಗೆ) ಆಗಾಗ ಮಳೆಯಾಗುತ್ತಿದೆ. ಇದರಿಂದ, ತಮಿಳುನಾಡಿಗೆ ಪ್ರತಿದಿನ 3 ಸಾವಿರ ಕ್ಯೂಸೆಕ್‌ನಷ್ಟು ನೀರು ಹೋಗುತ್ತಿದೆ. ಇನ್ನೂ ನಾಲ್ಕೈದು ದಿನ ಮಳೆಯಾಗುವ ಮುನ್ಸೂಚನೆ ಇದೆ. ತಮಿಳುನಾಡಿಗೆ ಸಹಜವಾಗಿ ನೀರು ಹರಿದುಹೋಗಲಿದೆ. ಜಲಾಶಯಗಳಿಂದ ನೀರು ಹರಿಸುವ ಪ್ರಮೇಯ ಎದುರಾಗುವುದಿಲ್ಲ' ಎಂದು ಜಲಸಂಪನ್ಮೂಲ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

ಜಲಾಶಯಗಳ ಸ್ಥಿತಿಗತಿ

ಜಲಾಶಯ	ಜಲಾಶಯದ ಸಾಮರ್ಥ್ಯ (ಟಿಎಂಸಿ ಅಡಿ)	ಈಗಿರುವ ನೀರು (ಟಿಎಂಸಿ ಅಡಿ)	ಒಳಹರಿವು (ಕ್ಯೂಸೆಕ್)	ಹೊರಹರಿವು (ಕ್ಯೂಸೆಕ್)
ಹಾರಂಗಿ	8.50	4.50	90	1,000
ಹೇಮಾವತಿ	37.10	15.80	469	1,300
ಕೆಆರ್‌ಎಸ್	49.45	22.11	1,450	3,840
ಕಬಿನಿ	19.52	13.63	221	1,700

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತರಾತುರಿಯಿಂದ ಹೆಚ್ಚಿರುವ ಸಂಶಯ: ಆರ್‌. ಅಶೋಕ

‘ವರದಿ ತಿರಸ್ಕರಿಸಿ, ಮರು ಸಮೀಕ್ಷೆ ನಡೆಸಿ’

ಪ್ರಜಾವಾಣಿ ವಾರ್ತೆ



ಆರ್‌. ಅಶೋಕ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ವರದಿ ಸ್ವೀಕರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾತುರಿ ಮಾಡುತ್ತಿರುವುದು ಸಂಶಯಕ್ಕೆ ದಾರಿ ಮಾಡಿಕೊಟ್ಟಿದೆ. ದಶಕದ ಹಿಂದಿನ ಅವೈಜ್ಞಾನಿಕ ವರದಿ ತಿರಸ್ಕರಿಸಿ, ಮರು ಸಮೀಕ್ಷೆ ನಡೆಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಒತ್ತಾಯಿಸಿದರು.

ವಿಧಾನಸೌಧದಲ್ಲಿ ಗುರುವಾರ ನೂತನ ಕಚೇರಿಯ ಪೂಜೆ ನೆರವೇರಿಸಿದ ನಂತರ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಎಚ್‌.ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ವರದಿಯ ನೈಜತೆ ಬಗ್ಗೆ ಅನುಮಾನಗಳಿವೆ. ಪ್ರತಿ ಮನೆಗೂ ತೆರಳದೇ ವರದಿ ಸಿದ್ಧಪಡಿಸಲಾಗಿದೆ ಎಂದು ಸಾರ್ವಜನಿಕರೇ ಆರೋಪಿಸಿದ್ದಾರೆ. ಹತ್ತು ವರ್ಷಗಳ ಹಿಂದಿಗೂ, ಈಗಿನ ಜನಸಂಖ್ಯೆಗೂ ಸಾಕಷ್ಟು ವ್ಯತ್ಯಾಸವಿದೆ. ಈಗ ವರದಿಯ ಮೂಲ ಪ್ರತಿಯೇ ನಾಪತ್ತೆಯಾಗಿದೆ. ಅದಕ್ಕೆ ಕಾರ್ಯದರ್ಶಿಯ ಸಹಿಯೇ ಇಲ್ಲ ಎಂದು ದೂರಲಾಗಿದೆ. ಅಂತಹ ವರದಿಯನ್ನು ಲೋಕಸಭಾ ಚುನಾವಣೆಯ ಸಮಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ಓಲೈಕೆಗಾಗಿ ಸ್ವೀಕರಿಸಲು ಮುಖ್ಯಮಂತ್ರಿ ಮುಂದಾಗಿದ್ದಾರೆ ಎಂದು ದೂರಿದರು.

ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ನೀಡಬೇಕು ಎಂಬ ವಿಷಯದಲ್ಲಿ ಬಿಜೆಪಿಗೂ ಸಹಮತವಿದೆ. ಆದರೆ, ಅವೈಜ್ಞಾನಿಕ, ವಿವಾದಿತ ವರದಿ ಆಧರಿಸಿ ಕ್ರಮಕ್ಕೆ ಮುಂದಾದರೆ ಪಕ್ಷ ವಿರೋಧಿಸುತ್ತದೆ. ವಿರೋಧ ವ್ಯಕ್ತಪಡಿಸಿರುವ ವಿವಿಧ ಸಮುದಾಯಗಳ ಮುಖಂಡರು, ಧರ್ಮಗುರುಗಳನ್ನು ಕರೆದು ಮಾತನಾಡಬೇಕು. ಹಿಂದೆ ವೀರಶೈವ ಲಿಂಗಾಯತ ಧರ್ಮ ಒಡೆಯಲು ಮುಂದಾಗಿದ್ದರ ಪರಿಣಾಮ ನೆನಪು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯಾರದೋ ಮನೆಯಲ್ಲಿ ಕುಳಿತು ರೂಪಿಸಿದ ಅವೈಜ್ಞಾನಿಕ ವರದಿ ತಿರಸ್ಕರಿಸಿ, ಮರುಸಮೀಕ್ಷೆ ನಡೆಸದೇ ಇದ್ದರೆ ಪಕ್ಷ ರಾಜ್ಯದಾದ್ಯಂತ ಹೋರಾಟ ನಡೆಸಲಿದೆ ಎಂದರು.

‘ಮೂಲಪ್ರತಿ ಕಳೆದಿಲ್ಲ’



ಜಿ.ಪರಮೇಶ್ವರ

ತುಮಕೂರು: ‘ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿದ್ದ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ಮೂಲಪ್ರತಿ ಕಾಣೆಯಾಗಿದೆ ಎಂಬುದೆಲ್ಲ ಸುಳ್ಳು’ ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಜಾತಿ ಗಣತಿ ವರದಿ ಸಲ್ಲಿಸಲು ಆಯೋಗಕ್ಕೆ ಸಮಯ ನೀಡಲಾಗಿದ್ದು, ಆಯೋಗದ ಅಧ್ಯಕ್ಷರ ಅಧಿಕಾರ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

ಜಾತಿ ಗಣತಿ ವರದಿ ಸಲ್ಲಿಕೆಯಾಗಿಲ್ಲ. ಅದರಲ್ಲಿ ಏನಿದೆ ಎಂಬುದು ಗೊತ್ತಿಲ್ಲ. ವರದಿ ಕೊಟ್ಟ ನಂತರ ಏನು ಮಾಡಬೇಕು ಎಂಬ ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ ಎಂದರು. ವರದಿ ಸಲ್ಲಿಕೆಯಾಗುವುದಕ್ಕೂ ಮೊದಲೇ ವರದಿಯಲ್ಲಿ ಏನಿದೆ ಎಂಬುದು ಗೊತ್ತಿಲ್ಲದೆ ಈ ರೀತಿ ಚರ್ಚೆ ಮಾಡುವುದು ಎಷ್ಟು ಸರಿ’ ಎಂದು ಅವರು ಪ್ರಶ್ನಿಸಿದರು.

‘ವರದಿಗೂ ಮನ್ನವೇ ಸುಮ್ಮನೆ ಚರ್ಚೆ ನಡೆದಿವೆ. ಪರ, ವಿರೋಧ ಅಭಿಪ್ರಾಯ ಕೇಳಿ ಬರುತ್ತಿವೆ. ಇದು ನೀರಿನೊಳಗೆ ಎಮ್ಮೆ ನಿಲ್ಲಿಸಿ ಹಾಲು ಕರೆದಂತೆ. ಅದು ಕೋಣನೊ, ಎಮ್ಮೆನೊ ಯಾರಿಗೆ ಗೊತ್ತು? ಬಿಹಾರದಲ್ಲಿ ಜಾತಿ ಗಣತಿ ವರದಿ ಬಿಡುಗಡೆ ಮಾಡಲಾಗಿದ್ದು, ಅಲ್ಲಿ ಆಕಾಶ ಕಳಚಿ ಬಿದ್ದಿದೆಯೆ’ ಎಂದು ಅವರು ಪ್ರಶ್ನಿಸಿದರು.


ಯಾರಿಗೂ ಅನ್ಯಾಯವಾಗದಂತೆ ತೀರ್ಮಾನ: ಕೆ.ಎಚ್‌. ಮುನಿಯಪ್ಪ



ಕೋಲಾರ: ಜಾತಿ ಜನಗಣತಿಗೆ ಸಂಬಂಧಿಸಿದ ಎಚ್‌. ಕಾಂತರಾಜ ವರದಿ ಜಾರಿ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಯಾವುದೇ ವರ್ಗಕ್ಕೆ ಅನ್ಯಾಯವಾಗದಂತೆ ತೀರ್ಮಾನ ಕೈಗೊಳ್ಳಲಿದೆ ಎಂದು ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ ತಿಳಿಸಿದ್ದಾರೆ.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಂತರಾಜ ವರದಿ ಜಾರಿ ಮಾಡಬೇಕೆಂಬ ಅಭಿಪ್ರಾಯ ಇದೆ. ಆದರೆ, ಇದರಿಂದ ಯಾವುದೇ ವರ್ಗಕ್ಕೆ ಅನ್ಯಾಯವಾಗಬಾರದು. ನ್ಯಾಯಸಮ್ಮತವಾಗಿ ಜನಸಂಖ್ಯೆಗೆ ಅನುಗುಣವಾಗಿ ಅವಕಾಶ ಸಿಗಬೇಕು.ಕಾಂತರಾಜ ವರದಿ ಇನ್ನೂ ಸಚಿವ ಸಂಪುಟದ ಮುಂದೆ ಬಂದಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡೇ ಜಾರಿ ಮಾಡಬೇಕಾಗುತ್ತದೆ. ರಾಜ್ಯದಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಚರ್ಚಿಸದೆ ತೀರ್ಮಾನಕ್ಕೆ ಬರಲು ಆಗದು’ ಎಂದರು.

‘ರಾಜಕೀಯ ಲಾಭಕ್ಕೆ ವರದಿ ಪ್ರಸ್ತಾಪ’



‘ಲೋಕಸಭೆ ಚುನಾವಣೆ ಹತ್ತಿರ ಬರುತ್ತಿರುವುದರಿಂದ ರಾಜಕೀಯ ಲಾಭ ಪಡೆಯುವುದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಗಣತಿ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಹಿಂದುಳಿದ ವರ್ಗಗಳ ಆಯೋಗ ಸರಿಯಾಗಿ ಸಮೀಕ್ಷೆ ನಡೆಸಿಲ್ಲ. ಅಧ್ಯಕ್ಷರು ಸದಸ್ಯರ ಮಧ್ಯೆ ಸಮನ್ವಯ ಇರಲಿಲ್ಲ, ರಾಜಕೀಯ ಹಸ್ತಕ್ಷೇಪವೂ ಇತ್ತು. ಆಗಲೂ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಸುಮ್ಮನಿದ್ದರಲ್ಲದೇ, ವರದಿಯನ್ನು ಪಡೆಯಲಿಲ್ಲ. ಈಗ ಚುನಾವಣೆ ಕಾರಣಕ್ಕೆ ಇದರ ಪ್ರಸ್ತಾಪ ಮಾಡುತ್ತಿದ್ದಾರೆ. ವರದಿ ಸ್ವೀಕರಿಸಿದ ಮೇಲೆ ನಮ್ಮ ತೀರ್ಮಾನ ತಿಳಿಸುತ್ತೇವೆ’ ಎಂದರು.

ನಾವು ನಡೆಸಿದ್ದು ನೈಜ, ವೈಜ್ಞಾನಿಕ ಸಮೀಕ್ಷೆ: ಕಾಂತರಾಜ

‘ಮೂಲಪ್ರತಿ ನಾಪತ್ತೆ: ಗೊತ್ತಿಲ್ಲ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ದತ್ತಾಂಶ ಆಧರಿಸಿ 2015ರಲ್ಲಿ ಸಿದ್ಧಪಡಿಸಲಾಗಿದ್ದ ವರದಿಯ ಮೂಲಪ್ರತಿ ಆಯೋಗದ ಕಚೇರಿಯಿಂದ ನಾಪತ್ತೆಯಾಗಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ’ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷರೂ ಆದ ಹೈಕೋರ್ಟ್ ವಕೀಲ ಎಚ್‌. ಕಾಂತರಾಜ ತಿಳಿಸಿದರು.

ಗುರುವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ನಾನು ವರದಿ ಕೊಟ್ಟಿದ್ದು 2019ರಲ್ಲಿ. ಆಗ ಮೂಲಪ್ರತಿ ಇತ್ತು. ಈಗ ಇಲ್ಲ ಅನ್ನೋದು ನನಗೆ ಗೊತ್ತಿಲ್ಲ. ಈಗ ನಾನು ಹೊರಗೆ ಇರುವುದರಿಂದ ಈ ಬಗ್ಗೆ ಮಾತನಾಡುವುದು ಸರಿಯಲ್ಲ’ ಎಂದರು.

‘ಇದು ಜಾತಿಗಣತಿ ಅಲ್ಲ. ಸಾಮಾಜಿಕ ಮತ್ತು ಶೈಕ್ಷಣಿಕ ವರದಿ’ ಎಂದು ಪ್ರತಿಪಾದಿಸಿದ ಅವರು, ‘ಸಮೀಕ್ಷೆಯಲ್ಲಿ 40 ದಿನಗಳ ಕಾಲ ಮನೆಮನೆಗೆ ತೆರಳಿ ಪ್ರತಿಯೊಬ್ಬರ ಜಾತಿ, ಲಿಂಗ, ಧರ್ಮ, ಅಸ್ತಿ-ಪಾಸ್ತಿಗೆ ಸೇರಿದ ವಿವರಗಳಿಗಾಗಿ 55 ಬಗೆಯ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಲಾಗಿದೆ. ನಂತರ ಕೂಲಂಕಷವಾಗಿ ಅಂಕಿ ಅಂಶಗಳ ಸಮೇತ ವರದಿ ಸಿದ್ಧಪಡಿಸಲಾಗಿದೆ’ ಎಂದು ವಿವರ ನೀಡಿದರು.

‘ವರದಿಗೆ ಒಕ್ಕಲಿಗರು-ಲಿಂಗಾಯತರು ವಿರೋಧ ಮಾಡುವ ಮೊದಲು ವರದಿ ನೋಡಲಿ. ಸರಿ ಇಲ್ಲ ಎಂದು ಕಂಡು ಬಂದರೆ ಆಮೇಲೆ ವಿರೋಧ ಮಾಡಲಿ’ ಎಂದು ಸಲಹೆ ನೀಡಿದರು.

‘ನಾನು ಕೊಟ್ಟ ವರದಿ ನೈಜವಾಗಿ ಇದೆ. ವೈಜ್ಞಾನಿಕವಾಗಿ ಇದೆ. ವರದಿ ನೋಡದೇ ಅವೈಜ್ಞಾನಿಕ ಅನ್ನೋದು ಸರಿಯಲ್ಲ. ವರದಿ ಈಗ ಸರ್ಕಾರದ ಆಸ್ತಿ. ಸರ್ಕಾರ ವರದಿ ನೋಡಿದ ಬಳಿಕ ಮುಂದಿನ ತೀರ್ಮಾನ ಮಾಡಲಿ. ವರದಿ ನೋಡಿದ ನಂತರ ಅದರಲ್ಲಿ ತಪ್ಪು ಇದೆ ಎಂದರೆ ನಾನು ಒಪ್ಪಿಕೊಳ್ತೀನಿ’ ಎಂದರು.

‘ಒಂದು ಸಂಪುಟಕ್ಕಷ್ಟೇ ಸಹಿ ಇಲ್ಲ’

‘ವರದಿಗೆ ಕಾರ್ಯದರ್ಶಿಯ ಸಹಿ ಇಲ್ಲ ಎಂಬುದು ಸರಿಯಲ್ಲ. ಅದರಲ್ಲಿ ಅನೇಕ ಸಂಪುಟಗಳಿವೆ. ಒಂದು ಸಂಪುಟಕ್ಕೆ ಮಾತ್ರವೇ ಕಾರ್ಯದರ್ಶಿ ಸಹಿ ಹಾಕಿಲ್ಲ’ ಎಂದು ಕಾಂತರಾಜ ಸ್ಪಷ್ಟಪಡಿಸಿದರು.

‘ಜಾತಿ ಗಣತಿ: ಸರ್ಕಾರದಿಂದಲೇ ವಿವಾದ’

ಪ್ರಜಾವಾಣಿ ವಾರ್ತೆ



ಭಗವಂತ ಖೂಬಾ

ಮೈಸೂರು: ‘ಜಾತಿ ಜನಗಣತಿ ವಿಚಾರದಲ್ಲಿ ರಾಜ್ಯ ಸರ್ಕಾರವೇ ವಿವಾದ ಹುಟ್ಟು ಹಾಕಿ, ಪರ–ವಿರೋಧ ಚರ್ಚೆ ನಡೆಸುತ್ತಿದೆ’ ಎಂದು ಕೇಂದ್ರ ಸಚಿವ ಭಗವಂತ ಖೂಬಾ ದೂರಿದರು.

ಇಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಕಾಂತರಾಜ ಆಯೋಗದ ವರದಿ ಜಾರಿ ವಿಚಾರದಲ್ಲಿ ಪಕ್ಷದ ನಿಲುವಿಗೆ ಬದ್ಧರಾಗಿದ್ದೇವೆ. ವೈಯಕ್ತಿಕ ಅಭಿಪ್ರಾಯ ಹೇಳುವುದಿಲ್ಲ’ ಎಂದರು.

‘ಸಿದ್ದರಾಮಯ್ಯ ಸರ್ಕಾರ ಸುಳ್ಳು ಗ್ಯಾರಂಟಿಗಳ ಭರವಸೆ ನೀಡಿ ಆರು ತಿಂಗಳಾಯಿತು. ಅವರ ಯೋಜನೆಗಳು ಸಂಪೂರ್ಣ ಜಾರಿಯಾಗಿಲ್ಲ. ಅಭಿವೃದ್ಧಿಗೆ ಹಣ ಇಲ್ಲ ಎನ್ನುವ ರಾಜ್ಯ ಸರ್ಕಾರ ಬೊಕ್ಕಸ ಲೂಟಿಯಲ್ಲೇ ಹೆಚ್ಚು ಬ್ಯುಸಿಯಾಗಿದೆ. ಒಂದೇ ತಿಂಗಳಲ್ಲಿ ಜನಪ್ರಿಯತೆ ಕಳೆದುಕೊಂಡಿದೆ’ ಎಂದು ಆರೋಪಿಸಿದರು.

‘ಪ್ರಧಾನಿ ನರೇಂದ್ರ ಮೋದಿ ಬಗ್ಗೆ ರಾಹುಲ್ ಗಾಂಧಿ ಹೇಳಿಕೆಯು ಕಾಂಗ್ರೆಸ್ ನೇತಾರರ ಮಾನಸಿಕತೆ ತೋರಿಸುತ್ತದೆ. ಅಧಿಕಾರಕ್ಕಾಗಿ ಯಾರನ್ನು ಎಷ್ಟು ಕೀಳುಮಟ್ಟಕ್ಕೆ ಇಳಿದು ಟೀಕಿಸುವ ಸಂಸ್ಕೃತಿ ಕಾಂಗ್ರೆಸ್‌ನವರದು. ರಾಹುಲ್ ಗಾಂಧಿಗೆ ಬುದ್ಧಿ ಇದೆಯೇ? ಮೋದಿಯಂತಹ ವಿಶ್ವದ ಪ್ರಭಾವಿ ನಾಯಕರ ವಿಚಾರದಲ್ಲಿ ಹಗುರವಾಗಿ ಮಾತನಾಡುವುದು ಅವರ ಯೋಗ್ಯತೆಯನ್ನು ತೋರಿಸುತ್ತದೆ. ಅದಕ್ಕಾಗಿಯೇ ಪ್ರತಿ ಚುನಾವಣೆಯಲ್ಲೂ ಕಾಂಗ್ರೆಸ್‌ನ ಸ್ಥಿತಿ ಕ್ಷೀಣಿಸುತ್ತಲೇ ಇದೆ’ ಎಂದರು.

‘ಸದಾಶಿವ ಆಯೋಗದ ವರದಿ ಜಾರಿ ಬೇಡ’

ಪ್ರಜಾವಾಣಿ ವಾರ್ತೆ



ಅರವಿಂದ ಲಿಂಬಾವಳಿ

ಬಾಗಲಕೋಟೆ: ‘ಅವೈಜ್ಞಾನಿಕವಾಗಿರುವ ಸದಾಶಿವ ಆಯೋಗದ ವರದಿ ಜಾರಿಗೊಳಿಸಬಾರದು’ ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದರು.

ಬಾಗಲಕೋಟೆಯಲ್ಲಿ ಗುರುವಾರ ಭೋವಿ ಗುರುಪೀಠದ ಆವರಣದಲ್ಲಿ ನಡೆದ ಶರಣಬಸವ ಸ್ವಾಮೀಜಿಗಳ ಸಂಸ್ಮರಣೋತ್ಸವ, ಗದ್ದುಗೆ ಶಿಲಾಮಂಟಪ ಶಿಲಾನ್ಯಾಸ ಹಾಗೂ ಗುರು ಕುಟೀರ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಬೋವಿ, ಎಡಗೈ–ಬಲಗೈ, ಕೊರಮ ಕೊರಚ ಎಲ್ಲರೂ ಒಂದೇ. ಎಲ್ಲರೂ ಸೇರಿಕೊಂಡು ಸಾಗೋಣ’ ಎಂದು ವೇದಿಕೆ ಮೇಲಿದ್ದ ಸಚಿವ ಆರ್‌.ಬಿ. ತಿಮ್ಮಾಪುರ ಅವರತ್ತ ನೋಡಿ ಹೇಳಿದರು.

ಆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿದರು. ಆದರೆ, ತಮ್ಮ ಭಾಷಣದಲ್ಲಿ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

‘ರಾಜಕೀಯ ಅಸ್ತಿತ್ವಕ್ಕಾಗಿ ಟೀಕೆ ಸರಿಯಲ್ಲ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬಾಗಲಕೋಟೆ: ‘ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ಜಾತಿಗಣತಿ ವರದಿಯಲ್ಲಿ ಏನಿದೆ ಎಂಬುದು ಬಗ್ಗೆ ಗೊತ್ತಿಲ್ಲದೇ ರಾಜಕೀಯ ಅಸ್ತಿತ್ವಕ್ಕಾಗಿ ಟೀಕೆ ಮಾಡುವುದು ಸರಿಯಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗುರುವಾರ ನವನಗರದ ಹೆಲಿಪ್ಯಾಡ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮೊದಲು ವರದಿ ಸಲ್ಲಿಕೆಯಾಗಲಿ. ಅದನ್ನು ನೋಡಿದ ನಂತರ ಮುಂದಿನ ವಿಚಾರ ಮಾಡಬಹುದು’ ಎಂದರು.

‘ಸಿದ್ದರಾಮಯ್ಯ ಸಮಾಜ ಒಡೆಯುವ ಕೆಲಸವನ್ನು ಮಾಡುತ್ತಿದ್ದಾರೆ’ ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿದ ಅವರು, ‘ವರದಿಯಲ್ಲಿ ಏನಿದೆ ಎಂಬುದು ಯಾರಿಗಾದರೂ ಗೊತ್ತಿದೆಯಾ? ಅದರ ಬಗ್ಗೆ ಗೊತ್ತಿಲ್ಲದೆ ಮಾತನಾಡುವುದು ಸರಿಯಲ್ಲ. ಬಿಹಾರದ ಮುಖ್ಯಮಂತ್ರಿ ನಿತೀಶಕುಮಾರ ಅವರು ಜಾತಿಗಣತಿ ಸ್ವೀಕರಿಸಿದ್ದಾರೆ, ಅವರು ಸಮಾಜ ಒಡೆದಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಕಾಂತರಾಜ ವರದಿ ಮೂಲಪ್ರತಿ ಕಳೆದಿರುವ ವಿಷಯ ಗೊತ್ತಿಲ್ಲ. ಈ ಬಗ್ಗೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರೊಂದಿಗೆ ಮಾತನಾಡುತ್ತೇನೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿಯಲ್ಲಿ ಬೆಂಕಿ: ‘ಪ್ರತಿಪಕ್ಷ ನಾಯಕನ ಆಯ್ಕೆಯಿಂದಾಗಿ ಬಿಜೆಪಿಯೊಳಗೆ ಬೆಂಕಿ ಹೊತ್ತುಕೊಂಡಿದೆ. ಜ್ವಾಲೆಯಾಗಿ ಬಿಜೆಪಿ ಬುಡಕ್ಕೆ ಹೊತ್ತಿಕೊಳ್ಳಲಿದೆ. ಮೊದಲು ಅವರು ಬೆಂಕಿಯಿಂದ ಹೊರಬರಲಿ. ಆಮೇಲೆ ಸರ್ಕಾರದ ಬಗ್ಗೆ ಮಾತನಾಡಲಿ’ ಎಂದರು.

‘ಕಾಂಗ್ರೆಸ್ ಪಕ್ಷಕ್ಕೆ ನಾವು ಯಾರನ್ನೂ ಆಹ್ವಾನಿಸುವುದಿಲ್ಲ. ಪಕ್ಷದ ತತ್ವ, ಸಿದ್ಧಾಂತ ಒಪ್ಪಿಕೊಂಡು ಬರುವವರನ್ನು ಸೇರ್ಪಡೆ ಮಾಡಿಕೊಳ್ಳಲಾಗುವುದು’ ಎಂದು ಹೇಳಿದರು.

ಜಾತಿ ಗಣತಿಯಲ್ಲ: ತಂಗಡಗಿ

ಬಾಗಲಕೋಟೆ: ‘ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗದ ವರದಿ ಜಾತಿಗಣತಿ ಅಲ್ಲ. ಎಲ್ಲ ಸಮಾಜಗಳಿಗೂ ಅವಕಾಶ ಸಿಗಲಿ ಎಂದು ಮಾಡಿರುವ ಆರ್ಥಿಕ, ಶೈಕ್ಷಣಿಕ ಗಣತಿ’ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದಾಗ ಜಾತಿ ಗಣತಿ ಮಾಡಲಾಗುವುದು ಎಂದು ನಮ್ಮ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ’ ಎಂದರು.



ಹೋರಿ ಹಿಡಿಯುವ ಸಾಹಸ... ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಸೊಪ್ಪಿನಕೇರಿ ಭಾಗದಲ್ಲಿ ದೀಪಾವಳಿ ಪ್ರಯುಕ್ತ ಗುರುವಾರ ಹಮ್ಮಿಕೊಳ್ಳಲಾಗಿದ್ದ ಹೋರಿ ಹಬ್ಬದಲ್ಲಿ ವೇಗವಾಗಿ ಓಡುತ್ತಿದ್ದ ಹೋರಿಯನ್ನು ಹಿಡಿದು ಅದರ ಕೊರಳಲ್ಲಿದ್ದ ಕೊಬ್ಬರಿ ಮಾಲೆ ಕೀಳಲು ಪ್ರಯತ್ನಿಸಿದ ಸಾಹಸಿಗರು

– ಪ್ರಜಾವಾಣಿ ಚಿತ್ರ/ಎಚ್‌.ಎಸ್‌.ರಘು

ಸಂಕ್ಷಿಪ್ತ ಸುದ್ದಿ

ಮದ್ಯದಂಗಡಿ ಪರವಾನಗಿ ರದ್ದು ಅರ್ಜಿ ವಜಾ

ಬೆಂಗಳೂರು: ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಹುಸೈನ್‌ಪುರ ಗ್ರಾಮದಲ್ಲಿ ದರ್ಗಾದಿಂದ 100 ಮೀಟರ್ ದೂರದಲ್ಲಿ ಮದ್ಯದಂಗಡಿಗೆ ನೀಡಿರುವ ಪರವಾನಗಿ ರದ್ದುಗೊಳಿಸಲು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಹುಸೈನ್‌ಪುರ ಗ್ರಾಮದ ಬಾಲಾಜಿ ಸೇರಿದಂತೆ ಮೂವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್‌. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

ಹುಸೈನ್‌ಪುರ ಗ್ರಾಮದ ದರ್ಗಾದಿಂದ ಕೇವಲ 100 ಮೀಟರ್ ಅಂತರದಲ್ಲಿ ಅನ್ನಪೂರ್ಣ ಬಾರ್ ಮತ್ತು ರೆಸ್ಟೋರೆಂಟ್ ನಡೆಸಲಾಗುತ್ತಿದೆ. ನಿಯಮಗಳನ್ನು ಉಲ್ಲಂಘಿಸಿ ಮದ್ಯದಂಗಡಿ ನಡೆಸಲಾಗುತ್ತಿದೆ. ಸ್ಥಳೀಯ ಮನವಿಪತ್ರ ಪರಿಗಣಿಸಿ ಬಾರ್ ಅನ್ನು ಬೇರೊಂದು ಸ್ಥಳಕ್ಕೆ ಸ್ಥಳಾಂತರಿಸಲು ಸರ್ಕಾರಿ ಪ್ರಾಧಿಕಾರಗಳು ಬಯಸಿವೆ ಎಂಬುದಾಗಿ ಅರ್ಜಿದಾರರು ತಿಳಿಸಿದ್ದಾರೆ. ಆದರೆ, ಸರ್ಕಾರದ ಸಂಬಂಧಪಟ್ಟ ಇಲಾಖೆ ಅಥವಾ ಸಂಸ್ಥೆ ವಿವಾದಿತ ಸ್ಥಳದ ಸರ್ವೆ ನಡೆಸಿರುವ ಬಗ್ಗೆ ಹಾಗೂ ಸ್ಥಳೀಯರ ಮನವಿಯನ್ನು ಸಂಬಂಧಪಟ್ಟ ಇಲಾಖೆ ಪರಿಗಣಿಸಿರುವ ಬಗ್ಗೆ ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ಅರ್ಜಿದಾರರ ಪೈಕಿ ಮುಸ್ಲಿಂ ಸಮುದಾಯದವರು ಯಾರೂ ಇಲ್ಲ. ಅರ್ಜಿದಾರರು ಕಲ್ಪನೆಗಳ ಆಧಾರದ ವಾದ ಮಂಡಿಸುತ್ತಿದ್ದಾರೆ. ಸಮಗ್ರವಾದ ಮಾಹಿತಿ ಒದಗಿಸದೆ ಅವ್ಯವಸ್ಥಿತವಾಗಿ ಅರ್ಜಿ ಸಲ್ಲಿಸಲಾಗಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹೆಸರಿನಲ್ಲಿ ಇಂತಹ ಅರೆಬೆಂದ ಅರ್ಜಿಗಳನ್ನು ಪುರಸ್ಕರಿಸಲಾಗದು ಎಂದು ಅಭಿಪ್ರಾಯಪಟ್ಟು ನ್ಯಾಯಪೀಠ ಅರ್ಜಿ ವಜಾಗೊಳಿಸಿತು.

ಡಿ. 10ಕ್ಕೆ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ

ಬೆಂಗಳೂರು: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಮೃತ ಮಹೋತ್ಸವ ಹಾಗೂ ಈಡಿಗ ಮತ್ತು 25 ಪಂಗಡಗಳ ಬೃಹತ್ ಜಾಗೃತಿ ಸಮಾವೇಶವು ಡಿ.10ರಂದು ಬೆಳಿಗ್ಗೆ 11ಕ್ಕೆ ಅರಮನೆ ಮೈದಾನದಲ್ಲಿ ನಡೆಯಲಿದೆ.

ಆರ್ಯ ಈಡಿಗ ರ ಸಂಘ ಸ್ಥಾಪನೆಯಾಗಿ 75 ವರ್ಷಗಳು ತುಂಬಿವೆ. ಈ ಹಿನ್ನೆಲೆಯಲ್ಲಿ ಈಡಿಗ, ಬಿಲ್ಲವ, ಪೂಜಾರಿ, ದೀವರು, ಭಂಡಾರಿ, ಬೆಲ್ಚಡ, ಹಾಲಕ್ಷತ್ರೀಯ, ದೇಶ ಭಂಡಾರಿ, ದೇವರ, ದೇವರ ಮಕ್ಕಳು, ದೀವರ ಮಕ್ಕಳು, ಎಳಿಗ, ಎಳವ, ಗಾಮಲ್ಲ, ಗೌಂಡ್ಲ, ಹಳೇಪೈಕರು, ಹಳೇಪೈಕ್, ಇಲ್ಲಾವನ್, ಕಲಾಲ್, ಮಲೆಯಾಳಿ ಬಿಲ್ಲವ, ನಾಡಾರ್, ನಾಮಧಾರಿ, ತಿಯಾನ್ ತಿಯ್ಯ, ಈಳಿಗ, ಗೊಂಡ್ಲತಿಯನ್ ಪಂಗಡಗಳಲ್ಲಿ ಜಾಗೃತಿಗಾಗಿ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಸಮಾವೇಶದಲ್ಲಿ ಸೋಲೂರು ಈಡಿಗ ಮಹಾಸಂಸ್ಥಾನದ ವಿಖ್ಯಾತಾನಂದ ಸ್ವಾಮೀಜಿ, ಧರ್ಮಸ್ಥಳ ಕನ್ಯಾಡಿ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ನಿಟ್ಟೂರು ರೇಣುಕಾನಂದ ಸ್ವಾಮೀಜಿ, ಕಾರ್ತಿಕೇಯ ಪೀಠದ ಯೋಗೇಂದ್ರ ಅವಧೂತ, ನಿಪ್ಪಾಣಿ ಅರುಣಾನಂದ ಸ್ವಾಮೀಜಿ, ಶಿವಗಿರಿ ಸತ್ಯಾನಂದತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಸಚಿವ ಕಾಗೋಡು ತಿಮ್ಮಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ಸಮುದಾಯ ಪ್ರತಿನಿಧಿಸುವ ಎಲ್ಲ ಸಚಿವರು, ಶಾಸಕರು, ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

‘ಶಕ್ತಿ’ ಪ್ರಯಾಣಿಕರ ಸಂಖ್ಯೆ ಶತಕೋಟಿಗೆ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವದ ಯೋಜನೆಯಾದ ‘ಶಕ್ತಿ’ಯನ್ನು ಬಳಸಿಕೊಂಡು ಉಚಿತವಾಗಿ ಪ್ರಯಾಣಿಸಿದ ಮಹಿಳೆಯರ ಸಂಖ್ಯೆ 100 ಕೋಟಿ ದಾಟಿದೆ.

ಯೋಜನೆ ಜಾರಿಯಾದ ದಿನವಾದ ಜೂನ್ 11ರಿಂದ ನ.22ರ ವರೆಗೆ 165 ದಿನಗಳಲ್ಲಿ ನಾಲ್ಕು ನಿಗಮಗಳ ಸಾರಿಗೆ ಬಸ್‌ಗಳಲ್ಲಿ 178.67 ಕೋಟಿ ಜನರು ಪ್ರಯಾಣಿಸಿದ್ದಾರೆ. ಅದರಲ್ಲಿ 100.47 ಕೋಟಿ ಜನರು ಮಹಿಳೆಯರಾಗಿದ್ದಾರೆ. ಅವರ ಪ್ರಯಾಣದ ಟಿಕೆಟ್ ಮೌಲ್ಯ ₹ 2,397 ಕೋಟಿ ದಾಟಿದೆ.

ಈ ಮೈಲಿಗಲ್ಲಿನ ಸಂಭ್ರಮ ಮತ್ತು ಸಾರಿಗೆ ಸಂಸ್ಥೆಗಳ ಅಪಘಾತ ರಹಿತ ಚಾಲಕರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ ಸಮಾರಂಭವನ್ನು ಸಾರಿಗೆ ಇಲಾಖೆಯು ನ.24ರಂದು ಮಧ್ಯಾಹ್ನ 12ಕ್ಕೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭ ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದಾರೆ.

ಪಿಯು ಶಿಕ್ಷಣ: ಸಮಾವೇಶ ಡಿ.9ರಿಂದ

ಮಂಗಳೂರು: ಕರ್ನಾಟಕ ಅನುದಾನ ರಹಿತ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಗಳ ಸಂಘ (KUPMA–ಕುಪ್ಮಾ)ದಿಂದ ಡಿಸೆಂಬರ್ 9 ಮತ್ತು 10ರಂದು ಮೂಡುಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ರಾಜ್ಯಮಟ್ಟದ ‘ಪದವಿ ಪೂರ್ವ ಶಿಕ್ಷಣ - ಮುಕ್ತ ಸಮಾವೇಶ 2023’ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗಳ ಅಧ್ಯಕ್ಷರು, ಸಂಚಾಲಕರು, ಕಾರ್ಯದರ್ಶಿಗಳು, ಸದಸ್ಯರು ಭಾಗವಹಿಸಲಿದ್ದಾರೆ.

ಡಿ.9ರಂದು ಬೆಳಿಗ್ಗೆ 11.30ರಿಂದ 12.30ರ ವರೆಗೆ ನೋಂದಣಿ, ಮಧ್ಯಾಹ್ನ 12.30 ರಿಂದ 2ರ ವರೆಗೆ ನೆಟ್‌ವರ್ಕಿಂಗ್, ಮಧ್ಯಾಹ್ನ 2ರಿಂದ 4ರ ವರೆಗೆ ಉದ್ಘಾಟನಾ ಅಧಿವೇಶನ. ಸಂಜೆ 4ರಿಂದ ‘ಕುಪ್ಮಾದ ಗುರಿ ಮತ್ತು ಉದ್ದೇಶ’, ‘ನಿಮ್ಮ ಜಿಲ್ಲೆಯಲ್ಲಿ ಕುಪ್ಮಾದ ಬಲವಾದ ಸಂಘವನ್ನು ನಿರ್ಮಿಸುವುದು’ ಕುರಿತು ವಿಚಾರ ಮಂಡನೆ ನಡೆಯಲಿದೆ. ಆಳ್ವಾಸ್ ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಜರುಗಲಿದೆ.

ಡಿ. 10ರಂದು ‘ಖಾಸಗಿ ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಯ ಸವಾಲುಗಳು’ ಮತ್ತು ‘ರಾಷ್ಟ್ರ-ನಿರ್ಮಾಣದಲ್ಲಿ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪಾತ್ರ’ ಎಂಬ ವಿಷಯದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ವಿಷಯಗಳ ಮಂಡನೆ ಮಾಡಲಿದ್ದಾರೆ. ಬಳಿಕ ‘ಸಂವಾದ ಮತ್ತು ಮುಕ್ತ ಚರ್ಚೆ’ ನಡೆಯಲಿದೆ.

ಸಮಾವೇಶದಲ್ಲಿ ಪಾಲ್ಗೊಳ್ಳಲು ನೋಂದಣಿಗೆ: https://kupma.org/pre-university-education-open-conclave-2023/

ಸಿಲ್ಕ್ಯಾರಾ: ಕಾರ್ಮಿಕರ ರಕ್ಷಣಾ ಕಾರ್ಯ ಮತ್ತೆ ಸ್ಥಗಿತ

ಒಂದನೇ ಪುಟದಿಂದ

ಒಮ್ಮೆ ಒಂದು ಪೈಪ್ ಅಳವಡಿಸಿ ಬಳಿಕ ಮತ್ತೊಂದನ್ನು ಅದಕ್ಕೆ ವೆಲ್ಡ್ ಮಾಡಲಾಗುತ್ತದೆ. ಪೈಪನ್ನು ಒಟ್ಟು 60 ಮೀಟರ್ ವರೆಗೂ ವಿಸ್ತರಿಸಲಾಗುವುದು. ಈ ರೀತಿ ಕಾರ್ಮಿಕರನ್ನು ಹೊರತರುವ ಮಾರ್ಗವನ್ನು ಸಿದ್ಧಪಡಿಸಲಾಗುತ್ತಿದೆ ಎಂದರು.

ಕಾರ್ಮಿಕರಿಗೆ ಪೈಪ್ ಮೂಲಕ ರೊಟ್ಟಿ, ಪಲ್ಯ, ಕಿತ್ತಳೆ, ಬಾಳೆಹಣ್ಣು, ಔಷಧಿಗಳು, ಶರ್ಟ್‌ಗಳು, ಒಳ ಉಡುಪುಗಳು, ಸಾಬೂನು ನೀಡಲಾಗುತ್ತಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎನ್‌ಡಿಎಂಎ) ಸದಸ್ಯ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತ್ತಾ ಹಸ್ನೈನ್, ‘ಶುಕ್ರವಾರದ ವೇಳೆಗೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗುತ್ತೇವೆ ಎಂದು ನಿರೀಕ್ಷಿಸುತ್ತೇನೆ. ಅಡ್ಡವಾಗಿ ಸುರಂಗ ಕೊರೆಯುವಾಗ ರಕ್ಷಣಾ ಸಿಬ್ಬಂದಿ ಇನ್ನೂ 3–4 ಅಡತಡೆ ಎದುರಿಸುವ ಸಾಧ್ಯತೆ ಇದೆ. ಕಾರ್ಯಾಚರಣೆ ಸಮಯದ ಬಗ್ಗೆ ಊಹೆ ಮಾಡುವುದು ನ್ಯಾಯವಲ್ಲ. ಏಕೆಂದರೆ ಇದು ಯುದ್ಧದಂತೆಯೇ ಇರುತ್ತದೆ’ ಎಂದು ತಿಳಿಸಿದರು.

ಸ್ಥಳದಲ್ಲಿ 41 ಆಂಬುಲೆನ್ಸ್‌ಗಳು ಸನ್ನದ್ಧ ಸ್ಥಿತಿಯಲ್ಲಿವೆ. ಕಾರ್ಮಿಕರು ಗಂಭೀರ ಸ್ಥಿತಿಯಲ್ಲಿದ್ದರೆ ಅವರನ್ನು ಏರ್‌ಲಿಫ್ಟ್ ಮಾಡಲು ವ್ಯವಸ್ಥೆ ಮಾಡಲಾಗಿದೆ.

ಕಾರ್ಮಿಕರನ್ನು ರಕ್ಷಿಸಲು ಸರ್ಕಾರ ಐದು ಆಯ್ಕೆಗಳ ಕ್ರಿಯಾ ಯೋಜನೆ ಕೈಗೊಂಡಿದೆ. ತೈಲ ಮತ್ತು ನೈಸರ್ಗಿಕ ಅನಿಲ ನಿಗಮ, ಸಟ್ಲುಜ್ ಜಲ ವಿದ್ಯುತ್ ನಿಗಮ, ರೈಲ್ವೆ ವಿಕಾಸ್ ನಿಗಮ, ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ ಮತ್ತು ತೆಹ್ರಿ ಜಲ ಅಭಿವೃದ್ಧಿ ನಿಗಮ ಎಂಬ ಐದು ಏಜೆನ್ಸಿಗಳಿಗೆ ನಿರ್ದಿಷ್ಟ ಜವಾಬ್ದಾರಿಗಳನ್ನು ವಹಿಸಿದೆ.

‘ಒಳಚರಂಡಿಗೆ ₹1,518 ಕೋಟಿ ವೆಚ್ಚ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪರಿಸರ ಪರಿಹಾರ ನಿಧಿಯಡಿ ತ್ವರಿತವಾಗಿ ಎರಡನೇ ಹಂತದ ಆದ್ಯತೆಯ 53 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಒಟ್ಟು ₹ 1,518 ಕೋಟಿ ವೆಚ್ಚದಲ್ಲಿ ಒಳಚರಂಡಿ ಮತ್ತು ಮೇಲ್ದರ್ಜೆಗೇರಿಸುವ ಕಾಮಗಾರಿಗಳಿಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ, ‘ಕೆಯುಐಡಿಎಫ್‌ಸಿ ಮೂಲಕ ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ’ ಎಂದರು.

‘ಮಂಗಳೂರು, ಶಿವಮೊಗ್ಗ, ಮೈಸೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ತುಮಕೂರು, ದಾವಣಗೆರೆ, ಕಲಬುರಗಿ, ಉಡುಪಿ, ಗಂಗಾವತಿ, ಮಂಡ್ಯ, ರಾಯಚೂರು, ಬೀದರ್, ಕೋಲಾರ, ಚಿಕ್ಕಮಗಳೂರು, ಹೊಸಪೇಟೆ, ಗದಗ– ಬೆಟಗೇರಿ, ರಾಣೆಬೆನ್ನೂರ ನಗರಗಳಲ್ಲಿ ₹ 15 ಕೋಟಿಯಿಂದ ₹ 80 ಕೋಟಿ ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ’ ಎಂದು ತಿಳಿಸಿದರು.

ಹಿರಿಯ ವ್ಯಕ್ತಿಗೆ ಡಿಬಿಟಿ: ಗೃಹಲಕ್ಷ್ಮಿ ಮತ್ತು ಅನ್ನಭಾಗ್ಯ ಯೋಜನೆಯಡಿ ಅರ್ಹ ಕುಟುಂಬದ ಮುಖ್ಯಸ್ಥರ ಅನುಪಸ್ಥಿತಿಯಲ್ಲಿ ಕುಟುಂಬದ ಅತ್ಯಂತ ಹಿರಿಯ ಸದಸ್ಯರ ಬ್ಯಾಂಕ್ ಖಾತೆಗೆ ನಗದು ನೇರ ವರ್ಗಾವಣೆ (ಡಿಬಿಟಿ) ಮಾಡುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ನೀಡಿದೆ.

‘ಅನ್ನಭಾಗ್ಯ ಯೋಜನೆಯಡಿ ಆಯಾ ಕುಟುಂಬದ ಮುಖ್ಯಸ್ಥ ನಂತರ ಬರುವ ಅಥವಾ ಸ್ಥಾನಿಕವಾಗಿ ಲಭ್ಯವಾಗುವ ಅತ್ಯಂತ ಹಿರಿಯ ವ್ಯಕ್ತಿಗೆ ಆಧಾರ್ ಬ್ಯಾಂಕ್ ಖಾತೆ, ಪೋಸ್ಟಲ್ ಬ್ಯಾಂಕ್ ಖಾತೆ ಹಾಗೂ ಇತರೆ ಅರ್ಹತೆ ಆಧರಿಸಿ ಸೂಕ್ತರಾದವರನ್ನು ಗುರುತಿಸಿ ಡಿಬಿಟಿ ಮಾಡಲು ಒಪ್ಪಿಗೆ ನೀಡಲಾಗಿದೆ. ರಾಜ್ಯದಲ್ಲಿ 1.27 ಕೋಟಿ ಪಡಿತರ ಕಾರ್ಡ್‌ದಾರರಿದ್ದು, ಈ ಪೈಕಿ 7.67 ಲಕ್ಷ ಕಾರ್ಡ್‌ದಾರರು ಹೆಚ್ಚುವರಿ 5 ಕೆ.ಜಿ. ಅಕ್ಕಿ ಬದಲಿಗೆ ಡಿಬಿಟಿ ಪಡೆಯಲು ಅನರ್ಹರಾಗಿದ್ದಾರೆ. ಕುಟುಂಬದ ಮುಖ್ಯಸ್ಥರ ಅನುಪಸ್ಥಿತಿಯಿಂದಾಗಿ ಸೌಲಭ್ಯ ಸಿಗದಂತಾಗಿದೆ’ ಎಂದು ವಿವರಿಸಿದರು.

ಇತರ ನಿರ್ಣಯಗಳು:

- ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಪರಿಶಿಷ್ಟ ಜಾತಿ ಶೇ 15, ಪರಿಶಿಷ್ಟ ವರ್ಗಕ್ಕೆ ಶೇ7 ರಂತೆ ಮೀಸಲಾತಿ ನೀಡಿ ಹೆಚ್ಚುವರಿ ಬಿಂದುಗಳನ್ನು ಗುರುತಿಸಲು, ಅಂಗವಿಕಲರ ಮೀಸಲಾತಿಯನ್ನು ಒಳಗೊಂಡ ಒಂದೇ ರೋಸ್ಟರ್ ಸಿದ್ಧಪಡಿಸಲು ಒಪ್ಪಿಗೆ.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 2,731 ಆರೋಗ್ಯ ಸಂಸ್ಥೆಗಳಲ್ಲಿ ಜೈವಿಕ ವೈದ್ಯಕೀಯ ಸಲಕರಣೆಗಳ ಮೇಲ್ವಿಚಾರಣೆ ಮತ್ತು ನಿರ್ವಹಣೆಯನ್ನು ವಾರ್ಷಿಕ ವೆಚ್ಚ ₹ 32.74 ಕೋಟಿ ಅಂದಾಜು ವೆಚ್ಚದಲ್ಲಿ ಮೂರು ವರ್ಷಗಳ ಅವಧಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಿಸಲು ಅನುಮೋದನೆ.
- ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ (ಕಿಮ್ಸ್) ಆವರಣದಲ್ಲಿ ಸ್ನಾತಕ ವಿದ್ಯಾರ್ಥಿಗಳ ವಸತಿ ನಿಲಯ ಕಟ್ಟಡ ಕಾಮಗಾರಿಗೆ ₹ 16.18 ಕೋಟಿ ಮತ್ತು ಸ್ನಾತಕ ವಿದ್ಯಾರ್ಥಿನಿಯರ ವಸತಿ ನಿಲಯ ಕಟ್ಟಡ ಕಾಮಗಾರಿಗೆ ₹ 11.00 ಕೋಟಿಯ ಪರಿಷ್ಕೃತ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ.
- ಪಾರ್ಶ್ವವಾಯು ಮತ್ತು ತಲೆಗೆ ತೀವ್ರ ಪೆಟ್ಟಾದ ರೋಗಿಗಳ ಆರೈಕೆಗಾಗಿ ಕರ್ನಾಟಕದಲ್ಲಿ ‘ಹಬ್ ಮತ್ತು ಸ್ಪೋಕ್’ ಮಾದರಿಯನ್ನು ಎರಡು ಹಂತಗಳಲ್ಲಿ ₹ 51.44 ಕೋಟಿಗಳಲ್ಲಿ ಅನುಷ್ಠಾನಗೊಳಿಸಲು, ಮೊದಲನೇ ಹಂತದಲ್ಲಿ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ‘ಹಬ್’ ಮತ್ತು ಹುಬ್ಬಳ್ಳಿಯ ಕಿಮ್ಸ್‌ನಲ್ಲಿ 'ಸ್ಪೋಕ್' ಆಗಿ ಕಾರ್ಯನಿರ್ವಹಿಸಲು ಒಟ್ಟು ₹ 11.26 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ.

ಕಾಶ್ಮೀರದಲ್ಲಿ ಉಗ್ರರ ಜತೆಗಿನ ಗುಂಡಿನ ಕಾಳಗದಲ್ಲಿ ಹುತಾತ್ಮ

ಪ್ರಾಂಜಲ್ ಮನೆಯಲ್ಲಿ ಮಡುಗಟ್ಟಿದ ಶೋಕ

ಪ್ರಜಾವಾಣಿ ವಾರ್ತೆ



ಕ್ಯಾಪ್ಟನ್ ಪ್ರಾಂಜಲ್

ಆನೇಕಲ್: ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿಯಲ್ಲಿ ಉಗ್ರರ ಜೊತೆ ನಡೆದ ಗುಂಡಿನ ಕಾಳಗದಲ್ಲಿ ಹುತಾತ್ಮರಾದ 63-ರಾಷ್ಟ್ರೀಯ ರೈಫಲ್ಸ್‌ನ ಕ್ಯಾಪ್ಟನ್ ಎಂ.ವಿ. ಪ್ರಾಂಜಲ್ (29) ಅವರ ಜಿಗಣಿಯ ಮನೆಯಲ್ಲಿ ಶೋಕ ಮಡುಗಟ್ಟಿದೆ.

ಆರು ತಿಂಗಳಿಂದ ಪ್ರಾಂಜಲ್ ಪೋಷಕರು ಆನೇಕಲ್ ತಾಲ್ಲೂಕಿನ ಜಿಗಣಿ ಸಮೀಪದ ನಂದನವನ ಬಡಾವಣೆಯಲ್ಲಿ ವಾಸವಾಗಿದ್ದಾರೆ. ಸುದ್ದಿ ತಿಳಿಯುತ್ತಲೇ ಬಂಧುಗಳು ಮತ್ತು ಸ್ನೇಹಿತರು ಮನೆಗೆ ತೆರಳಿ ಸಾಂತ್ವನ ಹೇಳುತ್ತಿದ್ದಾರೆ.

ಶುಕ್ರವಾರ ಬೆಳಗ್ಗೆ ವಿಶೇಷ ವಿಮಾನದಲ್ಲಿ ಪಾರ್ಥಿವ ಶರೀರ ಬೆಂಗಳೂರಿಗೆ ಬರುವ ಸಾಧ್ಯತೆ ಇದೆ. ಸರ್ಕಾರಿ ಗೌರವದೊಂದಿಗೆ ಅಂತಿಮ ವಿಧಿ, ವಿಧಾನ ನಡೆಸಲು ಸಿದ್ಧತೆ ನಡೆಯುತ್ತಿದೆ.

ಮೈಸೂರು ಮೂಲದ ಪ್ರಾಂಜಲ್ ಅವರು ಮಂಗಳೂರು ರಿಫೈನರಿ ಮತ್ತು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್ (ಎಂಆರ್‌ಪಿಎಲ್) ನಿವೃತ್ತ ನಿರ್ದೇಶಕ ವೆಂಕಟೇಶ್ ಮತ್ತು ಅನುರಾಧ ದಂಪತಿಯ ಏಕೈಕ ಪುತ್ರ.

ಎರಡು ವರ್ಷದ ಹಿಂದೆ ಕಾಶ್ಮೀರಕ್ಕೆ ತೆರಳುವ ಮುನ್ನ ಬೆಂಗಳೂರಿನ ಅದಿತಿ ಎಂಬುವರನ್ನು ಮದುವೆಯಾಗಿದ್ದರು. ಅದಿತಿ ಪ್ರಸ್ತುತ ಚೆನ್ನೈನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಪತಿಯ ಸಾವಿನ ಸುದ್ದಿ ಕೇಳಿ ಅವರೂ ಜಿಗಣಿ ನಿವಾಸಕ್ಕೆ ಬಂದಿದ್ದಾರೆ. ‘ದಸರಾ ಸಂದರ್ಭದಲ್ಲಿ ಮನೆಗೆ ಬಂದಿದ್ದ ಪ್ರಾಂಜಲ್ ಪೂಜೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸೇನೆಯ ಬಗ್ಗೆ ಹೆಮ್ಮೆಯಿಂದ ಮಾತನಾಡಿದ್ದರು’ ಎಂದು ಸಂಬಂಧಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಆನೇಕಲ್ ತಹಶೀಲ್ದಾರ್ ಶಿವಪ್ಪ ಎಚ್‌.ಲಮಾಣಿ ಅವರು ಪ್ರಾಂಜಲ್ ಅವರ ನಿವಾಸಕ್ಕೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಬಾಲ್ಯದಿಂದಲೂ ಯೋಧನಾಗಬೇಕೆಂಬ ಕನಸು ಕಂಡಿದ್ದ ಪ್ರಾಂಜಲ್ ಮಂಗಳೂರಿನ ಎಂಆರ್‌ಪಿಎಲ್ ಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಡೆದಿದ್ದರು. ನಂತರ ಮಹೇಶ್ ಪಿಯು ಕಾಲೇಜಿನಲ್ಲಿ ಪಿಯು ಶಿಕ್ಷಣ ಪೂರೈಸಿದ್ದರು. ಮಧ್ಯಪ್ರದೇಶದ ಮಿಲಿಟರಿ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಬಳಿಕ ತಮ್ಮ ಆಸೆಯಂತೆ ಭಾರತೀಯ ಸೇನೆ ಸೇರಿದ್ದರು.



ಆನೇಕಲ್ ತಾಲ್ಲೂಕಿನ ಜಿಗಣಿ ಸಮೀಪದ ನಂದನವನ ಬಡಾವಣೆಯಲ್ಲಿರುವ ಕ್ಯಾಪ್ಟನ್ ಪ್ರಾಂಜಲ್ ಅವರ ಮನೆಯ ಮುಂದೆ ಗುರುವಾರ ಕಂಡುಬಂದ ದೃಶ್ಯ.

ಎಲ್‌ಇಟಿ ಕಮಾಂಡರ್ ಸೇರಿ ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿಯಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಗುರುವಾರವೂ ಗುಂಡಿನ ಚಕಮಕಿ ನಡೆದಿದ್ದು, ಲಷ್ಕರ್–ಎ–ತಯಬಾ (ಎಲ್‌ಇಟಿ) ಕಮಾಂಡರ್ ಸೇರಿ ಇಬ್ಬರು ಉಗ್ರರು ಹತರಾಗಿದ್ದು, ಮತ್ತೊಬ್ಬ ಯೋಧ ಹುತಾತ್ಮರಾಗಿದ್ದಾರೆ.


ಉತ್ತರಪ್ರದೇಶದ ಅಲಿಗಢದ ಸಚಿನ್ ಲೌರ್ ಹುತಾತ್ಮ ಯೋಧ.

ಪಾಕಿಸ್ತಾನ ಪ್ರಜೆ ಹಾಗೂ ಎಲ್‌ಇಟಿ ಕಮಾಂಡರ್ ಕ್ವಾರಿ ಮತ್ತು ಆತನ ಸಹಚರನನ್ನು ಹತ್ಯೆ ಮಾಡಲಾಗಿದ್ದು, ಕಾರ್ಯಾಚರಣೆಯು ಅಂತಿಮ ಹಂತಕ್ಕೆ ತಲುಪಿದೆ ಎಂದು ಸೇನೆಯ ಮೂಲಗಳು ತಿಳಿಸಿವೆ.

ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಲ್ಲಿ ತರಬೇತಿ ಪಡೆದಿದ್ದ ಕ್ವಾರಿಯನ್ನು ರಜೌರಿ ಪ್ರದೇಶದಲ್ಲಿ ಎಲ್‌ಇಟಿ ಚಟುವಟಿಕೆಗಳನ್ನು ಸಕ್ರಿಯಗೊಳಿಸುವ ಕಾರ್ಯಕ್ಕೆ ನಿಯೋಜಿಸಲಾಗಿತ್ತು ಎಂದಿವೆ. ಒಂದು ವರ್ಷದಿಂದ ರಜೌರಿ –ಪೂಂಚ್ ಪ್ರದೇಶದಲ್ಲಿ ತನ್ನ ಗುಂಪಿನೊಂದಿಗೆ ಸಕ್ರಿಯನಾಗಿದ್ದ ಈತ ಡಾಂಗ್ರಿ ಹಾಗೂ ಕಂಡಿಯಲ್ಲಿ ನಡೆದ ದಾಳಿಗಳ ಸಂಚುಕೋರನಾಗಿದ್ದಾನೆ ಎಂದು ಮೂಲಗಳು ವಿವರಿಸಿವೆ.

ಇನ್ನೊಬ್ಬ ಉಗ್ರನ ಗುರುತು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

> ‘ದುನಿಯಾ’ ಸೂರಿ ನಿರ್ದೇಶಿಸಿ, ಅಭಿಷೇಕ್ ಅಂಬರೀಶ್ ನಾಯಕನಾಗಿರುವ ‘ಬ್ಯಾಡ್ ಮ್ಯಾನರ್ಸ್’ ಚಿತ್ರ ಇಂದು (ನ.24) ತೆರೆ ಕಾಣುತ್ತಿದೆ. ಚಿತ್ರ ಹಾಗೂ ಪಾತ್ರದ ಕುರಿತು ಅಭಿಷೇಕ್ ಮಾತಿಗಿಳಿದರು...



‘ಅಚ್ಚರಿಯ ಗುಚ್ಛ ಈ ಬ್ಯಾಡ್ ಮ್ಯಾನರ್ಸ್’

ವಿನಾಯಕ ಕೆ.ಎಸ್.

● ಚಿತ್ರದಲ್ಲಿ ನಿಮ್ಮ ಪಾತ್ರವೇನು?

ನನ್ನ ಪಾತ್ರದ ಹೆಸರು ‘ರುದ್ರ’. ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುತ್ತೇನೆ. ತಂದೆಯಿಂದ ಸಿಕ್ಕ ಕೆಲಸ ಅದಾಗಿರುತ್ತದೆ. ಆಗ ಗನ್, ಕಂಟ್ರಿಮೇಡ್ ವೆಪನ್, ಅಕ್ರಮ ಆಯುಧ ಜಗತ್ತಿನ ಪರಿಚಯವಾಗುತ್ತದೆ. ಇವು ನಾಯಕನ ಮೇಲೆ ಹೇಗೆಲ್ಲ ಪ್ರಭಾವ ಬೀರುತ್ತವೆ, ಇದರಿಂದ ಏನೆಲ್ಲ ಆಗುತ್ತದೆ ಎಂಬುದನ್ನು ಸಿನಿಮಾದಲ್ಲಿ ನೋಡಬೇಕು.

● ಸೂರಿ ಅವರ ಬೇರೆ ಸಿನಿಮಾಗಳಂತೆ ಇದರಲ್ಲಿಯೂ ಅಚ್ಚರಿಗಳಿವೆಯೇ?

ಇಲ್ಲಿ ಅವರ ಹಿಂದಿನ ಸಿನಿಮಾಗಳಂತೆ ಯಾವುದೋ ಒಂದು ಪಾತ್ರ ಬಂದು ಅಚ್ಚರಿ ನೀಡುವುದಿಲ್ಲ. ಇಡೀ ಸಿನಿಮಾವೇ ಒಂದು ರೀತಿ ಅಚ್ಚರಿಯ ಗುಚ್ಛ. ಕಥೆ, ಚಿತ್ರಕಥೆ, ಕಥೆ ಹೇಳಿಕೊಂಡು ಹೋಗಿರುವ ರೀತಿ ಭಿನ್ನ. ಆ್ಯಕ್ಷನ್‌ಗಳು ಕೂಡ ಮಾಮೂಲಿಯಾಗಿಲ್ಲ. ಮನರಂಜನೆಯ ಜೊತೆಗೆ ಸಮಾಜಕ್ಕೆ ಒಂದಷ್ಟು ಸಂದೇಶ ನೀಡುತ್ತ ಹೋಗುತ್ತದೆ ಈ ಸಿನಿಮಾ. ಸಾಕಷ್ಟು ಹೊಸ ಪ್ರತಿಭೆಗಳು ಸಿನಿಮಾದಲ್ಲಿದ್ದಾರೆ. ಈ ಸಿನಿಮಾದಿಂದ ಅನೇಕ ಹೊಸಬರು ಮುನ್ನೆಲೆಗೆ ಬರುತ್ತಾರೆ.

● ಸೂರಿ ಅವರ ಜೊತೆಗೆ ಕೆಲಸ ಮಾಡಿದ ಅನುಭವ ಹೇಗಿತ್ತು?

ನನಗೆ ಎರಡನೇ ಸಿನಿಮಾದಲ್ಲಿಯೇ ಸೂರಿ ಅವರಂತಹ ನಿರ್ದೇಶಕರು ಸಿಕ್ಕಿರುವುದು ಒಂದು ರೀತಿ ಅದೃಷ್ಟ ಮತ್ತು ಅವರು ನನ್ನ ಕೆಲಸದ ಮೇಲಿಟ್ಟಿರುವ ನಂಬಿಕೆಗೆ ಇದು ಸಾಕ್ಷಿ. ಅವರು ಕಲ್ಟ್-ಕ್ಲಾಸ್ ಸಿನಿಮಾಗಳಿಗೆ ಹೆಸರಾದವರು. ಅಂಬರೀಶ್ ಅವರಿಂದ ಹಿಡಿದು ಅಪ್ಪು ಅವರವರೆಗೆ ದೊಡ್ಡ ನಟರಿಗೆ ಸಿನಿಮಾ ಮಾಡಿದ್ದಾರೆ. ಅವರ ಸಿನಿಮಾಗಳೆಂದರೆ ನಿರೀಕ್ಷೆ ಸಹಜ. ಅವರದ್ದೇ ಆದ ಒಂದು ಪ್ರೇಕ್ಷಕ ವರ್ಗವಿದೆ. ಈ ಸಿನಿಮಾ ನನ್ನ ಪಾಲಿಗೆ ಒಂದು ಅನುಭವ, ಕಲಿಕೆ ಎರಡೂ ಹೌದು.

● ಈ ಸಿನಿಮಾ ಮುಗಿಸಲು ಬಹಳ ಸಮಯ ತೆಗೆದುಕೊಂಡಿದ್ದು ಏಕೆ?

ಲಾಕ್‌ಡೌನ್‌ಗೆ ಮುಂಚೆ ಪ್ರಾರಂಭವಾದ ಸಿನಿಮಾ ಇದು. ಕೋವಿಡ್‌ನಿಂದಾಗಿ ಚಿತ್ರೀಕರಣ ತಡವಾಯ್ತು. ಸಾಕಷ್ಟು ನೈಜ ಸ್ಥಳಗಳನ್ನು ಕಥೆ ಬೇಡುತ್ತದೆ. ಬೆಂಗಳೂರು, ಮೈಸೂರು, ಚಾಮರಾಜನಗರ, ಕನಕಪುರದಲ್ಲಿ ಚಿತ್ರೀಕರಣ ಮಾಡಿದ್ದೇವೆ. ಒಂದೇ ಸಲಕ್ಕೆ 250-300 ಕಲಾವಿದರು ಬೇಕಾಗಿತ್ತು. ಹೀಗಾಗಿ ಕೋವಿಡ್ ಸಮಸ್ಯೆಗೆ ಪರಿಹಾರ ಸಿಕ್ಕ ನಂತರ ಈ ಭಾಗಗಳನ್ನು ಚಿತ್ರೀಕರಣ ಮಾಡಿದೆವು. ಇದರಿಂದಾಗಿ ಎಲ್ಲ ಪ್ರಕ್ರಿಯೆಗಳು ತಡವಾದವು.

● ಇಲ್ಲಿಯತನಕ ಸಿನಿಮಾ ಪಯಣ ಹೇಗಿತ್ತು? ನಿಮ್ಮ ಮುಂದಿನ ಸಿನಿಮಾಗಳು ಯಾವುವು?

ನಾನು ಈಗಿನ್ನೂ ಅಂಬೆಗಾಲಿಡುತ್ತಿರುವವನು. ‘ಅಮರ್’ ಮಾತ್ರ ತೆರೆಗೆ ಬಂದಿದೆ. ಇನ್ನೂ ಸಾಕಷ್ಟು ದೂರ ಕ್ರಮಿಸಬೇಕಿದೆ. ‘ಹೆಬ್ಬುಲಿ’ ಕೃಷ್ಣ ನಿರ್ದೇಶನದಲ್ಲಿ ‘ಕಾಳಿ’ ಸಿನಿಮಾ ಘೋಷಣೆಯಾಗಿದೆ. ‘ಅಯೋಗ್ಯ’ ಚಿತ್ರದ ಮಹೇಶ್ ಕುಮಾರ್ ನಿರ್ದೇಶನ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಸಿನಿಮಾವೊಂದು ಸಿದ್ಧಗೊಳ್ಳುತ್ತಿದೆ. ಇದರ ಹೊರತಾಗಿ ಇನ್ನೊಂದೆರಡು ಸಿನಿಮಾಗಳು ಕಥಾರಚನೆಯ ಹಂತದಲ್ಲಿವೆ.

● ಮುಂದಿನ ದಿನಗಳಲ್ಲಿ ಆ್ಯಕ್ಷನ್ ಸಿನಿಮಾಗಳನ್ನು ಮಾತ್ರ ಎದುರು ನೋಡುತ್ತಿದ್ದೀರಾ?

ಹಾಗೇನಿಲ್ಲ. ಒಳ್ಳೆಯ ಕಥೆ ಮುಖ್ಯ. ಮೊದಲನೆ ಸಿನಿಮಾ ‘ಅಮರ್’ಗೆ ಹೋಲಿಸಿದರೆ ‘ಬ್ಯಾಡ್ ಮ್ಯಾನರ್ಸ್’ ಬೇರೆಯದೇ ಜಾನರ್ ಸಿನಿಮಾ. ಒಂದೇ ಜಾನರ್‌ನಲ್ಲಿ ಇರುವುದಕ್ಕೆ ನನಗೆ ಇಷ್ಟವಿಲ್ಲ. ಜನರು ಚಿತ್ರಮಂದಿರಕ್ಕೆ ಬರುವುದೇ ಮನರಂಜನೆಗಾಗಿ. ಎರಡೂಕಾಲು ಗಂಟೆ ಜನ ಎಲ್ಲವನ್ನೂ ಮರೆತು ಎಂಜಾಯ್ ಮಾಡುವಂತಹ ಸಿನಿಮಾ ಮಾಡಬೇಕು ಎಂಬುವುದು ನನ್ನ ಗುರಿ. ❖


ಸಿರಿ ರವಿಕುಮಾರ್

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸ್ವಾತಿ ಮುತ್ತಿನೊಳಗಿನ ಸಿರಿ

ಅಭಿಲಾಷ್ ಪಿ.ಎಸ್.

‘ಸಕುಟುಂಬ ಸಮೇತ’ ಸಿನಿಮಾ ಮೂಲಕ ಚಂದನವನದಲ್ಲಿ ಸದ್ದು ಮಾಡಿದ ನಟಿ ಸಿರಿ ರವಿಕುಮಾರ್, ಸದ್ಯ ಐದು ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ಪೈಕಿ ಒಂದು ಸಿನಿಮಾ, ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಇಂದು(ನ.24) ಬಿಡುಗಡೆಯಾಗುತ್ತಿದೆ. ಕೇವಲ 18 ದಿನಗಳಲ್ಲಿ ಪೂರ್ಣಗೊಂಡ ಈ ಸಿನಿಮಾ ಹಿಂದಿನ ಅನುಭವಗಳನ್ನು ಸಿರಿ ‘ಸಿನಿಮಾ ಪುರವಣಿ’ ಜೊತೆಗೆ ಹಂಚಿಕೊಂಡಿದ್ದಾರೆ.

‘ಈ ಸಿನಿಮಾ ನನ್ನ ತೆಕ್ಕೆಗೆ ಬಿದ್ದಿದ್ದು ಆಕಸ್ಮಿಕವಾಗಿ. ಅವಕಾಶ ಸಿಕ್ಕಾಗ ಬಹಳ ಖುಷಿಯಾಗಿತ್ತು. ಸಿನಿಮಾದ ಬಗ್ಗೆ ಹೆಚ್ಚಿನ ನಿರೀಕ್ಷೆ ಇದ್ದ ಕಾರಣ, ಯಾವ ಪಾತ್ರ ನೀಡುತ್ತಾರೆ, ಆ ಪಾತ್ರ ಹೇಗಿರುತ್ತದೆ ಎನ್ನುವ ಕುತೂಹಲ ನನಗಿತ್ತು. ‘ಪ್ರೇರಣಾ’ ಎನ್ನುವ ಪಾತ್ರದ ಬಗ್ಗೆ ವಿವರಣೆ ನೀಡಿದಾಗ, ಇಂತಹ ಪ್ರಮುಖ ಪಾತ್ರವೊಂದನ್ನು ಹೇಗೆ ಮಾಡುವುದು ಎಂಬ ಪ್ರಶ್ನೆ ಮೂಡಿತ್ತು. ‘ಹಾಸ್‌ಪಿಸ್’(ಗುಣಮುಖವಾಗದ ಕಾಯಿಲೆಗೆ ತುತ್ತಾದವರು ಇರುವ ಕೇಂದ್ರ)ನಲ್ಲಿ ಕೌನ್ಸಿಲರ್ ಆಗಿ ಕೆಲಸ ಮಾಡುವ ಆಕೆ ಗಂಭೀರವಾದ ಹೆಣ್ಣು, ಜೀವನದಲ್ಲಿ ಏನನ್ನೂ ಬಯಸದ ವ್ಯಕ್ತಿ ಆಕೆ. ಇಂತಹ ಭಿನ್ನ ಪಾತ್ರವನ್ನು ನಿಭಾಯಿಸುವುದು ಸವಾಲಾಗಿತ್ತು’ ಎನ್ನುತ್ತಾರೆ ಸಿರಿ.

‘ರಾಜ್ ಬಿ.ಶೆಟ್ಟಿ ಅವರು ಹಾಸ್‌ಪಿಸ್‌ನೊಳಗಿನ ಘಟನೆಗಳನ್ನು ಅನುಭವಿಸಿದವರು. ಸಿನಿಮಾದ ಶೂಟಿಂಗ್ ಇಂತಹ ಒಂದು ಕೇಂದ್ರದಲ್ಲೇ ನಡೆಯುತ್ತದೆ ಎನ್ನುವಾಗ ನನಗೂ ಕುತೂಹಲವಿತ್ತು. ಇಲ್ಲಿ ಕೌನ್ಸಿಲರ್ಸ್ ಹೇಗಿರುತ್ತಾರೆ? ರೋಗಿಗಳೊಂದಿಗೆ ಅವರ ಮಾತುಕತೆ ಹೇಗಿರುತ್ತದೆ ಎನ್ನುವುದನ್ನು ತಿಳಿದುಕೊಳ್ಳುವ ಆಸಕ್ತಿ ಹುಟ್ಟಿತು. ಬದುಕುವ ಯಾವ ಭರವಸೆಯೂ ಆ ಕೇಂದ್ರಕ್ಕೆ ದಾಖಲಾದ ರೋಗಿಗಳಿಗೆ ಇರುವುದಿಲ್ಲ. ‘ನಿಮಗೆ ಏನೂ ಆಗುವುದಿಲ್ಲ, ನೀವು ಗುಣಮುಖರಾಗುತ್ತೀರಿ’ ಎಂದು ಹೇಳುವ ಸ್ಥಿತಿಯೂ ಅಲ್ಲಿ ಇರುವುದಿಲ್ಲ. ನಿಜವಾದ ಪ್ರಶ್ನೆಗಳನ್ನು ಎದುರಿಸುವ ಜಾಗವದು. ಸಿನಿಮಾ ಶೂಟಿಂಗ್‌ಗೆ ಮುನ್ನ ‘ಕರುಣಾಶ್ರಯ’ಕ್ಕೆ ಭೇಟಿ ನೀಡಿ ಅಲ್ಲಿನ ಕೌನ್ಸಿಲಿಂಗ್, ವಾತಾವರಣವನ್ನು ಅರಿತುಕೊಂಡೆ. ಅಲ್ಲಿನ ಭಾವನೆಗಳು, ನಿಶ್ಶಬ್ದವನ್ನು ಅನುಭವಿಸಿ ಅರಿತುಕೊಂಡೆ. ಸಿನಿಮಾ ಚಿತ್ರೀಕರಣದ ವೇಳೆಯ ಅನುಭವಗಳು ವೈಯಕ್ತಿಕವಾಗಿ ಹಲವು ಪರಿಣಾಮ ಬೀರಿದವು. ನಿಜ ಜೀವನದಲ್ಲಿ ‘ಹಾಸ್‌ಪಿಸ್’ನಂತಹ ಜಾಗದ ವಾತಾವರಣದ ಬಗ್ಗೆ ನಮಗೆ ಅರಿವು ಇರುವುದಿಲ್ಲ. ಆದರೆ ಅಂತಹ ರೋಗಿಗಳನ್ನು ಸುತ್ತಮುತ್ತ ನೋಡಿರುತ್ತೇವೆ. ಅವರನ್ನು ನೋಡಿದಾಗ, ಅವರ ಸಂಬಂಧಿಕರ ಜೊತೆ ಮಾತನಾಡುವಾಗ ಸಿನಿಮಾದ ಸಂಭಾಷಣೆಗಳು ನೆನಪಾಗುತ್ತವೆ’ ಎಂದರು ಸಿರಿ.

‘ಕೇವಲ 18 ದಿನಗಳಲ್ಲೇ ಈ ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿತ್ತು. ನನ್ನ ಹಿಂದಿನ ಸಿನಿಮಾಗಳೂ ಕಡಿಮೆ ಅವಧಿಯಲ್ಲೇ ಪೂರ್ಣಗೊಂಡಿದ್ದವು. ಹೆಚ್ಚು ವಿರಾಮವಿಲ್ಲದೆ ‘ಸ್ವಾತಿ ಮುತ್ತಿನ..’ ಚಿತ್ರೀಕರಣ ಪೂರ್ಣಗೊಳಿಸಿದ್ದೆವು. ಇದೊಂದು ಹೊಸ ಅನುಭವ. ‘ಪ್ರೇರಣಾ’ ಎನ್ನುವ ಪಾತ್ರದ ಬರವಣಿಗೆ ಬಹಳ ಗಾಢವಾಗಿದೆ. ಹೀಗಾಗಿ ಹೆಚ್ಚಿನ ಸ್ಕ್ರೀನ್‌ಸ್ಪೇಸ್ ನನಗೆ ದೊರಕಿದೆ. ರಾಜ್ ಸಹಜ ವ್ಯಕ್ತಿ. ಅವರಿಗೆ ಹಲವು ರೂಪಗಳಿಲ್ಲ. ನಿರ್ದೇಶಕರಾಗಿ ಅವರಿಗೆ ಕೆಲಸ ತೆಗಿಸಲು ಗೊತ್ತು, ಕಲಾವಿದರಾಗಿ ಸಹ ಕಲಾವಿದನಿಗೆ ಸದಾ ಬೆಂಬಲವಾಗಿರುತ್ತಾರೆ. ಅವರ ಬರವಣಿಗೆಯ ಕಲ್ಪನಾ ಲೋಕದಲ್ಲಿ ನಾವು ಇರಲು ಖುಷಿಯಾಗುತ್ತದೆ. ಅವರಿಂದ ಸಾಕಷ್ಟು ಕಲಿತಿದ್ದೇನೆ’ ಎನ್ನುವುದು ಸಿರಿ ಅಭಿಮತ.

‘ಸದ್ಯ ‘ಆಬ್ರಕಡಾಬ್ರ’, ‘ಬಿಸಿ ಬಿಸಿ ಐಸ್‌ಕ್ರೀಂ’, ಅಭಿಜಿತ್ ಮಹೇಶ್ ನಿರ್ದೇಶನದ ‘ಬ್ಯಾಚುಲರ್ ಪಾರ್ಟಿ’ ಸಿನಿಮಾಗಳ ಬಿಡುಗಡೆಗೆ ಎದುರುನೋಡುತ್ತಿದ್ದೇನೆ. ಜೊತೆಗೆ ಪಿಆರ್‌ಕೆ ಪ್ರೊಡಕ್ಷನ್‌ನ, ಆಶಿಕಾ ರಂಗನಾಥ್ ಅವರು ನಟಿಸಿರುವ ‘O2’ ಸಿನಿಮಾದಲ್ಲೂ ನಾನೊಂದು ಪಾತ್ರ ಮಾಡಿದ್ದೇನೆ. ಹೊಸ ಸಿನಿಮಾಗಳ ಮಾತುಕತೆ ನಡೆಯುತ್ತಿದೆ’ ಎಂದ ಸಿರಿ, ಮಾತಿಗೆ ವಿರಾಮವಿತ್ತರು. ❖

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಾಳೆಯಿಂದ ಕಂಬಳ ಸಂಭ್ರಮ

ಉಪ್ಪಿನಂಗಡಿ: ಕೋಣಗಳಿಗೆ ಬೀಳ್ಕೊಡುಗೆ

• ಸಿದ್ದಿಕ್ ನೀರಾಜೆ

ಮುಖ್ಯಾಂಶಗಳು
- ಕಂಬಳ ಸಮಿತಿಯಿಂದ ಕೋಣಗಳ ನೋಂದಣಿ
- ಬ್ಯಾಂಡ್ ವಾದ್ಯಗಳೊಂದಿಗೆ ಮೆರವಣಿಗೆ ನಡೆಸಿದ ಆಯೋಜಕರು
- ಕೋಣಗಳಿಗೆ ಹುರುಳಿ, ಬೈಹುಲ್ಲು, ಕುಡಿಯುವ ನೀರಿನ ವ್ಯವಸ್ಥೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಬೆಂಗಳೂರು ಅರಮನೆ ಮೈದಾನದಲ್ಲಿ ಶನಿವಾರ ಮತ್ತು ಭಾನುವಾರ ನಡೆಯುವ ಕಂಬಳದಲ್ಲಿ ಭಾಗವಹಿಸಲು ಕರಾವಳಿಯ ವಿವಿಧೆಡೆಯಿಂದ ಬಂದ ಕೋಣಗಳನ್ನು ಉಪ್ಪಿನಂಗಡಿಯಲ್ಲಿ ಗುರುವಾರ ಸ್ವಾಗತಿಸಿ, ಬೀಳ್ಕೊಡಲಾಯಿತು.

ಕೋಣಗಳ ಯಜಮಾನರನ್ನು ಕಂಬಳ ಸಮಿತಿಯಿಂದ ಸ್ವಾಗತಿಸಲಾಯಿತು. ಪಶು ಸಂಗೋಪನಾ ಇಲಾಖೆಯ ಪಶು ವೈದ್ಯಾಧಿಕಾರಿ ಕೋಣಗಳ ಸಾಗಾಟಕ್ಕೆ ಅನುಮತಿ ಪತ್ರ ನೀಡಿದರು. ಕಂಬಳ ಸಮಿತಿಯಿಂದ ಕೋಣಗಳ ನೋಂದಣಿ ನಡೆಯಿತು. ಕಾಲೇಜು ಮೈದಾನದಿಂದ ರಾಷ್ಟ್ರೀಯ ಹೆದ್ದಾರಿವರೆಗೆ ಕೊಂಬು-ಕಹಳೆ, ಬ್ಯಾಂಡ್ ವಾದ್ಯಗಳೊಂದಿಗೆ ಮೆರವಣಿಗೆ ನಡೆಯಿತು.

ಬೆಂಗಳೂರು ಕಂಬಳ ಸಮಿತಿ ಕಾರ್ಯಾಧ್ಯಕ್ಷ ಮುರಳೀಧರ ರೈ ಮಠಂತಬೆಟ್ಟು, ಸಂಚಾಲಕರಾದ ನಿರಂಜನ್ ರೈ ಮಠಂತಬೆಟ್ಟು, ಎಂ.ರಾಜೀವ ಶೆಟ್ಟಿ ಎಡ್ತೂರು, ರಾಜೇಶ್ ಶೆಟ್ಟಿ, ಪುತ್ತೂರು ಕೋಟಿ-ಚೆನ್ನಯ ಕಂಬಳ ಸಮಿತಿ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಉಪ್ಪಿನಂಗಡಿ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿ ಗೌರವಾಧ್ಯಕ್ಷ ಎನ್. ಉಮೇಶ ಶೆಣೈ, ಪ್ರಧಾನ ಕಾರ್ಯದರ್ಶಿ ಕೇಶವ ಭಂಡಾರಿ ಬೆಳ್ಳಿಪ್ಪಾಡಿ ಕೃಪ ಇದ್ದರು.

170 ಜೋಡಿ ಕೋಣಗಳ ನೋಂದಣಿ: ಉಪ್ಪಿನಂಗಡಿಯಲ್ಲಿ ಗುರುವಾರ ಬೆಳಿಗ್ಗೆ 100 ಜೋಡಿ ಕೋಣಗಳ ನೋಂದಣಿ ಮಾಡಲಾಯಿತು. ಕೆಲವು ಕೋಣಗಳು ಗುಂಡ್ಯ ಮತ್ತು ಸಕಲೇಶಪುರದಲ್ಲಿ ಜೊತೆಯಾದವು.

ಕೆಲ ಕೋಣಗಳು ಬುಧವಾರವೇ ಬೆಂಗಳೂರು ತಲುಪಿದ್ದು, ಅಲ್ಲಿನ ಕಂಬಳ ಕರೆಯಲ್ಲಿ ಕೋಣಗಳ ಕುದಿ ಓಟ (ಪ್ರಾಯೋಗಿಕ ಓಟ) ನಡೆದಿದೆ. ಇನ್ನು ಕೆಲವು ಕೋಣಗಳ ಯಜಮಾನರು ಶುಕ್ರವಾರ ಬೆಳಿಗ್ಗೆ ಹೊರಡಲಿದ್ದಾರೆ.

ಈ ಎಲ್ಲ ಕೋಣಗಳು ಸೇರಿ 170 ಜೋಡಿ ಕೋಣಗಳ ನೋಂದಣಿ ಕಾರ್ಯ ನಡೆದಿದೆ. ಈ ಎಲ್ಲ ಕೋಣಗಳೂ ಕರೆಯಲ್ಲಿ ಓಡದಿದ್ದರೂ ಸುಮಾರು 150 ಜತೆ ಕೋಣಗಳು ಭಾಗವಹಿಸುವುದು ನಿಶ್ಚಿತ ಎಂದು ಕಂಬಳ ಸಮಿತಿಯವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹುರುಳಿ, ಬೈಹುಲ್ಲು, ನೀರಿನ ವ್ಯವಸ್ಥೆ: ಉಪ್ಪಿನಂಗಡಿಯಿಂದ ಹೊರಟ ಕಂಬಳ ಕೋಣಗಳಿಗೆ ಹಾಸನದ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯದ ಮೈದಾನದಲ್ಲಿ ವಿಶ್ರಾಂತಿಗೆ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಕೋಣಗಳಿಗೆ ಬೈಹುಲ್ಲು, ನೀರು, ಹುರುಳಿ ದಾಸ್ತಾನು ಮಾಡಲಾಗಿತ್ತು. ಅಲ್ಲದೆ, ಪ್ರಯಾಣದ ಉದ್ದಕ್ಕೂ ನೀರು ತುಂಬಿದ ಟ್ಯಾಂಕರ್‌ಗಳು ಕೋಣಗಳೊಂದಿಗೆ ಸಂಚರಿಸಿದವು.

‘ಹಾಸನದಲ್ಲಿ ಕೋಣಗಳಿಗೆ ಬೇಕಾದ ವ್ಯವಸ್ಥೆಯ ಉಸ್ತುವಾರಿಯನ್ನು ಕಂಬಳ ಸಮಿತಿ, ತುಳು ಕೂಟ, ಕನ್ನಡಪರ ಸಂಘಟನೆಗಳ ಸಹಕಾರದಲ್ಲಿ ಶಾಸಕ ಎಚ್.ಡಿ.ರೇವಣ್ಣ ವಹಿಸಿಕೊಂಡಿದ್ದರು’ ಎಂದು ಬೆಂಗಳೂರು ಕಂಬಳ ಸಮಿತಿ ಕಾರ್ಯಾಧ್ಯಕ್ಷ ಮುರಳೀಧರ ರೈ ಮಠಂತಬೆಟ್ಟು ತಿಳಿಸಿದರು.


‘ಬೆಂಗಳೂರು ಕಂಬಳ ನಮ್ಮ ಕಂಬಳ’ ಹೆಸರಿನಡಿ ನಡೆಯುವ ಕಂಬಳದ ಅಂಗವಾಗಿ ಕಂಬಳ ಕುದಿಗೆ (ಕೋಣಗಳ ಪ್ರಾಯೋಗಿಕ ಓಟ) ಓಡಿಸಲು ಕೋಣಗಳಿಗೆ ಸ್ನಾನ ಮಾಡಿಸಲಾಯಿತು ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಕರೆ ಪರೀಕ್ಷೆಯ ‘ಕುದಿ ಕಂಬಳ’ಕ್ಕೆ ಚಾಲನೆ

ಬೆಂಗಳೂರು: ಕಂಬಳಕ್ಕಿಂತ ಮೊದಲು ನಡೆಯುವ ಕುದಿ ಕಂಬಳಕ್ಕೆ ಗುರುವಾರ ಇಲ್ಲಿನ ಅರಮನೆ ಮೈದಾನದಲ್ಲಿ ನಿರ್ಮಿಸಲಾದ ‘ಕರೆ’ಯಲ್ಲಿ ಚಾಲನೆ ನೀಡಲಾಯಿತು.

ಕರಾವಳಿಯಲ್ಲಿ ‘ಕಂಬಳ ಕರೆ’ ನಿರ್ಮಿಸಿ, ಪ್ರಾಯೋಗಿಕವಾಗಿ ಕೋಣಗಳನ್ನು ಓಡಿಸಲಾಗುತ್ತದೆ. ಕೋಣಗಳಿಗೆ ತಾಲೀಮು, ಕರೆಯ ಗುಣಮಟ್ಟದ ಪರೀಕ್ಷೆಗಳು ಈ ಮೂಲಕ ನಡೆಸಲಾಗುತ್ತದೆ. ಬಳಿಕ ಅಧಿಕೃತ ಕಂಬಳಕ್ಕೆ ಮುಹೂರ್ತ (ಕುದಿ) ನಿಗದಿ ಮಾಡಲಾಗುತ್ತದೆ. ಬೆಂಗಳೂರಿನಲ್ಲಿ ನ.25ರ ಬೆಳಿಗ್ಗೆಯಿಂದ ನಡೆಯಲಿರುವ ‘ಬೆಂಗಳೂರು ಕಂಬಳ ನಮ್ಮ ಕಂಬಳ’ಕ್ಕೆ ಪೂರ್ವಭಾವಿಯಾಗಿ ‘ಕುದಿ ಕಂಬಳ’ ನಡೆಸಲಾಯಿತು.

ಬೆಂಗಳೂರು ಕಂಬಳ ಸಮಿತಿಯ ಅಧ್ಯಕ್ಷರಾಗಿರುವ ಶಾಸಕ ಅಶೋಕ್ ರೈ ‘ಕುದಿ ಕಂಬಳ’ ಉದ್ಘಾಟಿಸಿದರು. ಮಹಿಳೆಯರು ಕರೆ ಪೂಜೆ ನೆರವೇರಿಸಿದರು. ತಿಂಗಳಾಡಿ ರೋಹಿತ್ ಬಂಗೇರ ಅವರ ಎರಡು ಜೊತೆ ಕೋಣಗಳು, ಸುಳ್ಯದ ಕಾಂತಮಂಗಲದ ಒಂದು ಜೊತೆ ಕೋಣಗಳನ್ನು-ಕುದಿ ಕಂಬಳದಲ್ಲಿ ಪ್ರಾಯೋಗಿಕವಾಗಿ ಓಡಿಸಲಾಯಿತು. ಕೋಣಗಳು ಓಡುವ ‘ಕರೆ’ಯ ಪರಿಶೀಲನೆ ನಡೆಸಲಾಯಿತು.

‘ಶನಿವಾರ ಬೆಳಿಗ್ಗೆ 10.30ಕ್ಕೆ ಕಂಬಳ ಆರಂಭವಾದರೂ ನೈಜ ಕಂಬಳ ಸಂಜೆ ರಂಗೇರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಜೆ 5.30ಕ್ಕೆ ಬರಲಿದ್ದಾರೆ. ಕೋಣಗಳಿಗೆ ಹುರಿದುಂಬಿಸಲು ಬೆಂಗಳೂರು ಕಂಬಳದ ಪೂರ್ವಭಾವಿಯಾಗಿ ದಕ್ಷಿಣ ಕನ್ನಡದಿಂದ ಆಗಮಿಸಿದ ಮೂರು ಜೋಡಿ ಕೋಣಗಳು ಕುದಿ ಕಂಬಳದಲ್ಲಿ ಓಡಿಸಲಾಗಿದೆ’ ಎಂದು ಎಂದು ಅಶೋಕ್ ಕುಮಾರ್ ರೈ ತಿಳಿಸಿದರು.

ವಿಷ್ಣುವಿನ ಎಚ್ಚರವೂ ತುಳಸಿಯ ಮದುವೆಯೂ

• ನವೀನ ಗಂಗೋತ್ರಿ

ಇಂದು ಉತ್ಥಾನ ದ್ವಾದಶಿ

‘ಉತ್ಥಾನ ದ್ವಾದಶಿ’ ಎನ್ನುವುದು ವಿಷ್ಣುಜಾಗೃತಿಯ ಪುಣ್ಯಕಾಲ. ದೇವದೇವತೆಗಳನ್ನು ಮಾನವೀಯ ಅಂಶಗಳುಳ್ಳವ-ರನ್ನಾಗಿ ಗ್ರಹಿಸುವ ನಮ್ಮ ಪರಂಪರೆಯಲ್ಲಿ ಮಹಾವಿಷ್ಣುವಿಗೆ ಪೂಜೆಯ ಅಂಗವಾಗಿ ಜೀವಲೋಕದ ಎಲ್ಲ ಬಗೆಯ ಸೇವಗಳು ಸಲ್ಲುವಂತೆಯೇ ಜೀವಲೋಕದ ವ್ಯಾಪಾರವೂ ಆರೋಪಿತವಾಗಿದೆ. ಸಗುಣೋಪಾಸನೆಯಲ್ಲಿ ದೇವನು ನಮ್ಮಂತೆ ಉಣ್ಣುವ, ಮೀಯುವ, ಮಲಗುವ, ನಲಿವ ಸಂಗತಿಯೆಂದು ಭಾರತೀಯ ಮನಸ್ಸು ಗ್ರಹಿಸುತ್ತದೆ. ಅದರಂತೆ ವಿಷ್ಣುವು ಯೋಗನಿದ್ರೆಗೆ ಸರಿಯುವ ಕಾಲ ಶಯನ ಏಕಾದಶೀ ತಿಥಿಯಾದರೆ (ಆಷಾಢ ಶುದ್ಧ ಏಕಾದಶೀ. ಇದನ್ನೇ ಪ್ರಥಮೈಕಾದಶೀ ಎಂದೂ ಕರೆಯುತ್ತಾರೆ), ಬಳಿಕ ನಿದ್ರಾಸುಖವನ್ನು ತ್ಯಜಿಸಿ ಮಹಾವಿಷ್ಣು ಎಚ್ಚರಾಗುವ ದಿನವೇ ‘ಉತ್ಥಾನ ದ್ವಾದಶೀ’ (ಕಾರ್ತಿಕ ಶುದ್ಧ ದ್ವಾದಶೀ ತಿಥಿ).

‘ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ’ ಎಂಬ ಪ್ರಸಿದ್ಧ ಸುಪ್ರಭಾತದ ಮೂಲಕ ಪ್ರತಿದಿನವೂ ವಿಷ್ಣುವಿಗೆ ಸುಪ್ರಭಾತವನ್ನು ಬಯಸುವ ಭಾರತೀಯ ಭಾವುಕ ಮನಸ್ಸಿಗೆ ಉತ್ಥಾನ ದ್ವಾದಶೀ ತಿಥಿಯು ವಿಷ್ಣುವಿನ ಉತ್ಥಾನಕ್ಕೆ (ಎದ್ದೇಳುವಿಕೆಗೆ) ಸಂಬಂಧಿಸಿದ್ದಾದ್ದ-ರಿಂದ ಇನ್ನೂ ಹೆಚ್ಚು ಮಹತ್ತ್ವದ್ದು ಎಂಬ ಭಾವ. ವಾಲ್ಮೀಕಿ ರಾಮಾಯಣದ ವಿಶ್ವಾಮಿತ್ರ ಮಹರ್ಷಿಯಾದರೂ ರಾಮನೆಂಬೋ ಅವತಾರಪುರುಷನನ್ನು ‘ಕೌಸಲ್ಯಾ ಸುಪ್ರಜಾ ರಾಮ ಪೂರ್ವಾ ಸಂಧ್ಯಾ...’ ಎಂದು ಮುಂತಾಗಿ ಹೇಳಿ ಎಬ್ಬಿಸಿದ್ದನ್ನು ನಮ್ಮ ಪರಂಪರೆ ಇವತ್ತಿಗೂ ಪ್ರತಿದಿನ ನೆನಪಿಸಿಕೊಳ್ಳುತ್ತದೆಯಷ್ಟೆ. ಜಗತ್ಪಾಲಕನಾದ ಗೋವಿಂದನು ನಿದ್ದೆ ತೊರೆದೇಳುವುದೆಂದರೆ ಅದು ಲೋಕಕ್ಕೆಲ್ಲ ಎಚ್ಚರಿನ ಚೈತನ್ಯವನ್ನು ತರುವ ಕಾಲ. ಇದನ್ನೇ ‘ಪ್ರಬೋಧೋತ್ಸವ’ ಎಂದು ಗುರುತಿಸುವುದೂ ಇದೆ.

ಹೀಗೆ ಎಚ್ಚರಾದ ನಾರಾಯಣನಿಗೆ ತುಳಸಿಯೊಂದಿಗೆ ವಿವಾಹ ಮಾಡುವುದು ಸಂಪ್ರದಾಯ. ಇಂದಿಗೂ ದಕ್ಷಿಣ ಭಾರತದ ಬಹುತೇಕ ಊರು ಕೇರಿಗಳಲ್ಲಿ ನಾರಾಯಣನ ಪ್ರತೀಕವಾಗಿ ಫಲಭರಿತವಾದ ಬೆಟ್ಟದ ನೆಲ್ಲಿಯ ಟೊಂಗೆಯನ್ನು ತಂದು ಮನೆಯ ತುಲಸೀ ಪೀಠದಲ್ಲಿ ತುಲಸಿಯ ಜೊತೆಗೆ ನಿಲ್ಲಿಸಿ ದ್ವಾದಶಿಯ ಸಂಜೆಯಂದು ತುಲಸೀವಿವಾಹವನ್ನು ನೆರವೇರಿಸುತ್ತಾರೆ. ವಿವಿಧ ಸಮುದಾಯಗಳಲ್ಲಿ ಮತ್ತು ಭಾಷೆಗಳಲ್ಲಿ ತುಲಸೀವಿವಾಹಕ್ಕೆಂದೇ ರಚಿತವಾದ ಸಾಂಪ್ರದಾಯಿಕ ಹಾಡುಗಳು ಸ್ಥಳೀಯ ಸಂಸ್ಕೃತಿಗಳ ಶ್ರೀಮಂತಿಕೆಯ ಪ್ರತೀಕವೂ ಹೌದು.



ಇಲ್ಲಿನ ಎಲ್ಲ ಆಚರಣೆಗಳಿಗೂ ಸಂಪ್ರದಾಯವು ನೆಚ್ಚಿಕೊಂಡ ವಿವಿಧ ಕಥೆಗಳಿವೆ. ಇವು ಸಂವಾದದ ರೂಪದಲ್ಲಿ ನಿರೂಪಿತವಾದ ಕಥೆಗಳು. ವಿಷ್ಣುವಿಗೆ ಸಂಬಂಧಿಸಿದ ಹಲವಾರು ಕಥೆಗಳು ಪಾರ್ವತೀಪರಮೇಶ್ವರರ ನಡುವಿನ ಸಂವಾದದಲ್ಲಿ ತೋರಿಕೊಂಡಿದ್ದು ಶೈವ-ವೈಷ್ಣವ ಭೇದರಾಹಿತ್ಯಕ್ಕೆ ಪುರಾವೆಯೂ ಹೌದು.

ರಾಕ್ಷಸ ಜಲಂಧರನ ಮಡದಿಯಾಗಿದ್ದ ಮಹಾಪತಿವ್ರತೆ ವೃಂದಾ (‘ತುಲಸೀ’) ವಿಷ್ಣುವಿನ ಕಾರಣದಿಂದ ಪಾತಿವ್ರತ್ಯ-ಭಂಗಕ್ಕೆ ಒಳಗಾಗಬೇಕಾದ ಸಂದರ್ಭ ಒದಗುತ್ತದೆ. ಆಕೆಯ ಪಾತಿವ್ರತ್ಯದ ಬಲದಿಂದ ಲೋಕಕಂಟಕನಾಗಿ ಮೆರೆಯುತ್ತಿದ್ದ ಜಲಂಧರನನ್ನು ನಿಗ್ರಹಿಸಲು ವಿಷ್ಣುವಿಗಾದರೂ ಇದು ಅನಿವಾರ್ಯವಾಗಿತ್ತು. ಬಳಿಕ ಪತಿವಿಯೋಗದಿಂದ ದುಃಖಿತಳಾದ ವೃಂದಾ ‘ನಿನಗೂ ಪತ್ನೀವಿಯೋಗದ ದುಃಖ ಒದಗಲಿ’ ಎಂದು ವಿಷ್ಣುವನ್ನು ಶಪಿಸಿ ಸಹಗ-ಮನಗೈಯುತ್ತಾಳೆ. ಮುಂದೆ ಪಾರ್ವತಿಯಿಂದ ರಚಿತವಾದ ಸುಂದರವಾದ ವೃಂದಾವನದಲ್ಲಿ (ತುಲಸೀವನ) ನೆಲ್ಲಿಯಾಗಿ ಬೆಳೆದ ವಿಷ್ಣು ಆಕೆಯನ್ನು ವರಿಸುತ್ತಾನೆ. ಇದಕ್ಕೆ ಸಂವಾದಿಯಾಗಿ ತುಲಸೀ (ವೃಂದಾ) ಮುಂದೆ ರುಕ್ಮಿಣಿಯಾಗಿ ಜನಿಸಿ ಕಾರ್ತಿಕದ್ವಾದಶಿಯಂದೇ ಶ್ರೀಕೃಷ್ಣನನ್ನು ವರಿಸುತ್ತಾಳೆ.

ಉತ್ಥಾನದ್ವಾದಶಿಯ ಹಿನ್ನೆಲೆಯಲ್ಲಿ ಪ್ರಸಿದ್ಧವಾದ ಇನ್ನೊಂದು ಕಥೆ ರಾಜಾ ಅಂಬರೀಷ ಮತ್ತು ದುರ್ವಾಸರದ್ದು. ಕಥೆಗಳು ಮತ್ತು ಮರಗಿಡಗಳ-ನ್ನು ಒಳಗೊಳ್ಳುವ ಆಚರಣೆಗಳು ನಮ್ಮ ಹಬ್ಬಗಳನ್ನು ಹೇಗೆ ಅನನ್ಯವಾಗಿಸುತ್ತವೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ತುಲಸೀಕಲ್ಯಾಣದ ಈ ಪರ್ವ ಕಾರ್ತಿಕದ ಪ್ರಭೆಯನ್ನು ಎಲ್ಲ ಕಣ್ಣುಗಳಲ್ಲಿ ತುಂಬಲಿ. ❖


ಮಹಾರಾಷ್ಟ್ರದ ಪಂಢರಪುರದಲ್ಲಿ ಗುರುವಾರ ಭಕ್ತರು ಚಂದ್ರಭಾಗಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿದರು

ಬಾಲಕಿ ಮೇಲೆ ಅತ್ಯಾಚಾರ ಎಸಗಿದ ವೃದ್ಧನ ಬಂಧನ

ಹೊಳೆಹೊನ್ನೂರು: 76 ವರ್ಷದ ವೃದ್ಧನೊಬ್ಬ 10 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಘಟನೆ ಸಮೀಪದ ಗ್ರಾಮವೊಂದ-ರಲ್ಲಿ ನಡೆದಿದ್ದು, ಆರೋಪಿಯನ್ನು ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಈ ಸಂಬಂಧ ಪಾಲಕರು ಹೊಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅಳವಂಡಿ ಸರ್ಕಾರಿ ಶಾಲೆಗೆ ನ್ಯಾಯಾಧೀಶರ ಭೇಟಿ

ವರದಿ ಪರಿಣಾಮ

ಅಳವಂಡಿ (ಕೊಪ್ಪಳ ಜಿಲ್ಲೆ): ಕೊಪ್ಪಳ ತಾಲ್ಲೂಕಿನ ಅಳವಂಡಿಯ ಮುದುಕನಗೌಡ ಗಾಳಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಗುರುವಾರ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ-ಗಳಾದ ದೇವೇಂದ್ರ ಪಂಡಿತ್ ಅವರು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ತುರ್ತಾಗಿ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು.

ಈ ಪ್ರೌಢಶಾಲೆಯಲ್ಲಿ 8ರಿಂದ 10ನೇ ತರಗತಿವರೆಗೆ 305 ವಿದ್ಯಾರ್ಥಿನಿಯರು ಓದುತ್ತಿದ್ದು, ಅವರಿಗೆ ಶೌಚಾಲಯದ ಕೊರತೆಯಾಗಿದ್ದರಿಂದ ಶೌಚಕ್ಕೆ ಬಯಲಿಗೆ ಹೋಗಬೇಕಾಗಿದೆ. ಈ ಸಮಸ್ಯೆ ಕುರಿತು ‘ಪ್ರಜಾವಾಣಿ’ಯ ಗುರುವಾರದ ಸಂಚಿಕೆಯಲ್ಲಿ ‘ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಕ್ಕೆ ಬಯಲೇ ಗತಿ’ ತಲೆಬರಹ-ದಲ್ಲಿ ವಿಶೇಷ ವರದಿ ಪ್ರಕಟಗೊಂಡಿತ್ತು.

ಪ್ರಧಾನ ಜಿಲ್ಲಾ ಮತ್ತು ಸಷೆನ್ಸ್ ನ್ಯಾಯಾಧೀಶರಾದ ಚಂದ್ರಶೇಖರ ಸಿ. ಅವರ ನಿರ್ದಶನದ ಮೇರೆಗೆ ದೇವೇಂದ್ರ ಪಂಡಿತ್ ಅವರು ಶಾಲೆಗೆ ಭೇಟಿ ನೀಡಿ ಶೌಚಾಲಯ ಅವ್ಯವಸ್ಥೆಯನ್ನು ಪರಿಶೀಲಿಸಿದರು.

ವಿದ್ಯಾರ್ಥಿನಿಯರಿಗೆ ಬಳಕೆಗೆ ಉಪಯುಕ್ತ-ವಾಗುವ ರೀತಿಯಲ್ಲಿ ದುರಸ್ತಿ ಮಾಡಬೇಕು. ತುರ್ತಾಗಿ ನೀರಿನ ಸಂಪರ್ಕ ಕಲ್ಪಿಸಬೇಕು ಎಂದು ದೇವೇಂದ್ರ ಪಂಡಿತ್ ಹೇಳಿದರು. ಆಗ ಅಧಿಕಾರಿಗಳು ಈಗಿರುವ ಶೌಚಾಲಯ ದುರಸ್ತಿ ಪಡಿಸಿ, ಒಂದು ವಾರದೊಳಗೆ ಇನ್ನೊಂದು ಶೌಚಾಲಯ ಕಟ್ಟಿಸಿಕೊಡು-ವುದಾಗಿ ಹೇಳಿದರು.

ಪಂಢರಪುರಕ್ಕೆ ಹರಿದು ಬಂದ ಭಕ್ತರು

• ಅಲ್ಲಮಪ್ರಭು ಕರ್ಜಗಿ

ಪಂಢರಪುರ (ಚಡಚಣ/ವಿಜಯಪುರ): ಕಾರ್ತೀಕ ಏಕಾದಶಿ ಹಿನ್ನೆಲೆಯಲ್ಲಿ ಗುರುವಾರ ಪಂಢರಪುರಕ್ಕೆ ಭಕ್ತ ಸಾಗರವೇ ಹರಿದು ಬಂದಿತು.

ಕಾರ್ತೀಕ ಏಕಾದಶಿ ಮುನ್ನಾ ದಿನವೇ ವಾರಿ (ಪಾದಯಾತ್ರೆ) ಮೂಲಕ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ರಾಜ್ಯದ ಸುಮಾರು ಮೂರು ಲಕ್ಷಕ್ಕೂ ಅಧಿಕ ಭಕ್ತರು ಪಂಢರಪುರಕ್ಕೆ ಆಗಮಿಸಿ, ಇಲ್ಲಿನ ಚಂದ್ರಭಾಗ ನದಿಯಲ್ಲಿ ಸ್ನಾನ ಮಾಡಿ ವಿಠ್ಠಲನ ದರ್ಶನ ಪಡೆದರು.

ಸಂಪ್ರದಾಯದಂತೆ ಮಹಾರಾಷ್ಟ್ರ ಸರ್ಕಾರದ ಪ್ರಥಮ ಪೂಜೆಯನ್ನು ಈ ಬಾರಿ ಉಪ ಮುಖ್ಯಮಂತ್ರಿ ದೇವೀಂದ್ರ ಫಡ್ನವಿಸ್ ದಂಪತಿ ನೆರವೇರಿಸಿದರು.

ನಾಮ ಸಂಕೀರ್ತನೆ: ಏಕಾದಶಿ ದಿನದಂದು ವಾರ್ಕರಿ ಸಪ್ತಾಹ ಜರುಗಿತು. ಸಂತ ಜ್ಞಾನೇಶ್ವರ, ಏಕನಾಥ, ತುಕಾರಾಮ, ಪುಂಡಲೀಕ ನಾಮದೇವ, ದಾಮಾಜಿ, ಮೀರಾಬಾಯಿ, ಮುಕ್ತಾಬಾಯಿ, ಕಬೀರದಾಸ, ರಾಮದಾಸ, ತುಳಸಿದಾಸ, ಸೂರದಾಸರ ಅಭಂಗ ಪದ್ಯಗಳನ್ನು ವಾರ್ಕರಿ ರಾಗದಿಂದ ಹಾಡುತ್ತಾ ಕುಣಿಯುತ್ತ ಭಜನೆ, ನಾಮ ಸಂಕೀರ್ತನೆಗಳಲ್ಲಿ ಭಕ್ತರು ಮೈಮರೆತರು.

ತುಳಸಿ ಮಾಲೆ ಧರಿಸಿದ ಸಂತರು, ತಲೆಯ ಮೇಲೆ ತುಳಸಿಕಟ್ಟೆ ಹೊತ್ತು, ಹೆಜ್ಜೆ ಹಾಕುತ್ತಾ ಕೈ ಕೈ ಹಿಡಿದುಕೊಂಡು ಕುಣಿದು ಸಂಭ್ರಮಿಸಿ ಗೋಪಾಲನಿಗೆ ಜೈಕಾರ ಹಾಕಿದರು. ಪಂಢರಪುರದ ಪ್ರಮುಖ ಬೀದಿಗಳಲ್ಲಿ ಸಂಜೆ ವಿಠ್ಠಲ ರುಕ್ಮಿಣಿ ಪಲ್ಲಕ್ಕಿ ಉತ್ಸವ ನಡೆಯಿತು.

ಒತ್ತುವರಿ ಪರಿಶೀಲನೆಗೆ ಸೂಚನೆ

ಒಂದನೇ ಪುಟದಿಂದ

ದಾಸನಪುರ ಉಪ ನೋಂದಣಿ ಕಚೇರಿಯಲ್ಲಿ 2008ರ ಮೇ 29ರಂದು ನೋಂದಾಯಿತ ಅಡಮಾನ ಕರಾರು ಪತ್ರ (ಡಿಎಸ್‌ಪಿ-1-00213-2008-09) ಮೂಲಕ ಈ ಜಾಗವನ್ನು ಲಕ್ಷ್ಮಿಕಾಂತ ಅವರು ಕೆನರಾ ಬ್ಯಾಂಕಿನಲ್ಲಿ ಅಡ ಇಟ್ಟು ₹1.24 ಕೋಟಿ ಸಾಲ ಪಡೆದಿದ್ದರು. ನಂತರ, ದಾಸನಪುರ ಉಪ ನೋಂದಣಿ ಕಚೇರಿಯಲ್ಲಿ 2009ರ ಮಾರ್ಚ್ 17ರಂದು ನೋಂದಾಯಿತ ಅಡಮಾನ ಕರಾರು ಪತ್ರ (ಡಿಎಸ್‌ಪಿ-1-07197- 2008-09) ಮೂಲಕ ಮತ್ತೊಮ್ಮೆ ಇದೇ ಜಾಗವನ್ನು ಲಕ್ಷ್ಮಿಕಾಂತ ಅವರು ಕೆನರಾ ಬ್ಯಾಂಕಿನಲ್ಲಿ ಅಡ ಇಟ್ಟು ₹42.45 ಲಕ್ಷ ಸಾಲ ಪಡೆದಿದ್ದರು.

ನೋಂದಾಯಿತ ಡಿಸ್ಚಾರ್ಜ್ ಡೀಡ್ (ಡಿಎಸ್‌ಪಿ-1-00059-2021-22) ಮೂಲಕ 2021ರ ಮಾರ್ಚ್ 25ರಂದು ಬ್ಯಾಂಕಿನಲ್ಲಿದ್ದ ಸಾಲವನ್ನು ಮುಕ್ತಾಯ-ಗೊಳಿಸಲಾಗಿದೆ.

ಜಾಗದ ಮಾಲೀಕತ್ವವು ಕೆನರಾ ಬ್ಯಾಂಕಿನಿಂದ ಲಕ್ಷ್ಮಿಕಾಂತ ಅವರಿಗೆ ವರ್ಗಾವಣೆ ಆಗಿತ್ತು. ಆ ಬಳಿಕ, ಲಕ್ಷ್ಮಿಕಾಂತ ಅವರು ತಮ್ಮ ಸಹೋದರ ಎನ್. ಚಲುವರಾಯ-ಸ್ವಾಮಿ ಅವರಿಗೆ 2021ರ ಏಪ್ರಿಲ್ 27ರಂದು ಮಾಕಳಿ ಗ್ರಾಮದ ಸರ್ವೆ ನಂಬರ್ 13ರ 3 ಎಕರೆ 31 ಗುಂಟೆ ಜಾಗವನ್ನು ದಾನವಾಗಿ ನೀಡಿದ್ದಾರೆ.

‘ರಾಜ್ಯಪಾಲರು ಅನಿರ್ದಿಷ್ಟಾವಧಿಗೆ ಮಸೂದೆ ಬಾಕಿ ಉಳಿಸುವಂತಿಲ್ಲ’

ಒಂದನೇ ಪುಟದಿಂದ

‘ಈ ಅಧಿವೇಶನಗಳು ಸಿಂಧುವಾಗಿದ್ದು, ಸ್ಪೀಕರ್ ತೀರ್ಮಾನ ಕೈಗೊಂಡ ನಂತರ ಈ ವಿಚಾರವಾಗಿ ರಾಜ್ಯಪಾಲರು ಕ್ರಮ ಕೈಗೊಳ್ಳುವಂತಿಲ್ಲ’ ಎಂದೂ ನ್ಯಾಯಪೀಠವು ಆದೇಶದಲ್ಲಿ ಹೇಳಿದೆ.

‘ಸಂವಿಧಾನದ 200ನೇ ವಿಧಿ ಪ್ರಕಾರ ರಾಜ್ಯಪಾಲರು ಮೂರು ಆಯ್ಕೆಗಳನ್ನು ಹೊಂದಿದ್ದಾರೆ. ಮಸೂದೆಗೆ ಅಂಕಿತ ಹಾಕುವುದು, ಅಂಕಿತ ಹಾಕುವುದನ್ನು ತಡೆ ಹಿಡಿಯುವುದು ಇಲ್ಲವೇ ರಾಷ್ಟ್ರಪತಿಗಳು ಪರಿಶೀಲನೆ ನಡೆಸುವ ಸಂಬಂಧ ಮಸೂದೆ ಕಾಯ್ದಿರಿಸುವ ಆಯ್ಕೆಗಳನ್ನು ಹೊಂದಿದ್ದಾರೆ’ ‘ಆದರೆ, ಕಾನೂನು ರಚಿಸುವ ಶಾಸನ ಸಭೆಗಳ ಪ್ರಕ್ರಿಯೆಯನ್ನು ವಿಫಲಗೊಳಿಸುವ ಅಧಿಕಾರವನ್ನು ರಾಜ್ಯಪಾಲರು ಚಲಾಯಿಸಬಾರದು’ ಎಂದು ಆದೇಶದಲ್ಲಿ ಹೇಳಲಾಗಿದೆ.

‘ಒಂದು ವೇಳೆ ರಾಜ್ಯಪಾಲರು ಮಸೂದೆಗೆ ಅಂಕಿತ ಹಾಕುವುದನ್ನು ತಡೆ ಹಿಡಿಯಲು ನಿರ್ಧರಿಸಿದಲ್ಲಿ, ಸಂವಿಧಾನದ 200ನೇ ವಿಧಿಯ ಮೊದಲ ನಿಬಂಧನೆಯಲ್ಲಿ ಹೇಳಿರುವಂತೆ, ಮಸೂದೆಯನ್ನು ಮರುಪರಿಶೀಲನೆಗಾಗಿ ಶಾಸನಸಭೆಗೆ ಮರಳಿಸಬೇಕು’ ಎಂದೂ ನ್ಯಾಯಪೀಠ ಹೇಳಿದೆ.

ಹನೂರು: ಶಾಲಾ ಆವರಣದಲ್ಲಿ ಕೋಳಿ ಶೆಡ್ ನಿರ್ಮಾಣ

ಶಾಲಾ ಬಾಲಕಿಗೆ ಕುಕ್ಕಿದ ಕೋಳಿ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಪೆದ್ದನಪಾಳ್ಯ ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಜಮೀನು ದಾನ ನೀಡಿದ ವ್ಯಕ್ತಿ ಶಾಲಾ ಆವರಣದಲ್ಲಿ ದನದ ಕೊಟ್ಟಿಗೆ ಮತ್ತು ಕೋಳಿ ಶೆಡ್ ನಿರ್ಮಿಸಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿದೆ.

1ನೇ ತರಗತಿಯ ವಿದ್ಯಾರ್ಥಿನಿಗೆ ಕೋಳಿ ಬುಧವಾರ ಕುಕ್ಕಿ ಗಾಯಗೊಳಿಸಿದೆ. ಇದರಿಂದ ಆತಂಕಕ್ಕೆ ಒಳಗಾಗಿರುವ ಪೋಷಕರು, ಗುರುವಾರ ಬೆಳಿಗ್ಗೆ ಶಾಲೆಗೆ ಬಂದು ತಮ್ಮ ಮಕ್ಕಳನ್ನು ಮನೆಗೆ ಕರೆದುಕೊಂಡು ಹೋಗಿದ್ದಾರೆ.

‘ಶಾಲೆಯಲ್ಲಿ ನಮ್ಮ ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ಶಾಲಾ ಆವರಣದಲ್ಲಿ-ರುವ ದನದ ಕೊಟ್ಟಿಗೆ ಹಾಗೂ ಕೋಳಿ ಶೆಡ್ ತೆರವುಗೊಳಿಸುವವರೆಗೂ ನಾವು ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ’ ಎಂದು ಪೋಷಕರು ಹೇಳಿದ್ದಾರೆ.

ಶಾಲೆಯಲ್ಲಿ 1ರಿಂದ 7ನೇ ತರಗತಿಯವರೆಗೆ ಒಟ್ಟು 89 ಮಕ್ಕಳು ಕಲಿ-ಯುತ್ತಿದ್ದಾರೆ. ಬುಧವಾರ ಮಧ್ಯಾಹ್ನ ಬಿಸಿಯೂಟ ಸೇವಿಸಿ ಆಟವಾಡುತ್ತಿದ್ದ 1ನೇ ತರಗತಿಯ ನಾಗವೇಣಿ ಎಂಬ ವಿದ್ಯಾರ್ಥಿನಿ ಮೇಲೆ ಕೋಳಿ ಹಾರಿ, ಕೆನ್ನೆಗೆ ಕುಕ್ಕಿದೆ. ಕೂಡಲೇ ಶಿಕ್ಷಕರು ಬಾಲಕಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಮನೆಗೆ ಬಿಟ್ಟು ಬಂದಿದ್ದಾರೆ.

ಮಾರ್ಕಾಂಡ ಎಂಬುವವರು ಶಾಲೆ ನಿರ್ಮಾಣಕ್ಕಾಗಿ ತಮ್ಮ ಜಮೀನಿನ ಸರ್ವೆ ನಂಬರ್ 31/1ರಲ್ಲಿರುವ 20 ಸೆಂಟ್ಸ್ ಜಮೀನನ್ನು ದಾನವಾಗಿ ಮತ್ತು 20 ಸೆಂಟ್ಸ್ ಅನ್ನು ಹಣಕ್ಕೆ ನೀಡಿದ್ದರು. ಇದು ನೋಂದಣಾಧಿಕಾರಿ ಕಚೇರಿಯಲ್ಲಿ ನೋಂದಣಿಯಾಗಿರಲಿಲ್ಲ. ಆದರೆ, ಗ್ರಾ.ಪಂ. ದಾಖಲೆಯಲ್ಲಿ ನಮೂದಾಗಿದೆ. ಜಮೀನನ್ನು ದಾನ ಹಾಗೂ ಮಾರಾಟ ಮಾಡಿದ್ದ ಮಾರ್ಕಾಂಡ ಅವರು ‘ಈ ಜಾಗ ನನಗೆ ಸೇರಿದ್ದು, ಪೂರ್ತಿ ಜಾಗ ಬಿಡಿ’ ಎಂದು 2016ರಲ್ಲಿ ನ್ಯಾಯಾಲಯದ ಮೊರೆ ಹೋಗಿದ್ದಾರೆ.


ಪೆದ್ದನಪಾಳ್ಯ ಸರ್ಕಾರಿ ಶಾಲಾ ಆವರಣದಲ್ಲಿ ನಿರ್ಮಿಸಿರುವ ದನ, ಕೋಳಿ ಶೆಡ್

ಶಾಲೆಗೆ ನೀಡಿದ್ದ 40 ಸೆಂಟ್ಸ್ ಜಾಗದಲ್ಲೇ ಶೆಡ್ ನಿರ್ಮಿಸಿ ಅಲ್ಲಿ ದನ ಹಾಗೂ ಕೋಳಿಗಳನ್ನು ಸಾಕುತ್ತಿದ್ದಾರೆ. ಶೆಡ್ ತೆರವುಗೊಳಿಸುವಂತೆ ಗ್ರಾಮಸ್ಥರು, ಶಿಕ್ಷಕರು ಹಾಗೂ ಅಧಿಕಾರಿಗಳು ಕೋರಿದ್ದರೂ ಸ್ಪಂದಿಸುತ್ತಿಲ್ಲ. ಇದರಿಂದ ಶಿಕ್ಷಕರು ಇಕ್ಕಟ್ಟಿಗೆ ಸಿಲುಕಿದ್ದಾರೆ.

ಗುರುವಾರ ಪೋಷಕರು ಶಾಲೆಗೆ ಆಗಮಿಸುತ್ತಿದ್ದಂತೆ ಬಂದ ಶಿಕ್ಷಣ ಸಂಯೋಜಕ ಕಂದವೇಲು ಹಾಗೂ ಸಿಆರ್‌ಪಿ ಷಣ್ಮುಗಂ ಅವರ ಮನವೊಲಿಸಲು ಯತ್ನಿಸಿದರು. ಆದರೆ, ಮೊದಲು ಶಾಲೆಯ ಸಮಸ್ಯೆ ಬಗೆಹರಿಸಿ ನಂತರ ಶಾಲೆಗೆ ಮಕ್ಕಳನ್ನು ಕಳುಹಿಸುತ್ತೇವೆ ಎಂದು ಪೋಷಕರು ಪಟ್ಟು ಹಿಡಿದರು. ‘ನಿತ್ಯವೂ ಮಧ್ಯಾಹ್ನದ ಬಿಸಿಯೂಟದ ಸಂದರ್ಭದಲ್ಲಿ ನಾವು ಕೋಳಿಗಳನ್ನು ಓಡಿಸುವುದೇ ಕೆಲಸವಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಶಿಕ್ಷಕರೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.



ಸುಭಾಷಿತ

ಉತ್ಕೃಷ್ಟತೆಯ ಸಾಧನೆಗಾಗಿ ನೀವು ಶ್ರಮಿಸಿದರೆ,
ಯಶಸ್ಸು ಅದನ್ನು ಅನುಸರಿಸಿ ಬರುತ್ತದೆ.
-ಶ್ರೇಯಾ ಘೋಷಾಲ್

ಆರ್‌ಬಿಐ ಸದುದ್ದೇಶದ ನಡೆ ಆದರೆ ಶಾಶ್ವತ ಪರಿಹಾರವಲ್ಲ

ಅಡಮಾನ ಇಲ್ಲದ ವೈಯಕ್ತಿಕ ಸಾಲ ನೀಡಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಕೆಲವು ಕ್ರಮಗಳನ್ನು ಘೋಷಿಸಿದೆ. ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್ ಸಾಲದಿಂದ ಆಗಬಹುದಾದ ನಷ್ಟವನ್ನು ಭರಿಸಲು ಬ್ಯಾಂಕುಗಳು ಹಾಗೂ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ತೆಗೆದಿರಿಸಬೇಕಿರುವ ಮೊತ್ತವನ್ನು (ರಿಸ್ಕ್ ವೇಯ್ಟ್) ಹೆಚ್ಚಿಸಲು ಆರ್‌ಬಿಐ ತಾಕೀತು ಮಾಡಿದೆ. ಆದರೆ ಗೃಹ ಸಾಲ, ವಾಹನ ಸಾಲ, ಸಣ್ಣ ಪ್ರಮಾಣದ ವಹಿವಾಟು ನಡೆಸಲು ನೀಡುವ ಸಾಲಗಳಿಂದ ಆಗಬಹುದಾದ ನಷ್ಟವನ್ನು ಭರಿಸಲು ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳು ತೆಗೆದಿರಿಸಬೇಕಿರುವ ಮೊತ್ತವನ್ನು ಆರ್‌ಬಿಐ ಹೆಚ್ಚಿಸಿಲ್ಲ. ಅಲ್ಲದೆ, ಚಿನ್ನವನ್ನು ಅಡಮಾನವಾಗಿ ಇರಿಸಿಕೊಂಡಿರುವ ಸಾಲಗಳಿಗೆ ಕೂಡ ಇದು ಅನ್ವಯ ಆಗುವುದಿಲ್ಲ. ವೈಯಕ್ತಿಕ ಸಾಲ ನೀಡುವುದು ಹಾಗೂ ಕ್ರೆಡಿಟ್ ಕಾರ್ಡ್ ಸಾಲ ನೀಡುವುದು ಭಾರಿ ಪ್ರಮಾಣದಲ್ಲಿ ಏರಿಕೆ ಕಾಣುತ್ತಿರುವುದರ ಬಗ್ಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಕಳವಳ ವ್ಯಕ್ತಪಡಿಸಿದ್ದರು. ಅದಾದ ನಂತರದಲ್ಲಿ ಆರ್‌ಬಿಐ ಈ ಕ್ರಮಕ್ಕೆ ಮುಂದಾಗಿದೆ. ಅಡಮಾನದ ಭದ್ರತೆ ಇಲ್ಲದ ಸಾಲಗಳ ನೀಡಿಕೆಯು ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಂಡಿದ್ದರೂ ಬ್ಯಾಂಕಿಂಗ್ ವ್ಯವಸ್ಥೆಗೆ ಅಪಾಯವೇನೂ ಎದುರಾಗಿಲ್ಲ ಎಂದು ದಾಸ್ ಅವರು ಸ್ಪಷ್ಟಪಡಿಸಿದ್ದಾರೆ. ಆದರೂ ಈ ಕ್ರಮ ಕೈಗೊಂಡಿರುವುದು 'ಮುಂದೆ ಅಪಾಯ ಎದುರಾಗದಿರಲಿ' ಎನ್ನುವ ಸದುದ್ದೇಶದಿಂದ ಎಂಬುದು ಸ್ಪಷ್ಟ. ವೈಯಕ್ತಿಕ ಸಾಲ ಹಾಗೂ ಕ್ರೆಡಿಟ್ ಕಾರ್ಡ್ ಸಾಲ ಪಡೆಯುವವರು ಸಾಮಾನ್ಯವಾಗಿ ಆ ಹಣವನ್ನು ಆಸ್ತಿ ಸೃಷ್ಟಿಸುವ ಕೆಲಸಕ್ಕೆ ತೊಡಗಿಸುವುದಿಲ್ಲ. ಈ ಬಗೆಯ ಸಾಲಗಳು ತಕ್ಷಣದ ಹಣಕಾಸಿನ ಅಗತ್ಯಗಳನ್ನು ಈಡೇರಿಸಿಕೊಳ್ಳಲು, ವಿಶೇಷ ಸಂದರ್ಭಗಳಲ್ಲಿ ವಿವಿಧ ಉತ್ಪನ್ನಗಳನ್ನು ಖರೀದಿಸಲಷ್ಟೇ ನೆರವಾಗುತ್ತವೆ.



ಆರ್‌ಬಿಐನ ಸದುದ್ದೇಶವು ಮಾರುಕಟ್ಟೆಯ ಮೇಲೆ ಸಣ್ಣ ಮಟ್ಟದಲ್ಲಿಯಾದರೂ ಕೆಟ್ಟ ಪರಿಣಾಮವನ್ನು ಬೀರುವ ಸಾಧ್ಯತೆ ಇದೆ

ಗೃಹ ಸಾಲ, ವಾಹನ ಸಾಲದ ವಿಚಾರದಲ್ಲಿ ಯಥಾಸ್ಥಿತಿ ಮುಂದುವರಿದಿರುವುದರಿಂದಾಗಿ, ಈ ಬಗೆಯ ಸಾಲಗಳ ನೀಡಿಕೆಗೆ ಯಾವುದೇ ಅಡ್ಡಿ ಎದುರಾಗದು. ರಿಯಲ್ ಎಸ್ಟೇಟ್ ವಲಯ ಹಾಗೂ ಆಟೊಮೊಬೈಲ್ ವಲಯದ ಬೆಳವಣಿಗೆಗೆ ಯಾವುದೇ ಅಡಚಣೆ ಉಂಟಾಗದು ಎಂದು ಭಾವಿಸಬಹುದು. ಆದರೆ ಆರ್‌ಬಿಐ ಕ್ರಮದಿಂದಾಗಿ, ಕ್ರೆಡಿಟ್ ಕಾರ್ಡ್ ಸಾಲವು ದುಬಾರಿ ಆಗಬಹುದು. ಹಾಲಿ ಸಾಲಗಾರರಿಗೂ, ಮುಂದೆ ಕ್ರೆಡಿಟ್ ಕಾರ್ಡ್ ಸಾಲ ಪಡೆಯುವವರಿಗೂ ಇದು ಅನ್ವಯವಾಗುತ್ತದೆ. ಇದು ಗ್ರಾಹಕ ಉತ್ಪನ್ನಗಳ ಮಾರುಕಟ್ಟೆಯ ಮೇಲೆ ಯಾವ ಬಗೆಯ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ಗಮನಿಸಬೇಕು. ಕ್ರೆಡಿಟ್ ಕಾರ್ಡ್ ಬಳಕೆದಾರರಲ್ಲಿ ವ್ಯಾಪಕವಾಗಿರುವ ಇಎಂಐ ಸಂಸ್ಕೃತಿಯು ಮಾರುಕಟ್ಟೆಯನ್ನು ಚಲನಶೀಲವಾಗಿ ಇರಿಸುವ ಕೆಲಸವನ್ನು ಕೂಡ ಮಾಡುತ್ತದೆ. ಈ ಸಾಲ ದುಬಾರಿ ಆದಲ್ಲಿ, ಎಲೆಕ್ಟ್ರಾನಿಕ್ ಉಪಕರಣಗಳು, ಬಟ್ಟೆ ಮಾರಾಟ ಹಾಗೂ ಪ್ರವಾಸೋದ್ಯಮ ಚಟುವಟಿಕೆಗಳ ಮೇಲೆ ಎಂತಹ ಪರಿಣಾಮ ಉಂಟಾಗುತ್ತದೆ ಎಂಬುದು ಪರಿಶೀಲನೆಗೆ ಯೋಗ್ಯವಾಗುತ್ತದೆ. 30–35 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ಫಿನ್‌ಟೆಕ್ ಕಂಪನಿಗಳ ಆ್ಯಪ್‌ಗಳ ನೆರವಿನಿಂದ ಹೆಚ್ಚಾಗಿ ಬಳಸುತ್ತಿರುವ 'ಬೈ ನೌ ಪೇ ಲೇಟರ್' (ಬಿಎನ್‌ಪಿಎಲ್) ಸೌಲಭ್ಯದ ಮೇಲೆಯೂ ಆರ್‌ಬಿಐ ತೀರ್ಮಾನವು ಪರಿಣಾಮ ಉಂಟುಮಾಡಲಿದೆ.

ವೈಯಕ್ತಿಕ ಸಾಲದ ಅಗತ್ಯವು ಬಹುತೇಕರಿಗೆ ಇದ್ದೇ ಇರುತ್ತದೆ. ಕೋವಿಡ್ ನಂತರದ ಕಾಲಘಟ್ಟದಲ್ಲಿ ಎಲ್ಲ ಬಗೆಯ ಸಾಲಗಳ ಮೇಲಿನ ಬಡ್ಡಿಯೂ ಹೆಚ್ಚಾಗಿದೆ, ಸಾಲ ತುಟ್ಟಿಯಾಗಿದೆ. ಈಗ ಆರ್‌ಬಿಐ ಕೈಗೊಂಡಿರುವ ಕ್ರಮವು ವೈಯಕ್ತಿಕ ಸಾಲವನ್ನು ತುಸು ಹೆಚ್ಚು ಅನ್ನಿಸುವಷ್ಟು ತುಟ್ಟಿಯಾಗಿಸಬಹುದು. ಆರ್‌ಬಿಐ ಆಶಯದಲ್ಲಿ ಸದುದ್ದೇಶ ಇದೆ. ಹೆಚ್ಚು ಸಾಲ ನೀಡಿ, ಹೆಚ್ಚು ಲಾಭ ತೋರಿಸುವ ಭರದಲ್ಲಿ ಎನ್‌ಬಿಎಫ್‌ಸಿ ಹಾಗೂ ಬ್ಯಾಂಕ್‌ಗಳು ಸಮಸ್ಯೆಗೆ ಸಿಲುಕಬಾರದು ಮತ್ತು ಸಾಲ ಸುಲಭವಾಗಿ ಸಿಗುತ್ತದೆ ಎಂಬ ಒಂದೇ ಕಾರಣಕ್ಕೆ ಹೆಚ್ಚು ಸಾಲ ಪಡೆದು ಜನ ಕೂಡ ತೊಂದರೆಗೆ ಸಿಲುಕಬಾರದು ಎಂಬುದು ಆರ್‌ಬಿಐ ಆಶಯ. ಆದರೆ ಆರ್‌ಬಿಐನ ಸದುದ್ದೇಶವು ಮಾರುಕಟ್ಟೆಯ ಮೇಲೆ ಸಣ್ಣ ಮಟ್ಟದಲ್ಲಿಯಾದರೂ ಕೆಟ್ಟ ಪರಿಣಾಮವನ್ನು ಬೀರುವ ಸಾಧ್ಯತೆ ಇದೆ. ಬ್ಯಾಂಕ್ ಹಾಗೂ ಎನ್‌ಬಿಎಫ್‌ಸಿಗಳ ಸಾಲ ನೀಡಿಕೆ ಬೆಳವಣಿಗೆಯನ್ನು ತುಸುವಾದರೂ ತಗ್ಗಿಸಲಿದೆ. ಹೆಚ್ಚು ಬಂಡವಾಳ ತೆಗೆದಿರಿಸಬೇಕಾದ ಕಾರಣಕ್ಕೆ ಬ್ಯಾಂಕ್‌ಗಳು, ಎನ್‌ಬಿಎಫ್‌ಸಿಗಳು ವೈಯಕ್ತಿಕ ಸಾಲಗಳ ಬಡ್ಡಿದರ ಹೆಚ್ಚಿಸಿದರೆ, ಅಂತಹ ಸಾಲ ಪಡೆದು, ಅದನ್ನು ಅತ್ಯಂತ ಶಿಸ್ತುಬದ್ಧವಾಗಿ ಮರುಪಾವತಿ ಮಾಡುತ್ತಿರುವವರು ಕೂಡ ಬಾಧಿತರಾಗಲಿದ್ದಾರೆ. ಈ ಕಾರಣಗಳಿಂದಾಗಿ, ಆರ್‌ಬಿಐ ತನ್ನ ತೀರ್ಮಾನವನ್ನು ಕೆಲವು ಕಾಲದ ನಂತರವಾದರೂ ಮರುಪರಿಶೀಲಿಸುವುದು ಸೂಕ್ತವಾಗಬಹುದು.

ದಿನದ ಟ್ವೀಟ್

ಘನತೆ ಮರೆತ ನಾಯಕರು



ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯ ನಡೆದ ದಿನ ಇಂದಿರಾ ಗಾಂಧಿಯವರ ಜನ್ಮದಿನವಾಗಿತ್ತು. ಭಾರತ ಸೋಲಲು ಅದೇ ಕಾರಣ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಶರ್ಮಾ ಹೇಳಿದ್ದರೆ, ಪ್ರಧಾನಿ ನರೇಂದ್ರ ಮೋದಿ ಅವರು 'ಅಪಶಕುನ'ವಾಗಿರುವ ಕಾರಣದಿಂದಾಗಿ ಈ ಸೋಲು ಉಂಟಾಯಿತು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ನಮ್ಮ ನೇತಾರರು ಎಚ್ಚೆತ್ತುಕೊಳ್ಳುವುದು ಯಾವಾಗ ಮತ್ತು ಆ ದಿನ ಆಸ್ಟ್ರೇಲಿಯಾ ಉತ್ತಮವಾಗಿ ಆಡಿದ್ದೇ ಭಾರತದ ಸೋಲಿಗೆ ಕಾರಣ ಎಂದು ಸ್ಪಷ್ಟವಾಗಿ ಪ್ರತಿಪಾದಿಸುವುದು ಯಾವಾಗ? ನಮ್ಮ ನಾಯಕರು ಕ್ಷುಲ್ಲಕ ಮೂಢನಂಬಿಕೆಗಳನ್ನು ಮೀರಿ ನಿಲ್ಲಬೇಕು!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ



ವಿರೋಧ ಪಕ್ಷದ ನಾಯಕನ ಆಯ್ಕೆಯಿಂದಾಗಿ ಬಿಜೆಪಿಯೊಳಗೆ ಬೆಂಕಿ ಹೊತ್ತುಕೊಂಡಿದೆ. ಅದು ಜ್ವಾಲೆಯಾಗಿ ಆ ಪಕ್ಷದ ಬುಡಕ್ಕೆ ಹೊತ್ತಿಕೊಳ್ಳಲಿದೆ. ಮೊದಲು ಅವರು ಬೆಂಕಿಯಿಂದ ಹೊರಬರಲಿ. ಆಮೇಲೆ ಸರ್ಕಾರದ ಬಗ್ಗೆ ಮಾತನಾಡಲಿ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಮಂಗಳವಾರ, 24-11-1998

• **ಹಕ್ಕುಸ್ವಾಮ್ಯ: ತಿದ್ದುಪಡಿಗೆ ನಿರ್ಧಾರ**

ನವದೆಹಲಿ, ನ. 23– ಬಹುರಾಷ್ಟ್ರೀಯ ಕಂಪನಿಗಳಿಗೆ ಪ್ರತ್ಯೇಕ ಮಾರುಕಟ್ಟೆ ಹಕ್ಕಿಗೆ ಅವಕಾಶವಾಗುವಂತೆ ಭಾರತೀಯ ಹಕ್ಕುಸ್ವಾಮ್ಯ (ಪೇಟೆಂಟ್) ಕಾಯ್ದೆಗೆ ತಿದ್ದುಪಡಿ ಸೂಚಿಸುವ ಮಹತ್ವದ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟ ಇಂದು ಒಪ್ಪಿಗೆ ನೀಡಿತು.

ವಿಮಾ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶಕ್ಕೆ ಅನುಕೂಲವಾಗುವಂತೆ ವಿಮಾ ಕಾಯ್ದೆಗೆ ತಿದ್ದುಪಡಿ ಸೂಚಿಸುವ ಪ್ರಸ್ತಾವಕ್ಕೂ ಸಂಪುಟ ಅನುಮೋದನೆ ನೀಡಿತು.

• **ಬಿರುಗಾಳಿ ಎಬ್ಬಿಸಿದ ಕೃಪಾಂಕ ವಿವಾದ**

ಬೆಂಗಳೂರು, ನ. 23– ಕೃಪಾಂಕದ ವಿವಾದ ಕರ್ನಾಟಕದಲ್ಲಿ, ವಿಶೇಷವಾಗಿ ಗ್ರಾಮೀಣ ವಿದ್ಯಾರ್ಥಿ ಸಮುದಾಯದಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ಹಲವು ಪಟ್ಟಣಗಳಲ್ಲಿ ವಿದ್ಯಾರ್ಥಿಗಳು ಈ ಕೃಪಾಂಕ ರದ್ದು ಕ್ರಮಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿ ಶಾಲೆ ಕಾಲೇಜುಗಳನ್ನು ಬಹಿಷ್ಕರಿಸಿದ್ದಾರೆ. ಇದು ದೊಡ್ಡದಾಗಿ ಬೆಳೆಯುವ ಸೂಚನೆ ಈಗಾಗಲೇ ಕಾಣಿಸಿದೆ.

ಗ್ರಾಮಾಂತರ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಶೇಕಡ 10ರಷ್ಟು ಕೃಪಾಂಕ ನೀಡುವುದು ಉಚಿತ ಎಂದು ಭಾವಿಸಿ ಕರ್ನಾಟಕ ಸರ್ಕಾರ ಜಾರಿಗೆ ತಂದಿದ್ದ ಈ ಕ್ರಮವು ರಾಜ್ಯ ಹೈಕೋರ್ಟ್ ತೀರ್ಪಿನಿಂದಾಗಿ ಈಗ ರದ್ದಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 24-11-1973

• **ತ್ಯಾಗದ ಮಾತು ಆಡುವವರು ಮೊದಲು ಪಾಲಿಸಲಿ: ಅರಸು**

ಧರ್ಮಸ್ಥಳ, ನ. 23– ಸರ್ವಧರ್ಮ ಸಮ್ಮೇಳನದ 41ನೇ ಅಧಿವೇಶನ ಇಂದು ಇಲ್ಲಿ ಪ್ರಾರಂಭವಾಯಿತು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ದೇವರಾಜ ಅರಸು, 'ಸಮಷ್ಟಿ ಸಾಧಕವಾದ ಧರ್ಮವನ್ನು ಆಚರಣೆಗೆ ತರಲು ಮಠಾಧಿಪತಿಗಳು ಶ್ರಮಿಸಬೇಕು. ಆಸ್ತಿ ಇದ್ದರೆ ಮಾತ್ರ ತಮ್ಮ ಮಠ ಅಥವಾ ಸಂಸ್ಥೆಯ ಕೆಲಸ ಸಾಧ್ಯ ಎಂದು ಕುಳಿತರೆ ನಾವು ಅವರ ಕರ್ತವ್ಯಗಳು ಏನು ಎಂದು ಕೇಳಬೇಕಾಗುತ್ತದೆ. ತ್ಯಾಗದ ಪಾಠ ಹೇಳುವವರು ಸ್ವಲ್ಪಮಟ್ಟಿಗಾದರೂ ಪರಿಪಾಲಿಸಬೇಕು. ಮನಸ್ಸು, ಮಾತು, ಕೃತಿ ಒಂದಾದರೆ ಮಾತ್ರ ಆತ್ಮಶಕ್ತಿ ಕೂಡುತ್ತದೆ' ಎಂದು ಹೇಳಿದರು.

• **ಪೆಟ್ರೋಲ್ ಬಂಕ್ ಪರವಾನಗಿ ನೀಡಿಕೆಯಲ್ಲಿ ಕಾಲುಭಾಗ ಹರಿಜನರಿಗೆ: ಪ್ರಧಾನಿ ಆದೇಶ**

ನವದೆಹಲಿ, ನ. 23– ಪೆಟ್ರೋಲ್ ಬಂಕುಗಳನ್ನು ಇಡುವುದಕ್ಕೆ ಹೊಸದಾಗಿ ಪರವಾನಗಿ ನೀಡುವಾಗ ಶೇಕಡ 25ರಷ್ಟನ್ನು ಹರಿಜನ, ಗಿರಿಜನರಿಗೆ ಮೀಸಲಿಡಬೇಕೆಂದು ಪ್ರಧಾನಿ ಅವರು ಆದೇಶ ನೀಡಿದ್ದಾರೆ.

ಪೆಟ್ರೋಲಿಯಂ ಉತ್ಪನ್ನಗಳ ಮಾರಾಟ ವ್ಯವಸ್ಥೆಯಲ್ಲಿ ಅನುಕೂಲಸ್ಥ ವರ್ಗಕ್ಕಿಂತ ದುರ್ಬಲ ವರ್ಗಕ್ಕೆ ಆದ್ಯತೆ ಕೊಡಬೇಕೆಂಬುದು ಸರ್ಕಾರದ ನೀತಿಯಾಗಿದೆಯೆಂದು ಪೆಟ್ರೋಲಿಯಂ ಖಾತೆ ಸಚಿವ ಡಿ.ಕೆ.ಬರೂವ ಅವರು ಇಂದು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆರ್ಥಿಕತೆ, ಪ್ರಜಾಪ್ರಭುತ್ವದ ಉನ್ನತಿಗೆ ಪೂರಕವಾಗಿ ಕೃತಕ ಬುದ್ಧಿಮತ್ತೆಯ ದಿಕ್ಕನ್ನು ಬದಲಿಸಬೇಕಿದೆ

ಬದಲಾಗಬೇಕಿದೆ ತಂತ್ರಜ್ಞಾನದ ದಿಕ್ಕು



ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

'ತಂತ್ರಜ್ಞಾನ ಅಂದರೆ ನಿಯಂತ್ರಣ. ಪ್ರಕೃತಿಯನ್ನು ಮಾತ್ರವಲ್ಲ, ಜೊತೆಯವರನ್ನೂ ನಿಯಂತ್ರಿಸುತ್ತಿರುತ್ತೇವೆ. ಕೆಲವರಿಗೆ ಅಧಿಕಾರ ಸಿಕ್ಕರೆ, ಹಲವರು ಅಧಿಕಾರ ಕಳೆದುಕೊಳ್ಳುತ್ತಾರೆ'– ಇದನ್ನು ಎಚ್.ಜಿ.ವೆಲ್ಸ್ ಸುಮಾರು 130 ವರ್ಷಗಳ ಹಿಂದೆಯೇ ಕಂಡುಕೊಂಡಿದ್ದ.

ಈಗ ಕೃತಕ ಬುದ್ಧಿಮತ್ತೆ ಹಾಗೂ ಅದರ ವಿಭಿನ್ನ ರೂಪಗಳು ಮತ್ತೆ ಆತಂಕವನ್ನು ಮೂಡಿಸಿವೆ. ಕೆಲಸ ಕಳೆದುಕೊಳ್ಳುವ ಭೀತಿ ಹಲವರನ್ನು ಕಾಡುತ್ತಿದೆ. ಅಮೆರಿಕದಲ್ಲಿ ಟಿ.ವಿಗೆ ಚಿತ್ರಕಥೆ ಬರೆಯುವವರು ತಂತ್ರಜ್ಞಾನ ತಮ್ಮ ಕೆಲಸವನ್ನು ಕಸಿದುಕೊಳ್ಳುತ್ತಿದೆ ಎಂದು ಮುಷ್ಕರ ನಡೆಸಿದ್ದರು. ಕೆಲವರು ತಂತ್ರಜ್ಞಾನದ ಅಪಾರ ಸಾಧ್ಯತೆಯನ್ನು ನೋಡಿ ಪುಳಕಿತರಾಗಿದ್ದಾರೆ. ವಾಸ್ತವ ಎರಡರ ಮಧ್ಯೆ ಇದೆ ಅನ್ನುತ್ತಾರೆ ಅರ್ಥಶಾಸ್ತ್ರಜ್ಞ ಡರೋನ್ ಅಸಿಮೊಗ್ಲು. ಅವರು ಜೇಮ್ಸ್ ಎ. ರಾಬಿನ್‌ಸನ್ ಅವರ ಜೊತೆ ಸೇರಿ, ಮನುಷ್ಯ ಹಾಗೂ ತಂತ್ರಜ್ಞಾನದ ನಡುವಿನ ಸಂಘರ್ಷದ ಸಾವಿರ ವರ್ಷದ ಚರಿತ್ರೆಯನ್ನು ಅಧ್ಯಯನ ಮಾಡಿದ್ದಾರೆ. ಅದು ತಂತ್ರಜ್ಞಾನ ಕುರಿತ ನಮ್ಮ ಅರಿವನ್ನು ಹಿಗ್ಗಿಸುತ್ತದೆ.

ತಂತ್ರಜ್ಞಾನದಿಂದ ಅಭಿವೃದ್ಧಿ ಆಗಿರುವುದು ಜನರ ಜೀವನಮಟ್ಟ ಸುಧಾರಿಸಿರುವುದು ನಿಜ. ವೈದ್ಯಕೀಯ, ಮನರಂಜನೆ, ಸಾರಿಗೆಯಂತಹ ಕ್ಷೇತ್ರಗಳಲ್ಲಿ ಮಹತ್ತರವಾದ ಬದಲಾವಣೆಗಳಾಗಿವೆ. ಕೃತಕ ಬುದ್ಧಿಮತ್ತೆಯ ಆವಿಷ್ಕಾರವಂತೂ ತಂತ್ರಜ್ಞಾನದ ಸಾಮರ್ಥ್ಯ, ಸಾಧ್ಯತೆಯನ್ನು ಹಲವು ಪಟ್ಟು ಹೆಚ್ಚಿಸಿದೆ. ಅದರ ಅಗಾಧ ಸಾಮರ್ಥ್ಯದಲ್ಲೇ ಅದರ ಅಪಾಯವೂ ಇದೆ. ಮನುಷ್ಯ ಮಾಡುವ ಕೆಲಸವನ್ನು ಯಂತ್ರದಿಂದ ಮಾಡಿಸಬಹುದು. ಆಗ ಮನುಷ್ಯ ಕೆಲಸವಿಲ್ಲದಂತೆ ಆಗುತ್ತಾನೆ. ಪರ್ಯಾಯವಾಗಿ ತಂತ್ರಜ್ಞಾನವನ್ನು ಮನುಷ್ಯನಿಗೆ ಪೂರಕವಾಗಿ ಬಳಸಿಕೊಂಡು ಅವನ ಉತ್ಪಾದಕತೆಯನ್ನು ಹೆಚ್ಚಿಸಬಹುದು. ಹೊಸ ಕೆಲಸ, ಅವಕಾಶಗಳನ್ನು ಸೃಷ್ಟಿಸಬಹುದು. ಹಿಂದೆ ಹೀಗೆ ಆಗಿದೆ.

ಫೋರ್ಡ್ ಕಂಪನಿ 20ನೇ ಶತಮಾನದ ಪ್ರಾರಂಭದಲ್ಲಿ ಹೊಸ ತಂತ್ರಜ್ಞಾನ ಅಳವಡಿಸಿಕೊಂಡಾಗ, ಕಾರಿನ ಉತ್ಪಾದನೆಯು 2,500 ಇದ್ದಿದ್ದು 15 ಲಕ್ಷಕ್ಕೆ ಜಿಗಿಯಿತು. ಹಾಗೆಯೇ ಕೆಲಸಗಾರರ ಸಂಖ್ಯೆ ಕೆಲವು ಸಾವಿರ ಇದ್ದುದು 4 ಲಕ್ಷದಷ್ಟಾಯಿತು. ಇದಕ್ಕಾಗಿ ಕಾರ್ಮಿಕರು ತೀವ್ರವಾಗಿ ಹೋರಾಡಿದ್ದರು ಅನ್ನುವುದೂ ನಿಜ. ಅದರಿಂದ ಇಬ್ಬರಿಗೂ ಅನುಕೂಲವಾಯಿತು. ಆದರೆ ಕೃತಕ ಬುದ್ಧಿಮತ್ತೆಯ ಬೆಳವಣಿಗೆಯಿಂದ ಮನುಷ್ಯ ಮಾಡುತ್ತಿರುವ ಹೆಚ್ಚಿನ ಕೆಲಸಗಳನ್ನು ಯಂತ್ರಗಳು ಮಾಡತೊಡಗಿವೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಇದು ಹೆಚ್ಚಾಯಿತು. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಲಾಕ್‌ಡೌನ್ ಇವೆಲ್ಲಾ ಯಾಂತ್ರೀಕರಣಕ್ಕೆ ಪುಷ್ಟಿ ನೀಡಿವೆ. ತಂತ್ರಜ್ಞಾನದ ಇನ್ನೊಂದು ಅಪಾಯ ಅಂದರೆ, ಸರ್ಕಾರಗಳು, ದೊಡ್ಡ ಉದ್ದಿಮೆಗಳು ಜನರಿಂದ ಮಾಹಿತಿ ಸಂಗ್ರಹಿಸಿ ತಂತ್ರಜ್ಞಾನವನ್ನು ಬೇಹುಗಾರಿಕೆಗೂ ಬಳಸಿಕೊಳ್ಳಬಹುದು. ಪೆಗಾಸಸ್‌ನಂತಹ ಬೇಹುಗಾರಿಕೆ ಸಾಫ್ಟ್‌ವೇರನ್ನು ಸಾವಿರಾರು ಮೈಲಿ ಆಚೆ ಇರುವ ಜನರ ಅಂಕಿಅಂಶಗಳನ್ನು ಸಂಗ್ರಹಿಸಲು, ಅವರ ಖಾಸಗಿ ವ್ಯವಹಾರವನ್ನು ಗಮನಿಸಲು ಬಳಸಲಾಗುತ್ತಿದೆ. ಅದರಿಂದ ಜನರ ಖಾಸಗಿತನಕ್ಕೆ ಧಕ್ಕೆಯಾಗುತ್ತದೆ. ತಮ್ಮನ್ನು ಗಮನಿಸಲಾಗುತ್ತಿದೆ ಅನ್ನುವ ಭೀತಿಯಿಂದ ನಿಷ್ಕ್ರಿಯರಾಗುತ್ತಾರೆ. ಅವರು ಸಮಾಜವನ್ನು ರೂಪಿಸುವ ಶಕ್ತಿಯಾಗಿ ಉಳಿಯುವುದಿಲ್ಲ.

ಅಂತಿಮವಾಗಿ ಕೃತಕ ಬುದ್ಧಿಮತ್ತೆಯ ಪರಿಣಾಮವು ಪ್ರಜಾಪ್ರಭುತ್ವದ ಮೇಲೂ ಆಗುತ್ತಿದೆ. ಫೇಸ್‌ಬುಕ್ ಹಾಗೂ ಎಕ್ಸ್ ವೇದಿಕೆಗಳು ರಾಜಕೀಯ ಸಂವಹನ ಮತ್ತು ಚರ್ಚೆಯ ದಿಕ್ಕನ್ನೇ ಬದಲಿಸಿವೆ. ಜನರನ್ನು ವೈಯಕ್ತಿಕವಾಗಿ ಪ್ರಭಾವಿಸುವ ಪ್ರಯತ್ನಗಳು ಹೆಚ್ಚಿವೆ. ಕೇಂಬ್ರಿಜ್ ಅನಲಿಟಿಕಾ ಕೋಟ್ಯಂತರ ಜನರ ಖಾಸಗಿ ಮಾಹಿತಿಯನ್ನು ಸಂಗ್ರಹಿಸಿ ರಾಜಕೀಯ ಉದ್ದೇಶಕ್ಕೆ ಮಾರಿದ್ದು ದೊಡ್ಡ ಸುದ್ದಿಯಾಗಿತ್ತು. ಬ್ರೆಕ್ಸಿಟ್ ಸಂದರ್ಭದಲ್ಲಿ ಇಂತಹುದೇ ಮಾಹಿತಿಯನ್ನು ಬಳಸಿಕೊಂಡು ಬ್ರೆಕ್ಸಿಟ್ ಪರವಾಗಿ ಜನ ಮತ ಚಲಾಯಿಸುವಂತೆ ಪ್ರೇರೇಪಿಸಲಾಯಿತು ಎನ್ನಲಾಗಿದೆ. ಚೀನಾದ ಕಮ್ಯುನಿಸ್ಟ್ ಪಕ್ಷವೂ ರಾಜಕೀಯ ಚಟುವಟಿಕೆಗಳನ್ನು ನಿಯಂತ್ರಿಸಲು, ವಿರೋಧವನ್ನು ಗುರುತಿಸಲು ಹಾಗೂ ಹತ್ತಿಕ್ಕಲು ಕೃತಕ ಬುದ್ಧಿಮತ್ತೆಯನ್ನು ಬಳಸುತ್ತಿದೆ ಎಂದು ಹೇಳಲಾಗಿದೆ. ಮುಂದೆ ಕೃತಕ ಬುದ್ಧಿಮತ್ತೆಯ ಸಾಮರ್ಥ್ಯ ಬೆಳೆದಂತೆ ಇಂತಹ ಚಟುವಟಿಕೆಗಳು ಇನ್ನಷ್ಟು ವ್ಯಾಪಕವಾಗಬಹುದು.

ಬೇಹುಗಾರಿಕೆಯಂತಹ ಕೆಲಸಗಳಿಗೆ ಅಲ್ಲದೆ, ಜನರಿಗೆ ವಿಶ್ವಾಸಾರ್ಹ ಮಾಹಿತಿಯನ್ನು ಗುರುತಿಸುವುದಕ್ಕೆ ನೆರವಾಗುವಂತೆ ಕೃತಕ ಬುದ್ಧಿಮತ್ತೆಯನ್ನು ರೂಪಿಸಬಹುದು. ಹೆಚ್ಚು ಪ್ರಜಾಸತ್ತಾತ್ಮಕವಾದ ಚರ್ಚೆಗಳು, ಸಂವಾದಗಳು ನಡೆಯುವುದಕ್ಕೆ ಸಾಮಾಜಿಕ ಮಾಧ್ಯಮಗಳು ವೇದಿಕೆಯಾಗಬಹುದು. ಹಾಗೆಯೇ ಮಾಹಿತಿಯನ್ನು ಅನುಕೂಲಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುವುದಕ್ಕೆ ಅವಕಾಶ ಇರಬಾರದು. ವಿರೂಪಗೊಂಡ ಮಾಹಿತಿಯನ್ನು ಗುರುತಿಸುವುದಕ್ಕೆ ತಂತ್ರಜ್ಞಾನ ನೆರವಾಗಬೇಕು. ಹಾಗೆಯೇ ಮಾಹಿತಿಯ ಕೇಂದ್ರೀಕರಣವೂ ಒಳ್ಳೆಯದಲ್ಲ. ಈ ದಿಸೆಯಲ್ಲಿ ವಿಕಿಪಿಡಿಯ ಒಂದು ವಿಭಿನ್ನವಾದ ಪ್ರಯೋಗ. ಲಾಭವಿಲ್ಲದ ಮಾದರಿಯ ಪ್ರಯತ್ನ. ಅದು ಯಶಸ್ವಿಯಾಗಿದೆ. ಪರ್ಯಾಯ ದಾರಿ ಸಾಧ್ಯ.

ಅಂದರೆ ಕೃತಕ ಬುದ್ಧಿಮತ್ತೆಗೆ ಬೇರೆ ದಾರಿ ಸಾಧ್ಯವಿತ್ತು.



ಮನುಷ್ಯನ ಉತ್ಪಾದಕತೆಯನ್ನು ಹೆಚ್ಚಿಸುವ, ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ, ಸಂಪತ್ತನ್ನು ಹಂಚಿಕೊಳ್ಳುವ, ಪ್ರಜಾಸತ್ತಾತ್ಮಕ ಸ್ವಾತಂತ್ರ್ಯವನ್ನು ರಕ್ಷಿಸುವ ಹಾಗೂ ಬಲಗೊಳಿಸುವ ದಿಸೆಯಲ್ಲಿ ಕೃತಕ ಬುದ್ಧಿಮತ್ತೆಯನ್ನು ರೂಪಿಸುವುದಕ್ಕೆ ಸಾಧ್ಯವಿತ್ತು. ಅದಕ್ಕೆ ನಾವು ಬೇರೆ ದಾರಿಯಲ್ಲಿ ಸಾಗಬೇಕಿತ್ತು ಅಷ್ಟೆ.

ಕೃತಕ ಬುದ್ಧಿಮತ್ತೆಯ ಸಂಶೋಧನೆಯ ದಿಕ್ಕನ್ನು ಬದಲಿಸಬೇಕಾದರೆ ಅದು ಯಾರ ನಿಯಂತ್ರಣದಲ್ಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಕೃತಕ ಬುದ್ಧಿಮತ್ತೆ ಕೆಲವೇ ಬೃಹತ್ ಉದ್ದಿಮೆಗಳ ಕೈಯಲ್ಲಿ ಕೇಂದ್ರೀಕೃತವಾಗಿದೆ. ಗೂಗಲ್, ಫೇಸ್‌ಬುಕ್, ಅಮೆಜಾನ್, ಮೈಕ್ರೊಸಾಫ್ಟ್, ನೆಟ್‌ಫ್ಲಿಕ್ಸ್, ಅಲಿಬಾಬ, ಬೈಡು ಇವು ಕೃತಕ ಬುದ್ಧಿಮತ್ತೆಯ ಬಹುಪಾಲು ಹೂಡಿಕೆಯನ್ನು ನೋಡಿಕೊಳ್ಳುತ್ತವೆ. ವಿಶ್ವವಿದ್ಯಾಲಯಗಳಲ್ಲಿ ಕೃತಕ ಬುದ್ಧಿಮತ್ತೆ ಕುರಿತಂತೆ ಸಂಶೋಧನೆಗೆ ಹಣ ನೀಡುತ್ತಿರುವುದೂ ಅದರ ದಿಕ್ಕನ್ನು ರೂಪಿಸುತ್ತಿರುವುದೂ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳೇ. ಈ ಟೆಕ್ ಕಂಪನಿಗಳೇ ಪ್ರಮುಖ ವಿಶ್ವವಿದ್ಯಾಲಯಗಳ ಪಠ್ಯಕ್ರಮವನ್ನು ಹಾಗೂ ಕೃತಕ ಬುದ್ಧಿಮತ್ತೆಯ ಕ್ಷೇತ್ರವನ್ನು ನೇರವಾಗಿ ಪ್ರಭಾವಿಸುತ್ತಿವೆ. ತಂತ್ರಜ್ಞಾನದ ಹಾದಿಯನ್ನು ನಿರ್ಧರಿಸುತ್ತಿರುವವರೂ ಇವರೇ. ಇವರನ್ನು ನಿಯಂತ್ರಿಸುವುದಕ್ಕೆ ಸಾಧ್ಯವಾಗದೇ ಹೋದರೆ, ಅದರಲ್ಲೂ ಅವರ ನಡೆಯಿಂದ ಉಳಿದವರಿಗೆ ತೊಂದರೆಯಾಗುತ್ತಿದ್ದಾಗ, ಅದು ಒಳ್ಳೆಯ ಬೆಳವಣಿಗೆಯಲ್ಲ.

ಇದಕ್ಕೆ ಪರಿಹಾರವೇನು? ಇಂಧನದ ವಿಷಯದಲ್ಲಾಗಿದ್ದು ಇಲ್ಲೂ ಮಾದರಿಯಾಗಬಹುದು. ತಂತ್ರಜ್ಞಾನದಿಂದ ಅತ್ಯಂತ ನಕಾರಾತ್ಮಕ ಸಾಮಾಜಿಕ ಪರಿಣಾಮವಾಗಿದ್ದು ಇಂಧನದಿಂದ. ಫಾಸಿಲ್ ಇಂಧನವು ಕಾರ್ಬನ್ ಹೊಗೆ ಹೊರಸೂಸುತ್ತಾ ಹವಾಮಾನವನ್ನು ವಿಪರೀತ ಹಾಳುಮಾಡಿತು. ಆಗ ಪೆಟ್ರೋಲ್ ತುಂಬಾ ಅಗ್ಗವಾಗಿತ್ತು. ಪರ್ಯಾಯ ಇಂಧನ ವ್ಯವಸ್ಥೆ ದುಬಾರಿಯಾಗಿತ್ತು. ಹಾಗಾಗಿ, ನವೀಕರಿಸಬಹುದಾದ ಇಂಧನದ ತಯಾರಿಕೆಯನ್ನು ಹೆಚ್ಚಿಸುವ ದಿಸೆಯಲ್ಲಿ ತಂತ್ರಜ್ಞಾನ ಬೆಳೆಯಬೇಕಿತ್ತು. ಗಾಳಿ, ಸೂರ್ಯನ ಬೆಳಕನ್ನು ಬಳಸಿ ಇಂಧನವನ್ನು ಅಗ್ಗವಾಗಿ ತಯಾರಿಸಬೇಕಿತ್ತು. ತಂತ್ರಜ್ಞಾನ ಆ ದಿಕ್ಕಿನಲ್ಲಿ ಚಲಿಸಿತು. ಪರ್ಯಾಯ ಇಂಧನದ ತಂತ್ರಜ್ಞಾನದ ಬೆಲೆ ಸುಮಾರಾಗಿ ಹತ್ತುಪಟ್ಟು ಇಳಿಯಿತು.

ಇದು ಹೇಗೆ ಸಾಧ್ಯವಾಯಿತು? ಎರಡು ಕಾರಣಗಳಿವೆ. ಒಂದು, ಸಮಾಜದ ಒತ್ತಾಯ. ಬಳಕೆದಾರರು ಹಾಗೂ ಜನ ಶುದ್ಧ ಇಂಧನಕ್ಕಾಗಿ ಒತ್ತಾಯಿಸಿದರು. ಎರಡನೆಯದಾಗಿ, ಕೆಲವು ದೇಶಗಳ ಸರ್ಕಾರಿ ನೀತಿ. ಉದಾಹರಣೆಗೆ, ಕಾರ್ಬನ್ ಟ್ಯಾಕ್ಸ್, ಸೋಲಾರ್ ಹಾಗೂ ಇತರ ಪರ್ಯಾಯ ಇಂಧನಗಳಿಗೆ ಸಬ್ಸಿಡಿಯ ನೆರವು ತಂತ್ರಜ್ಞಾನದ ದಿಕ್ಕನ್ನು ಬದಲಿಸುವಲ್ಲಿ ಮಹತ್ತರ ಪಾತ್ರ ವಹಿಸಿತು. ಸರ್ಕಾರದ ನೀತಿಯೊಂದಿಗೆ ಸಮಾಜದ ಒತ್ತಾಯವೂ ಸೇರಿಕೊಂಡು ಇದು ಸಾಧ್ಯವಾಗಿದೆ. ಹಾಗೆಯೇ ಸಾಮಾಜಿಕ ಒತ್ತಡ ಹಾಗೂ ಸರ್ಕಾರದ ನೀತಿಯಿಂದ ಇಂದಿನ ತಂತ್ರಜ್ಞಾನದ ದಿಕ್ಕನ್ನು ಬದಲಿಸುವುದಕ್ಕೆ ಸಾಧ್ಯವಾಗಬೇಕು ಎನ್ನುತ್ತಾರೆ ಅಸಿಮೊಗ್ಲು.

ನಮ್ಮ ಆರ್ಥಿಕತೆ ಹಾಗೂ ಪ್ರಜಾಪ್ರಭುತ್ವದ ಭವಿಷ್ಯ ನಮ್ಮ ಕೈಯಲ್ಲಿದೆ. ಅದಕ್ಕೆ ಪೂರಕವಾಗಿ ಕೃತಕ ಬುದ್ಧಿಮತ್ತೆಯ ದಿಕ್ಕನ್ನು ಬದಲಿಸಬೇಕಿದೆ. ಇದೊಂದು ಮಹತ್ತರ ಜವಾಬ್ದಾರಿ. ದೊಡ್ಡ ಸವಾಲು. ಆದರೆ ನಿರ್ಲಕ್ಷಿಸುವುದಕ್ಕೆ ಸಾಧ್ಯವಿಲ್ಲ.

ಚುರುಮುರಿ



ಬೋರ್ಡು, ಬಳಪ!

• ಬಿ.ಎನ್.ಮಲ್ಲೇಶ್

'ಲೇ ಕೊಟ್ರ, ಸರ್ಕಾರದೋರು ನಿಗಮ, ಮಂಡಳಿ ಹಂಚಿಕೆ ಮಾಡ್ತದಾರಂತೆ, ನೀನು ಪಕ್ಷದ ಕಟ್ಟಾ ಕಾರ್ಯಕರ್ತ ಅಲ್ವ, ನೀನೂ ಹೋಗಿ ಯಾಕೆ ಯಾವುದಾರ ಬೋರ್ಡೋ ಬಳಪಾನೋ ಕೇಳ್ಬಾರ್ದು?' ದುಬ್ಬೀರ ಕೇಳಿದ.

'ಅಲ್ಲ, ಅವಕ್ಕೆಲ್ಲ ಎಮ್ಮೆಲ್ಲೆಗಳೇ ಹೊಡೆದಾಡ್ತಾ ಕುಂತಾರೆ, ಇನ್ನು ಈ ಪುಟುಗೋಸಿ ಕೊಟ್ರಂಗೆ ಬೋರ್ಡ್ ಕೊಟ್ಟುಬಿಡ್ತಾರಾ? ನೀನೊಬ್ಬ...' ಗುಡ್ಡೆ ನಕ್ಕ.

ಕೊಟ್ರನಿಗೆ ಸಿಟ್ಟು ಬಂತು 'ಲೇ ಗುಡ್ಡೆ, ನೆಟ್ಟಗೆ ಮಾತಾಡು, ಈ ಎಮ್ಮೆಲ್ಲೆಗಳನ್ನ ಗೆಲ್ಲಿಸಿದೋರು ಯಾರಲೆ? ಸರ್ಕಾರ ತಂದೋರ್‍ಯಾರಲೆ? ನಾನು, ನನ್ನಂಥ ಕಾರ್ಯಕರ್ತರು ತಿಳ್ಕಾ. ನ್ಯಾಯವಾಗಿ ನಮಗೇ ಕೊಡ್ಬೇಕು ಅವನ್ನೆಲ್ಲ' ಎಂದ.

'ನಿನಗೆ ಕುರುಕರ ಕುಟುಂಬ ಅಭಿವೃದ್ಧಿ ನಿಗಮ ಅಂತ ಕೊಡಬೋದು ನೋಡಲೆ. ಎಲೆಕ್ಷನ್‌ನಲ್ಲಿ ರೊಕ್ಕ ಇಸ್ಕಂಡು ಕುಡಿದು ಮಕ್ಕಂತಿದ್ದಲ್ಲ' ತೆಪರೇಸಿ ಕಿಸಕ್ಕೆಂದ.

'ಅಲ್ಲ, ಕುಡುಕರ ಅಭಿವೃದ್ಧಿ ಓಕೆ, ಕುಟುಂಬದ್ದು ಯಾಕೆ?' ಮಂಜಮ್ಮನ ಪ್ರಶ್ನೆ.

'ಯಾಕೆ ಅಂದ್ರೆ ಕುಡುಕರು ಗೊಟಕ್ ಅಂದ್ಮೇಲೆ ಅವರ ಕುಟುಂಬ ನೋಡ್ಕಳಾರು ಯಾರು? ಅವರಿಗೂ ಪರಿಹಾರ, ನೌಕ್ರಿ ಕೊಡ್ಬೇಕು ತಾನೆ? ಜುಜುಬಿ ಆ್ಯಕ್ಸಿಡೆಂಟ್ ಆಗಿ ಸತ್ತೋರಿಗೆಲ್ಲ ಪರಿಹಾರ ಕೊಡ್ತಾರಂತೆ, ಇನ್ನು ಸರ್ಕಾರಕ್ಕೆ ಟ್ಯಾಕ್ಸ್ ಕಟ್ಟೋ ಕುಡುಕರಿಗೆ ಯಾಕೆ ಪರಿಹಾರ ಕೊಡ್ಬಾರ್ದು?' ದುಬ್ಬೀರನ ಉತ್ತರ.

'ಈಗ ಸಿಎಂ, ಡಿಸಿಎಂ ಸೇರಿ 'ಏಟಿಗೆ ಎದುರೇಟು ಮಂಡಳಿ, ಲೋಕಸಭೆ ಟಾರ್ಗೆಟ್ ನಿಗಮ' ಅಂತ ಎರಡು ಹೊಸಾವು ಮಾಡಿದಾರಂತೆ, ನಿಂಗ್ಯಾವುದು ಬೇಕಲೆ? ಹೆಂಗೂ ಎಮ್ಮೆಲ್ಲೆಗಳನ್ನ ಗೆಲ್ಸಿದೀಯ, ಈಗ ಎಂಪಿಗಳನ್ನೂ ಗೆಲ್ಸು' ಗುಡ್ಡೆ ಕೊಟ್ರನ್ನ ಕೇಳಿದ.

'ನಂಗ್ಯಾವುದೂ ಬ್ಯಾಡ, ನಿಂಗೆ 'ಗುಮಾನಿ' ಅನ್ನೋ ಬೋರ್ಡ್ ಕೊಡ್ಸಾಣಾಂತಿದೀನಿ, ತಗಂತೀಯ?'

'ಗುಮಾನಿನಾ? ಅಂದ್ರೆ?'

'ನೀನು ಮೊದ್ಲು ಗುಡ್ಡೆ ಮಾಂಸ ಮಾರ್ತಿದ್ದೆಲ್ಲ, ಅದ್ಕೆ ನಿಂಗೆ 'ಗುಡ್ಡೆ ಮಾಂಸ ನಿಗಮ' ಕೊಡ್ಸಣಾಂತ' ಕೊಟ್ರನ ತಿರುಗೇಟಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ರಾಸುವಿನ 'ಕಸ' ಕಸವಲ್ಲ!

ನೋವು ನಿವಾರಕ ಗುಣ ಹೊಂದಿರುವ ಮಾಸುವಿನ ಬಗೆಗೆ ಮಿಥ್ಯೆಗಳು ಹಲವು

• ಡಾ. ಮುರಳೀಧರ ಕಿರಣಕೆರೆ

ಮೇಯಲೆಂದು ಹೊರಗೆ ಬಿಟ್ಟಿದ್ದ ಆ ರೈತರ ನಾಟಿ ಗಬ್ಬದ ದನ ಕೊಟ್ಟಿಗೆಗೆ ಮರಳಿದಾಗ ಕತ್ತಲಾಗಿತ್ತು. ಬೆಳಿಗ್ಗೆಯಿಂದಲೇ ಜೋರಾಗಿ ಕೂಗತೊಡಗಿದ್ದ ಅದಕ್ಕೆ ಹೆರಿಗೆ ನೋವೋ ಮತ್ತೇನೋ ತೊಂದರೆಯಾಗಿರಬೇಕೆಂದು ಆತಂಕದಲ್ಲಿ ಕರೆ ಕಳುಹಿಸಿದ್ದರು. ಹಸುವನ್ನು ಪರೀಕ್ಷಿಸಿ 'ಹೊಟ್ಟೆಯಲ್ಲಿ ಕರು ಇಲ್ಲ' ಎಂದಾಗ ಮನೆಮಂದಿಗೆಲ್ಲಾ ಆಶ್ಚರ್ಯದ ಜೊತೆಗೆ ದಿಗ್ಭ್ರಮೆ! ತಕ್ಷಣ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹುಡುಕಾಡಿ ಬಂದರೂ ಕರು ಸಿಕ್ಕಿರಲಿಲ್ಲ. 'ಹಸುವಿನ ಹಗ್ಗ ತಪ್ಪಿಸಿ ಹಿಂದಿನಿಂದ ಹೋಗಿ' ಎಂಬ ಸಲಹೆಯಂತೆ ಹಿಂಬಾಲಿಸಿದವರಿಗೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಪೊದೆಯೊಂದರ ಬಳಿ ಕಾಣಿಸಿದ ಪುಟ್ಟ ಕರು ಸಂತೋಷ ತಂದಿತ್ತು!

ಹಿಂದಿನಿಂದಲೇ ಮತ್ತೊಂದು ತಲೆಬಿಸಿ. ದನದ ಕಸ (ಮಾಸು) ಎಲ್ಲೂ ಕಾಣಿಸುತ್ತಿಲ್ಲ, ಕಸ ತಿಂದರೆ ಬಾಣಂತಿ ದೇಹಕ್ಕೆ ನಂಜೇರುವ ಜೊತೆಗೆ ಹಾಲೂ ಕಮ್ಮಿಯಾಗುತ್ತದೆ ಎಂಬ ಆತಂಕ! 'ಹಸು ತನ್ನ ಮಾಸು ತಿನ್ನುವುದು ಸಹಜ ಸ್ವಭಾವ. ಬೇಟೆಪ್ರಾಣಿ ವಾಸನೆಯ ಜಾಡು ಹಿಡಿದು ದಾಳಿ ಮಾಡಬಾರದೆಂದು ಎಲ್ಲವನ್ನೂ ತಿಂದು ಸ್ವಚ್ಛಗೊಳಿಸುವ ಮೂಲಕ ತನ್ನನ್ನು, ತನ್ನ ಕರುವನ್ನು ರಕ್ಷಿಸಿಕೊಳ್ಳುವ ಉಪಾಯವಿದು. ಜೊತೆಗೆ ಮಾಸು ಒಳ್ಳೆಯ ಆಹಾರ, ತಿಂದರೆ ಹಾಲಿಗೂ ತೊಂದರೆ ಆಗದು' ಎಂದು ಎಷ್ಟೇ ತಿಳಿಹೇಳಿದರೂ ಅವರು ಒಪ್ಪಲು ಸಿದ್ಧರಿರಲಿಲ್ಲ. ದೊಡ್ಡ ಪ್ರಮಾದವೊಂದು ಘಟಿಸಿದ ಚಿಂತೆ ಮುಖದಲ್ಲಿ ಎದ್ದು ಕಾಣುತ್ತಿತ್ತು!

ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಹಲವರಲ್ಲಿ ಜಾನುವಾರುಗಳ ಪಾಲನೆಯ ವಿಚಾರದಲ್ಲಿ ಅನೇಕ ಅಸಂಗತಗಳು, ಮೂಢನಂಬಿಕೆಗಳು, ತಪ್ಪು ಕಲ್ಪನೆಗಳು ಮನೆಮಾಡಿವೆ. ಮಾಸು ಎನ್ನುವುದು ತಾಯಿಯ ಗರ್ಭಾಶಯದೊಳಗೆ ಕರುವನ್ನು ಸುತ್ತುವರಿದಿರುವ ವಿಶೇಷ ಚೀಲದಂತಹ ರಚನೆ. ತಾಯಿ ಮತ್ತು ಕರುವನ್ನು ಬೇರ್ಪಡಿಸುವ ಈ ಸದೃಢ ಚೀಲದೊಳಗೆ ಗರ್ಭಜಲ ತುಂಬಿದ್ದು, ಅದರ ಪದರಗಳ ಮೂಲಕ ಪೌಷ್ಟಿಕಾಂಶಗಳು, ಪ್ರಾಣವಾಯು ಕರುವಿನ ದೇಹಕ್ಕೂ ಅಲ್ಲಿರುವ ತ್ಯಾಜ್ಯವು ಮರಳಿ ತಾಯಿಯ ದೇಹಕ್ಕೂ ಸೇರುತ್ತವೆ. ಮಾನವ ಸೇರಿದಂತೆ ಎಲ್ಲಾ ಸಸ್ತನಿಗಳ ಗರ್ಭಕೋಶದಲ್ಲೂ ಇಂತಹ ರಚನೆಯಿದೆ. ಪ್ರಾಣಿಯು ಮರಿ ಹಾಕುತ್ತಿದ್ದಂತೆಯೇ ಮಾಸುವಿನ ಕಾರ್ಯ ಮುಗಿಯುವುದರಿಂದ ಅದು ತಾಯಿಯ ಶರೀರದಿಂದ ಪೂರ್ಣವಾಗಿ ಹೊರಬೀಳುತ್ತದೆ. ದೇಹದಿಂದ ಕಸ ಹೊರಬಿದ್ದಾಗ ಪೂರ್ಣವಾಗಿ ತಿಂದುಹಾಕುವುದು ಬಹುತೇಕ ಸಸ್ತನಿಗಳ ಸಹಜ ನಡವಳಿಕೆ.

ಈ ಕಸವೆಂಬ ಚೀಲದೊಳಗೆ ತುಂಬಿರುವ ಮಿಥ್ಯೆಗಳು ಹಲವು. ತಲೆತಲಾಂತರದಿಂದ ಇಂತಹ ಪದ್ಧತಿಗಳನ್ನು ಪಾಲಿಸಿಕೊಂಡು ಬಂದಿರುವುದರಿಂದ ಇವು ಸತ್ಯವೆಂದೇ ರೈತರ ನಂಬಿಕೆ. ಎಮ್ಮೆ, ದನಗಳು ಕಸವನ್ನು ತಿಂದರೆ ಹಾಲು ಕಡಿಮೆಯಾಗುತ್ತದೆ, ದೇಹಕ್ಕೆ ನಂಜಾಗುತ್ತದೆ, ಜಾನುವಾರುಗಳು ಸೊಲುತ್ತವೆ ಎಂಬ ಭೀತಿಯಂತೂ ಸಾರ್ವತ್ರಿಕ. ಕಸ ಲೋಳೆ ಲೋಳೆಯಾಗಿ ಜಾರುವ ಗುಣ ಹೊಂದಿರುವುದರಿಂದ ತಿನ್ನುವಾಗ ಗಂಟಲಿಗೆ ಸಿಕ್ಕಿ ಹಸುವಿಗೆ ಅಪಾಯವಾಗಬಹುದೆಂಬ ಹೆದರಿಕೆ. ಹಾಗಾಗಿ, ಜಾನುವಾರುಗಳು ಕರು ಹಾಕಿದ ನಂತರ ಕಸ ಬೀಳುವವರೆಗೂ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾರೆ. ಅಪ್ಪಿತಪ್ಪಿಯೂ ಅವು ಕಸ ತಿನ್ನಬಾರದೆಂದು ಈ ಎಚ್ಚರಿಕೆ. ಕಸ ಬೀಳುವವರೆಗೂ ನೀರು, ಆಹಾರ ನೀಡಬಾರದು, ಕರುವಿಗೆ ಹಾಲುಣಿಸಬಾರದು ಎಂಬ ಕಂದಾಚಾರಗಳೂ ಚಾಲ್ತಿಯಲ್ಲಿವೆ!

ಸಾಧಾರಣವಾಗಿ ಹಸುವು ಕರು ಹಾಕಿದ ಎರಡರಿಂದ ಎಂಟು ಗಂಟೆಯೊಳಗೆ ಕಸ ಬೀಳುತ್ತದೆ. ಇಪ್ಪತ್ತನಾಲ್ಕು ಗಂಟೆಯೂ ಬೀಳದಿದ್ದರೆ ಏನೋ ಕೊರತೆ, ಸಮಸ್ಯೆ ಇವೆಯೆಂದು ಅರ್ಥ. ಹಾಗೆಂದು ಬಲಾತ್ಕಾರವಾಗಿ ಕಸ ತೆಗೆಸಿದರೆ ಗರ್ಭಾಶಯಕ್ಕೆ ಹಾನಿಯಾಗಿ ಮುಂದೆ ಗರ್ಭ ಕಟ್ಟಲು ಸಮಸ್ಯೆಯಾಗಬಹುದು. ಸೋಂಕು ತಗುಲಬಹುದು. ಬಂಜೆತನವೂ ಕಾಡಬಹುದು. ಕಸವನ್ನು ತೆಗೆಯದೇ ಬಿಟ್ಟರೆ ಎರಡು–ಮೂರು ದಿನಗಳಲ್ಲಿ ಕರಗಿ ಬಿದ್ದುಹೋಗುತ್ತದೆ. ಹೆಚ್ಚೆಂದರೆ, ಹೊರಗೆ ತೂಗಾಡುವ ಭಾಗವನ್ನು ಕತ್ತರಿಸಿ ತೆಗೆದು ಉಳಿದದ್ದನ್ನು ಹಾಗೆಯೇ ಬಿಡಬಹುದು. ವೈದ್ಯಕೀಯ ಸಲಹೆ ಮೇರೆಗೆ ಆ್ಯಂಟಿಬಯೊಟಿಕ್ ಔಷಧ ಬಳಸಿದರೆ ಸುಗಮ ನಿರ್ವಹಣೆ ಸಾಧ್ಯ.



ಕಸ ಬೇಗನೆ ಬೀಳಲೆಂದು ಅದಕ್ಕೆ ಕಲ್ಲು, ಕಸಬರಿಗೆ, ಚಪ್ಪಲಿಯಂತಹ ವಸ್ತುಗಳನ್ನು ಕಟ್ಟುವ ಮೌಢ್ಯವೂ ಬಹಳೆಡೆ ಬಳಕೆಯಲ್ಲಿದೆ. ಹೀಗೆ ಹೊರಗೆ ಭಾರ ತೂಗುವುದರಿಂದ ಗರ್ಭಕೋಶಕ್ಕೆ ಹಾನಿಯಾಗಬಹುದು. ಇನ್ನು ಕಸ ಬೀಳುವವರೆಗೆ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡಂತೆ ಕಾಯುವ ಶ್ರಮ ಯಾಕೆಂದು ಕೆಲವರು ಕರು ಹಾಕಿದ ಸ್ವಲ್ಪ ಹೊತ್ತಿಗೇ ಪಶುವೈದ್ಯಕೀಯ ವೃತ್ತಿನಿರತರಿಗೆ ಕಸ ತೆಗೆಯುವಂತೆ ದುಂಬಾಲು ಬೀಳುವುದೂ ಉಂಟು!

ಸಸ್ತನಿಗಳು ಕಸವನ್ನು ಏಕೆ ತಿನ್ನುತ್ತವೆ ಎಂಬುದಕ್ಕೆ ಸ್ಪಷ್ಟ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಇದರಿಂದ ಉಪಯೋಗಗಳು ಇರುವುದಂತೂ ಸತ್ಯ. ಮಾಸು ಮೇದಸ್ಸು, ಕೊಬ್ಬು, ಕ್ಯಾಲ್ಸಿಯಂ ಸೇರಿದಂತೆ ಖನಿಜಾಂಶಗಳ ಖಜಾನೆ. ಕರು ಹಾಕಿ ಸುಸ್ತಾದ ರಾಸು ಇದನ್ನು ತಿನ್ನುವುದರಿಂದ ಶಕ್ತಿಯ ಪೂರಣವಾಗುತ್ತದೆ. ಇದರಲ್ಲಿರುವ ಆಕ್ಸಿಟೋಸಿನ್ ಎಂಬ ಚೋದಕವು ಗರ್ಭಾಶಯದ ಶೀಘ್ರ ಚೇತರಿಕೆಗೆ ನೆರವಾಗುವ ಜೊತೆಗೆ ಕರುವಿನ ಜೊತೆಗಿನ ಅನುಬಂಧವನ್ನು ಗಟ್ಟಿಗೊಳಿಸುತ್ತದೆ ಎಂದು ಹೇಳಲಾಗುತ್ತದೆ. ಮಾಸುವಿನಲ್ಲಿ ಇರುವ ರಾಸಾಯನಿಕಗಳು ನೋವು ನಿವಾರಕ ಗುಣ ಹೊಂದಿವೆ. ಹಾಗಾಗಿಯೆ ರಾಸುಗಳಲ್ಲಿ ಕಸವೆಂಬುದು ಖಂಡಿತಾ ಕಸವಲ್ಲ!

ಹೌದು, ಹೈನುಗಾರಿಕೆ ಎಂಬುದು ಈಗ ಉದ್ಯಮವಾಗಿ ಬೆಳೆಯುತ್ತಿದೆ. ಇದನ್ನು ಲಾಭದಾಯಕವಾಗಿಸಲು ಮೂಢಾಚರಣೆಗಳಿಂದ ಹೊರಬಂದು ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅತಿ ಅಗತ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶುಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಲಂಚ ಕೊಟ್ಟರೆ ಕರೆಂಟ್, ಇಲ್ಲದಿರೆ ವಾರಂಟ್!

ಬೆಂಗಳೂರಿನ ರಸ್ತೆಬದಿಯಲ್ಲಿ ತುಂಡಾಗಿ ಬಿದ್ದಿದ್ದ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಳಿದದ್ದರಿಂದ ಸಂಭವಿಸಿದ ತಾಯಿ, ಮಗುವಿನ ಸಾವು ಹೃದಯವಿದ್ರಾವಕ. ಇಂತಹ ನಿರ್ಲಕ್ಷ್ಯಕ್ಕೆ ಮುಖ್ಯ ಕಾರಣ ಬೆಸ್ಕಾಂನಲ್ಲಿರುವ ಅಶಿಸ್ತು. ಕಂಪನಿಯಲ್ಲಿನ ಕೆಲವು ಲೈನ್‌ಮನ್‌ಗಳು, ಮೀಟರ್ ರೀಡರ್‌ಗಳ ಅವಾಂತರ ಅಷ್ಟಿಷ್ಟಲ್ಲ. ಮೇಲಾಗಿ ಬೆಸ್ಕಾಂ ಆರ್ಥಿಕವಾಗಿ ಸೊರಗಿರುವುದಕ್ಕೆ ಹಾಗೂ ವರಮಾನ ನಷ್ಟಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿಯೇ ಕಾರಣ. ಅದೆಷ್ಟು ವರಮಾನ ಸೋರಿಕೆಯಾಗುತ್ತದೋ ಭಗವಂತನೇ ಬಲ್ಲ. ಲಂಚವಿಲ್ಲದೆ ಕೆಲಸಗಳೇ ನಡೆಯವು. ಜನರೂ ಅದಕ್ಕೆ ಒಗ್ಗಿಹೋಗಿದ್ದಾರೆ. ತಾತ್ಕಾಲಿಕ ಸಂಪರ್ಕ ನೀಡುವಲ್ಲಿನ ಅವ್ಯವಹಾರವಂತೂ ಮುಗಿಲುಮುಟ್ಟಿದೆ. ಲಂಚವನ್ನು ಅಭಿಮಾನ, ಭಯ ಬಿಟ್ಟು ನೇರಾನೇರವಾಗಿ ಕೇಳಲಾಗುತ್ತಿದೆ. ಲಂಚ ಕೊಟ್ಟರೆ ಕರೆಂಟ್, ಇಲ್ಲವಾದರೆ ವಾರಂಟ್ ಎಂಬ ಸ್ಥಿತಿ ಇದೆ. ಹೀಗೆ ಕಂಪನಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಎಣೆಯೇ ಇಲ್ಲದಂತಾಗಿದೆ.

ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಕೋಟಿ ಕೋಟಿ ಕುಳಗಳು, ತಿಮಿಂಗಿಲಗಳು ಗಾಳಕ್ಕೆ ಬೀಳಬಹುದು. ಇಂತಹ ಪರಿಸ್ಥಿತಿಯಲ್ಲಿ ಕಂಪನಿಯು ನಷ್ಟ ಅನುಭವಿಸದೇ ಇರಲು ಸಾಧ್ಯವೇ? ಬಾರಿಬಾರಿಗೂ ವಿದ್ಯುತ್ ಶುಲ್ಕ ಹೆಚ್ಚಿಸದೆ ಇರಲಾದೀತೇ? ಇಂತಹ ಭ್ರಷ್ಟಾಚಾರವೇ ಈ ಬಗೆಯ ಕರ್ತವ್ಯಲೋಪಕ್ಕೆ ದಾರಿ. ಇವುಗಳನ್ನೆಲ್ಲ ನಿಯಂತ್ರಿಸಿದರೆ ಬೆಸ್ಕಾಂ ತಂತಾನೇ ಸುಧಾರಿಸುತ್ತದೆ, ಜನಸೇವೆಯಲ್ಲಿ ನಿರ್ಲಕ್ಷ್ಯ ತೋರುವುದೂ ನಿಲ್ಲುತ್ತದೆ. ಜನ ವಿದ್ಯುತ್ ಅವಘಡಗಳಿಂದ ಪಾರಾಗುತ್ತಾರೆ.

ಕೆ.ಸದಾನಂದ ಶಾಸ್ತ್ರಿ, ಬೆಂಗಳೂರು

ಸ್ತ್ರೀಯರ ಉದ್ಯೋಗಕ್ಕೆ ಉತ್ತೇಜನ ಅಗತ್ಯ

ಯಾವುದೇ ಸಂಘ– ಸಂಸ್ಥೆ, ನಿಯೋಜನೆ, ನೇಮಕಾತಿ, ಆಯ್ಕೆಗಳಲ್ಲಿ ಮಹಿಳೆಯರಿಗೆ ಶೇ 48ರಷ್ಟು ಮೀಸಲಾತಿ ನೀಡಬೇಕೆಂದು ಡಾ. ಎಚ್.ಎಸ್.ಅನುಪಮಾ ತಮ್ಮ ಲೇಖನದಲ್ಲಿ (ಪ್ರ.ವಾ., ಆಳ–ಅಗಲ, ನ. 23) ಆಶಿಸಿದ್ದಾರೆ. ಭಾರತದಲ್ಲಿ ಸ್ತ್ರೀಯರು ಉದ್ಯೋಗ ಮಾಡುವುದಕ್ಕೆ ಇನ್ನೂ ಹೆಚ್ಚು ಉತ್ತೇಜನ ನೀಡಬೇಕಿದೆ. ಆದರೆ, ಈಗ ಮನೆಯ ಆಡಳಿತ ನಡೆಸುತ್ತಿರುವ ಮಹಿಳೆಯರ ಜವಾಬ್ದಾರಿ ಮತ್ತು ಯಜಮಾನಿಕೆ ಕಡಿಮೆಯೇನಿಲ್ಲ. ಎಷ್ಟೋ ಕುಟುಂಬಗಳಲ್ಲಿ ಗಂಡ ಹೊರಗೆ ದುಡಿದು ತಂದ ಹಣವನ್ನು ಹೆಂಡತಿಗೆ ಕೊಡುತ್ತಾನೆ. ಮನೆಯ ನಿರ್ವಹಣೆ ಹೆಂಡತಿಯದೇ ಆಗಿರುತ್ತದೆ. ಆ ವಿಚಾರದಲ್ಲಿ ಸ್ತ್ರೀ ನಿಜವಾಗಿಯೂ ಬುದ್ಧಿವಂತಳಿದ್ದಾಳೆ. ಗಂಡ ಹೆಂಡಿರಿಬ್ಬರೂ ಹೊರಗೆ ದುಡಿದರೆ, ಮನೆಯ ಕೆಲಸ ಕಾರ್ಯ, ಮಕ್ಕಳ ವಿದ್ಯಾಭ್ಯಾಸದ ಹೊಣೆ ಹೊರುವವರು ಯಾರು? ಈ ಕೆಲಸಕ್ಕೆ ಸಂಬಳ ಕೊಡಬೇಕು ಎನ್ನುವುದು ಅತ್ಯಂತ ಅಸಮಂಜಸ.

ಹಾಗೆಯೇ ಶೇ 48ರಷ್ಟು ಮೀಸಲಾತಿ ನೀಡಬೇಕು ಎನ್ನುವುದು ಸಹ ಯಾವ ದೃಷ್ಟಿಯಿಂದಲೂ ಸರಿಯಲ್ಲ. ಮೀಸಲಾತಿಯಿಂದ ಎಷ್ಟೋ ಬಾರಿ ಎಂತಹ ಆಭಾಸ, ಅನ್ಯಾಯ ಆಗುತ್ತಿದೆ ಎಂಬುದು ಹತ್ತಿರದಿಂದ ನೋಡಿದವರಿಗೆ ತಿಳಿಯುತ್ತದೆ. ಕೆಲವು ಸ್ಥಳೀಯ ಸಂಸ್ಥೆಗಳ ಸ್ಥಾನಗಳಿಗೆ ಯೋಗ್ಯತೆ ಮತ್ತು ಅಪೇಕ್ಷೆಯುಳ್ಳ ನಿಗದಿತ ಸಮುದಾಯದ ಸ್ತ್ರೀಯರೇ ಸಿಗುವುದಿಲ್ಲ. ಆಗ ಆ ಪ್ರದೇಶದ ಒಬ್ಬ ಪುಢಾರಿ ತನ್ನ ತಾಯಿಯನ್ನೋ ಹೆಂಡತಿಯನ್ನೋ ಬಲವಂತವಾಗಿ ಚುನಾವಣೆಗೆ ಇಳಿಸಿ, ಅವರ ಹೆಸರಿನಲ್ಲಿ ತಾನು ವ್ಯವಹರಿಸುತ್ತಾನೆ. ಸ್ತ್ರೀಯರು ಎಲ್ಲ ರಂಗಗಳಲ್ಲೂ ಸೇವೆ ಸಲ್ಲಿಸಲು ಯಾರದೂ ಅಡಚಣೆಯಿಲ್ಲ. ಈಗ ಕಚೇರಿಗಳಲ್ಲಿ ರಿಸೆಪ್ಷನಿಸ್ಟ್, ಶುಶ್ರೂಷಕರಂತಹ ಎಷ್ಟೋ ಉದ್ಯೋಗಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಎಂಬುದು ಗಮನಾರ್ಹ.

ಗಂಜೂರು ಎಚ್. ವೆಂಕಟೇಶ್ ಮೂರ್ತಿ, ಚಿಂತಾಮಣಿ

ವೃದ್ಧರ ಪೋಷಣೆ: ಇತರರಿಗೂ ಇದೆ ಹೊಣೆ

'ಪೋಷಕರ ಪೋಷಣೆ: ಹೊರೆಯಲ್ಲ ಹೊಣೆ' ಎಂಬ ಲೇಖನದಲ್ಲಿ ಡಾ. ಕೆ.ಎಸ್.ಪವಿತ್ರ ಅವರು (ಪ್ರ.ವಾ., ನ. 23) ತಮ್ಮ ಅನುಭವದ ಹಿನ್ನೆಲೆಯಲ್ಲಿ ಸಾಂದ್ರಗೊಂಡ ವಿಷಯವನ್ನು ಅರ್ಥಪೂರ್ಣವಾಗಿ ವಿವೇಚಿಸಿದ್ದಾರೆ. ವೃದ್ಧ ಪಾಲಕರ ಪೋಷಣೆಯಲ್ಲಿ ಮಕ್ಕಳ ಜೊತೆಗೆ ಇತರರ ಜವಾಬ್ದಾರಿಯೂ ಈ ಹೊಣೆಯ ನಿರ್ವಹಣೆಯನ್ನು ಹಗುರಗೊಳಿಸಲು ನೆರವಾಗುತ್ತದೆ. ವೈದ್ಯಕೀಯ ವೆಚ್ಚ ಇತ್ತೀಚಿನ ದಿನಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿರುವುದು ವೃದ್ಧರ ಆರೋಗ್ಯ ಸಮಸ್ಯೆ ನಿರ್ವಹಣೆಯಲ್ಲಿ ಸಮಸ್ಯೆ ಸೃಷ್ಟಿಸಿದೆ. ಈ ದಿಸೆಯಲ್ಲಿ ಪ್ರಭುತ್ವವು ವೃದ್ಧರಿಗೆ ಕೈಗೆಟಕುವ ದರದಲ್ಲಿ ಆಸ್ಪತ್ರೆ ಸೌಲಭ್ಯ ಹಾಗೂ ಔಷಧಿಗಳನ್ನು ಒದಗಿಸುವಲ್ಲಿ ತನ್ನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕು. ಆಗ ಅದು ಪೋಷಕರ ಪೋಷಣೆಯಲ್ಲಿ ನಿರತರಾದವರಿಗೆ ಒಂದಿಷ್ಟು ಚೈತನ್ಯ ತುಂಬಬಲ್ಲದು.

ಇದರೊಂದಿಗೆ, ರಾಜ್ಯದಲ್ಲಿ ಖಾಸಗಿ ವೈದ್ಯಕೀಯ ಸಂಸ್ಥೆಗಳ ಜಾಲ ಗಣನೀಯವಾಗಿದೆ. ಈ ಸಂಸ್ಥೆಗಳು ಕೂಡ ವೃದ್ಧರಿಗೆ ಚಿಕಿತ್ಸೆ ನೀಡುವಲ್ಲಿ ಒಂದಿಷ್ಟು ರಿಯಾಯಿತಿ ನೀಡಬೇಕು. ಇದನ್ನು ಅವು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ ಭಾಗವೆಂದು ಪರಿಗಣಿಸಿ, ವೃದ್ಧರ ಪೋಷಣೆಯಲ್ಲಿ ನಿರತರಾದವರ ಭಾರವನ್ನು ಕಡಿಮೆ ಮಾಡಬಹುದು.

ಸಂಗಯ್ಯ ಅ. ಹಿರೇಮಠ, ಧಾರವಾಡ

ಜಾತಿಗಣತಿ ವರದಿ: ಬಾಯಿಚಪಲದ ಅಸ್ತ್ರವಾಗದಿರಲಿ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ– 2015ರ ವರದಿಯನ್ನು ₹ 162 ಕೋಟಿ ವೆಚ್ಚ ಮಾಡಿ ತಯಾರಿಸಲಾಗಿದೆ, ವರದಿಯಲ್ಲಿ ಏನಿದೆ ಎಂಬುದು ತಿಳಿದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ (ಪ್ರ.ವಾ., ನ. 23). ಈ ಎಂಟು ವರ್ಷಗಳಲ್ಲಿ ರಾಜ್ಯದಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದವರು ಮೂರು ಬಾರಿ ಬದಲಾಗಿದ್ದಾರೆ. ಆದರೂ ಈ ವರದಿಗೆ ಇನ್ನೂ ಮೋಕ್ಷ ದೊರೆತಿಲ್ಲವೆಂದರೆ ಆಡಳಿತ ಪಕ್ಷ ಹಾಗೂ ಅಧಿಕಾರಿಗಳ ಬದ್ಧತೆ, ಕಾರ್ಯವೈಖರಿ ಹೇಗಿದೆ ಎಂಬುದು ಅರ್ಥವಾಗುತ್ತದೆ.

₹ 162 ಕೋಟಿಯನ್ನು ಯಾವ್ಯಾವುದಕ್ಕೆ ಬಳಸಲಾಗಿದೆ ಎಂಬುದನ್ನು ಸರ್ಕಾರವು ಜನರಿಗೆ ತಿಳಿಸಬೇಕು. ಇದು ವರದಿಗಿಂತ ಅತಿ ಮುಖ್ಯ. ಸಾರ್ವಜನಿಕರ ಹಣ ವೃಥಾ ವ್ಯಯವಾಗುವುದು ಖಂಡಿತ ಸಲ್ಲದು. ಈ ಜಾತಿಗಣತಿ ಅಧ್ಯಯನ ವರದಿಯಂತೆಯೇ ರಾಜ್ಯದಲ್ಲಿ ಇನ್ನೂ ಅದೆಷ್ಟು ಅಧ್ಯಯನ ವರದಿಗಳು ಮೋಕ್ಷ ಕಾಣದೆ ಸರ್ಕಾರದ ಗೋದಾಮಿನಲ್ಲಿ ದೂಳು ತಿನ್ನುತ್ತಾ ಬಿದ್ದಿವೆಯೋ?! ಇಂತಹ ಅಧ್ಯಯನಗಳು ವಿವಿಧ ರಾಜಕೀಯ ಪಕ್ಷಗಳ ಬಾಯಿಚಪಲಕ್ಕೆ ಅಸ್ತ್ರಗಳಾಗಿ, ಖರ್ಚಿನಲ್ಲಿ ಬಿಳಿಯಾನೆಗಳಂತೆ ಆಗದಿರಲಿ.

ರಮೇಶ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಿಂದೆಂದಿಗಿಂತ ಅತ್ಯಗತ್ಯ ಸಂವಿಧಾನ ಜಾಗೃತಿ

ನ. 26 ಸಂವಿಧಾನ ದಿನ

• ಸುಕೃತ ಎಸ್.

'ಸಂವಿಧಾನ ಒಂದು ಯಂತ್ರದ ಹಾಗೆ, ಅದಕ್ಕೆ ಜೀವವಿಲ್ಲ. ಸಂವಿಧಾನವನ್ನು ಯಾರು ನಿಯಂತ್ರಿಸುತ್ತಾರೋ, ಯಾರು ಅದನ್ನು ಕಾರ್ಯಗತಗೊಳಿಸುತ್ತಾರೋ ಅವರಿಂದಲೇ ಅದಕ್ಕೆ ಜೀವ ಬರುತ್ತದೆ. ಆದ್ದರಿಂದ, ಜನರು ಆಯ್ಕೆ ಮಾಡುವ ವ್ಯಕ್ತಿ ಸಮಗ್ರತೆಯುಳ್ಳವರಾಗಿರಬೇಕು, ಆತನಿಗೆ ಎಲ್ಲರನ್ನೂ ಒಳಗೊಳ್ಳುವ ಗುಣ ಇರಬೇಕು. ಒಂದು ವೇಳೆ ಜನರು ಆಯ್ಕೆ ಮಾಡಿದ ವ್ಯಕ್ತಿಗೆ ಈ ಯಾವ ಗುಣಗಳೂ ಇಲ್ಲದಿದ್ದರೆ, ಸಂವಿಧಾನವೂ ಈ ದೇಶವನ್ನು ರಕ್ಷಿಸಲು ಸಾಧ್ಯವಿಲ್ಲ...'

ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಅಂಬೇಡ್ಕರ್ ಅವರು 1949ರ ನವೆಂಬರ್ 26ರಂದು ಸಂವಿಧಾನವನ್ನು ಅಂಗೀಕರಿಸುವ ನಿರ್ಣಯವನ್ನು ಮಂಡಿಸಿದ್ದರು. ಇದಕ್ಕೆ ಸಂವಿಧಾನ ಸಭೆ ಒಪ್ಪಿಗೆ ನೀಡುವುದಕ್ಕೂ ಮೊದಲು, ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಆಡಿದ ಮಾತುಗಳಿವು. ಸಂವಿಧಾನವನ್ನು ಸಭೆಯು ಅಂಗೀಕರಿಸಿದ ಆ ದಿನವನ್ನು 'ಸಂವಿಧಾನ ದಿನ'ವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ.


ಚರ್ಚೆ, ಸಂವಿಧಾನ ಮತ್ತು ಭಾಷಣ: ಸಂವಿಧಾನದ ಕರಡು ಸಿದ್ಧಗೊಂಡಿದ್ದು ಕರಡು ರಚನಾ ಸಮಿತಿಯಿಂದ. ಆದರೆ, ಅದನ್ನು ಅಂಗೀಕರಿಸಿದ್ದು ಸಂವಿಧಾನ ಸಭೆ, ಅದೂ ಸುದೀರ್ಘವಾದ ಚರ್ಚೆಯ ಮೂಲಕವಾಗಿ.

'ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳಂತೆಯೂ ದೇಶ ಕಟ್ಟುವ ಈ ಪ್ರಕ್ರಿಯೆಯೇ ಹೆಚ್ಚು ಮಹತ್ವದ್ದು ಮತ್ತು ಹೆಚ್ಚು ಕಠಿಣವಾದದ್ದು' ಎಂದು ಇದೇ ಭಾಷಣದಲ್ಲಿ ಪ್ರಸಾದ್ ಅವರು ಅಭಿಪ್ರಾಯಪಟ್ಟಿದ್ದರು. ಅಂತೆಯೇ, ಸಂವಿಧಾನದ ಪ್ರತಿಯೊಂದು ವಿಧಿ, ಉಪವಿಧಿಗಳ ಪ್ರತಿಯೊಂದು ವಾಕ್ಯ, ಕೆಲವೊಮ್ಮೆ ಪ್ರತಿಯೊಂದು ಪದವನ್ನೂ ಸಭೆಯು ಗಂಭೀರವಾಗಿ, ಎಲ್ಲಾ ಆಯಾಮಗಳಲ್ಲಿಯೂ ಚರ್ಚಿಸಿದೆ. ಚರ್ಚೆಯನ್ನೇ ನಡೆಸದೆ ಒಮ್ಮತದಿಂದ ಒಮ್ಮೆಲೆ ಯಾರದ್ದೇ ಅಭಿಪ್ರಾಯವನ್ನು, ಭಿನ್ನಾಭಿಪ್ರಾಯವನ್ನು ಸಭೆಯು ತಿರಸ್ಕಾರ ಮಾಡಿಲ್ಲ. ಎಲ್ಲ ಭಿನ್ನಾಭಿಪ್ರಾಯಗಳಿಗೂ ಅಂಬೇಡ್ಕರ್ ಅವರು ಸೇರಿದಂತೆ ಹಲವರು ಸ್ಪಷ್ಟನೆ ನೀಡಿದ್ದಾರೆ. ಆದ್ದರಿಂದಲೇ ಸಂವಿಧಾನ ರಚನೆಯಲ್ಲಿ 'ಚರ್ಚೆ'ಯು ಬಹಳ ಮುಖ್ಯವಾದ ಹಾಗೂ ನಿರ್ಣಾಯಕ ಪಾತ್ರವಹಿಸಿದೆ ಎಂದು ವಿವರಿಸಿದ್ದರು.

'ಸಂಸತ್ತಿನಲ್ಲಿ ಈಗ ಚರ್ಚೆಯೇ ನಡೆಯದೆ ಮಸೂದೆಗಳನ್ನು ಪಾಸು ಮಾಡಲಾಗುತ್ತಿದೆ' ಎಂಬುದು ವಿರೋಧ ಪಕ್ಷಗಳ ಈಗಿನ ಪ್ರಮುಖ ಆರೋಪ. ಆದರೆ, ಸಂವಿಧಾನ ರಚನಾ ಸಭೆಯು ಎಷ್ಟು ದೀರ್ಘವಾದ ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿತ್ತು ಎಂಬುದನ್ನು ಅಂಕಿ-ಅಂಶಗಳೇ ಹೇಳುತ್ತವೆ. ಆಗ ಹಲವು ಹಂತಗಳಲ್ಲಿ ಸಂವಿಧಾನ ಕರಡನ್ನು ಸಂವಿಧಾನ ಸಭೆ ಪರಾಮರ್ಶಿಸಿದೆ. ಮೊದಲೇ ಹೇಳಿದ ಹಾಗೆ, ಒಂದು ವಾಕ್ಯ, ಒಂದು ಪದದ ಕುರಿತೂ ದಿನಗಟ್ಟಲೆ ಚರ್ಚೆ ನಡೆದಿದೆ.

ಏಕರೂಪ ನಾಗರಿಕ ಸಂಹಿತೆ, ರಾಜ್ಯವು ಫೆಡರಲ್ ಆಗಿರಬೇಕೇ ಅಥವಾ ಯೂನಿಯನ್ ಆಗಿರಬೇಕೇ ಸೇರಿದಂತೆ ಹಲವು ಪ್ರಮುಖ ವಿಷಯಗಳಿಗೆ ನಡೆದ ಚರ್ಚೆಯ ಸಂದರ್ಭದಲ್ಲಿ ಸದಸ್ಯರ ಭಿನ್ನಾಭಿಪ್ರಾಯಗಳನ್ನು ಪ್ರಬಲವಾಗಿ ಮಂಡಿಸಿದ್ದರು. ಈ ವಿಷಯಗಳಿಗೆ ಸಂಬಂಧಿಸಿ ಹಲವು ತಿದ್ದುಪಡಿಗಳನ್ನೂ ಸೂಚಿಸಿದ್ದರು. ಈ ಬಗ್ಗೆ ಅಂಬೇಡ್ಕರ್ ಅವರು ಸಂವಿಧಾನವನ್ನು ಅಂಗೀಕರಿಸುವ ನಿರ್ಣಯ ಮಂಡಿಸುವಾಗ ಪ್ರಸ್ತಾಪಿಸಿದ್ದರು. ಸುದೀರ್ಘವಾಗಿ ನಡೆದ ಚರ್ಚೆಯಲ್ಲಿ ವಿವಿಧ ಸದಸ್ಯರು ಸುಮಾರು 7,635ಕ್ಕೂ ಹೆಚ್ಚು ತಿದ್ದುಪಡಿಗಳನ್ನು ಮಂಡಿಸಿದ್ದರು. ಇವುಗಳಲ್ಲಿ ಸುಮಾರು 2,473 ತಿದ್ದುಪಡಿಗಳನ್ನು ಒಪ್ಪಿಕೊಳ್ಳಲಾಗಿದೆ ಎಂದು ರಾಜೇಂದ್ರ ಪ್ರಸಾದ್ ಅವರು ಸಂವಿಧಾನ ಸಭೆಗೆ ಮಾಹಿತಿ ನೀಡಿದ್ದರು.

ಸಂವಿಧಾನ ಮತ್ತು ಜನರ ಭಾಗವಹಿಸುವಿಕೆ: ಸಂವಿಧಾನ ರಚನೆಯ ಬಗ್ಗೆ ಜನರು ಎಷ್ಟು ಕುತೂಹಲಿಗಳಾಗಿದ್ದರು ಎಂದರೆ, ಸಂವಿಧಾನ ಸಭೆ ಆರಂಭವಾಗಿ ಸಂವಿಧಾನವು ಅಂಗೀಕಾರವಾದ ದಿನದವರೆಗೆ 53,000ಕ್ಕೂ ಹೆಚ್ಚು ಜನ ವೀಕ್ಷಕರ ಗ್ಯಾಲರಿಗೆ ಬಂದುಹೋಗಿದ್ದರಂತೆ. ಇದು ರಾಜೇಂದ್ರ ಪ್ರಸಾದ್ ಅವರು ನ. 26ರಂದು ಮಾಡಿದ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಕುತೂಹಲಕಾರಿ ಅಂಶ. ಸಭೆಯಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಜನರು ಗಂಭೀರವಾಗಿ ಕೇಳುತ್ತಿದ್ದರು ಮತ್ತು ಸಂವಿಧಾನದ ಕುರಿತು ಅವರಿಗೂ ಆಸಕ್ತಿ ಇತ್ತು ಎನ್ನುವುದಕ್ಕೆ ಇದು ಪುರಾವೆ.




ಕಾಲೇಜುಗಳಲ್ಲಿ ಪದವಿ ಸಂದರ್ಭದಲ್ಲಿ ಒಂದು ಸೆಮಿಸ್ಟರ್‌ಗೆ 'ಸಂವಿಧಾನ' ಪಠ್ಯವನ್ನು ಓದುವುದು ಕಡ್ಡಾಯ. ಅದಕ್ಕೆ ಶೇ 75ರಷ್ಟು ಹಾಜರಿಯೂ ಕಡ್ಡಾಯ. ಆದರೆ, ಈ ತರಗತಿಗಳು ಬಹಳ ಯಾಂತ್ರಿಕವಾಗಿ ನಡೆಯುತ್ತವೆ. ಈ ನೆಲೆಯಲ್ಲಿ ಜನಸಾಮಾನ್ಯರಿಗೆ, ಯುವಜನತೆಗೆ ಸಂವಿಧಾನದ ಓದು ಅತ್ಯಗತ್ಯವಾಗಿದೆ. ಈ ಎಲ್ಲಾ ಕಾರಣಕ್ಕಾಗಿಯೂ ಹಿಂದೆಂದಿಗಿಂತ ಈಗ 'ಸಂವಿಧಾನ ದಿನ'ವು ಹೆಚ್ಚು ಮಹತ್ವ ಪಡೆದುಕೊಂಡಿದೆ.

ಆಧಾರ: ಸಂವಿಧಾನ ಸಭೆಯ ಚರ್ಚೆಗಳು, ಪಿಟಿಐ

'ಸಾಮಾನ್ಯರನ್ನೂ ತಲುಪಬೇಕು'

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ **ಎಚ್.ಎನ್. ನಾಗಮೋಹನ್ ದಾಸ್** ಅವರು ದೇಶದ ಎಲ್ಲಾ ಸಾಧನೆಗಳಿಗೂ ಸಂವಿಧಾನವೇ ಅಡಿಪಾಯ ಎನ್ನುತ್ತಾರೆ. ಸಂವಿಧಾನ ಓದು ಅಭಿಯಾನದ ಮುಂದಾಳುಗಳಲ್ಲಿ ಅವರೂ ಒಬ್ಬರು. ಅವರ 'ಸಂವಿಧಾನ ಓದು' ಕೃತಿಯು ಈ ಅಭಿಯಾನದಲ್ಲಿ ಮಹತ್ವದ ಪಾತ್ರವಹಿಸಿದೆ. ಸಂವಿಧಾನದ ಬಗ್ಗೆ ಜನರಲ್ಲಿ ಏಕೆ ಜಾಗೃತಿ ಮೂಡಿಸಬೇಕು ಎಂಬುದನ್ನು ಅವರು 'ಪ್ರಜಾವಾಣಿ' ಜತೆಗೆ ಹಂಚಿಕೊಂಡಿದ್ದಾರೆ



• ಸುಬ್ರಹ್ಮಣ್ಯ ವಿ.ಎಸ್.

• ಈ ಸಂದರ್ಭದಲ್ಲಿ ಸಂವಿಧಾನದ ಕುರಿತು ಜಾಗೃತಿ ಮೂಡಿಸುವುದು ಏಕೆ ಅಗತ್ಯ ಎನಿಸುತ್ತದೆ

ಮೊದಲನೆಯದ್ದು ಸಂವಿಧಾನ ಜಾರಿಯಾದ ಬಳಿಕವೇ ನಿಜವಾದ ಭಾರತ ನಿರ್ಮಾಣ ಆಗಿದ್ದು. ಅದಕ್ಕೆ ಮೊದಲು ಗುಪ್ತರ, ಮೌರ್ಯರ, ಮೊಘಲರ, ಬ್ರಿಟಿಷರ ಭಾರತ ಇತ್ತು. ಸಂವಿಧಾನವು ಇಡೀ ದೇಶವನ್ನು ಒಂದು ರಾಜಕೀಯ ಆಡಳಿತದ ವ್ಯಾಪ್ತಿಗೆ ತಂದಿತು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಕ್ಷೇತ್ರದ ಪ್ರಜಾತಾಂತ್ರಿಕ ಸಂಸ್ಥೆಗಳನ್ನು ಕಟ್ಟಿ, ಬೆಳೆಸಲು ಸಾಧ್ಯವಾಯಿತು. ಜನರ ಜೀವನಮಟ್ಟ ಸುಧಾರಣೆ ಸೇರಿದಂತೆ ದೇಶದ ಎಲ್ಲ ಸಾಧನೆಗಳಿಗೂ ಸಂವಿಧಾನವೇ ಅಡಿಪಾಯ. ಈ ಕಾರಣದಿಂದ ದೇಶದಲ್ಲಿ ಸಂವಿಧಾನದ ಕುರಿತು ನಿರಂತರ ಜಾಗೃತಿ ಮೂಡಿಸುವುದು ಅಗತ್ಯ.

• ಸಂವಿಧಾನ ಓದು ಕೃತಿ ರಚಿಸಿದ ಬಳಿಕ ಜನರಿಂದ ಬಂದ ಪ್ರತಿಕ್ರಿಯೆಗಳು ಹೇಗಿದ್ದವು?

2018 ಆಗಸ್ಟ್ 25ರಂದು ಸೆಂಟ್ರಲ್ ಕಾಲೇಜು ಸೆನೆಟ್ ಸಭಾಂಗಣದಲ್ಲಿ ಪುಸ್ತಕ ಬಿಡುಗಡೆ ಆಯಿತು. ಅವತ್ತೇ ನಿರೀಕ್ಷೆಗೂ ಮೀರಿದ ಸ್ಪಂದನೆ ದೊರಕಿತ್ತು. ಸಹಯಾನ, ಸಮುದಾಯ ಕೃತಿ ಪ್ರಕಟಿಸಿದ್ದವು. 2019ರ ಜನವರಿಯಲ್ಲಿ ಅಭಿಯಾನ ಆರಂಭಿಸಿದೆವು. ಐದು ವರ್ಷಗಳಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಹೋಗಿ, ಸಾವಿರಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಸರ್ಕಾರದಿಂದ ಏನೂ ಸಹಾಯ ಪಡೆದಿಲ್ಲ. ಕಾರ್ಪೊರೇಟ್ ವಲಯದಿಂದಲೂ ನೆರವು ಪಡೆದಿಲ್ಲ. ನಮ್ಮ ಜೇಬಿನಿಂದಲೂ ಹಣ ಹಾಕಿಲ್ಲ. ಜನರೇ ಈ ಅಭಿಯಾನದ ವೆಚ್ಚ ಭರಿಸಿದ್ದಾರೆ. ಇದು ಜನರಿಂದ ಸಿಕ್ಕ ಪ್ರತಿಕ್ರಿಯೆ.

• ಸಂವಿಧಾನ ಓದು ಅಭಿಯಾನ ದೀರ್ಘ ಕಾಲದಿಂದ ನಡೆಯುತ್ತಿದ್ದು, ಪರಿಣಾಮ ಬೀರಿದೆಯೇ?

ಐದು ವರ್ಷಗಳ ಹಿಂದೆ ಸಂವಿಧಾನ ಕುರಿತು ಮಾತಾಡುವವರು ಕಡಿಮೆ ಇದ್ದರು. ಈಗ ಮನೆ ಮಾತಾಗಿದೆ. ಬೇರೆ ಬೇರೆ ಕ್ಷೇತ್ರದವರು ಸಂವಿಧಾನದ ಕುರಿತು ಚರ್ಚೆಯನ್ನು ಬಯಸುತ್ತಿದ್ದಾರೆ. ದೇಶ ಈಗ ಸಂವಿಧಾನದ ಬಗ್ಗೆ ಮಾತನಾಡುತ್ತಿದೆ. ಪರಿಶಿಷ್ಟ ಯುವಕನೊಬ್ಬ ಮನೆ ಗೃಹ ಪ್ರವೇಶದಲ್ಲಿ ಸಂವಿಧಾನ ಓದು ಕೃತಿ ಹಂಚುತ್ತಿದ್ದಾನೆ. ರಾಜ್ಯದ ಉದ್ದಗಲದಿಂದ ಕೃತಿಯ ಪ್ರತಿಗಳಿಗೆ ಸಾವಿರ, ಸಾವಿರ ಸಂಖ್ಯೆಯಲ್ಲಿ ಬೇಡಿಕೆ ಬರುತ್ತಿದೆ.

• ಸಂವಿಧಾನದ ಕುರಿತು ಅರಿವು ಮೂಡಿಸಲು ಇನ್ನೂ ಏನೆಲ್ಲಾ ಪ್ರಯತ್ನಗಳು ಆಗಬೇಕಿದೆ?

ನಾವು ಪುಸ್ತಕ ಬರೆದು ಮಾರಿದರೆ ವಿದ್ಯಾವಂತರಿಗೆ ತಲುಪುತ್ತದೆ. ಹೊರಗಡೆ ಉಳಿದ ಗ್ರಾಮಾಂತರ ಪ್ರದೇಶದ ಜನ, ಅನಕ್ಷರಸ್ಥರು, ಸರ್ಕಾರಿ ನೌಕರರು, ಕೈಗಾರಿಕಾ ಕಾರ್ಮಿಕರು, ಸಾಮಾನ್ಯ ಜನರನ್ನು ತಲುಪಬೇಕು. ಈಗ ನಡೆಯುತ್ತಿರುವ ಅಭಿಯಾನದ ಜತೆ ಬೇರೆ ಬೇರೆ ಪ್ರಕಾರದಲ್ಲಿ ಹೋಗಬೇಕು. ಸಂವಿಧಾನದ ಕುರಿತು ಸಿನಿಮಾ ನಿರ್ಮಾಣ ಆಗಬೇಕು. ಅನಕ್ಷರಸ್ಥರು ರಾಮಾಯಣ, ಮಹಾಭಾರತ ಕಲಿಯಬಲ್ಲರಾದರೆ ಸಂವಿಧಾನವನ್ನೂ ಅರಿಯುತ್ತಾರೆ. ಯಕ್ಷಗಾನ, ತಾಳಮದ್ದಳೆ, ನಾಟಕ, ಸಣ್ಣಾಟ, ದೊಡ್ಡಾಟ, ಗಾಯನ ಸೇರಿದಂತೆ ಎಲ್ಲ ಕಲಾ ಪ್ರಕಾರಗಳನ್ನೂ ಇದಕ್ಕಾಗಿ ಬಳಸಿಕೊಳ್ಳಬೇಕು.

• ಈ ಅಭಿಯಾನದ ನಿಜವಾದ ಗುರಿ ಯಾರು?

ವಿದ್ಯಾರ್ಥಿ ಯುವಜನರೇ ನಮ್ಮ ಪ್ರಮುಖ ಗುರಿ. ಅವರು ಭವಿಷ್ಯದ ಭಾರತದ ಶಕ್ತಿ. ಈ ತಲೆಮಾರನ್ನು ಸರಿಪಡಿಸಿದರೆ ಮುಂದೆ ಫಲ ಕೊಡುತ್ತದೆ. ಸಂಪನ್ಮೂಲ ವ್ಯಕ್ತಿಗಳನ್ನು ತಯಾರು ಮಾಡುತ್ತಿದ್ದೇವೆ. 100ರಿಂದ 150 ಮಂದಿಯನ್ನು ಆಯ್ಕೆಮಾಡಿ ತರಬೇತಿ ನೀಡುತ್ತಿದ್ದೇವೆ. ಅವರು ರಾಜ್ಯವ್ಯಾಪಿ ಅಭಿಯಾನ ಮುಂದುವರಿಸುವ ಹೊರೆ ಹೊರಲಿದ್ದಾರೆ.

'ಸಂವಿಧಾನವ ಸಹಿಸದವರಿಂದ ಬದಲಿಸುವ ಅಭಿಯಾನ'

• ಗಣಪತಿ ಹೆಗಡೆ

ಕಾರವಾರ: 'ಸಂವಿಧಾನವು ಇತಿಹಾಸ, ಪೌರನೀತಿ ಪುಸ್ತಕಕ್ಕೆ ಸೀಮಿತವಾಗಿ ಉಳಿಯದೆ ದೇಶದ ಪ್ರತಿ ಪ್ರಜೆಯನ್ನೂ ತಲುಪಬೇಕು ಎಂಬ ಧ್ಯೇಯದೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ 1990ರ ದಶಕದಲ್ಲಿ ಹುಟ್ಟಿಕೊಂಡ 'ಚಿಂತನ' ಸಂಸ್ಥೆ ಸಂವಿಧಾನದ ಆಶಯಗಳನ್ನು ಜನರಿಗೆ ತಲುಪಿಸಲು ನಿರಂತರ ಪ್ರಯತ್ನ ನಡೆಸಿತು. 2009ರಿಂದ ಈಚೆಗೆ ಸ್ಪಷ್ಟ ಕಾರ್ಯಸೂಚಿ ಮೂಲಕ ಕಾರ್ಯರೂಪಕ್ಕೆ ತರಲು ಮುಂದಾದೆವು' ಎಂದು ಹೊನ್ನಾವರ ತಾಲ್ಲೂಕಿನ ಕೆರೆಕೋಣದ ಸಹಯಾನ ಸಂಸ್ಥೆಯ ಸಂವಿಧಾನ ಓದು ಅಭಿಯಾನದ ರೂವಾರಿಗಳಲ್ಲಿ ಒಬ್ಬರಾದ ಯಮುನಾ ಗಾಂವ್ಕರ್ ಮಾತಿಗೆ ಇಳಿದರು.



ಯಮುನಾ ಗಾಂವ್ಕರ್

'ಸಹಯಾನ ಸಂಸ್ಥೆಯ ಸಂಚಾಲಕರಾಗಿದ್ದ ವಿಠ್ಠಲ ಭಂಡಾರಿ 'ಸಂವಿಧಾನ ಓದು' ಎಂಬ ಅಭಿಯಾನಕ್ಕೆ ಜೀವ ಕೊಟ್ಟವರು. ಅವರೊಟ್ಟಿಗೆ 'ಸಮುದಾಯ ಕರ್ನಾಟಕ' ಸಂಘಟನೆ ಕೈಜೋಡಿಸಿತು. ಆರಂಭದ ದಿನಗಳಲ್ಲಿ ಸಂವಿಧಾನದ ಮಹತ್ವದ ಅಂಶಗಳನ್ನು ಕರಪತ್ರಗಳಲ್ಲಿ ಮುದ್ರಿಸಿ ಅವುಗಳನ್ನು ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ ಹಂಚುವ ಕೆಲಸ ಮಾಡಿದೆವು. ಜತೆಗೆ ಭಾರತೀಯ ಸಂವಿಧಾನ ಏಕೆ ಶ್ರೇಷ್ಠ ಮತ್ತು ಏಕೆ ಮಹತ್ವದ್ದು ಎಂಬುದನ್ನೂ ತಿಳಿಸುವ ಕಾರ್ಯಕ್ರಮಗಳು ಸಾಲುಸಾಲಾಗಿ ನಡೆದವು' ಎಂದು ವಿವರಿಸುತ್ತ ಸಾಗಿದರು.

'ದುರ್ಬಲ ವರ್ಗಗಳು ಮತ್ತು ಪ್ರಬಲ ವರ್ಗಗಳೆರಡರ ಹಿತವನ್ನೂ ಸಂವಿಧಾನವು ಕಾಯುತ್ತದೆ. ಆದರೂ ಪ್ರಬಲ ವರ್ಗದ ಬಹುಪಾಲು ಜನರು ಮಾತ್ರ ಸಂವಿಧಾನವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಶ್ರಮ ಸಂಸ್ಕೃತಿಯ ಬಗ್ಗೆ ಅರಿವಿಲ್ಲದೆ ಸನಾತನ ಸಂಸ್ಕೃತಿಯನ್ನು ಮಾತ್ರ ಬಿತ್ತರಿಸುವ ಮತ್ತು ಅದೇ ಸಂಸ್ಕೃತಿಯನ್ನು ಪೋಷಿಸಲು ಯತ್ನಿಸುವ ಕಾರಣಕ್ಕೆ ಸಂವಿಧಾನ ಅವರಿಗೆ ಸಹ್ಯ ಆಗಿರಲಿಲ್ಲ. ಅಲ್ಲದೆ 'ಸಂವಿಧಾನ ಬದಲಿಸುವ', 'ಸಂವಿಧಾನ ಸುಡುವ' ಮನಃಸ್ಥಿತಿಯೂ ಬಹಿರಂಗಗೊಂಡ ಬಳಿಕ ಸಂವಿಧಾನ ಓದು ಬಲಪಡಿಸುವ ಮತ್ತು ಅಭಿಯಾನದ ರೂಪ ಕೊಡುವ ಕೆಲಸಕ್ಕೆ 2018ರಲ್ಲಿ ಅಧಿಕೃತವಾಗಿ ಚಾಲನೆ ಸಿಕ್ಕಿತ್ತು' ಎಂದರು.

'ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರು ಸಂವಿಧಾನದ ಒಟ್ಟಾರೆ ಅಂಶಗಳನ್ನು ಸಂಕ್ಷಿಪ್ತವಾಗಿ ಅಕ್ಷರರೂಪಕ್ಕೆ ಇಳಿಸಿ 'ಸಂವಿಧಾನ ಓದು' ಕೈಪಿಡಿ ರಚಿಸಿದರು. ಇದನ್ನು ಸಹಯಾನ ಮತ್ತು ಸಮುದಾಯ ಕರ್ನಾಟಕ ಸಂಸ್ಥೆಗಳು ಸೇರಿ ಪ್ರಕಟಿಸಿದವು. 2018ರ ಆಗಸ್ಟ್ 25ರ ಬಳಿಕ ರಾಜ್ಯವ್ಯಾಪಿ ಅಭಿಯಾನಕ್ಕೆ ಚಾಲನೆ ಸಿಕ್ಕಿತ್ತು. ಮುದ್ರಣಗೊಂಡ ಕೆಲವೇ ದಿನಗಳಲ್ಲಿ ಸಾವಿರಾರು ಪ್ರತಿಗಳು ಮಾರಾಟವೂ ಆದವು' ಎಂದು ವಿವರಿಸಿದರು.



ವಿಠ್ಠಲ ಭಂಡಾರಿ

'ಸಂವಿಧಾನ ಓದು ಅಭಿಯಾನ ಐದು ವರ್ಷಗಳ ಹಿಂದೆ ಆರಂಭವಾಗಿದ್ದರೂ ಸಂವಿಧಾನದ ಮಹತ್ವವನ್ನು ಯುವ ಪೀಳಿಗೆಯ ಜತೆಗೆ ಸಮಾಜಕ್ಕೆ ತಿಳಿಸಿಕೊಡುವ ಕೆಲಸ 'ಕೆರೆಕೋಣ' ಎಂಬ ಪುಟ್ಟ ಗ್ರಾಮದ ಮನೆ ಅಂಗಳದಿಂದ ಹಲವು ವರ್ಷಗಳ ಹಿಂದೆ ನಡೆದಿತ್ತು. ಸಂವಿಧಾನದ ಆಶಯಗಳನ್ನು ವೈಯಕ್ತಿಕ ಜೀವನದಲ್ಲೂ ಮೈಗೂಡಿಸಿಕೊಂಡಿದ್ದ ವಿಠ್ಠಲ ಭಂಡಾರಿ ಅಭಿಯಾನದ ಹಿಂದಿನ ಶಕ್ತಿ' ಎನ್ನಲು ಅವರು ಮರೆಯಲಿಲ್ಲ.

ಸಿನಿ ಬಿಟ್ಸ್



ರುಹಾನಿ ಶೆಟ್ಟಿ, ಡಾರ್ಲಿಂಗ್ ಕೃಷ್ಣ, ಅದ್ವಿತಿ ಶೆಟ್ಟಿ ಹಾಗೂ ಸೋನಲ್ ಮೊಂತೆರೋ

ತೆರೆಯಲ್ಲಿಂದು ಸಿನಿ ಹಬ್ಬ

ಹಲವು ವಾರಗಳ ನಂತರ ಚಂದನವನದ ಬೆಳ್ಳಿತೆರೆಯಲ್ಲಿ ಸಾಲು ಸಾಲು ಸಿನಿಮಾಗಳು ತೆರೆಕಾಣುತ್ತಿದೆ. ಇಂದು(ನ.24) ಐದು ಸಿನಿಮಾಗಳು ಬಿಡುಗಡೆಯಾಗುತ್ತಿವೆ.

'ಶುಗರ್ ಫ್ಯಾಕ್ಟರಿ': ದೀಪಕ್ ಅರಸ್ ನಿರ್ದೇಶನದಲ್ಲಿ ಡಾರ್ಲಿಂಗ್ ಕೃಷ್ಣ ನಾಯಕರಾಗಿ ನಟಿಸಿರುವ ಸಿನಿಮಾ 'ಶುಗರ್ ಫ್ಯಾಕ್ಟರಿ'. ಸೋನಲ್ ಮೊಂತೆರೋ, ಅದ್ವಿತಿ ಶೆಟ್ಟಿ ಹಾಗೂ ರುಹಾನಿ ಶೆಟ್ಟಿ ಚಿತ್ರದ ನಾಯಕಿಯರು. 'ಲವ್ ಮಾಕ್ಟೇಲ್' ಸಿನಿಮಾ ಬಳಿಕ ಡಾರ್ಲಿಂಗ್ ಕೃಷ್ಣ ಅವರು ಒಪ್ಪಿಕೊಂಡಿದ್ದ ಮೊದಲ ಸಿನಿಮಾ ಇದಾಗಿದ್ದು, ಅಲ್ಲಿನ 'ಆದಿ'ಗೆ ತದ್ವಿರುದ್ಧ ಪಾತ್ರ ಇಲ್ಲಿದೆಯೆಂದಿದೆ ಚಿತ್ರತಂಡ. 'ಶುಗರ್ ಫ್ಯಾಕ್ಟರಿ' ಎನ್ನುವುದು ಪಬ್ ಒಂದರ ಹೆಸರು. ಚಿತ್ರದಲ್ಲಿ ಈ ಪಬ್ ಕೂಡಾ ಒಂದು ಪಾತ್ರವಾಗಿದ್ದು, ಅಲ್ಲಿಯೇ ಹೆಚ್ಚಿನ ಚಿತ್ರೀಕರಣ ನಡೆದಿದೆ. 'ಚಿತ್ರದ ಶೀರ್ಷಿಕೆ, ತುಣುಕುಗಳನ್ನು ನೋಡಿ ನಮ್ಮ ಚಿತ್ರದಲ್ಲಿ ಬರಿ ಹಾಡು, ಕುಣಿತ, ಕುಡಿತ ಇದೆ ಎಂದುಕೊಳ್ಳಬೇಡಿ. ಇದೊಂದು ಸುಮಧುರ ಪ್ರೇಮ ಕಾವ್ಯ. ಆ್ಯಕ್ಷನ್ ಹಾಗೂ ಭಾವನಾತ್ಮಕ ಸನ್ನಿವೇಶಗಳೂ ಚಿತ್ರದಲ್ಲಿದೆ. ಒಟ್ಟಿನಲ್ಲಿ ಈಗಿನ ಜನತೆ ಯಾವ ಮನರಂಜನೆ ಬಯಸುತ್ತಾರೂ ಅದೆಲ್ಲವೂ ನಮ್ಮ ಚಿತ್ರದಲ್ಲಿದೆ' ಎನ್ನುತ್ತಾರೆ ನಿರ್ದೇಶಕ ದೀಪಕ್ ಅರಸ್. ಚಿತ್ರಕ್ಕೆ ಕಬೀರ್ ರಫಿ ಸಂಗೀತವಿದ್ದು, ಆರ್.ಗಿರೀಶ್ ಬಂಡವಾಳ ಹೂಡಿದ್ದಾರೆ. ಚಿತ್ರದಲ್ಲಿ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಸ್ವಾತಿ ಮುತ್ತಿನ ಮಳೆ ಹನಿಯೇ': ರಾಜ್ ಬಿ ಶೆಟ್ಟಿ ಅವರು ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಚಿತ್ರವಿದು. ನಟಿ ರಮ್ಯಾ ಅವರು ತಮ್ಮ ಆ್ಯಪಲ್ ಬಾಕ್ಸ್ ಸ್ಟುಡಿಯೋಸ್ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸಿರಿ ರವಿಕುಮಾರ್ ಚಿತ್ರದ ನಾಯಕಿ. ಮಿಥುನ್ ಮುಕುಂದನ್ ಸಂಗೀತ, ಪ್ರವೀಣ್ ಶ್ರೀಯಾನ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.



ಸಿರಿ ಮತ್ತು ರಾಜ್

'ಬ್ಯಾಡ್ ಮ್ಯಾನರ್ಸ್': ನಿರ್ದೇಶಕ ಸೂರಿ ಆ್ಯಕ್ಷನ್ ಕಟ್ ಹೇಳಿರುವ, ಯಂಗ್ ರೆಬಲ್ ಸ್ಟಾರ್ ಅಭಿಷೇಕ್ ಅಂಬರೀಶ್ ನಟನೆಯ ಈ ಸಿನಿಮಾ ಮೇಲೆ ಜನರ ನಿರೀಕ್ಷೆ ಹೆಚ್ಚಿದೆ. ಅಭಿಷೇಕ್ ಇಲ್ಲಿ ರುದ್ರನಾಗಿ ಆರ್ಭಟಿಸಿದ್ದು, ಇದು ಇವರ ಎರಡನೇ ಸಿನಿಮಾ. ಚಿತ್ರದಲ್ಲಿ ರಚಿತಾ ರಾಮ್ ನಾಯಕಿ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿ': ಬಹುತೇಕ ಹೊಸಬರೇ ಇರುವ 'ಎಲೆಕ್ಟ್ರಾನಿಕ್ ಸಿಟಿ' ಚಿತ್ರ ಇಂದು ತೆರೆ ಕಾಣುತ್ತಿದೆ. ಆರ್.ಚಿಕ್ಕಣ್ಣ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. 'ಐಟಿ ಉದ್ಯೋಗಿಗಳ ಬದುಕಿನ ಚಿತ್ರವಿದು. ಈವರೆಗೂ ನಲವತ್ತೆರಡಕ್ಕೂ ಅಧಿಕ ಚಿತ್ರೋತ್ಸವಗಳಿಗೆ ಈ ಸಿನಿಮಾ ಆಯ್ಕೆಯಾಗಿದೆ' ಎಂದು ಚಿತ್ರತಂಡ ಹೇಳಿದೆ. ಆರ್ಯನ್ ಶೆಟ್ಟಿ ಚಿತ್ರದ ನಾಯಕ. ದಿಯಾ ಆಶ್ಲೇಷ, ರಕ್ಷಿತ ಕೆರೆಮನೆ, ರಶ್ಮಿ ನಾಯಕಿಯರು.

'ಸ್ಕೂಲ್ ಡೇಸ್': ಉಮೇಶ್ ಎಸ್. ಹಿರೇಮಠ ನಿರ್ಮಾಣದಲ್ಲಿ ಸಂಜಯ್ ಎಚ್. ನಿರ್ದೇಶಿಸಿರುವ 'ಸ್ಕೂಲ್ ಡೇಸ್' ಬಿಡುಗಡೆಗೊಳ್ಳುತ್ತಿದೆ. ಶಾಲಾ ದಿನಗಳ ಕುರಿತಾದ ಈ ಚಿತ್ರ, ಸಂಪೂರ್ಣ ಉತ್ತರ ಕರ್ನಾಟಕದ ಭಾಷೆಯಲ್ಲೇ ಮೂಡಿಬಂದಿದೆ. ಅರ್ಜುನ್ ಬಳ್ಳಾರಿ, ಸಂಗಮ್ ಮಠದ್, ನೇಹಾ, ವಿವೇಕ್ ಜಂಬಗಿ ಮುಂತಾದವರು ನಟಿಸಿರುವ ಚಿತ್ರಕ್ಕೆ ಕೆ.ಎಂ.ಇಂದ್ರ ಸಂಗೀತ ನಿರ್ದೇಶನವಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **'ಸಂವಿಧಾನವು ಹಿಂದೂ** ವಿರೋಧಿಯಾಗಿದೆ. ಸಂವಿಧಾನದ 30ನೇ ವಿಧಿಯು ಮದರಸಗಳಲ್ಲಿ ಕುರ್-ಆನ್ ಅನ್ನು ಬೋಧಿಸಲು ಅವಕಾಶ ಮಾಡಿಕೊಡುತ್ತದೆ. ಆದರೆ ಸಂವಿಧಾನದ 30ಎ ವಿಧಿಯು ಶಾಲೆಗಳಲ್ಲಿ ಭಗವದ್ಗೀತೆ ಬೋಧನೆಯನ್ನು ನಿಷೇಧಿಸುತ್ತದೆ. ಹೀಗೆ ಹಿಂದೂಗಳಿಗೆ ಸಂವಿಧಾನದ 30 ಮತ್ತು 30ಎ ವಿಧಿಯು ಅನ್ಯಾಯ ಮಾಡುತ್ತಿದೆ' ಎಂಬ ವಿವರ ಇರುವ ಸಂದೇಶ ಮತ್ತು ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಇದು ಸುಳ್ಳು ಸುದ್ದಿ.

✓ **ಸಂವಿಧಾನದ 30ನೇ ವಿಧಿಯು** ಧಾರ್ಮಿಕ ಮತ್ತು ಭಾಷಿಕ ಅಲ್ಪಸಂಖ್ಯಾತ ಸಮುದಾಯಗಳು ತಮ್ಮದೇ ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಲು ಅವಕಾಶ ಮಾಡಿಕೊಡುತ್ತದೆ. ಜತೆಗೆ ಅಂತಹ ಶೈಕ್ಷಣಿಕ ಸಂಸ್ಥೆಗಳ ಆಡಳಿತ ನಡೆಸಲೂ ಅವಕಾಶ ಮಾಡಿಕೊಡುತ್ತದೆ. ಈ ವಿಧಿಯ ಮೂರು ಉಪವಿಧಿಗಳಲ್ಲಿ ಇದನ್ನು ವಿವರಿಸಲಾಗಿದೆ. ಇಲ್ಲಿ ಎಲ್ಲಿಯೂ ಮದರಸಗಳಲ್ಲಿ ಕುರ್-ಆನ್ ಅನ್ನು ಬೋಧಿಸಿ ಎಂದು ಹೇಳಿಲ್ಲ. ಜತೆಗೆ ಸಂವಿಧಾನದಲ್ಲಿ 30ಎ ವಿಧಿಯೇ ಇಲ್ಲ. ಹೀಗಾಗಿ ಇಂತಹ ಪೋಸ್ಟರ್‌ಗಳಲ್ಲಿ ಹಂಚಿಕೊಂಡಿರುವ ಮಾಹಿತಿ ಸುಳ್ಳು ಎಂದು ಫ್ಯಾಕ್ಟ್‌ಲೀ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಸಂವಿಧಾನದ 30ನೇ ವಿಧಿಯನ್ನು ಪರಿಶೀಲಿಸಿ, ಪೋಸ್ಟರ್‌ನಲ್ಲಿ ಇರುವ ಮಾಹಿತಿ ಸುಳ್ಳು ಎಂಬುದನ್ನು ದೃಢಪಡಿಸಿಕೊಳ್ಳಲಾಗಿದೆ.

ಗುಂಡಣ್ಣ



ಕಷ್ಟಕ್ಕೆ ಒದಗುವುದು ಎಂದರೆ...

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

'**ಒಬ್ಬರಿದ್ದರು** ಕಲ್ಪವೃಕ್ಷದಂತೆ ಎತ್ತರವಾಗಿ, ತಂಪಾಗಿ...'

ಕನ್ನಡದ ಕವಿ ಕೆ.ಎಸ್.ನರಸಿಂಹಸ್ವಾಮಿ ಅವರು ಈ ಸಾಲುಗಳನ್ನು ಬರೆದದ್ದು ಕೀರ್ತಿಶೇಷರಾದ ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯ ಅವರನ್ನು ಸ್ಮರಿಸಿ. ಕುವೆಂಪು ಅವರು ತಮ್ಮ ಮಹಾಕಾವ್ಯ ಶ್ರೀ ರಾಮಾಯಣ ದರ್ಶನಂ ಕೃತಿಯನ್ನು ಅರ್ಪಿಸಿದ್ದೂ ಇದೇ ವೆಂಕಣ್ಣಯ್ಯ ಅವರಿಗೆ. ನಾವು, ಮಹಾತ್ಮರು, ಮಹಾನುಭಾವರು ಅನ್ನುತ್ತೇವಲ್ಲ ಆ ವಿಶೇಷಣಗಳನ್ನು ಇವರಂಥ ಪುಣ್ಯಾತ್ಮರಿಗಷ್ಟೇ ಬಳಸಬೇಕು. ಮೈಸೂರು ವಿಶ್ವವಿದ್ಯಾನಿಲಯದ ಮೊಟ್ಟಮೊದಲ ಕನ್ನಡ ಪ್ರೊಫೆಸರ್ ಅವರು. ಅವರ ಎಷ್ಟೋ ಶಿಷ್ಯರಿಗೆ, ಸಮಕಾಲೀನರಿಗೆ ಅವರು ಮನುಷ್ಯರೇ ಅಲ್ಲ, ದೇವರು. ಅವರ ಬಗ್ಗೆ ಹೇಳಬೇಕಾದ ಹಲವು ಪ್ರಸಂಗಗಳಿವೆ. ಈಗ ಒಂದನ್ನು ಹೇಳುತ್ತೇನೆ.

ಮೈಸೂರಿನ ಕುಕ್ಕರಹಳ್ಳಿ ಕೆರೆಯ ಏರಿಯ ಮೇಲಿರುವ ಕಲ್ಲು ಬೆಂಚಿನ ಮೇಲೆ ಓರ್ವ ಯುವಕ ಕುಳಿತಿದ್ದ. ಆತ ಯಾರೋ ಅಲ್ಲ, ಕನ್ನಡದ ಪ್ರಖ್ಯಾತ ಪ್ರಬಂಧಕಾರರಾದ ಎ.ಎನ್.ಮೂರ್ತಿರಾಯರು. ಆಗಿನ್ನೂ ಯುವಕ. ವೆಂಕಣ್ಣಯ್ಯನವರ ಶಿಷ್ಯ ಕೂಡಾ. ಮೂರ್ತಿರಾಯರಿಗೆ ಆ ದಿನ ಯಾವುದೋ ದುಃಖ, ದುಗುಡ. ಹೊಟ್ಟೆ ತುಂಬಾ ಸಂಕಟ. ಅದನ್ನು ಯಾರಿಗೂ ಹೇಳಲಾಗದೆ ಆ ಕಲ್ಲುಬೆಂಚಿನ ಮೇಲೆ ಸುಮ್ಮಗೆ ಕೂತು ಕೆರೆಯನ್ನೇ ನೋಡುತ್ತಿದ್ದರು. ಎದೆಯ ಬೇಗುದಿ ಮುಖದ ಮೇಲೂ ಮೂಡಿ ನಿಂತಿತ್ತು. ಕಂಠ ಕಟ್ಟಿಕೊಂಡಿತ್ತು.

ಅವರು ಹಾಗೆ ಕುಳಿತಿರುವಾಗ ಆ ಆರೂಕಾಲು ಅಡಿ ಎತ್ತರದ ವ್ಯಕ್ತಿ- ಟಿ.ಎಸ್. ವೆಂಕಣ್ಣಯ್ಯನವರು- ವಾಕಿಂಗಿಗೆಂದು ಬಂದವರು ಆ ಯುವಕ ಕುಳಿತಿದ್ದ ಕಲ್ಲುಬೆಂಚಿನ ಮುಂದೆ ಹಾದು ಹೋದರು. ಹಾಗೆ ಹೋಗುವಾಗ ಶಿಷ್ಯನ ಮುಖದ ಮೇಲೆ ಎದೆಗುದಿಯ ರೇಖೆಗಳನ್ನು ಕಂಡರು. ಒಂದೈದಾರು ಹೆಜ್ಜೆ ಮುಂದೆ ಹೋದರು. ಹೋಗಿ ಕೆಲವು ನಿಮಿಷ ಅಲ್ಲೇ ನಿಂತರು. ಆಮೇಲೆ ವೆಂಕಣ್ಣಯ್ಯನವರು ನಿಧಾನವಾಗಿ ಬಂದು ಶಿಷ್ಯನ ಪಕ್ಕ ಕುಳಿತರು. ಆತನ ಮುಖವನ್ನು ಮತ್ತೊಮ್ಮೆ ನೋಡಿ ಕಾರುಣ್ಯದ ಕೊಳವಾದರು. ಮತ್ತೆ ಒಂದೆರಡು ನಿಮಿಷ ಸುಮ್ಮನಿದ್ದು ಶಿಷ್ಯನ ಕುರುಳು ನೇವರಿಸುತ್ತಾ, ಬೆನ್ನು ಸವರುತ್ತಾ... 'ಮೂರ್ತೀ...' ಅಂದರು. ಶಿಷ್ಯನ ಕಣ್ಣುಗಳಲ್ಲಿ ನಾಲ್ಕು ಹನಿ ಇಣುಕಿದವಷ್ಟೆ. ಮಾತು ಬರಲಿಲ್ಲ. ಮೇಷ್ಟ್ರು ಈಗ ಮಾತಾಡಿದರು, 'ಮೂರ್ತೀ, ನಿನ್ನ ಎದೆಯಲ್ಲಿ ಏನೋ ಸಂಕಟವಿದೆ ಮಗೂ... ಅದನ್ನು ತತ್‌ಕ್ಷಣ ನಾನೇನೂ ಪರಿಹಾರ ಮಾಡಲಾರೆನೇನೋ... ಆದರೆ ಈಗ ನಿನಗೆ ಅಳಬೇಕು ಅನ್ನಿಸಿದರೆ ಒಂದಿಷ್ಟು ಹೊತ್ತು ಒರಗಿಕೊಂಡು ಅಳೋದಕ್ಕೆ ನನ್ನ ಭುಜ ಇದೆ ಕಣಪ್ಪಾ... ನನ್ನ ಭುಜಕ್ಕೊರಗಿ ಅತ್ತುಕೋ ಮರೀ...' ಅಂದರು. ಮೂರ್ತಿರಾಯರಿಗೆ ಅಳುವುದಕ್ಕೊಂದು ಭುಜ ಬೇಕಿತ್ತು. ಆ ವಾತ್ಸಲ್ಯಮಯಿ ಗುರುಗಳ ಭುಜದ ಮೇಲೆ ತಲೆಯಿಟ್ಟು ಗಳಗಳ ಅಂತ ಅತ್ತುಬಿಟ್ಟರು. ಅದೆಲ್ಲಾ ಆದ ಮೇಲೆ ವೆಂಕಣ್ಣಯ್ಯನವರು ಶಿಷ್ಯನಿಗೆ ಹೇಳಿದರು- 'ಮೂರ್ತೀ, ನಮ್ಮನ್ನು ಸೃಷ್ಟಿ ಮಾಡಿದ ಭಗವಂತ ಜೀವಮಾನವಿಡೀ ಒಂದೂ ಕಷ್ಟ ಬರದಂತೆ ಸದಾ ಸುಖವಾಗಿಡುತ್ತೇನೆಂದು ನಮಗೆ ಬಾಂಡ್ ಬರೆದುಕೊಟ್ಟಿಲ್ಲಪ್ಪ. ಕಷ್ಟಗಳು ಬಂದಾಗ ಧೈರ್ಯವಾಗಿ ಎದುರಿಸಬೇಕು, ಅನುಭವಿಸಬೇಕು...'

ಈ ಪ್ರಕರಣವನ್ನು ವಿವರಿಸಿ ಮೂರ್ತಿರಾಯರು ಬರೆಯುತ್ತಾರೆ- ಒಬ್ಬರ ಕಷ್ಟಕ್ಕೆ ಇನ್ನೊಬ್ಬರು ಒದಗುವುದು ಅಂದರೆ ಇದೇ. ದುಡ್ಡುಕಾಸು ಕೊಡಬೇಕಿಲ್ಲ. ಅಳುವುದಕ್ಕೆ ಒಂದು ಭುಜ, ಕುರುಳು ನೇವರಿಸುವುದಕ್ಕೆ ನಾಲ್ಕು ಬೆರಳು ಬೇಕಾಗುತ್ತವೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ | ಶುಕ್ರವಾರ ನವೆಂಬರ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ದ್ವಾದಶಿ ಗಂ. 19-07 ನಕ್ಷತ್ರ: ರೇವತಿ ಗಂ. 16-01 ಯೋಗ: ಸಿದ್ಧಿ(ಅಸ್ರಿಕ್) ಗಂ 09-05 ಕರಣ: ಬವ ಗಂ 08-04, ವೃಶ್ಚಿಕ ಮಾಸದ 08 ನೇ ದಿನ, ಮಳೆನಕ್ಷತ್ರ: ಅನುರಾಧ 2.
ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-38 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 09 ಜುಮಾದುಲ್ಲಾವಲ್
ದಿನ ವಿಶೇಷ : ಉತ್ಥಾನ ದ್ವಾದಶಿ, ತುಳಸಿ ವಿವಾಹ ಅದೃಷ್ಟ ಸಂಖ್ಯೆ : 11, 5

ಮೇಷ: ನಿಮ್ಮ ಕಾರ್ಯಗಳಿಗೆ ಅಡ್ಡಿ ಉಂಟಾದಲ್ಲಿ ವಿಮರ್ಶಿಸಿ ಮುಂದುವರೆಯುವುದು ಉತ್ತಮ. ಮಕ್ಕಳ ಸರ್ವತೋಮುಖ ಪ್ರಗತಿಯಿಂದಾಗಿ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗುವುದು. ಹಣದ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ವೃಷಭ: ಹಿರಿಯರ ಅನುಗ್ರಹದಿಂದ ಇಷ್ಟಸಿದ್ಧಿಯಾಗಿ ಕೃಷಿ ಉತ್ಪನ್ನಗಳ ಅಥವಾ ಪದಾರ್ಥಗಳ ಕ್ರಯ-ವಿಕ್ರಯದಲ್ಲಿ ಲಾಭ ತರಲಿದೆ. ಸ್ವತ್ತಿನ ವಿಷಯವಾಗಿ ಕಾನೂನು ಸಲಹೆ ಪಡೆದುಕೊಳ್ಳುವ ಬಗ್ಗೆ ಗಮನಹರಿಸಿ.

ಮಿಥುನ: ನಿಮ್ಮಿಂದ ಸಲಹೆ ಸಹಕಾರವನ್ನು ಪಡೆದು ನಿಮ್ಮನ್ನೇ ಮೂರ್ಖರನ್ನಾಗಿ ಮಾಡುವವರು ಎದುರಾಗುವರು. ಕಚೇರಿಯಲ್ಲಿ ಸಹದ್ಯೋಗಿಗಳ ಸಹಕಾರ ಪಡೆಯಬೇಕಾಗುವುದು. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು.

ಕರ್ಕಾಟಕ: ಗುರುಗಳ ಉಪದೇಶ ನಿಮ್ಮ ಬದುಕಿಗೆ ದಾರಿದೀಪವಾಗುವ ಲಕ್ಷಣಗಳಿರುವುದು. ವೃತ್ತಿಯಲ್ಲಿ ತಪ್ಪುಗಳು ಪುನರಾವರ್ತನೆ ಆಗದಂತೆ ಎಚ್ಚರ-ವಹಿಸುವಿರಿ. ವ್ಯಾಪಾರಿಗಳಿಗೆ ಆರ್ಥಿಕ ಬೆಳವಣಿಗೆ ಅಧಿಕವಾಗುವುದು.

ಸಿಂಹ: ಮನೆಯ ನಿರ್ಮಾಣ ಕೆಲಸಗಳು ಪೂರ್ಣಗೊಂಡು ನೆಮ್ಮದಿ ಪ್ರಾಪ್ತಿಯಾಗುವುದು. ಶ್ರೀ ದಕ್ಷಿಣಾಮೂರ್ತಿಯನ್ನು ಪೂಜಿಸುವುದರಿಂದ ನಿಮ್ಮ ಯೋಜನೆಗಳು ನಿರಾತಂಕವಾಗಿ ಮುಂದುವರೆಯಲಿದೆ.

ಕನ್ಯಾ: ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾದ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ ಹಾಗೂ ನಷ್ಟ ಸಂಭವಿಸುವುದು. ಸಣ್ಣಪುಟ್ಟ ತೊಡಕುಗಳು ಕಾಣಿಸಿಕೊಂಡರೂ ಕೆಲಸಗಳು ಅಬಾಧಿತವಾಗಿ ಸಾಗುವುದು.

ತುಲಾ: ಮನೆಯ ಸದಸ್ಯರಲ್ಲಿದ್ದ ಭಿನ್ನಾಭಿಪ್ರಾಯ, ವೈಮನಸ್ಸಿಗೆ ಕಾರಣ ಮತ್ತು ಪರಿಹಾರವನ್ನು ಕಂಡುಕೊಳ್ಳುವಿರಿ. ನಿಮ್ಮ ವೃತ್ತಿಯಲ್ಲಿ ಸಾಕಷ್ಟು ಪೈಪೋಟಿಗಳನ್ನು ಸಹೋದ್ಯೋಗಿಗಳಿಂದ ನೀವು ಎದುರಿಸಬೇಕಾಗಬಹುದು.

ವೃಶ್ಚಿಕ: ಸಜ್ಜನರ ಸಹವಾಸ ಮಾಡುವ ನಿಮ್ಮ ಹಂಬಲಕ್ಕೆ ಪೂರಕವಾದ ವಾತಾವರಣ ಸಿಗಲಿದೆ. ಇತರರಿಗೆ ಸಹಾಯ ಮಾಡುವಲ್ಲಿ ಒಂದು ಬಗೆಯ ಆನಂದವನ್ನು ಅನುಭವಿಸುವಿರಿ. ಹಳದಿ ಬಣ್ಣ ಅದೃಷ್ಟ ತರುವುದು.

ಧನು: ಶುಭ ಕಾರ್ಯಗಳಿಗೆ ಉತ್ತಮ ಕಾಲವಾದರೂ ಬರುವ ಅವಕಾಶಗಳಿಂದ ವಂಚಿತರಾಗದಿರಿ. ಸಾರಿಗೆ ಸಂಸ್ಥೆ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಉಂಟಾಗಲಿದೆ. ಹಿಡಿದ ಕೆಲಸ ಪೂರ್ಣಗೊಳಿಸುವ ಬಗ್ಗೆ ಹೆಚ್ಚಿನ ಪ್ರಯತ್ನವಿರಲಿ.

ಮಕರ: ಆಡುವ ಮಾತಿನ ಬಗ್ಗೆ ನಿಗವಿರಲಿ, ನಿಮ್ಮ ಮಾತನ್ನು ನೀವೇ ಸಾಧಿಸಿ ತೋರಿಸಬೇಕಾಗುತ್ತದೆ. ಇಂದಿನ ನಿಮ್ಮ ನಿರ್ಧಾರದಲ್ಲಿ ತೊಡಕುಗಳೇ ಉಂಟಾಗುವುದು. ನಿಮ್ಮ ಬಗೆಗಿನ ವದಂತಿಗಳು ತಾನಾಗಿಯೇ ಮುಚ್ಚಿ ಹೋಗುವುದು.


ಕುಂಭ: ಯಂತ್ರೋಪಕರಣ ಅಥವಾ ಕಾರ್ಖಾನೆ ಕೆಲಸಗಳಲ್ಲಿರುವವರಿಗೆ ಹೆಚ್ಚಿನ ಧನ ಲಾಭವಿರುವುದು. ನೀವು ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಹೆಣಗಬೇಕಾಗಬಹುದು. ವ್ಯವಹಾರದಲ್ಲಿ ಸ್ವಲ್ಪ ಜಾಣತನವನ್ನು ಪ್ರದರ್ಶಿಸಿ.

ಮೀನ: ನಿಮ್ಮ ಹೆಚ್ಚಿನ ಪರಿಶ್ರಮವಿದ್ದರೂ ಅಲ್ಪ ಕಾರ್ಯಸಿದ್ಧಿಯಾಗುವುದು ದುಃಖಕ್ಕೆ ಮೂಲ ಕಾರಣ. ಇನ್ನೊಬ್ಬರಿಗೆ ತಿಳಿವಳಿಕೆ ಹೇಳುವ ಸಮಯದಲ್ಲಿ ಜಾಗೃತರಾಗಿರಿ. ಒಪ್ಪಂದ ವ್ಯವಹಾರಗಳಿಂದ ವರಮಾನ ಹೆಚ್ಚಲಿದೆ.

ಪದಬಂಧ 5509 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಹವಿರುವುದಕ್ಕೇ ಈ ಅನುಮಾನ! (3)
4.ಈತ ಸೂರ್ಯನ ಮಗ (4)
6.ಹಿಡಿತದಿಂದ ಖರ್ಚು ಮಾಡುವಿಕೆ (4)
8.ತಿರುಗಿ ಮಾಡಿದ ಕಲಹ (3)
11.ಹೀಗೆ ತಪ್ಪನ್ನು ಕ್ಷಮಿಸು (3)
13.ದೂರ ದೂರಕ್ಕೆ ಹೆಜ್ಜೆಯಿಟ್ಟು ನಡೆಯುವುದು ಉಲ್ಟಾ ಕಾಣುತ್ತಿದೆ (4)
17.ಇದಿನ್ನೂ ಎಳೆಮಗು (4)
18.ಮಣಿ ಧರಿಸಿದ ಚಲುವೆ (3)

ಮೇಲಿಂದ ಕೆಳಕ್ಕೆ
1.ಈತ ಒಳ್ಳೆಯ ಗುರು (3)
2.ಹರನಿಂದ ಶುರುವಾದ ಸಂಪು! (4)
3.ತಿರುಗಿದಾಗ ಆಗಿರುವ ದುಃಖ (3)
5.ಸ್ನೇಹಿತನಿಲ್ಲಿ ತಿರುಗಿ ನಿಂತಿದ್ದಾನೆ (2)
7.ಯಮನ ಹತ್ತಿರವಿರುವ ಜೋಡಿ (3)
9.ಜನ್ಮವಿಲ್ಲಿ ವಿರಳವಾಗಿ ಬಂದಿದೆ (3)
10.ದಿಗಿಲು ಪಟ್ಟು ನೋಡಿದ ಆಕಾಶ (3)
12.ದೇವತೆ ಹಾಗೂ ರಾಕ್ಷಸರು ಒಟ್ಟಿಗೆ ಬಂದಿದ್ದಾರೆ (4)
14.ಹಳ್ಳಿಯವನ ಬಾಯಲ್ಲಿ ಗ್ರಹಚಾರ (3)
15.ನೀರಡಿಕೆಯನ್ನು ಹೀಗೆನ್ನಿ (2)
16.ರಾಣಿ ಹಿಡಿದಿರುವ ಢಾಲು (3)



5508ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಶ್ವವಿದ್ಯಾಲಯ 4.ತಿರಸ್ಕಾರ
5.ಮಡದಿ 7.ಪದಕ
10.ಯಥಾರ್ಥ 2.ಕಮರಿ
13.ಸಮಾರೋಪ
15.ಲೋಕವ್ಯವಹಾರ

ಮೇಲಿಂದ ಕೆಳಕ್ಕೆ:
1.ವಿನಿಮಯ 2.ಯತಿ
3.ವರಮಾನ 6.ದಿಗ್ವಿಜಯ
7.ಪದಾರ್ಥ 8.ಕರ್ನಾಟಕ
10.ಸಭಾಸದ 11.ಪರಿವಾರ
14.ಪಲೋ

ಸುಡೊಕು 5895

4		7		8			2	
							7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5894 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಷೇರುಪೇಟೆ ವಹಿವಾಟು ▼ 5



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,811
ಇಂದಿನ ಅಂತ್ಯ	19,802
▼	9
ದಿನದ ಕನಿಷ್ಠ	19,786

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1580 (1580)
ಸೋಯಾ (ರಿಫೈಂಡ್)	₹960 (962)
ಸೂರ್ಯಕಾಂತಿ (ರಿಫೈಂಡ್)	₹965 (965)
ಪಾಮೋಲಿನ್	₹848 (850)

ವಿನಿಮಯ ದರ

$ ಡಾಲರ್	83.34
£ ಪೌಂಡ್	104.50
€ ಯುರೊ	90.93
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹5500-9100
ತಿಪಟೂರು	₹7500-8300
ತುಮಕೂರು	₹7400-8100
ತುರುವೇಕೆರೆ	₹7800-7900

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹277-488
ದ್ವಿತಳಿ (ಬಿ.ವಿ)	₹256-585

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹130.50

‘ಎ.ಐ.ಗೆ ಸೆಬಿಯಂತಹ ನಿಯಂತ್ರಕ ಅಗತ್ಯ’

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆಯನ್ನು (ಎ.ಐ) ನಿಯಂತ್ರಿಸಲು ಭಾರತವು ಹೊಸ ನಿಯಮಗಳನ್ನು ರೂಪಿಸಲಿದೆ. ಎ.ಐ. ನಿಯಂತ್ರಕ ವ್ಯವಸ್ಥೆಯು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಂತೆ (ಸೆಬಿ) ಕಾರ್ಯನಿರ್ವಹಿಸಬೇಕು ಎಂದು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಸಮಿತಿ ಸದಸ್ಯ ಸಂಜೀವ್ ಸನ್ಯಾಲ್ ಹೇಳಿದ್ದಾರೆ.

ಸ್ವ-ನಿಯಂತ್ರಣ ಮತ್ತು ಆಡಳಿತಾತ್ಮಕ ನಿಯಂತ್ರಣವು ಎ.ಐ.ಗೆ ಒಗ್ಗುವುದಿಲ್ಲ. ಈ ತಂತ್ರಜ್ಞಾನವನ್ನು ಅರ್ಥ ಮಾಡಿಕೊಳ್ಳುವ ಮತ್ತು ಅದು ಹೇಗೆ ರೂಪುಗೊಂಡಿತು ಎನ್ನುವುದರತ್ತ ಗಮನ ಕೊಡುವಂತಹ ನಿಯಂತ್ರಣ ವ್ಯವಸ್ಥೆ ರೂಪಿಸುವ ಕಡೆಗೆ ಭಾರತವು ಗಮನ ಕೊಡಬೇಕಿದೆ ಎಂದು ಅವರು ಡಿಜಿಟಲ್ ಅಕ್ಸಲರೇಷನ್ ಆ್ಯಂಡ್ ಟ್ರಾನ್ಸ್‌ಫಾರ್ಮೇಷನ್ ಎಕ್ಸ್‌ಪೊ (ಡಿಎಟಿಇ) ವಿತ್‌ಟೆಕ್’ ಕಾರ್ಯಕ್ರಮದಲ್ಲಿ ಸಲಹೆ ನೀಡಿದ್ದಾರೆ.

ಜಾಗೃತಿ ಮೂಡಿಸಬೇಕಿದೆ: ಸೈಬರ್ ವಂಚನೆಗಳಿಗೆ ಕಡಿವಾಣ ಹಾಕಲು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯ ಇದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಜನರು ವಂಚಕ ಕರೆ ಮತ್ತು ಎಸ್‌ಎಂಎಸ್ ಬಲೆಗೆ ಬಿದ್ದು, ಹಣ ಕಳೆದುಕೊಳ್ಳುತ್ತಿದ್ದಾರೆ. ಇದು ಕಳವಳಕಾರಿ ವಿಷಯ ಆಗಿದೆ. ಇದನ್ನು ತಪ್ಪಿಸಲು ತಕ್ಷಣಕ್ಕೆ ಯಾರನ್ನೂ ನಂಬಬೇಡಿ ಎಂದು ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸೈಬರ್ ವಂಚನೆಗಳನ್ನು ತಡೆಯುವ ನಿಟ್ಟಿನಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು, ಆರ್‌ಬಿಐ ತಮ್ಮ ವ್ಯವಸ್ಥೆಗಳನ್ನು ಕಾಲಕಾಲಕ್ಕೆ ಪರಿಶೀಲನೆಗೆ ಒಳಪಡಿಸುತ್ತಿರುತ್ತವೆ. ವಿಮಾ ಕಂಪನಿಗಳೂ ಈ ಕುರಿತು ಪರಿಶೀಲನೆ ನಡೆಸುತ್ತವೆ ಎಂದಿದ್ದಾರೆ.

ಮನೆ ಬೆಲೆ ಶೇ 33ರವರೆಗೂ ಹೆಚ್ಚಳ

ನವದೆಹಲಿ (ಪಿಟಿಐ): ಬೆಂಗಳೂರನ್ನೂ ಒಳಗೊಂಡು ಪ್ರಮುಖ 7 ನಗರಗಳಲ್ಲಿ ಮನೆಗಳ ಸರಾಸರಿ ಬೆಲೆಯು ಮೂರು ವರ್ಷಗಳಲ್ಲಿ ಶೇ 13-33ರವರೆಗೆ ಏರಿಕೆ ಕಂಡಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಆನರಾಕ್ ಹೇಳಿದೆ.

ಹೈದರಾಬಾದ್‌ನ ಗಚಿಬೌಲಿ ಮತ್ತು ಕೊಂಡಾಪುರದಲ್ಲಿ ಕ್ರಮವಾಗಿ ಶೇ 33ರಷ್ಟು ಮತ್ತು ಶೇ 31ರಷ್ಟು ಗರಿಷ್ಠ ಏರಿಕೆ ಕಂಡಿದೆ.

ಬೆಂಗಳೂರಿನಲ್ಲಿ ಮನೆಗಳ ಬೆಲೆಯು ಶೇ 29ರಷ್ಟು ಏರಿಕೆ ಕಂಡಿದೆ. ವೈಟ್‌ಫೀಲ್ಡ್‌ನಲ್ಲಿ ಪ್ರತಿ ಚದರ ಅಡಿಯ ಬೆಲೆಯು ₹4,900 ರಿಂದ ₹6,325ಕ್ಕೆ ಏರಿಕೆ ಆಗಿದೆ. ಥಣಿಸಂದ್ರ ಮುಖ್ಯ ರಸ್ತೆ ಮತ್ತು ಸರ್ಜಾಪುರ ರಸ್ತೆ ಸಮೀಪದಲ್ಲಿ ಮನೆಗಳ ದರವು ಸರಾಸರಿ ಕ್ರಮವಾಗಿ ಶೇ 27 ಮತ್ತು ಶೇ 26ರಷ್ಟು ಏರಿಕೆ ಆಗಿದೆ ಎಂದು ಮಾಹಿತಿ ನೀಡಿದೆ.

ಕೋವಿಡ್ ಸಾಂಕ್ರಾಮಿಕದ ಬಳಿಕ ಮಾರಾಟ ಹೆಚ್ಚಳ ● ಮುನ್ನೆಲೆಗೆ ಸಂಘಟಿತ ವಲಯ

ಸೆಕೆಂಡ್ ಹ್ಯಾಂಡ್: ಹ್ಯಾಚ್‌ಬ್ಯಾಕ್‌ಗೆ ಬೇಡಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೋವಿಡ್ ಸಾಂಕ್ರಾಮಿಕದ ಬಳಿಕ ರಾಜ್ಯದಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಅದರಲ್ಲಿ ಮುಖ್ಯವಾಗಿ ಹ್ಯಾಚ್‌ಬ್ಯಾಕ್ ಮತ್ತು ಸ್ಪೋರ್ಟ್ಸ್ ಯುಟಿಲಿಟಿ ವಾಹನಗಳನ್ನು (ಎಸ್‌ಯುವಿ) ಜನರು ಹೆಚ್ಚಾಗಿ ಖರೀದಿಸುತ್ತಿದ್ದಾರೆ.

ಹ್ಯಾಚ್‌ಬ್ಯಾಕ್ ಹೆಚ್ಚು ಜನಪ್ರಿಯವಾಗಿರುವ ಮಾದರಿ ಆಗಿದೆ. ನಂತರದಲ್ಲಿ ಎಸ್‌ಯುವಿ, ಸೆಡಾನ್ ಇವೆ. ಹುಂಡೈ ಎಲೈಟ್ ಐ20, ಗ್ರ್ಯಾಂಡ್ ಐ10 ಮತ್ತು ಮಾರುತಿ ಸುಜುಕಿ ಬಲೆನೊ, ಸ್ವಿಫ್ಟ್, ಫೋಕ್ಸ್‌ವ್ಯಾಗನ್ ಪೋಲೊ ಮಾದರಿಗಳನ್ನು ಜನರು ಹೆಚ್ಚು ಇಷ್ಟಪಡುತ್ತಿದ್ದಾರೆ ಎಂದು ಕಂಪನಿಗಳು ಮಾಹಿತಿ ನೀಡಿವೆ.

ಆಫ್‌ಲೈನ್‌ನಲ್ಲಿ ಮಹೀಂದ್ರ ಫಸ್ಟ್ ಚಾಯ್ಸ್ ಮತ್ತು ಮಾರುತಿ ಟ್ರೂ ವ್ಯಾಲ್ಯು, ಹುಂಡೈ ಎಚ್ ಕಂಪನಿಗಳು ಪ್ರಮುಖವಾಗಿವೆ. ಆನ್‌ಲೈನ್‌ನಲ್ಲಿ ಸ್ಪಿನ್ನಿ, ಕಾರ್ಸ್‌24, ಕಾರ್‌ದೇಖೊ, ಒಎಲ್‌ಎಕ್ಸ್ ಆಟೊ, ಕಾರ್‌ಟ್ರೇಡ್ ಕಂಪನಿಗಳು ಹೆಚ್ಚಿನ ಮಾರಾಟ ನಡೆಸುತ್ತಿವೆ.

ರಾಜ್ಯದಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. 2022-23ರ ಏಪ್ರಿಲ್-ಸೆಪ್ಟೆಂಬರ್ ಅವಧಿಗೆ ಹೋಲಿಸಿದರೆ 2023-24ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳ ಮಾರಾಟವು ಶೇ 25.7ರಷ್ಟು ಏರಿಕೆ ಕಂಡಿದೆ ಎಂದು ಮಾರುತಿ ಟ್ರೂ ವ್ಯಾಲ್ಯು ಕಂಪನಿ ತಿಳಿಸಿದೆ.

ಕಾರು ಖರೀದಿ ವಿವರ (2023ರ ಮೂರನೇ ತ್ರೈಮಾಸಿಕ)



ಮಾಹಿತಿ: ಸ್ಪಿನ್ನಿ


ಕಳೆದೆರಡು ವರ್ಷಗಳಲ್ಲಿ ಸೆಕೆಂಡ್ ಹ್ಯಾಂಡ್ ಕಾರು ಮಾರಾಟದಲ್ಲಿ ಶೇ 40ರಷ್ಟು ಏರಿಕೆ ಕಂಡಿದೆ. 2023ರ ಎರಡನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಮೂರನೇ ತ್ರೈಮಾಸಿಕದಲ್ಲಿ ಕಾರು ಖರೀದಿಸುವವರ ಪ್ರಮಾಣವು ಶೇ 67ರಷ್ಟು ಹೆಚ್ಚಾಗಿದೆ ಎಂದು ಬೆಂಗಳೂರಿನ ಸ್ಪಿನ್ನಿ ಕಂಪನಿಯ ಸ್ಥಾಪಕ ಮತ್ತು ಸಿಇಒ ನೀರಜ್ ಸಿಂಗ್ ತಿಳಿಸಿದರು.

ಆನ್‌ಲೈನ್ ವ್ಯವಸ್ಥೆಯು ಹೆಚ್ಚು ಪಾರದರ್ಶಕ ಆಗಿರುವುದರಿಂದ ಜನರಲ್ಲಿ ನಂಬಿಕೆ ಹೆಚ್ಚಾಗುತ್ತಿದೆ. ವಾಹನಗಳ 360 ಡಿಗ್ರಿ ನೋಟ, ಮನೆಬಾಗಿಲಿಗೆ ಟೆಸ್ಟ್ ಡ್ರೈವ್ ಮತ್ತು ಪರಿಶೀಲನೆಯಂತಹ ಅನುಕೂಲಗಳು ಮಾರಾಟದಲ್ಲಿ ಏರಿಕೆ ಕಾಣುವಂತೆ ಮಾಡುತ್ತಿವೆ ಎಂದು ಅವರು ಹೇಳಿದರು.

ಸೆಕೆಂಡ್ ಹ್ಯಾಂಡ್ ಕಾರಿಗೆ ರಾಜ್ಯದಲ್ಲಿ ಬೆಂಗಳೂರು ಉತ್ತಮ ಮಾರುಕಟ್ಟೆ ಆಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮಾರಾಟ ಶೇ 133ರಷ್ಟು ಏರಿಕೆ ಕಂಡಿದೆ. ಸರಾಸರಿ ಮಾರಾಟ ದರವು ₹5.61 ಲಕ್ಷದಿಂದ ₹6.47 ಲಕ್ಷಕ್ಕೆ ಶೇ 15ರಷ್ಟು ಹೆಚ್ಚಳ ಆಗಿದೆ ಎಂದು ಕಾರ್ಸ್‌24 ಕಂಪನಿಯ ಸಹ ಸ್ಥಾಪಕ ಗಜೇಂದ್ರ ಜಂಗಿದ್ ತಿಳಿಸಿದರು.

2021-22ಕ್ಕೆ ಹೋಲಿಸಿದರೆ 2022-23ರಲ್ಲಿ ಸೆಕೆಂಡ್ ಹ್ಯಾಂಡ್ ಕಾರುಗಳ ಮಾರಾಟದಲ್ಲಿ ಶೇ 45ರಷ್ಟು ಹೆಚ್ಚಳವಾಗಿದೆ ಎಂದು ಅವರು ಹೇಳಿದರು.

ಹೆಚ್ಚಲಿದೆ ಸಂಘಟಿತ ವಲಯದ ಪಾಲು



ಸೆಕೆಂಡ್ ಹ್ಯಾಂಡ್ ಕಾರು ಖರೀದಿಸುತ್ತಿರುವವರಲ್ಲಿ ಶೇ 70ರಷ್ಟು ಗ್ರಾಹಕರು ಸಾಲ ಪಡೆಯುತ್ತಿದ್ದಾರೆ. ಕಾರಿನ ಮೌಲ್ಯದ ಶೇ 100ರವರೆಗೆ ಸಾಲ ನೀಡುವ ನಮ್ಮ ಕೊಡುಗೆಯನ್ನು ಗ್ರಾಹಕರು ಹೆಚ್ಚು ಇಷ್ಟಪಡುತ್ತಿದ್ದಾರೆ ಎಂದು ಸ್ಪಿನ್ನಿ ತಿಳಿಸಿದೆ.

ಕಾರ್ಸ್‌24 ಕಂಪನಿಯು ಜೀರೊ ಪಾವತಿ ಆಯ್ಕೆಯನ್ನು ನೀಡುತ್ತಿದೆ. ಬೆಂಗಳೂರಿನಲ್ಲಿ ಕಾರು ಖರೀದಿಸಲು ಗ್ರಾಹಕರಿಗೆ ಹಣಕಾಸಿನ ಸೌಲಭ್ಯ ಒದಗಿಸುವುದು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ 130ರಷ್ಟು ಬೆಳವಣಿಗೆ ಕಂಡಿದೆ. ವೃತ್ತಿಪರ ವೇತನ ವರ್ಗವು ತಿಂಗಳಿಗೆ ಸರಾಸರಿ ₹11,500ರಂತೆ 6 ವರ್ಷಗಳ ಅವಧಿಯ ಸಾಲಕ್ಕೆ ಕಾರು ಖರೀದಿಸುತ್ತಿದೆ ಎಂದು ಮಾಹಿತಿ ನೀಡಿದೆ.

ಹಣಕಾಸಿನ ನೆರವು

ಸೆಕೆಂಡ್ ಹ್ಯಾಂಡ್ ಕಾರು ಖರೀದಿಸುತ್ತಿರುವವರಲ್ಲಿ ಶೇ 70ರಷ್ಟು ಗ್ರಾಹಕರು ಸಾಲ ಪಡೆಯುತ್ತಿದ್ದಾರೆ. ಕಾರಿನ ಮೌಲ್ಯದ ಶೇ 100ರವರೆಗೆ ಸಾಲ ನೀಡುವ ನಮ್ಮ ಕೊಡುಗೆಯನ್ನು ಗ್ರಾಹಕರು ಹೆಚ್ಚು ಇಷ್ಟಪಡುತ್ತಿದ್ದಾರೆ ಎಂದು ಸ್ಪಿನ್ನಿ ತಿಳಿಸಿದೆ.

ಕಾರ್ಸ್‌24 ಕಂಪನಿಯು ಜೀರೊ ಪಾವತಿ ಆಯ್ಕೆಯನ್ನು ನೀಡುತ್ತಿದೆ. ಬೆಂಗಳೂರಿನಲ್ಲಿ ಕಾರು ಖರೀದಿಸಲು ಗ್ರಾಹಕರಿಗೆ ಹಣಕಾಸಿನ ಸೌಲಭ್ಯ ಒದಗಿಸುವುದು ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ 130ರಷ್ಟು ಬೆಳವಣಿಗೆ ಕಂಡಿದೆ. ವೃತ್ತಿಪರ ವೇತನ ವರ್ಗವು ತಿಂಗಳಿಗೆ ಸರಾಸರಿ ₹11,500ರಂತೆ 6 ವರ್ಷಗಳ ಅವಧಿಯ ಸಾಲಕ್ಕೆ ಕಾರು ಖರೀದಿಸುತ್ತಿದೆ ಎಂದು ಮಾಹಿತಿ ನೀಡಿದೆ.

‘ಮುಂಬೈನಲ್ಲಿ ಪಂದ್ಯ ನಡೆಯಬೇಕಾಗಿತ್ತು’

ಕೋಲ್ಕತ್ತ (ಪಿಟಿಐ): ಕೇಂದ್ರ ಸರ್ಕಾರವು ರಾಷ್ಟ್ರೀಯ ಕ್ರಿಕೆಟ್ ತಂಡವನ್ನು ‘ಕೇಸರೀಕರಣ’ ಮಾಡಲು ಯತ್ನಿಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದು, ವಿಶ್ವಕಪ್ ಫೈನಲ್ ಪಂದ್ಯ ಕೋಲ್ಕತ್ತ ಅಥವಾ ಮುಂಬೈನಲ್ಲಿ ನಡೆದಿದ್ದರೆ ಭಾರತ ಗೆಲುವು ಸಾಧಿಸುತ್ತಿತ್ತು ಎಂದು ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

23-11-2023

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	945 (950)
ಪಾಮ್ ವಾರದ ಡೆಲಿವರಿ	850 (852)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	61,100 (61,400)
ಬೆಳ್ಳಿ ಕೆ.ಜಿ	73,050 (73,500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆರ್ಬಿಟ್ರೇಜ್ ಫಂಡ್‌ಗಳಲ್ಲಿ ಒಳಹರಿವು ಏರಿಕೆ: ಎಎಂಎಫ್‌ಐ ಮಾಹಿತಿ

ಹೈಬ್ರಿಡ್ ಫಂಡ್: ಹೆಚ್ಚಿದ ಆಕರ್ಷಣೆ

ನವದೆಹಲಿ (ಪಿಟಿಐ): ಹೈಬ್ರಿಡ್ ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರನ್ನು ಹೆಚ್ಚಾಗಿ ಆಕರ್ಷಿಸುತ್ತಿವೆ. ಪ್ರಸಕ್ತ ಹಣಕಾಸು ವರ್ಷದ ಏಳು ತಿಂಗಳಿನಲ್ಲಿ ₹72,081 ಕೋಟಿಯಷ್ಟು ಬಂಡವಾಳ ಹೂಡಿಕೆ ಆಗಿದೆ.

ಡೆಟ್ ಫಂಡ್‌ಗಳ ತೆರಿಗೆ ಲೆಕ್ಕಾಚಾರದಲ್ಲಿ ಬದಲಾವಣೆ ಮಾಡಿದ ಬಳಿಕ ಆರ್ಬಿಟ್ರೇಜ್ ಫಂಡ್‌ಗಳಲ್ಲಿ ಒಳಹರಿವು ಹೆಚ್ಚಾಗುತ್ತಿದೆ. ಈಕ್ವಿಟಿ ಮತ್ತು ಡೆಟ್ ಫಂಡ್‌ಗಳ ಸಂಯೋಜನೆಯೇ ಹೈಬ್ರಿಡ್ ಫಂಡ್. ಡೆಟ್ ಫಂಡ್‌ಗಳ ತೆರಿಗೆ ನಿಯಮದಲ್ಲಿ ಬದಲಾವಣೆ ಆದ ಬಳಿಕ ಏಪ್ರಿಲ್‌ನಿಂದ ಹೈಬ್ರಿಡ್ ಫಂಡ್‌ಗಳಲ್ಲಿ ಹೂಡಿಕೆ ಹೆಚ್ಚಾಗುತ್ತಿದೆ. ಅದಕ್ಕೂ ಮುನ್ನ ಅಂದರೆ ಮಾರ್ಚ್‌ನಲ್ಲಿ ₹12,372 ಕೋಟಿ ಬಂಡವಾಳ ಹೊರಹರಿವು ಆಗಿತ್ತು.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.




ಒಕ್ಕೂಟದ ಈಚಿನ ಮಾಹಿತಿಯ ಪ್ರಕಾರ, ಹೈಬ್ರಿಡ್ ಯೋಜನೆಗಳಲ್ಲಿ ಅಕ್ಟೋಬರ್‌ನಲ್ಲಿ ₹9,907 ಕೋಟಿ ಹೂಡಿಕೆ ಆಗಿದೆ. ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ₹62,174 ಕೋಟಿ ಬಂಡವಾಳ ಹೂಡಿಕೆ ಆಗಿತ್ತು. ಹೀಗಾಗಿ ಒಟ್ಟು ಮೊತ್ತವು 7 ತಿಂಗಳಿನಲ್ಲಿ ₹72,081 ಕೋಟಿಗೆ ತಲುಪಿದೆ. ಈ ಮೊತ್ತದಲ್ಲಿ ಆರ್ಬಿಟ್ರೇಜ್ ಫಂಡ್‌ನಲ್ಲಿಯೇ ₹48,978 ಕೋಟಿ ಹೂಡಿಕೆ ಆಗಿದೆ.

ಇಂಡೆಕ್ಸೇಷನ್ ನಿಯಮದಲ್ಲಿ ಬದಲಾವಣೆ ಆದ ಬಳಿಕ ಹೂಡಿಕೆದಾರರು ತಮ್ಮ ನಿಶ್ಚಿತ ಆದಾಯದ ಒಂದು ಭಾಗವನ್ನು ಹೈಬ್ರಿಡ್ ಫಂಡ್‌ಗಳ ಮೂಲಕ ಹೂಡಿಕೆ ಮಾಡಲು ಬಯಸಿದ್ದಾರೆ ಎಂದು ಮಾರುಕಟ್ಟೆ ವಿಶ್ಲೇಷಕರು ಭಾವಿಸಿದ್ದಾರೆ.

ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಯಿಂದ ಬರುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಅನ್ವಯಿಸಲಾಗಿದೆ ಇದೇ ವೇಳೆ, ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಪ್ರಯೋಜನಗಳನ್ನು ಕೈಬಿಡಲಾಗಿದೆ. ಜೊತೆಗೆ, ತೆರಿಗೆ ಲೆಕ್ಕ ಹಾಕುವಾಗ ಇಂಡೆಕ್ಸೇಷನ್ (ಹಣದುಬ್ಬರದ ಪ್ರಮಾಣವನ್ನು ಲೆಕ್ಕ ಹಾಕಿ, ತೆರಿಗೆ ಹೊರೆ ಇಳಿಸಿಕೊಳ್ಳುವುದು) ಪ್ರಯೋಜನ ಪಡೆಯಲು ಸಹ ಆಗುವುದಿಲ್ಲ.

ನಿರ್ವಹಣಾ ಸಂಪತ್ತು ಏರಿಕೆ



ಹೈಬ್ರಿಡ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ಏಪ್ರಿಲ್ ಅಂತ್ಯದಲ್ಲಿ ₹4.94 ಲಕ್ಷ ಕೋಟಿಯಷ್ಟು ಇದ್ದಿದ್ದು ಅಕ್ಟೋಬರ್ ಅಂತ್ಯಕ್ಕೆ ₹5.88 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಇದರಲ್ಲಿ ಬ್ಯಾಲೆನ್ಸ್ಡ್ ಅಡ್ವಾಂಟೇಜ್ ಫಂಡ್‌ನಲ್ಲಿ ₹2.12 ಲಕ್ಷ ಕೋಟಿ, ಬ್ಯಾಲೆನ್ಸ್ಡ್ ಹೈಬ್ರಿಡ್ ಫಂಡ್‌ನಲ್ಲಿ ₹1.72 ಲಕ್ಷ ಕೋಟಿಯಷ್ಟು ಗರಿಷ್ಠ ಮೊತ್ತ ಹೂಡಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	600
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಹೊನ್ನಾವರ	
ಹಳೆಚಾಲಿ	36000-39000
ಕಾರ್ಕಳ	
ಹೊಸತು	25000-36500
ಹಳತು	30000-48500
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಬಿಳಿಗೋಟು	26899-32781
ಚಾಲಿ	34899-38739
ಕೋಕ	15619-34369
ಕೆಂಪುಗೋಟು	23299-35039
ರಾಶಿ	36500-47239
ಸಿಪ್ಪೆಗೋಟು	15100-21139
ಶಿವಮೊಗ್ಗ	
ಬೆಟ್ಟೆ	41000-52909
ಗೊರಬಾಳು	16800-37999
ಹೊಸತು	43699-47099
ರಾಶಿ	39600-47299
ಸರಕು	52100-83410
ಸಿದ್ದಾಪುರ	
ಬಿಳಿಗೋಟು	32319-34160
ಚಾಲಿ	38369-40212
ಕೋಕ	31319-33399
ಕೆಂಪುಗೋಟು	30012-30012
ರಾಶಿ	43049-46399
ತಟ್ಟಿಬೆಟ್ಟೆ	35499-36299
ಶಿರಸಿ	
ಬೆಟ್ಟೆ	37521-44699
ಬಿಳಿಗೋಟು	29899-35509
ಚಾಲಿ	37099-40559
ಕೆಂಪುಗೋಟು	34721-34721
ರಾಶಿ	45899-48549
ಯಲ್ಲಾಪುರ	
ಅಪಿ	56379-56379
ಬಿಳಿಗೋಟು	24899-36900
ಚಾಲಿ	37750-40370
ಕೋಕ	18109-32299
ಕೆಂಪುಗೋಟು	24899-36900
ರಾಶಿ	45530-51940
ತಟ್ಟಿಬೆಟ್ಟೆ	37999-44930

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11800	11800	-	171.45 ಸೆಂಟ್ಸ್
ಎಸಿ	6300	6500	-	
ಆರ್‌ಪಿ	9800	10000	-	ಲಂಡನ್
ಆರ್‌ಸಿ	6075	244 on OT	-	2505 ಡಾಲರ್ಸ್

ಸೋಂಕು ಏರಿಕೆ: ವರದಿ ಸಲ್ಲಿಸಲು ಚೀನಾಗೆ ಡಬ್ಲ್ಯುಎಚ್‌ಒ ಸೂಚನೆ

ಜಿನೀವಾ (ರಾಯಿಟರ್ಸ್): ಉಸಿರಾಟದ ಸಮಸ್ಯೆ ಪ್ರಕರಣಗಳ ಏರಿಕೆ, ಮಕ್ಕಳ ಮೇಲೆ ಅದರ ಪರಿಣಾಮ ಕುರಿತು ವರದಿ ಸಲ್ಲಿಸಲು ವಿಶ್ವ ಆರೋಗ್ಯ ಸಂಘಟನೆಯು (ಡಬ್ಲ್ಯುಎಚ್‌ಒ) ಚೀನಾಗೆ ಕೇಳಿದೆ. ‘ಇದು, ಸಾಮಾನ್ಯ ವಿಚಾರಣೆ’ ಎಂದು ಚೀನಾ ಪ್ರತಿಕ್ರಿಯಿಸಿದೆ.

ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗದ ಅಧಿಕಾರಿಗಳು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ್ದು, ದೇಶದಲ್ಲಿ ಸೋಂಕು ಸಂಬಂಧಿತ ಉಸಿರಾಟದ ಸಮಸ್ಯೆಗಳು ಏರಿಕೆಯಾಗುತ್ತಿದೆ ಎಂದು ಉಲ್ಲೇಖಿಸಿದ್ದರು.

ಕೋವಿಡ್-19 ನಿರ್ಬಂಧಗಳನ್ನು ಹಿಂಪಡೆದ ಬಳಿಕ, ಜ್ವರ, ಮೈಕೈ ನೋವು ಸಮಸ್ಯೆಗಳು ಮುಖ್ಯವಾಗಿ ಮಕ್ಕಳಲ್ಲಿ ಹೆಚ್ಚಾಗಿವೆ. ಇದಕ್ಕೆ ಶ್ವಾಸಕೋಶ ಸಮಸ್ಯೆಗೆ ಕಾರಣವಾಗುವ ಹಾಗೂ ಕೋವಿಡ್‌ಗೆ ಕಾರಣವಾಗುವ ಸೋಂಕು ಕಾರಣ ಎಂದು ತಿಳಿಸಿದೆ.

ಕೋವಿಡ್ ಪ್ರಕರಣಗಳನ್ನು ಕುರಿತು ಮುಂದಾಗಿ ಮಾಹಿತಿ ನೀಡುವಲ್ಲಿ ಪಾರದರ್ಶಕತೆ ಕಾಯ್ದುಕೊಂಡಿಲ್ಲ ಎಂಬ ಪ್ರಶ್ನೆಗಳು ಚೀನಾ ಮತ್ತು ಡಬ್ಲ್ಯುಎಚ್‌ಒಗೆ ಎದುರಾಗಿತ್ತು. ಚೀನಾದ ವುಹಾನ್ ಕೋವಿಡ್‌ನ ಕೇಂದ್ರ ಸ್ಥಾನವಾಗಿತ್ತು.

ಚೀನಾದಲ್ಲಿ ಸೋಂಕು ಪ್ರಕರಣಗಳು ಏರಿಕೆಯಾಗುತ್ತಿವೆ. ಇದು, ಈ ಹಿಂದೆ ಚೀನಾದ ಆಡಳಿತ ವರದಿ ಮಾಡಿದ್ದ ಸೋಂಕಿನ ಸ್ವರೂಪದ ಪ್ರಕರಣಗಳೇ ಅಥವಾ ಭಿನ್ನವಾದುದೇ ಎಂಬುದು ಖಚಿತವಾಗಿಲ್ಲ ಎಂದು ಡಬ್ಲ್ಯುಎಚ್‌ಒ ಅಧಿಕಾರಿಗಳು ತಿಳಿಸಿದ್ದಾರೆ.

‘ಇದು, ನಿರ್ದಿಷ್ಟವಾಗಿ ಚಳಿಗಾಲದ ಸಮಸ್ಯೆ. ಇದಕ್ಕೆ ನಿರೋಧಕ ಶಕ್ತಿ ಕಡಿಮೆ ಇರುವುದು ಕಾರಣ. ಕಳೆದ ಮೂರು ಚಳಿಗಾಲದಲ್ಲೂ ಇಂತ ಸ್ಥಿತಿ ಇತ್ತು’ ಎಂದು ಹಾಂಗ್‌ಕಾಂಗ್ ವಿಶ್ವವಿದ್ಯಾಲಯದ ಸೂಕ್ಷ್ಮಜೀವಿ ಶಾಸ್ತ್ರಜ್ಞ ಬೆನ್ ಕೌಲಿಂಗ್ ಅವರು ಪ್ರತಿಕ್ರಿಯಿಸಿದ್ದಾರೆ.

ಗಾಜಾ: ಒತ್ತೆಯಾಳುಗಳ ಬಿಡುಗಡೆ ಇಂದು

ಜೆರುಸಲೇಂ (ಎಎಫ್‌ಪಿ): ಗಾಜಾಪಟ್ಟಿಯಲ್ಲಿ ಹಮಾಸ್ ಬಂಡುಕೋರರು ಒತ್ತೆ ಇರಿಸಿಕೊಂಡಿರುವವರ ಬಿಡುಗಡೆ ಮತ್ತು ತಾತ್ಕಾಲಿಕ ಕದನ ವಿರಾಮ ಜಾರಿ ಪ್ರಕ್ರಿಯೆ ಶುಕ್ರವಾರ ಆರಂಭವಾಗಲಿದೆ ಎಂದು ಕತಾರ್ ಪ್ರಕಟಿಸಿದೆ.

ನಿರೀಕ್ಷೆಯಂತೆ ಪ್ರಕ್ರಿಯೆ ಗುರುವಾರ ಆರಂಭವಾಗಬೇಕಿತ್ತು. ‘ಒತ್ತೆಯಾಳುಗಳ ಬಿಡುಗಡೆಗಾಗಿ ಬಂಡುಕೋರರ ಜೊತೆಗೆ ಸಂಪರ್ಕದಲ್ಲಿದ್ದೇವೆ’ ಎಂದು ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಲಹೆಗಾರ ಟ್ಜಾಚಿ ಹನೆಗ್ಬಿ ಹೇಳಿದ್ದಾರೆ.

ಹಂತ, ಹಂತವಾಗಿ ಹಮಾಸ್ ಬಂಡುಕೋರರಿಂದ 50 ಒತ್ತೆಯಾಳುಗಳ ಬಿಡುಗಡೆ ಹಾಗೂ ಪ್ರತಿಯಾಗಿ ಇಸ್ರೇಲ್‌ನಿಂದ 150 ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಕುರಿತಂತೆ ಉಭಯತ್ರರ ನಡುವೆ ಒಪ್ಪಂದವಾಗಿದೆ.

‘ಮೂಲ ಒಪ್ಪಂದದಂತೇ ನಿಗದಿತ ಸ್ಥಳದಲ್ಲೇ ಬಿಡುಗಡೆ ಕಾರ್ಯ ನಡೆಯಲಿದೆ’ ಎಂದು ಹನೆಗ್ಬಿ ಹೇಳಿದ್ದಾರೆ. ‘ತಾತ್ಕಾಲಿಕ ಕದನ ವಿರಾಮವು ಮುಂದೆ ಹೋಗಿದೆ. ಕಾರ್ಯಾಚರಣೆ ಮುಂದುವರಿದಿದೆ’ ಎಂದು ಸೇನೆ ಅಧಿಕಾರಿಯೊಬ್ಬರು ತಿಳಿಸಿದರು.

ವಿಳಂಬವು ಒತ್ತೆಯಾಳುಗಳ ಕುಟುಂಬ ಸದಸ್ಯರಲ್ಲಿ ಹಾಗೂ ಕದನ ವಿರಾಮದ ನಿರೀಕ್ಷೆಯಲ್ಲಿದ್ದ, 47 ದಿನಗಳಿಂದ ಭೀತಿಯಲ್ಲಿಯೇ ದಿನದೂಡುತ್ತಿರುವ ಗಾಜಾದ ಕದನ ನಿರತ ಹಮಾಸ್ ಅಸಂಖ್ಯಾತ ನಿವಾಸಿಗಳಲ್ಲೂ ಆತಂಕವನ್ನು ಹೆಚ್ಚಿಸಿದೆ.



ಸೇನಾ ದಾಳಿ ಬಿರುಸುಗೊಂಡಂತೆ ಗಾಜಾದಲ್ಲಿನ ರಫಾ ನಗರದಲ್ಲಿ ಜನರು ಸುರಕ್ಷಿತ ಸ್ಥಳದತ್ತ ಧಾವಿಸುತ್ತಿರುವುದು –ಎಎಫ್‌ಪಿ ಚಿತ್ರ

ವಿಳಂಬಕ್ಕೆ ಕಾರಣವೇನು?

- ಮೊದಲ ಹಂತದಲ್ಲಿ ಬಿಡುಗಡೆಯಾಗಬೇಕಾದ ಒತ್ತೆಯಾಳುಗಳ ಪಟ್ಟಿ ಅಂತಿಮವಾಗದಿರುವುದು ವಿಳಂಬಕ್ಕೆ ಕಾರಣವಾಗಿದೆ.
- ಕದನವಿರಾಮದ ಅವಧಿಯಲ್ಲಿ ಮೊದಲ ಹಂತದಲ್ಲಿ 50 ಇಸ್ರೇಲ್ ಒತ್ತೆಯಾಳುಗಳು ಮತ್ತು 150 ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆಯಾಗಲಿದೆ. ಎರಡು ಹಂತದಲ್ಲಿ ಬಿಡುಗಡೆ ಪ್ರಕ್ರಿಯೆ ನಡೆಯಲಿದೆ.
- ಇಸ್ರೇಲ್ ಸೇನೆಯು ತಾನು ಸೆರೆ ಹಿಡಿದಿರುವ 300 ಮಂದಿ ಪ್ಯಾಲೆಸ್ಟೀನಿಯರ ಹೆಸರು ಪ್ರಕಟಿಸಿದೆ. ಇವರಲ್ಲಿ ಹೆಚ್ಚಿನವರು ಅಪ್ರಾಪ್ತ ವಯಸ್ಸಿನವರು.

> **ಕದನ ವಿರಾಮ ಯುದ್ಧದ ಅಂತ್ಯವಲ್ಲ. ಅಲ್ಪ ಅವಧಿಯ ನಂತರ ಮತ್ತೆ ದಾಳಿ ನಡೆಯಲಿದೆ. ಹಮಾಸ್‌ನ ಸೇನಾ ಸಾಮರ್ಥ್ಯವನ್ನು ನಾಶಪಡಿಸುವುದೇ ಇಸ್ರೇಲ್‌ನ ಗುರಿ**
> **ಬೆಂಜಮಿನ್ ನೆತನ್ಯಾಹು**
> ಇಸ್ರೇಲ್ ಪ್ರಧಾನಿ

ಬಂಡುಕೋರರು ಹಾಗೂ ಇಸ್ರೇಲ್ ಸೇನೆಯ ನಡುವೆ ಒತ್ತೆಯಾಳುಗಳ ಬಿಡುಗಡೆಗಾಗಿ ಒಡಂಬಡಿಕೆ ಮೂಡಿತ್ತು. ಇಸ್ರೇಲ್, ಅಮೆರಿಕ, ಕತಾರ್ ಇದಕ್ಕಾಗಿ ಮಧ್ಯಸ್ಥಿಕೆಯನ್ನು ವಹಿಸಿದ್ದವು.

ಆಸ್ಪತ್ರೆ ಕೆಳಗೆ ಸುರಂಗ: ಇಸ್ರೇಲ್‌ನ ಸೇನೆಯು ಗಾಜಾದಲ್ಲಿನ ಅಲ್ ಶಿಫಾ ಆಸ್ಪತ್ರೆಯ ಕೆಳಗೆ ಸುರಂಗ, ಹಮಾಸ್ ನೆಲೆ ಇದ್ದುದನ್ನು ಪತ್ತೆ ಹೆಚ್ಚಿದ್ದಾರೆ. ಈ ಆಸ್ಪತ್ರೆಯು ಇತ್ತೀಚೆಗೆ ಯುದ್ಧದ ಕೇಂದ್ರ ಸ್ಥಾನವಾಗಿತ್ತು.

ಆಸ್ಪತ್ರೆಯ ನಿರ್ದೇಶಕ ಮೊಹಮ್ಮದ್ ಅಬು ಸೆಲ್ಮಿಯಾ ಅವರನ್ನು ಇಸ್ರೇಲಿ ಸೇನೆ ವಶಕ್ಕೆ ಪಡೆದಿದೆ. ಇಸ್ರೇಲ್ ದಾಳಿಯಿಂದ ಗಾಜಾ ಪಟ್ಟಿಯಲ್ಲಿ ಮೃತಪಟ್ಟವರ ಸಂಖ್ಯೆ 13 ಸಾವಿರಕ್ಕೇರಿದೆ ಎಂದು ಹಮಾಸ್‌ನ ಆರೋಗ್ಯ ಸಚಿವಾಲಯ ಪ್ರಕಟಿಸಿದೆ. ಅಲ್ಲದೆ, ಈ ಅವಧಿಯಲ್ಲಿ 6000 ಜನರು ನಾಪತ್ತೆಯಾಗಿದ್ದಾರೆ.

ಗೆಹಲೋತ್, ರಾಜೇ ಸುತ್ತ ರಾಜಕಾರಣ ಗಿರಕಿ

ರಾಜಸ್ಥಾನದ ಚುನಾವಣಾ ಕಣದಲ್ಲಿ ಪ್ರಬಲ ಪೈಪೋಟಿ ಇರುವುದು ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತ್ರ. ಎರಡೂ ಪಕ್ಷಗಳು ಮುಖ್ಯಮಂತ್ರಿ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಹೊರರಾಜ್ಯಗಳಲ್ಲಿ ನಿಂತು ಸುದ್ದಿ ಮಾಧ್ಯಮಗಳ ಮೂಲಕ ನೋಡಿದಾಗ ಈ ಎರಡೂ ಪಕ್ಷಗಳಲ್ಲಿ ಇರುವ ಬಣ ರಾಜಕಾರಣ, ಒಡಕು ಢಾಳಾಗಿ ಕಾಣುತ್ತದೆ. ಆದರೆ, ರಾಜಸ್ಥಾನದಲ್ಲಿ ನಿಂತು ನೋಡಿದಾಗ ಪರಿಸ್ಥಿತಿ ತೀರಾ ಭಿನ್ನವಾಗಿರುವುದು ಅನುಭವಕ್ಕೆ ಬರುತ್ತದೆ. ಎರಡೂ ಪಕ್ಷಗಳಿಗೆ ಮತಹಾಕುವವರು ಇಂಥವರೇ ಮುಖ್ಯಮಂತ್ರಿಯಾಗಬೇಕು ಎಂಬುದರಲ್ಲಿ ಅಚಲವಾಗಿದ್ದಾರೆ



ಚುನಾವಣಾ ಪಯಣ
ರಾಜಸ್ಥಾನ
ಜಯಸಿಂಹ ಆರ್.

ಜೈಪುರ/ಜಾಲಾವಾಡ್/ಟೋಂಕ್/ಜೋಧಪುರ: 'ಈ ಚುನಾವಣೆಯಲ್ಲಿ ಕಾಂಗ್ರೆಸ್ ಎದುರಿಸುತ್ತಿರುವ ಅತ್ಯಂತ ದೊಡ್ಡ ಸವಾಲುಗಳಲ್ಲಿ ಒಳಜಗಳ ಮೊದಲನೆಯದು. ಕಾಂಗ್ರೆಸ್ ಸರ್ಕಾರ ಚೆನ್ನಾಗೇ ಕೆಲಸ ಮಾಡಿದೆ. ಆದರೆ ಐದೂ ವರ್ಷ ಅಧಿಕಾರಕ್ಕಾಗಿ ಅಶೋಕ್ ಗೆಹಲೋತ್ ಮತ್ತು ಸಚಿನ್ ಪೈಲಟ್ ಕಿತ್ತಾಡುತ್ತಲೇ ಇದ್ದರು. ನಿಮ್ಮಲ್ಲೂ (ಕರ್ನಾಟಕದಲ್ಲಿ) ಸಿದ್ದರಾಮಯ್ಯ, ಶಿವಕುಮಾರ್ ಅಧಿಕಾರಕ್ಕಾಗಿ ಕಿತ್ತಾಡುತ್ತಲೇ ಇದ್ದಾರಲ್ಲ ಹಾಗೆ. ಇಲ್ಲದಿದ್ದರೆ ಇನ್ನೂ ಹೆಚ್ಚು ಕೆಲಸ ಮಾಡಬಹುದಿತ್ತು' ಎಂದು ರಾಜಸ್ಥಾನ ಕಾಂಗ್ರೆಸ್‌ನ ಒಳಜಗಳದ ಬಗ್ಗೆ ಟಾಕೂಟೀಕಾಗಿ ಇಂಗ್ಲಿಷ್‌ನಲ್ಲಿ ಮಾತನಾಡಿದ್ದು ಜೈಪುರದ ಟ್ರಾವೆಲ್ ಏಜೆಂಟ್ ಸೂರ್ಯಕಾಂತ್ ಶರ್ಮಾ. 'ಆದರೆ ಈಗ ಬಿಜೆಪಿಯಲ್ಲೂ ಮುಖ್ಯಮಂತ್ರಿ ಅಭ್ಯರ್ಥಿಗಾಗಿ ಪೈಪೋಟಿ ಆರಂಭವಾಗಿದೆ. ಐದೂ ವರ್ಷ ಕಾಂಗ್ರೆಸ್ ಸರ್ಕಾರದ ವಿರುದ್ಧ ಒಂದು ಮಾತನ್ನೂ ಆಡದ ವಸುಂಧರಾ ರಾಜೇ ಅವರು ಮಾತ್ರ ಮುಖ್ಯಮಂತ್ರಿ ಆಗಬಾರದು' ಎಂಬ ಮಾತನ್ನೂ ಸೇರಿಸಿದ ಅವರು, ತಮ್ಮೆದುರು ಇದ್ದ ಹತ್ತಾರು ಇಂಗ್ಲಿಷ್ ಪತ್ರಿಕೆಗಳನ್ನು ಒಂದೆಡೆ ಅಚ್ಚುಕಟ್ಟಾಗಿ ಜೋಡಿಸಿಟ್ಟರು.


ಜೈಪುರದ ಆಚೆಗೆ ಮತ್ತೆ ಇಂತಹ ಮಾತು ಕೇಳಲಿಲ್ಲ. ಜೈಪುರಕ್ಕೆ ಅಂಟಿಕೊಂಡೇ ಟೋಂಕ್ ಜಿಲ್ಲೆ ಮತ್ತು ವಿಧಾನಸಭಾ ಕ್ಷೇತ್ರವಿದೆ. ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಜತೆಗೆ ಅಧಿಕಾರಕ್ಕಾಗಿ ಗುದ್ದಾಟ ನಡೆಸಿದ್ದ ಸಚಿನ್ ಪೈಲಟ್ ಅವರ ಕ್ಷೇತ್ರವಿದು. 'ಇದು ಪೈಲಟ್ ಬಯ್ಯಾ ಅವರ ಮನೆ. ಅವರೇ ಗೆಲ್ಲುವುದು' ಎಂದು ಟೋಂಕ್‌ನ ಶೋಯಬ್ ಅಖ್ತರ್ ಹೇಳಿದರು. ಆದರೆ ಸಚಿನ್ ಪೈಲಟ್ ಮುಖ್ಯಮಂತ್ರಿಯಾಗಬೇಕು ಎಂದು ಟೋಂಕ್‌ನ ಕಾಂಗ್ರೆಸ್ ಕಚೇರಿ ಎದುರು ಮೊಬೈಲ್ ರಿಪೇರಿ ಅಂಗಡಿ ನಡೆಸುವ ಈ ಅಖ್ತರ್ ಯೋಚಿಸಿಯೂ ಇಲ್ಲ. ಅವರ ಗೆಳೆಯರಾದ ಕಟ್ಟಾರಾಮ್ ಮತ್ತು ಬಿಲಾಲ್ ಇದೇನೋ ಅಸಹಜ ಮಾತು ಎಂಬಂತೆ ನೋಡುತ್ತಿದ್ದರು.

ಭ್ರಷ್ಟಾಚಾರವನ್ನು ಖಂಡಿಸಿ ತಮ್ಮದೇ ಸರ್ಕಾರದ ವಿರುದ್ಧ ಸಚಿನ್ ಪೈಲಟ್ ಅವರು ನಡೆಸಿದ ದೀರ್ಘ ಪ್ರತಿಭಟನೆಯನ್ನು ಜನರು ನೆನಪಿಸಿಕೊಳ್ಳುವುದೂ ಇಲ್ಲ. ಆ ಬಗ್ಗೆ ಪ್ರಸ್ತಾಪಿಸಿದರೂ ಜನರಿಗೆ ಅದು ನೆನಪಾಗುವುದಿಲ್ಲ.

ಟೋಂಕ್ ಜಿಲ್ಲೆಯ ಬೇರೆ ವಿಧಾನಸಭಾ ಕ್ಷೇತ್ರಗಳಲ್ಲೂ ಜನ ಸಚಿನ್ ಪೈಲಟ್ ಅವರ ಹೆಸರು ಹೇಳುವುದಿಲ್ಲ. ರಾಜಸ್ಥಾನ ಚುನಾವಣೆಯ 2,200 ಕಿ.ಮೀ. ಪಯಣದಲ್ಲಿ ಸಚಿನ್ ಪೈಲಟ್ ಅವರ ಹೆಸರು ಮತ್ತೆ ಕೇಳಲೇ ಇಲ್ಲ. ಬದಲಿಗೆ ಕೂಲಿ ಕಾರ್ಮಿಕರಿಂದ ಹಿಡಿದು ದೊಡ್ಡ ವ್ಯಾಪಾರಿಗಳವರೆಗೆ ಎಲ್ಲರೂ ಮಾತನಾಡಿದ್ದು ಅಶೋಕ್ ಗೆಹಲೋತ್ ಬಗ್ಗೆ. ಜನರು ಕಾಂಗ್ರೆಸ್ ಸರ್ಕಾರ ಎಂದೂ ಹೇಳುವುದಿಲ್ಲ. ಜನ ಮಾತು ಶುರುಮಾಡುವುದೇ 'ಅಶೋಕ್ ಜೀ ಕಾ ಸರ್ಕಾರ್' (ಅಶೋಕ್ ಅವರ ಸರ್ಕಾರ) ಎಂದು.

ಈ ಪಯಣದಲ್ಲಿ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿಯ ಹೆಸರನ್ನು ಒಬ್ಬರೂ ಉಲ್ಲೇಖಿಸಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ಹೆಸರು ಕೇಳಿದ್ದು ಚಿತ್ತೋರಗಡದಲ್ಲಿ ಒಂದು ಬಾರಿ ಮಾತ್ರ. ಉಳಿದೆಲ್ಲಾ ಕಡೆ ಜನರು ಮಾತನಾಡುವುದು ಅಶೋಕ್ ಗೆಹಲೋತ್ ಮತ್ತು ವಸುಂಧರಾ ರಾಜೇ ಅವರ ಬಗ್ಗೆ ಮಾತ್ರ.

'ನೀವು ಪತ್ರಕರ್ತರಾ... ಅಶೋಕ್ ಜೀ ಹೆಣ್ಣುಮಕ್ಕಳಿಗೆ ಮೊಬೈಲ್ ಕೊಟ್ಟಿದ್ದಾರೆ. ನನ್ನ ತಂಗಿಗೂ ಬಂದಿದೆ. ಹೆಣ್ಣುಮಕ್ಕಳಿಗೆ ತುಂಬಾ ಅನುಕೂಲ ಮಾಡಿದ್ದಾರೆ' ಎಂದು ಪಾಲಿ ಜಿಲ್ಲೆಯ ಬನ್ನಾದೇವಿ ದೇವಾಲಯದ ಹೊರಗೆ ಹೂಕಟ್ಟುವ ಯುವಕ ಬನ್ನಾರಾಮ್ ಅತ್ಯುತ್ಸಾಹದಿಂದ ವಿವರಿಸಿದ. ಉಚಿತ ಪಡಿತರ, ಇಂದಿರಾ ರಸೋಯಿ (ಇಂದಿರಾ ಕ್ಯಾಂಟೀನ್‌ನಂತಹ ಯೋಜನೆ), ಉಚಿತ ವಿದ್ಯುತ್ ಯೋಜನೆ ಬಗ್ಗೆ ದೊಡ್ಡ ಪಟ್ಟಿ ನೀಡಿದ. ಮತ ಯಾರಿಗೆ ಹಾಕುತ್ತೀಯ ಎಂದು ಪ್ರಶ್ನಿಸಿದಾಗ, ಅದನ್ನು ಹೇಳುವುದಿಲ್ಲ ಎಂದು ಹೂಬುಟ್ಟಿಯ ಹಿಂದೆ ಮುಖ ಅಡಗಿಸಿದ.



ರಾಜಸ್ಥಾನದ ಎಲ್ಲಾ ಪ್ರಾಂತಗಳಲ್ಲೂ ಜನ ಹೀಗೆಯೇ ಮಾತನಾಡುತ್ತಾರೆ. ಹೀಗೆ ವಿವಿಧ ಯೋಜನೆಗಳ ಮೂಲಕ ಗೆಹಲೋತ್ ಅವರು, 'ಅಶೋಕ್ ಜೀ ಕಾ ಸರ್ಕಾರ್' ಎಂಬ ಬ್ರ್ಯಾಂಡ್ ನಿರ್ಮಿಸಿದ್ದಾರೆ.

ಗೆಹಲೋತ್ ಅವರ ಈ ಬ್ರ್ಯಾಂಡ್‌ಗೆ ಇನ್ನೊಂದು ಆಯಾಮವೂ ಇದೆ. 'ಅಶೋಕ್ ಜೀ ಒಳ್ಳೆಯ ಯೋಜನೆಗಳನ್ನೇನೋ ಕೊಟ್ಟಿದ್ದಾರೆ. ಆದರೆ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಅನುದಾನವನ್ನೇ ಕೊಟ್ಟಿಲ್ಲ. ಅನುದಾನ ಬಿಡುಗಡೆಯಲ್ಲಿ ತಾರತಮ್ಯ ಮಾಡಿದ್ದಾರೆ. ವಸುಂಧರಾ ಅವರ ಸರ್ಕಾರ ಇದ್ದಿದ್ದರೆ, ಬಿಜೆಪಿ ಶಾಸಕರ ಕ್ಷೇತ್ರಗಳಿಗೂ ಅನುದಾನ ಕೊಡುತ್ತಿದ್ದರು. ಇದು ಸರಿಯಲ್ಲ' ಎನ್ನುವುದು ಜಾಲಾವಾಡದ ಕುಶ್ವೀಂದರ್ ಸಿಂಗ್ ರಾಜಪುರೋಹಿತ್ ಅವರ ವಿಶ್ಲೇಷಣೆ. 'ವಸುಂಧರಾ ಅವರು ಎಷ್ಟು ಕೆಲಸ ಮಾಡಿದ್ದಾರೆ. ಅವರು ಇಲ್ಲದೇ ಇದ್ದಿದ್ದರೆ, ಜಾಲಾವಾಡಕ್ಕೆ (ವಸುಂಧರಾ ಅವರ ಕ್ಷೇತ್ರ) ಏನಾದರೂ ಹೆಸರು ಬರುತ್ತಿತ್ತೇ? ಅವರೇ ಮುಖ್ಯಮಂತ್ರಿಯಾಗಬೇಕು' ಎಂಬುದು ಕುಶ್ವೀಂದರ್ ಅವರ ದೃಢವಾದ ಮಾತು.

ಜಾಲಾವಾಡದಿಂದ 390 ಕಿ.ಮೀ. ದೂರದಲ್ಲಿ, ಅರಾವಳಿ ಪರ್ವತ ಪ್ರದೇಶದ ಕಣಿವೆಯಾಳದಲ್ಲಿ ಇರುವ ಸಣ್ಣ ಊರು ದೇವ್ಲಾ. ಅಲ್ಲಿನ ಬಸ್ ನಿಲ್ದಾಣದಲ್ಲಿ ಕೂತು ಹರಟೆಹೊಡೆಯುತ್ತಿದ್ದ ದಿಲೀಪ್, ದಿವ್ಯೇಂದ್ರು ಮತ್ತವರ ಗೆಳೆಯರ ಪಟಾಲಂ, 'ವಸುಂಧರಾ ಅವರೇ ಮುಖ್ಯಮಂತ್ರಿ ಆಗಬೇಕು' ಎಂದರು. ದಿಯಾಕುಮಾರಿ, ಬಾಲಕನಾಥ್ ಅವರೂ ಬಿಜೆಪಿಯಿಂದ ಮುಖ್ಯಮಂತ್ರಿಯಾಗಬಹುದು ಎಂದಾಗ ಅವರೆಲ್ಲರೂ ಸಿಟ್ಟಾದರು. 'ಅದು ಹೇಗೆ ಹಾಗೆ ಮಾಡುತ್ತಾರೆ' ಎಂದು ಜೋರು ಮಾಡಿದರು.



ಪಶ್ಚಿಮದ ಬಿಕಾನೇರ್, ಪೂರ್ವದ ಸಾರಿಸ್ಕಾದ ಜನರಿಗೂ ವಸುಂಧರಾ ಅವರೇ ಬಿಜೆಪಿಯ ನಾಯಕಿ, ಮತ್ಯಾರೂ ಅಲ್ಲ.

ವಸುಂಧರಾ ಅವರಿಗೆ ಪರ್ಯಾಯ ನಾಯಕಿಯನ್ನಾಗಿ ಬೆಳೆಸಲು ಜೈಪುರ ರಾಜಮನೆತನದ ದಿಯಾಕುಮಾರಿ ಅವರನ್ನು ಜೈಪುರದಿಂದ ಬಿಜೆಪಿ ಕಣಕ್ಕೆ ಇಳಿಸಿದೆ. ಆದರೆ ಅವರು ಪರ್ಯಾಯವಾಗಬಲ್ಲರು ಎಂಬುದನ್ನು ಬಿಜೆಪಿಯ ಮತದಾರರೇ ಒಪ್ಪುವುದಿಲ್ಲ.

'ನಾವೆಲ್ಲಾ ಕರಕುಶಲ ವಸ್ತುಗಳನ್ನು ಮಾಡಿ, ಮಾರಾಟ ಮಾಡಿ ಬದುಕುವವರು. ನಾವು ಮಾಡುವಂಥದ್ದೇ ಕಲಾಕೃತಿಗಳನ್ನು ಈ ರಾಜಕುಮಾರಿ ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಮಾಡಿಸುತ್ತಾರೆ. ನಮ್ಮ ಹೊಟ್ಟೆಯ ಮೇಲೆ ಹೊಡೆದಿದ್ದಾರೆ. ಸಾಮಾನ್ಯ ಜನರ ಹೊಟ್ಟೆಯ ಮೇಲೆ ಹೊಡೆಯುವವರು ಮುಖ್ಯಮಂತ್ರಿಯಾಗಲು ಯೋಗ್ಯರೇ? ಬಿಜೆಪಿಯಿಂದ ಬೇರೆ ಯಾರು ನಿಂತಿದ್ದರೂ ಬಿಜೆಪಿಗೇ ಮತ ಹಾಕುತ್ತೇನೆ. ಈ ಬಾರಿ ಮತ ಹಾಕುವುದೇ ಇಲ್ಲ' ಎಂದವರು ಜೈಪುರದ ಬಾಪೂ ಬಜಾರ್‌ನಲ್ಲಿ ಕರಕುಶಲ ವಸ್ತುಗಳ ಅಂಗಡಿ ನಡೆಸುವ ಸಿವಾನ್ ಸಿಂಧಿ. 'ನೋಡಿ ಈ ಬಾರಿ ಬಿಜೆಪಿ ಅಧಿಕಾರಕ್ಕೆ ಬಂದರೆ, ವಸುಂಧರಾ ಅವರೇ ಮುಖ್ಯಮಂತ್ರಿಯಾಗಬೇಕು. ಯಾರೋ ಬಾಲಕನಾಥ್, ದಿಯಾಕುಮಾರಿ ಎಲ್ಲಾ ಆಗುವುದಲ್ಲ' ಎಂದು ಸಿವಾನ್ ಮಾತಿಗೆ ದನಿಗೂಡಿಸಿದರು ಶಿವರಾಜ್ ಸಿಂಗ್ ಯಾದವ್. ❖

ರಾಹುಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ 'ಪನೌತಿ' (ಅಪಶಕುನ) ಎಂದು ಹೇಳಿದ್ದಕ್ಕಾಗಿ ಹಾಗೂ ಮೋದಿ ಅವರ ಬಗ್ಗೆ ಮಾತನಾಡುವ ಸಂದರ್ಭದಲ್ಲಿ 'ಜೇಬುಗಳ್ಳತನ'ದ ಬಗ್ಗೆ ಉಲ್ಲೇಖಿಸಿದ್ದಕ್ಕಾಗಿ ಚುನಾವಣಾ ಆಯೋಗವು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ನೋಟಿಸ್ ಜಾರಿಗೊಳಿಸಿದೆ.

ರಾಹುಲ್ ಅವರ ಮಾತುಗಳು ಹಿರಿಯ ನಾಯಕರಿಗೆ ಶೋಭೆ ತರುವುದಿಲ್ಲ ಎಂದು ಬಿಜೆಪಿಯು ಆಯೋಗಕ್ಕೆ ದೂರು ಸಲ್ಲಿಸಿತ್ತು. ರಾಜಕೀಯ ವಿರೋಧಿಗಳನ್ನು ಉದ್ದೇಶಿಸಿ ಆಧಾರವಿಲ್ಲದೆ ಮಾತನಾಡುವುದು ನೀತಿ ಸಂಹಿತೆಗೆ ವಿರುದ್ಧ ಎಂದು ಆಯೋಗವು ರಾಹುಲ್ ಅವರಿಗೆ ನೀಡಿರುವ ನೋಟಿಸ್‌ನಲ್ಲಿ ಹೇಳಿದೆ.

ರಾಹುಲ್ ಅವರು ರಾಜಸ್ಥಾನದಲ್ಲಿ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಈ ಪದಗಳನ್ನು ಬಳಸಿದ್ದರು. 'ಅಪಶಕುನ' ಎಂದು ಹೇಳಿರುವುದು, ನಿಷೇಧಿಸಿರುವ ಮಾತುಗಳ ವ್ಯಾಪ್ತಿಗೆ ಬರುತ್ತದೆ ಎಂದು ಮೇಲ್ನೋಟಕ್ಕೆ ಅನ್ನಿಸುತ್ತದೆ ಎಂದು ಆಯೋಗವು ಹೇಳಿದೆ.

ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಸತತವಾಗಿ ಹತ್ತು ಪಂದ್ಯಗಳನ್ನು ಗೆದ್ದಿದ್ದ ಭಾರತವು, ಫೈನಲ್‌ನಲ್ಲಿ ಸೋತಿತು. ಆ ಪಂದ್ಯ ವೀಕ್ಷಿಸಲು ಮೋದಿ ಅವರು ತೆರಳಿದ್ದರು. ಮೋದಿ ಅವರು 'ಅಪಶಕುನ' ಎಂದು ರಾಹುಲ್ ಅವರು ಹೇಳಿದ್ದರು.

ರಾಹುಲ್ ಅವರು ಮೋದಿ ಅವರನ್ನು ಉದ್ದೇಶಿಸಿ ಮಾತನಾಡುವಾಗ 'ಜೇಬುಗಳ್ಳತನ'ದ ಬಗ್ಗೆ ಉಲ್ಲೇಖಿಸಿದ್ದರು. ಮೋದಿ ಅವರು ಜನರ ಗಮನವನ್ನು ಬೇರೆಡೆ ಸೆಳೆಯುತ್ತಾರೆ, ಉದ್ಯಮಿ ಗೌತಮ್ ಅದಾನಿ ಅವರು ಜನರ ಜೇಬಿನಿಂದ ಹಣ ಎತ್ತುತ್ತಾರೆ, ಜೇಬುಗಳ್ಳತನ ನಡೆಯುವುದು ಹೀಗೆ ಎಂದು ರಾಹುಲ್ ಹೇಳಿದ್ದರು.

ಸಂವಿಧಾನವು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದೆ. ಹಾಗೆಯೇ, ವ್ಯಕ್ತಿಯು ತಾನು ಸಂಪಾದಿಸಿರುವ ಕೀರ್ತಿಯನ್ನು ಕಾಪಾಡಿಕೊಳ್ಳುವ ಹಕ್ಕನ್ನು ಕೂಡ ಹೊಂದಿರುತ್ತಾನೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಕೀರ್ತಿಯನ್ನು ಕಾಪಾಡಿಕೊಳ್ಳುವ ಹಕ್ಕುಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಿರುವುದು ಸಾಂವಿಧಾನಿಕ ಅಗತ್ಯ ಎಂದು ಆಯೋಗ ಹೇಳಿದೆ.

'ನಿಮ್ಮ ವಿರುದ್ಧದ ದೂರಿಗೆ ವಿವರಣೆ ನೀಡಬೇಕು. ನೀತಿ ಸಂಹಿತೆಯ ಉಲ್ಲಂಘನೆಯ ಆರೋಪಕ್ಕೆ ಪ್ರತಿಯಾಗಿ, ನಿಮ್ಮ ವಿರುದ್ಧ ಕ್ರಮವನ್ನು ಏಕೆ ಜರುಗಿಸಬಾರದು ಎಂಬುದಕ್ಕೆ ಉತ್ತರ ನೀಡಬೇಕು' ಎಂದು ಆಯೋಗ ಹೇಳಿದೆ. ಶನಿವಾರ ಸಂಜೆಯೊಳಗೆ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ಸೂಚಿಸಿದೆ. ಉತ್ತರ ಬಾರದಿದ್ದರೆ ಅಗತ್ಯ ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಸಿದೆ.

ಸಚಿನ್ ಪೈಲಟ್‌ಗೆ ಮುಖ್ಯಮಂತ್ರಿ ಸ್ಥಾನ ನಿರಾಕರಣೆ ಹಿನ್ನೆಲೆಯಲ್ಲಿ ಚರ್ಚೆ

'ಗುಜ್ಜಾರ್' ನಿಷ್ಠೆ ಯಾವ ಪಕ್ಷಕ್ಕೆ?

ಅಲ್ವರ್ (ಪಿಟಿಐ): ರಾಜಸ್ಥಾನದ ಅಲ್ವರ್‌ನ ಗುಜ್ಜಾರ್ ಸಮುದಾಯವು ಈಗ ಒಡೆದ ಮನೆಯಂತಾಗಿದೆ. ಸಮುದಾಯದ ಪ್ರಭಾವಿ ನಾಯಕ ಸಚಿನ್ ಪೈಲಟ್ ಅವರು ಮುಖ್ಯಮಂತ್ರಿ ಆಗುವುದನ್ನು ರಾಜ್ಯ ಕಾಂಗ್ರೆಸ್ ಈ ಹಿಂದೆ ತಡೆದಿದ್ದೇ ಇದಕ್ಕೆ ಕಾರಣ.

2018ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಸರ್ಕಾರ ರಚಿಸುವ ವೇಳೆ ಸಚಿನ್ ಪೈಲಟ್ ಅವರನ್ನೇ ಮುಖ್ಯಮಂತ್ರಿ ಸ್ಥಾನದಲ್ಲಿ ನೋಡಲು ಗುಜ್ಜಾರ್ ಸಮುದಾಯ ಬಯಸಿತ್ತು. ಆದರೆ, ಅಶೋಕ್ ಗೆಹಲೋತ್ ಅವರನ್ನು ಪಕ್ಷವು ಮುಖ್ಯಮಂತ್ರಿ ಸ್ಥಾನಕ್ಕೇರಿಸಿತು. ಇದನ್ನು ಸಮುದಾಯಕ್ಕೆ ಬಗೆದ ದ್ರೋಹ ಎಂದು ಪರಿಗಣಿಸಿದ ಹಲವರು ತಮ್ಮ ನಿಷ್ಠೆಯನ್ನು ಬಿಜೆಪಿಯತ್ತ ತಿರುಗಿಸಿದರು. ಪೈಲಟ್ ಅವರನ್ನು ಮುಖ್ಯಮಂತ್ರಿಯನ್ನಾಗಿಸಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ನಂಬಿದ ಇನ್ನೂ ಹಲವರು ಕಾಂಗ್ರೆಸ್‌ಗೇ ತಮ್ಮ ನಿಷ್ಠೆ ಮುಂದುವರೆಸಿದರು.

ರಾಜ್ಯದ 200 ವಿಧಾನಸಭಾ ಕ್ಷೇತ್ರಗಳ ಪೈಕಿ 35ರಲ್ಲಿ ಗುಜ್ಜಾರ್ ಸಮುದಾಯವು ಪ್ರಭಾವ ಹೊಂದಿದೆ. ಅಲ್ವರ್ ಜಿಲ್ಲೆಯಲ್ಲಿ ಈ ಸಮುದಾಯದ ಜನಸಂಖ್ಯೆ 1.5 ಲಕ್ಷಕ್ಕಿಂತಲೂ ಹೆಚ್ಚಿದೆ.

'ಸಚಿನ್ ಪೈಲಟ್ ಅವರು ಮುಖ್ಯಮಂತ್ರಿಯಾಗುತ್ತಾರೆ ಎಂಬ ನಿರೀಕ್ಷೆಯಲ್ಲಿ ಗುಜ್ಜಾರ್ ಸಮುದಾಯ ಕಾಂಗ್ರೆಸ್‌ಗೆ ಮತ ನೀಡಿತ್ತು. ಈ ಬಾರಿ ಕಾಂಗ್ರೆಸ್ ಗೆದ್ದರೆ ಪೈಲಟ್ ಅವರನ್ನೇ ಮುಖ್ಯಮಂತ್ರಿ ಮಾಡುವಂತೆ ನಾವು ಆಗ್ರಹಿಸುತ್ತೇವೆ' ಎಂದು ಸ್ಥಳೀಯರಾದ ಅಮರ್ ಸಿಂಗ್ ಗುಜ್ಜಾರ್ ಹೇಳುತ್ತಾರೆ.

ಕಾಂಗ್ರೆಸ್ ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ಗಮನದಲ್ಲಿ ರಿಸಿಕೊಂಡು ಸಮುದಾಯವು ಈ ಬಾರಿಯೂ ಕಾಂಗ್ರೆಸ್‌ಗೇ ಮತ ನೀಡಲಿದೆ ಎನ್ನುತ್ತಾರೆ.

'ಪೈಲಟ್ ಅವರನ್ನು ಮುಖ್ಯಮಂತ್ರಿ ಮಾಡದೇ ಕಾಂಗ್ರೆಸ್ ದ್ರೋಹ ಬಗೆದಿದೆ. ಹಾಗಾಗಿ ಸಮುದಾಯದ ಮತಗಳು ಗಣನೀಯ ಸಂಖ್ಯೆಯಲ್ಲಿ ಬಿಜೆಪಿ ಕಡೆಗೆ ಹೋಗಲಿವೆ' ಎಂದು ಮತ್ತೊಬ್ಬ ಸ್ಥಳೀಯ ನಿವಾಸಿ ಸಂಜಿತ್ ಚೌಡಿ ಅವರು ಅಭಿಪ್ರಾಯಪಟ್ಟಿದ್ದಾರೆ.

ಸಚಿನ್ ಪೈಲಟ್ ವಿಚಾರದಲ್ಲಿ ಗುಜ್ಜಾರ್ ಸಮುದಾಯಕ್ಕೆ ಕಾಂಗ್ರೆಸ್ ಮೋಸ ಮಾಡಿರುವ ಕಾರಣ ಆ ಸಮುದಾಯವು ಈ ಬಾರಿ ಬಿಜೆಪಿಯನ್ನು ಬೆಂಬಲಿಸಲಿದೆ ಎಂದು ಪಕ್ಷದ ಸಂಸದ ಕಿರೋಡಿ ಲಾಲ್ ಮೀನಾ ಅವರು ಈಚೆಗಷ್ಟೇ ಹೇಳಿದ್ದರು.

ರಾಜಸ್ಥಾನದಲ್ಲಿ 'ಗುಜ್ಜಾರ್'ಗೆ ಅವಮಾನ: ಮೋದಿ



ಜೈಪುರ (ಪಿಟಿಐ): ಕಾಂಗ್ರೆಸ್ ಪಕ್ಷಕ್ಕಾಗಿ ಜೀವ ಸವೆಸಿದ 'ಗುಜ್ಜಾರ್ ಪುತ್ರನನ್ನು' ರಾಜಸ್ಥಾನದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಹಾಲಿನಿಂದ ನೊಣ ತೆಗೆದಂತೆ ಬಿಸಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಜೇಶ್ ಪೈಲಟ್ ಮತ್ತು ಸಚಿನ್ ಪೈಲಟ್ ಅವರನ್ನು ಉಲ್ಲೇಖಿಸಿ ಗುರುವಾರ ಹೇಳಿದ್ದಾರೆ.

ಮುಖ್ಯಮಂತ್ರಿ ವಿರುದ್ಧ ಬಂಡಾಯವೆದ್ದ ಕಾರಣಕ್ಕೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಮತ್ತು ಉಪಮುಖ್ಯಮಂತ್ರಿ ಹುದ್ದೆ ಕಳೆದುಕೊಂಡ ಸಚಿನ್ ಪೈಲಟ್ ಉದ್ದೇಶಿಸಿ ಬುಧವಾರವೂ ಇದೇ ಬಗೆಯ ಹೇಳಿಕೆಯನ್ನು ಪ್ರಧಾನಿ ಮೋದಿ ನೀಡಿದ್ದರು. ಈ ಹೇಳಿಕೆ ಬಗ್ಗೆ ಸಚಿನ್ ಪೈಲಟ್ ಆಕ್ರೋಶ ವ್ಯಕ್ತಪಡಿಸಿದ್ದರು.

ರಾಜಸಮಂದ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ಮೋದಿ, 'ಗುಜ್ಜಾರ್ ಸಮುದಾಯದ ಮಗ ರಾಜಕೀಯ ಅಸ್ತಿತ್ವಕ್ಕಾಗಿ ಹೋರಾಡುತ್ತಿದ್ದಾರೆ. ಪಕ್ಷಕ್ಕಾಗಿ ಜೀವನವನ್ನೇ ಮುಡಿಪಾಗಿರಿಸಿದ್ದಾರೆ. ಅಧಿಕಾರಕ್ಕೆ ಬಂದ ಬಳಿಕ ಅವರನ್ನು ಹಾಲಿನಿಂದ ನೊಣ ತೆಗೆದಂತೆ ಎಸೆದಿದೆ' ಎಂದು ಕಾಂಗ್ರೆಸ್ ಪಕ್ಷವನ್ನು ಟೀಕಿಸಿದ್ದಾರೆ.

'ಅವರು (ಕಾಂಗ್ರೆಸ್‌ನವರು) ದಿವಂಗತ ರಾಜೇಶ್ ಪೈಲಟ್ ಅವರಿಗೂ ಇದೇ ರೀತಿ ಮಾಡಿದ್ದರು. ಈಗ ಅವರ ಮಗನಿಗೂ ಅದೇ ರೀತಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಗುಜ್ಜಾರ್ ಸಮುದಾಯವನ್ನು ಅವಮಾನಿಸುತ್ತಲೇ ಇದೆ. ಪಕ್ಷದಲ್ಲಿ ಸತ್ಯ ಹೇಳುವವರನ್ನು ಮೂಲೆಗುಂಪು ಮಾಡುವ ಪ್ರಯತ್ನ ನಡೆಯುತ್ತದೆ. ರಾಜೇಶ್ ಪೈಲಟ್ ಅವರನ್ನು ನಡೆಸಿಕೊಂಡಂತೆಯೇ ಅವರ ಮಗ ಸಚಿನ್ ಅವರನ್ನೂ ಶಿಕ್ಷಿಸುತ್ತಿದೆ' ಎಂದಿದ್ದಾರೆ.

ಚುನಾವಣಾ ಕಣದಲ್ಲಿ

- **'ಬೈನ್ಸ್ ಅಧಿಕಾರಾವಧಿ ವಿಸ್ತರಣೆ ಇಲ್ಲ':** ಮಧ್ಯಪ್ರದೇಶದ ಮುಖ್ಯ ಕಾರ್ಯದರ್ಶಿ ಇಕ್ಬಾಲ್ ಸಿಂಗ್ ಬೈನ್ಸ್ ಅವರ ಅಧಿಕಾರಾವಧಿಯನ್ನು ಇನ್ನೂ ಒಂದು ತಿಂಗಳು ವಿಸ್ತರಿಸಲು ಚುನಾವಣಾ ಆಯೋಗ (ಇ.ಸಿ) ಅನುಮತಿ ನೀಡಿದೆ ಎಂಬ ವರದಿಗಳನ್ನು ಆಯೋಗವು ಗುರುವಾರ ತಳ್ಳಿಹಾಕಿದೆ. ಬೈನ್ಸ್ ಅವರ ಅಧಿಕಾರಾವಧಿ ವಿಸ್ತರಣೆ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಸುದ್ದಿ ಹರಿದಾಡುತ್ತಿದೆ ಎಂದು ಆಯೋಗವು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. ಬೈನ್ಸ್ ಅವರ ಅಧಿಕಾರಾವಧಿಯು ನವೆಂಬರ್ 30ರಂದು ಕೊನೆಗೊಳ್ಳಲಿದೆ. ಇದೇ ತಿಂಗಳ 17ರಂದು ಮಧ್ಯಪ್ರದೇಶ ವಿಧಾನಸಭೆಗೆ ಮತದಾನ ನಡೆದಿದೆ. ರಾಜ್ಯದಲ್ಲಿ ನ.30ರ ವರೆಗೂ ನೀತಿ ಸಂಹಿತೆ ಜಾರಿಯಲ್ಲಿರಲಿದೆ. ಹೀಗಾಗಿ ಬೈನ್ಸ್ ಅವರ ಅಧಿಕಾರಾವಧಿಗೆ ಸಂಬಂಧಿಸಿದ ಯಾವುದೇ ನಿರ್ಧಾರಕ್ಕೆ ಚುನಾವಣಾ ಆಯೋಗದ ಅನುಮೋದನೆ ಅಗತ್ಯವಿದೆ.
- **'ರಾಷ್ಟ್ರೀಯ ಸಮಸ್ಯೆಯಾದ ರಾಹುಲ್':** 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈಗ ಕಾಂಗ್ರೆಸ್‌ನ ಸಮಸ್ಯೆಯಾಗಷ್ಟೇ ಉಳಿದಿಲ್ಲ. ಬದಲಾಗಿ, ರಾಷ್ಟ್ರೀಯ ಸಮಸ್ಯೆಯಾಗಿ ಪರಿಣಮಿಸಿದ್ದಾರೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ರಾಜಸ್ಥಾನದ ಬಾನ್ಸ್‌ವಾಡದಲ್ಲಿ ಗುರುವಾರ ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಪನೌತಿ' ಎಂದು ರಾಹುಲ್ ಕರೆದಿದ್ದನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ ಅವರು, 'ರಾಹುಲ್ ಮತ್ತು ಅವರ ಸಹೋದರಿ ಪ್ರಿಯಾಂಕಾ ಗಾಂಧಿ ಪ್ರತಿ ದಿನವೂ ಸುಳ್ಳು ಹೇಳುತ್ತಾರೆ. ಭಾರತೀಯ ಕ್ರಿಕೆಟ್ ತಂಡವು ವಿಶ್ವಕಪ್ ಫೈನಲ್‌ನಲ್ಲಿ ಸೋತಿದ್ದಕ್ಕೆ ಅವರಿಬ್ಬರಿಗೂ ಸಂತೋಷವಾಗಿದೆ' ಎಂದು ದೂರಿದರು.
- **ಪ್ರಚಾರ ಅಂತ್ಯ:** ರಾಜಸ್ಥಾನ ವಿಧಾನಸಭೆ ಚುನಾವಣೆಗೆ ಬಹಿರಂಗ ಪ್ರಚಾರವು ಗುರುವಾರ ಸಂಜೆ ಅಂತ್ಯಗೊಂಡಿತು. ಕಣದಲ್ಲಿರುವ ಪ್ರಮುಖ ಪಕ್ಷಗಳು ಕಡೇದಿನವೂ ಅಬ್ಬರದ ಪ್ರಚಾರ ನಡೆಸಿದವು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಪ್ರಮುಖ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ಸರಣಿ ರ್‍ಯಾಲಿಗಳನ್ನು ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಅವರು ಬಿಜೆಪಿ ಅಭ್ಯರ್ಥಿಗಳ ಪರವಾಗಿ ಬಿಕಾನೇರ್ ಮತ್ತು ಜೈಪುರದಲ್ಲಿ ರೋಡ್ ಶೋ ನಡೆಸಿದರು.
- **₹669 ಕೋಟಿ ಮೌಲ್ಯದ ವಸ್ತುಗಳ ವಶ:** ತೆಲಂಗಾಣದಲ್ಲಿ ಇದುವರೆಗೆ ₹669 ಕೋಟಿ ಮೌಲ್ಯದ ದಾಖಲೆಯಿಲ್ಲದ ನಗದು, ಚಿನ್ನ, ಮದ್ಯ ಮತ್ತು ಉಡುಗೊರೆ ಸಾಮಗ್ರಿಗಳನ್ನು ಕಾನೂನು ಜಾರಿ ಸಂಸ್ಥೆಗಳು ವಶಪಡಿಸಿಕೊಂಡಿವೆ ಎಂದು ಮುಖ್ಯ ಚುನಾವಣಾಧಿಕಾರಿ ವಿಕಾಸ್ ರಾಜ್ ತಿಳಿಸಿದ್ದಾರೆ. ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ನಿಗದಿತ ಮತಗಟ್ಟೆಗಳಿಗೆ ಹೊತ್ತೊಯ್ಯುವ ಎಲ್ಲಾ ವಾಹನಗಳಿಗೂ ಜಿಪಿಎಸ್ ಅಳವಡಿಸಲಾಗಿದೆ. ಇದರಿಂದ ಎಲ್ಲಾ ವಾಹನಗಳ ಮೇಲೂ ನಿಗಾ ಇರಿಸಲು ಸಾಧ್ಯವಾಗುತ್ತದೆ. ಮತಯಂತ್ರಗಳು ಮತ್ತು ಇತರ ಸಾಧನಗಳನ್ನು ವಿತರಣಾ ಕೇಂದ್ರಗಳಿಂದ ನವೆಂಬರ್ 29ರಂದು ಸಂಬಂಧಪಟ್ಟ ಅಧಿಕಾರಿಗಳು ಪಡೆಯಲಿದ್ದಾರೆ ಎಂದು ಅವರು ಹೇಳಿದರು.

ಮುಸ್ಲಿಂ ಯುವಕರಿಗೆ ವಿಶೇಷ ಐ.ಟಿ. ಪಾರ್ಕ್: ಕೆಸಿಆರ್

ಹೈದರಾಬಾದ್ (ಪಿಟಿಐ): ಅಲ್ಪಸಂಖ್ಯಾತರ ಮತಗಳನ್ನು ಸೆಳೆಯುವ ಉದ್ದೇಶದಿಂದ ಬಿಆರ್‌ಎಸ್ ಅಧ್ಯಕ್ಷ ಹಾಗೂ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು, 'ಮತ್ತೆ ಅಧಿಕಾರಕ್ಕೆ ಬಂದರೆ, ಮುಸ್ಲಿಂ ಸಮುದಾಯದ ಯುವಕರಿಗಾಗಿ ಹೈದರಾಬಾದ್ ಸಮೀಪದಲ್ಲಿ ವಿಶೇಷವಾದ ಮಾಹಿತಿ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲಾಗುವುದು' ಎಂದು ಘೋಷಿಸಿದ್ದಾರೆ.

ಮಹೇಶ್ವರಂನಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ತಮ್ಮ ನೇತೃತ್ವದ ಸರ್ಕಾರವು ಹಿಂದೂ ಹಾಗೂ ಮುಸ್ಲಿಮರನ್ನು ಎರಡು ಕಣ್ಣುಗಳಂತೆ ಕಾಣುತ್ತದೆ ಎಂದರು.

'ನಾವು ಇಂದು ಪಿಂಚಣಿ ನೀಡುತ್ತಿದ್ದೇವೆ, ಅದು ಮುಸ್ಲಿಮರಿಗೂ ಸಿಗುತ್ತಿದೆ. ನಾವು ಆರಂಭಿಸಿರುವ ವಸತಿ ಶಾಲೆಗಳಲ್ಲಿ ಮುಸ್ಲಿಂ ಮಕ್ಕಳೂ ಓದುತ್ತಿದ್ದಾರೆ. ನಾವು ಎಲ್ಲರನ್ನೂ ಜೊತೆಯಾಗಿ ಕರೆದೊಯ್ಯುತ್ತೇವೆ' ಎಂದು ಕೆಸಿಆರ್ ಹೇಳಿದರು.

ತೆಲಂಗಾಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳು ಇಲ್ಲ, ರಾಜ್ಯದಲ್ಲಿ ಶಾಂತಿ ಇದೆ ಎಂದು ಹೇಳಿದ ಕೆಸಿಆರ್, ಕಳೆದ ಹತ್ತು ವರ್ಷಗಳಲ್ಲಿ ಬಿಆರ್‌ಎಸ್ ನೇತೃತ್ವದ ಸರ್ಕಾರವು ಅಲ್ಪಸಂಖ್ಯಾತ ಸಮುದಾಯದವರ ಅಭಿವೃದ್ಧಿಗಾಗಿ ₹12 ಸಾವಿರ ಕೋಟಿ ವೆಚ್ಚ ಮಾಡಿದೆ ಎಂದರು. ಕಾಂಗ್ರೆಸ್ ಪಕ್ಷವು 10 ವರ್ಷಗಳ ಅವಧಿಯಲ್ಲಿ ₹2 ಸಾವಿರ ಕೋಟಿ ಮಾತ್ರ ವೆಚ್ಚ ಮಾಡಿತ್ತು ಎಂದು ದೂರಿದರು.

ತಾವು ಜೀವಂತ ಇರುವವರೆಗೆ ತೆಲಂಗಾಣ ರಾಜ್ಯವು ಧರ್ಮನಿರಪೇಕ್ಷವಾಗಿ ಉಳಿಯಲಿದೆ ಎಂದರು. ತೆಲಂಗಾಣ ರಾಜ್ಯ ರಚನೆ ಆದಾಗ ಪರಿಸ್ಥಿತಿ ಬಹಳ ಗೊಂದಲಮಯವಾಗಿತ್ತು. ಕುಡಿಯಲು ಹಾಗೂ ಕೃಷಿ ಚಟುವಟಿಕೆಗಳಿಗೆ ನೀರಿನ ವ್ಯವಸ್ಥೆ ಸರಿಯಾಗಿರಲಿಲ್ಲ ಎಂದು ಹೇಳಿದರು.

ಪಕ್ಷವು ಮತ್ತೆ ಅಧಿಕಾರಕ್ಕೆ ಬಂದಲ್ಲಿ, ರೈತ ಬಂಧು ಯೋಜನೆಯ ಅಡಿಯಲ್ಲಿ ನೀಡುತ್ತಿರುವ ನೆರವಿನ ಮೊತ್ತವನ್ನು ಹಂತಹಂತವಾಗಿ ₹16 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂಬ ಭರವಸೆ ನೀಡಿದರು.



ಕೇರಳದ ಹಲವೆಡೆ ಭಾರಿ ಮಳೆ ಸುರಿದಿದ್ದು, ತಿರುವನಂತಪುರದ ಜಲಾವೃತಗೊಂಡ ರಸ್ತೆಯಲ್ಲಿ ಜನರು ಗುರುವಾರ ಸಾಗಿದರು —ಪಿಟಿಐ ಚಿತ್ರ

'ಸುಳ್ಳುಗಳಿಗೆ ಜನ ಮರುಳಾಗರು'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರ ಸುಳ್ಳು, ಮೋಸ ಮತ್ತು ದ್ವೇಷದ ಮಾತುಗಳಿಗೆ ಜನರು ಮರುಳಾಗುವುದಿಲ್ಲ. ರಾಜ್ಯದ ಜನ ಈ ಬಾರಿ ಸಂಪ್ರದಾಯ ಬದಲಾಯಿಸಲು ನಿರ್ಧರಿಸಿದ್ದಾರೆ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ರಾಜಸ್ಥಾನ ವಿಧಾನಸಭಾ ಚುನಾವಣೆಯ ಪ್ರಚಾರದ ಕೊನೆ ದಿನವಾದ ಗುರುವಾರ ಎಕ್ಸ್‌ನಲ್ಲಿ ಈ ಮಾತು ಬರೆದಿರುವ ಖರ್ಗೆ, 'ವೀರರು ಮತ್ತು ಯೋಧರ ಪವಿತ್ರ ಭೂಮಿಯಾದ ರಾಜಸ್ಥಾನವು ಕಾಂಗ್ರೆಸ್‌ನ ಜನ ಕಲ್ಯಾಣ ಯೋಜನೆಗಳನ್ನು ಒಪ್ಪಿಕೊಂಡಿದೆ. ರಾಜ್ಯದಲ್ಲಿ ಪಕ್ಷದ ಪರವಾದ ವಾತಾವರಣವಿದೆ' ಎಂದಿದ್ದಾರೆ. ಕಾಂಗ್ರೆಸ್ ಗ್ಯಾರಂಟಿಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿ ಬಿಜೆಪಿಗಿಲ್ಲ ಎಂದರು.

55 ಬಾರಿ ಇರಿದು ಬಾಲಕನ ಹತ್ಯೆ

ನವದೆಹಲಿ (ಪಿಟಿಐ): ಪಾನಮತ್ತ 16 ವರ್ಷ ವಯಸ್ಸಿನ ಬಾಲಕನೊಬ್ಬ, ಮತ್ತೊಬ್ಬ 17 ವರ್ಷದ ಬಾಲಕನನ್ನು 55ಕ್ಕೂ ಹೆಚ್ಚು ಬಾರಿ ಇರಿದು ಭೀಕರವಾಗಿ ಹತ್ಯೆಗೈದಿರುವ ಕೃತ್ಯ ರಾಷ್ಟ್ರ ರಾಜಧಾನಿಯಲ್ಲಿ ನಡೆದಿದೆ.

55 ಬಾರಿ ಇರಿದ ನಂತರ ಬಾಲಕನ ಕತ್ತು ಕೊಯ್ದಿರುವ ಬಾಲಕ, ಬಳಿಕ ಶವವನ್ನು ರಸ್ತೆಯಲ್ಲಿ ಕೆಲ ಅಂತರ ಎಳೆದೊಯ್ದಿದ್ದು, ಅದರ ಸುತ್ತ ನೃತ್ಯ ಮಾಡಿದ್ದಾರೆ. ಮಂಗಳವಾರ ಕೃತ್ಯ ನಡೆದಿದ್ದು, 2.23 ನಿಮಿಷ ಕಾಲ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ನವದೆಹಲಿಯ ಜನತಾ ಮಜ್ದೂರ್ ಕಾಲೊನಿಯಲ್ಲಿ ಕೃತ್ಯ ನಡೆದಿದೆ. ಬಾಲಕ ತನ್ನ ಸಮೀಪಕ್ಕೆ ಬರಲು ಯತ್ನಿಸಿದವರಿಗೂ ಜೀವಬೆದರಿಕೆ ಒಡ್ಡಿರುವುದು ಕ್ಯಾಮೆರಾದಲ್ಲಿ ದಾಖಲಾಗಿದೆ.

ಪೊಲೀಸರು ಬುಧವಾರದಂದು ಆರೋಪಿಯನ್ನು ವಶಕ್ಕೆ ಪಡೆದಿದ್ದಾರೆ. 'ತಾನು ಹತ್ಯೆ ಮಾಡಿದ ಬಾಲಕ ನನಗೆ ಪರಿಚಿತನಲ್ಲ. ಬಿರಿಯಾನಿ ತಿನ್ನಲು ಹಣ ನೀಡುವಂತೆ ಆತನಿಗೆ ಕೇಳಿದ್ದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕೃತ್ಯಕ್ಕೆ ಬಳಸಿದ ಚಾಕು ವಶಕ್ಕೆ ಪಡೆದಿದ್ದು, ತನಿಖೆ ನಡೆದಿದೆ. ಮಂಗಳವಾರ ರಾತ್ರಿ 11.15ಕ್ಕೆ ಕೃತ್ಯ ನಡೆದಿದೆ' ಎಂದು ಡಿಸಿಪಿ ಜಾಯ್ ಟಿರ್ಕಿ ತಿಳಿಸಿದ್ದಾರೆ.

'ಬಿರಿಯಾನಿ ಕೊಡಿಸಲಿಲ್ಲ ಎಂದು ಕೋಪಗೊಂಡ ಆರೋಪಿಯು, ಜಾಫ್ರಾಬಾದ್ ನಿವಾಸಿಯಾಗಿದ್ದ ಬಾಲಕನ ಜೊತೆ ಜಗಳ ಮಾಡಿದ್ದಾನೆ. ಮೊದಲು ಉಸಿರುಗಟ್ಟಿಸಿ ಪ್ರಜ್ಞೆತಪ್ಪಿಸಿದ್ದು, ಚಾಕು ತೆರೆದು ಇರಿದಿದ್ದಾನೆ. ಹತ್ತಿರ ಬರದಂತೆ ಜನರತ್ತಲೂ ಕೂಗಾಡಿದ್ದಾರೆ. ಕೃತ್ಯ ನಡೆಸಿದಾಗ ಆತ ಮತ್ತಿನಲ್ಲಿದ್ದ' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ಕೆಲ ದೂರ ಶವವನ್ನು ಎಳೆದುಕೊಂಡು ಹೋಗಿರುವ ಆರೋಪಿ ನೃತ್ಯ ಮಾಡಿದ್ದಾನೆ. ಬಳಿಕ ಹತ್ಯೆಗೀಡಾದ ಬಾಲಕನ ಜೇಬಿನಲ್ಲಿದ್ದ ₹ 350 ಎತ್ತಿಕೊಂಡು ಪರಾರಿಯಾಗಿದ್ದ. ಸಿಸಿಟಿವಿ ದೃಶ್ಯ ಆಧರಿಸಿ ಆತನ ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನುಡಿ-ಕಿಡಿ



ಪ್ರಧಾನಿ ನರೇಂದ್ರ ಮೋದಿ ಅವರು ರೈತರ ಆದಾಯವನ್ನು ದ್ವಿಗುಣಗೊಳಿಸುವ ಕುರಿತು ಮಾತನಾಡುತ್ತಾರೆ. ಪೊಳ್ಳು ಭರವಸೆಗಳನ್ನು ನೀಡುವ ಮೂಲಕ ಆದಾಯ ಹೆಚ್ಚಿಸಲು ಸಾಧ್ಯವಿಲ್ಲ. ಆದಾಯ ದುಪ್ಪಟ್ಟಾಗಬೇಕು ಎಂದರೆ ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ವಲಯಗಳಿಗೆ ಉತ್ತೇಜನ ನೀಡಬೇಕು

ಕೆ.ಟಿ. ರಾಮರಾವ್, ತೆಲಂಗಾಣ ಸಚಿವ



ಹೈದರಾಬಾದ್ ಪ್ರಕಾಶಿಸುತ್ತಿರುವಂತೆ ಬಿಂಬಿಸುವುದರಿಂದ ಬುಡಕಟ್ಟು ಸಮುದಾಯಗಳ ಕಲ್ಯಾಣ ಸಾಧ್ಯವಿಲ್ಲ. ಅವರ ಸಮಸ್ಯೆಗಳನ್ನು ಆಲಿಸಿ, ಅವರಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿದರೆ ಮಾತ್ರ ಅವರ ಕಲ್ಯಾಣ ಸಾಧ್ಯ. ತೆಲಂಗಾಣದ ಬಿಆರ್‌ಎಸ್ ಸರ್ಕಾರವು ಆದಿವಾಸಿಗಳ ಸಮಸ್ಯೆಗಳಿಗೆ ಸ್ಪಂದಿಸಿಲ್ಲ

ಅರ್ಜುನ್ ಮುಂಡಾ,
ಕೇಂದ್ರ ಆದಿವಾಸಿ ಸಮುದಾಯಗಳ ಕಲ್ಯಾಣ ಸಚಿವ

ಡೀಪ್‌ಫೇಕ್: ಹೊಸ ನಿಯಮ?

ನವದೆಹಲಿ(ಪಿಟಿಐ): 'ಡೀಪ್‌ಫೇಕ್'ಗಳ ನಿಯಂತ್ರಣಕ್ಕೆ ಮುಂದಾಗಿರುವ ಕೇಂದ್ರ ಸರ್ಕಾರ ಬಿಗಿ ನಿಯಮಗಳನ್ನು ರೂಪಿಸಲು ಚಿಂತನೆ ನಡೆಸಿದೆ.

ಡೀಪ್‌ಫೇಕ್‌ಗಳನ್ನು ಸೃಷ್ಟಿ ಮಾಡುವವರು ಹಾಗೂ ಅವುಗಳನ್ನು ಹಂಚಿಕೊಳ್ಳಲು ಅನುವು ಮಾಡಿಕೊಡುವ ವೇದಿಕೆಗಳಿಗೆ ದಂಡ ವಿಧಿಸುವುದು ಸೇರಿದಂತೆ ಕಠಿಣ ನಿಯಮಗಳನ್ನು ರೂಪಿಸಲಾಗುತ್ತದೆ ಎಂದು ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ ವೇದಿಕೆಗಳು, ನಾಸ್‌ಕಾಂ, ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದ ಪ್ರಾಧ್ಯಾಪಕರು ಸೇರಿದಂತೆ ಎಲ್ಲ ಭಾಗೀದಾರರ ಜೊತೆ ಸಮಾಲೋಚನೆ ನಡೆಸಿದ ಬಳಿಕ ಮಾತನಾಡಿದ ಸಚಿವ ವೈಷ್ಣವ್, 'ಡೀಪ್‌ಫೇಕ್‌ಗಳು ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೊಸ ಬೆದರಿಕೆಗಳಾಗಿವೆ. ಇವು ಸಮಾಜ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿನ ನಂಬಿಕೆಯನ್ನು ದುರ್ಬಲಗೊಳಿಸುತ್ತವೆ' ಎಂದು ಹೇಳಿದ್ದಾರೆ.

ಪ್ರಮುಖ ಅಂಶಗಳು

- ಡೀಪ್‌ಫೇಕ್‌ಗಳ ಕುರಿತು ಮತ್ತಷ್ಟು ಚರ್ಚೆಗೆ ಡಿಸೆಂಬರ್ ಮೊದಲ ವಾರದಲ್ಲಿ ಮತ್ತೊಂದು ಸುತ್ತಿನ ಸಭೆಗೆ ತೀರ್ಮಾನ
- ಭಾರತದಲ್ಲಿ ಸದ್ಯ 80 ಕೋಟಿಗೂ ಅಧಿಕ ಮಂದಿ ಇಂಟರ್‌ನೆಟ್ ಬಳಸುತ್ತಿದ್ದು, ಎರಡು ವರ್ಷಗಳಲ್ಲಿ ಈ ಸಂಖ್ಯೆ 120 ಕೋಟಿ ದಾಟುವ ಅಂದಾಜಿದೆ
- ಡೀಪ್‌ಫೇಕ್ ಬಳಸಿ ನಿರ್ಮಿಸುವ ಜಾಹೀರಾತುಗಳು, ಪ್ರಚಾರ ವಿಷಯವಸ್ತುಗಳು ಜನರ ದಾರಿತಪ್ಪಿಸುವಂತಿವೆ– ವೈಷ್ಣವ್

'ಈ ವಿಷಯಕ್ಕೆ ಸಂಬಂಧಿಸಿ ನಿಯಮಾವಳಿಗಳ ರಚನೆಗೆ ಕೂಡಲೇ ಚಾಲನೆ ನೀಡಲಾಗುವುದು. ಶೀಘ್ರದಲ್ಲಿಯೇ ಡೀಪ್‌ಫೇಕ್‌ಗಳ ಕುರಿತಂತೆ ಪ್ರತ್ಯೇಕ ನಿಯಮಗಳನ್ನು ಹೊಂದಲಾಗುವುದು' ಎಂದು ಹೇಳಿದ್ದಾರೆ.

ಡೀಪ್‌ಫೇಕ್ ಸಮಸ್ಯೆಗೆ ಸಂಬಂಧಿಸಿ ನಾಲ್ಕು ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ. ಡೀಪ್‌ಫೇಕ್‌ಗಳ ಪತ್ತೆ, ಡೀಪ್‌ಫೇಕ್‌ಗಳ ಪ್ರಸಾರ ತಡೆಗಟ್ಟುವುದು, ಇವುಗಳ ಕುರಿತು ವರದಿ ಸಲ್ಲಿಸುವ ವಿಧಾನಗಳನ್ನು ಬಲಪಡಿಸುವುದು ಹಾಗೂ ಜನರಲ್ಲಿ ಈ ಬಗ್ಗೆ ಅರಿವು ಮೂಡಿಸುವುದು ಈ ನಾಲ್ಕು ಅಂಶಗಳಾಗಿವೆ. ಈ ವಿಚಾರವಾಗಿ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿ 10 ದಿನಗಳ ಒಳಗಾಗಿ ಕರಡು ಸಿದ್ಧಪಡಿಸಲಾಗುವುದು' ಎಂದು ಹೇಳಿದ್ದಾರೆ.

'ಡೀಪ್‌ಫೇಕ್ ಕುರಿತಂತೆ ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲ ಭಾಗೀದಾರರು ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು. ದೀಪ್‌ಫೇಕ್‌ಗಳ ಪತ್ತೆಗಾಗಿ ಲಭ್ಯವಿರುವ ಎಲ್ಲ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಎಲ್ಲ ಸಾಮಾಜಿಕ ಮಾಧ್ಯಮ ವೇದಿಕೆ ಪ್ರತಿನಿಧಿಗಳು ಸಮ್ಮತಿಸಿದರು' ಎಂದೂ ಸಚಿವ ವೈಷ್ಣವ್ ಹೇಳಿದ್ದಾರೆ.

ಪ್ರಥಮ ಮಹಿಳಾ ನ್ಯಾಯಮೂರ್ತಿ ಎಂ. ಫಾತಿಮಾ ಬೀವಿ ನಿಧನ

ತಿರುವನಂತಪುರಂ: ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ನ್ಯಾಯಮೂರ್ತಿ ಎಂ. ಫಾತಿಮಾ ಬೀವಿ (96) ಅವರು, ಕೇರಳದ ಕೊಲ್ಲಂನಲ್ಲಿ ಗುರುವಾರ ನಿಧನರಾದರು.

1989ರಿಂದ 1992ರ ವರೆಗೆ ಅವರು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು. ನ್ಯಾಯಾಂಗ ಕ್ಷೇತ್ರದಲ್ಲಿ ಅತ್ಯುನ್ನತ ಪದವಿಗೇರಿದ ಮುಸ್ಲಿಂ ಸಮುದಾಯದ ಪ್ರಥಮ ಮಹಿಳೆ ಎಂಬುದು ಅವರ ಹೆಗ್ಗಳಿಕೆ. ನ್ಯಾಯಮೂರ್ತಿಯಾಗಿ ನಿವೃತ್ತಿಯಾದ ಬಳಿಕ 1997ರಿಂದ 2001ರ ವರೆಗೆ ತಮಿಳುನಾಡಿನ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. 1993ರಿಂದ 1997ರ ವರೆಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ ಹಿರಿಮೆ ಹೊಂದಿದ್ದಾರೆ.

ಅನಾರೋಗ್ಯದಿಂದ ಕೊಲ್ಲಂನ ಆಸ್ಪತ್ರೆಗೆ ದಾಖಲಾಗಿದ್ದ ಅವರು, ಅಲ್ಲಿಯೇ ನಿಧನರಾಗಿದ್ದಾರೆ. ಅವರ ಮೂಲ ಸ್ಥಳವಾದ ಪತ್ತನಂತಿಟ್ಟನಲ್ಲಿ ಶುಕ್ರವಾರ ಅಂತ್ಯಕ್ರಿಯೆ ನಡೆಯಲಿದೆ.

ತಿರುವನಂತಪುರಂನ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಹಾಗೂ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. 1950ರಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಅವರು, 1958ರಲ್ಲಿ ನ್ಯಾಯಾಧೀಶೆಯಾಗಿ ನೇಮಕವಾದರು. 1983ರಲ್ಲಿ ಅವರು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾದರು.

ದಿವಂಗತ ಜೆ. ಜಯಲಲಿತಾ ಅಧಿಕಾರಾವಧಿ ವೇಳೆ ರಾಜ್ಯಪಾಲರಾಗಿದ್ದ ಅವರು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿ ಕೈಗೊಂಡ ನಿರ್ಧಾರವು ವಿವಾದಕ್ಕೆ ಕಾರಣವಾಗಿತ್ತು. 2001ರಲ್ಲಿ ಸರ್ಕಾರ ರಚನೆಗೆ ಜಯಲಲಿತಾ ಅವರಿಗೆ ಆಹ್ವಾನ ನೀಡಿ ದ್ದರು. ಆದರೆ, ಅಕ್ರಮ ಆಸ್ತಿ ಪ್ರಕರಣದಲ್ಲಿ ನ್ಯಾಯಾಲಯ ಜಯಲಲಿತಾ ತಪ್ಪಿತಸ್ಥೆ ಎಂದು ಘೋಷಿಸಿತ್ತು. ಚುನಾವಣೆಗೆ ಸ್ಪರ್ಧಿಸದಂತೆಯೂ ನಿರ್ಬಂಧ ಹೇರಿತ್ತು. ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, ರಾಜ್ಯಪಾಲರ ಹುದ್ದೆ ಸಂಬಂಧ ತಲೆದೋರಿದ ಬಿಕ್ಕಟ್ಟಿನಿಂದಾಗಿ ಅವರು, ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು.

ಪ್ರಣವ್ ಜ್ಯುವೆಲರ್ಸ್ ಮೇಲೆ ₹100 ಕೋಟಿ ವಂಚನೆ ಆರೋಪ

ನಟ ಪ್ರಕಾಶ್ ರಾಜ್‌ಗೆ ಇ.ಡಿ ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಪ್ರಣವ್ ಜ್ಯುವೆಲರ್ಸ್ ಮೇಲೆ ದಾಖಲಿಸಿರುವ ದೂರಿನ ಮೇರೆಗೆ ವಿಚಾರಣೆಗೆ ಹಾಜರಾಗುವಂತೆ ಬಹುಭಾಷಾ ನಟ ಪ್ರಕಾಶ್ ರಾಜ್ ಅವರಿಗೆ, ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ಜಾರಿ ಮಾಡಿದೆ.



ಪ್ರಕಾಶ್ ರಾಜ್

ಪ್ರಕಾಶ್ ರಾಜ್ ಅವರು ಈ ಜ್ಯುವೆಲರ್ಸ್‌ನ ಪ್ರಚಾರ ರಾಯಭಾರಿಯಾಗಿದ್ದಾರೆ. ಈ ಜ್ಯುವೆಲರ್ಸ್ ಚಿನ್ನದ ಮೇಲಿನ ಹೂಡಿಕೆ ಯೋಜನೆಯಡಿ ನೂರಾರು ಠೇವಣಿದಾರರಿಂದ ₹100 ಕೋಟಿಗೂ ಹೆಚ್ಚು ಮೊತ್ತ ಸಂಗ್ರಹಿಸಿದೆ. ಅಧಿಕ ಲಾಭಾಂಶ ನೀಡುವುದಾಗಿ ಆಮಿಷವೊಡ್ಡಿ ಬಳಿಕ ವಂಚಿಸಿದ ಆರೋಪ ಇದರ ಮೇಲಿದೆ.

ಹಾಗಾಗಿ, ವಿಚಾರಣೆಗೆ ಹಾಜರಾಗುವಂತೆ ಇ.ಡಿ ಅಧಿಕಾರಿಗಳು ಪ್ರಕಾಶ್ ರಾಜ್‌ಗೆ ಸಮನ್ಸ್ ನೀಡಿದ್ದಾರೆ. ಈ ವಂಚನೆ ಪ್ರಕರಣದಲ್ಲಿ ಅವರು ಭಾಗಿಯಾಗಿದ್ದಾರೆಯೇ ಹಾಗೂ ಜ್ಯುವೆಲರ್ಸ್ ಮಾಲೀಕರಿಂದ ಹಣ ಪಡೆದಿದ್ದಾರೆಯೇ ಎಂಬ ಬಗ್ಗೆ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರ ಹೇಳಿಕೆಯನ್ನು ದಾಖಲಿಸಲಾಗುತ್ತದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಟೀಕಾಕಾರರಲ್ಲಿ ಒಬ್ಬರಾಗಿರುವ ಪ್ರಕಾಶ್ ರಾಜ್ ಅವರು, ಚೆನ್ನೈನಲ್ಲಿ ಮುಂದಿನ ವಾರ ತನಿಖಾ ಅಧಿಕಾರಿಗಳ ಮುಂದೆ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ.

ದಾಳಿಯಲ್ಲಿ ಸಿಕ್ಕಿದ್ದು ಏನು?

ಪ್ರಣವ್ ಜ್ಯುವೆಲರ್ಸ್ ವಿರುದ್ಧ ಹೂಡಿಕೆದಾರರಿಗೆ ವಂಚಿಸಿದ ಆರೋಪ ಕೇಳಿಬಂದಿತ್ತು. ಈ ಸಂಬಂಧ ತಮಿಳುನಾಡು ಪೊಲೀಸ್‌ನ ಆರ್ಥಿಕ ಅಪರಾಧ ಘಟಕವು ಎಫ್‌ಐಆರ್ ದಾಖಲಿಸಿತ್ತು. ಇದರ ಆಧಾರದ ಮೇಲೆ ಇ.ಡಿ ಕೂಡ ಪ್ರಕರಣ ದಾಖಲಿಸಿತ್ತು.

ಸೋಮವಾರ ತಿರುಚಿರಾಪಳ್ಳಿಯಲ್ಲಿ ಇರುವ ಜ್ಯುವೆಲರ್ಸ್ ಅಂಗಡಿಯ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಸೂಕ್ತ ಆಧಾರವಿಲ್ಲದ ₹23.70 ಲಕ್ಷ ನಗದು ಹಾಗೂ 11.60 ಕೆ.ಜಿಯಷ್ಟು ಚಿನ್ನವನ್ನು ವಶಪಡಿಸಿಕೊಂಡಿತ್ತು.

ಹೂಡಿಕೆದಾರರಿಗೆ ಹಣ ವಾಪಸ್ ನೀಡಿಲ್ಲ. ಸಂಗ್ರಹಿಸಿದ ಹಣದಿಂದ ಚಿನ್ನದ ಗಟ್ಟಿ ಹಾಗೂ ಆಭರಣಗಳನ್ನು ಖರೀದಿಸುವ ಮೂಲಕ ವಂಚಿಸಲಾಗಿದೆ ಎಂದು ಇ.ಡಿ ಹೇಳಿದೆ.

ಟಿ20 ಕ್ರಿಕೆಟ್ • ಇಶಾನ್ ಕಿಶನ್, ಸೂರ್ಯಕುಮಾರ್ ಬೀಸಾಟ • ಜೋಶ್ ಮಿಂಚಿನ ಶತಕ

ಭಾರತಕ್ಕೆ ರೋಚಕ ಜಯ

ವಿಶಾಖಪಟ್ಟಣ (ಪಿಟಿಐ): ಕೊನೆಯ ಎಸೆತದವರೆಗೂ ನೋಡುಗರನ್ನು ತುದಿಗಾಲಿನಲ್ಲಿ ನಿಲ್ಲಿಸಿದ್ದ ಟಿ20 ಪಂದ್ಯದಲ್ಲಿ ಭಾರತ ತಂಡವು ಜಯಭೇರಿ ಬಾರಿಸಿತು. ಆಸ್ಟ್ರೇಲಿಯಾ ಸೋತಿತು.

ಗುರುವಾರ ವಿಸಿಎ ಕ್ರೀಡಾಂಗಣದಲ್ಲಿ ನಡೆದ ಟಿ20 ಸರಣಿಯ ಮೊದಲ ಪಂದ್ಯದಲ್ಲಿ 209 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಭಾರತ ತಂಡವು ಇಶಾನ್ ಕಿಶನ್ (58; 39ಎ) ಮತ್ತು ನಾಯಕ ಸೂರ್ಯಕುಮಾರ್ ಯಾದವ್ (80; 42ಎ) ಅವರ ಬೀಸಾಟದ ಬಲದಿಂದ 2 ವಿಕೆಟ್‌ಗಳಿಂದ ಜಯಿಸಿತು.

ಆದರೆ, ತಂಡದ ಗೆಲುವಿಗೆ 15 ಎಸೆತಗಳಲ್ಲಿ 15 ರನ್‌ಗಳು ಬೇಕಿದ್ದ ಸಂದರ್ಭದಲ್ಲಿ ಸೂರ್ಯಕುಮಾರ್ ಅವರು ಬೆಹ್ರನ್‌ಡಾರ್ಫ್ ಎಸೆತವನ್ನು ಸಿಕ್ಸ್‌ಗೆ ಎತ್ತಲು ಹೋಗಿ ಆ್ಯರನ್ ಹಾರ್ಡಿಗೆ ಕ್ಯಾಚಿತ್ತರು. ಈ ಹಂತದಲ್ಲಿ ಆಸ್ಟ್ರೇಲಿಯಾ ತಂಡದ ನಾಯಕ ಮ್ಯಾಥ್ಯೂ ವೇಡ್ ಮಾಡಿದ ತಂತ್ರಗಾರಿಕೆ ಗಮನ ಸೆಳೆದವು. ಬೌಲರ್‌ಗಳು ಬಿಗಿ ದಾಳಿ ನಡೆಸಲು ಯತ್ನಿಸಿದರು. ಕ್ಷೇತ್ರ ರಕ್ಷಕರು ಚುರುಕಾಗಿ ಆಡಿದರು.

ಇದರ ಫಲವಾಗಿ ಕೇವಲ 13 ರನ್‌ಗಳ ಅಂತರದಲ್ಲಿ ಭಾರತದ ಮೂರು ವಿಕೆಟ್‌ಗಳು ಪತನವಾದವು. ಕೊನೆಯ ಓವರ್‌ನಲ್ಲಿ ಏಳು ರನ್‌ಗಳ ಅಗತ್ಯವಿತ್ತು. ವೇಗಿ ಸೀನ್ ಅಬಾಟ್ ಹಾಕಿದ ಓವರ್‌ನಲ್ಲಿಯೇ ಮೂವರು ಬ್ಯಾಟರ್‌ಗಳು ಔಟಾದರು. ಅಕ್ಷರ್ ಪಟೇಲ್ ಅವರ ಕ್ಯಾಚ್ ಅನ್ನು ಅಬಾಟ್ ಅವರೇ ಪಡೆದರೆ, ರವಿ ಬಿಷ್ಣೋಯಿ ಮತ್ತು ಅರ್ಷದೀಪ್ ಸಿಂಗ್ ರನ್‌ಔಟ್ ಆದರು.


ಭಾರತ ತಂಡದ ಸೂರ್ಯಕುಮಾರ್ ಬ್ಯಾಟಿಂಗ್ ಸೊಗಸು –ಪಿಟಿಐ ಚಿತ್ರ

ಇದರಿಂದಾಗಿ ಕೊನೆಯ ಒಂದು ಎಸೆತದಲ್ಲಿ ಒಂದು ರನ್ ಮಾತ್ರ ಬೇಕಿತ್ತು. ಕ್ರೀಸ್‌ನಲ್ಲಿದ್ದ ರಿಂಕು ಸಿಂಗ್ ಚೆಂಡನ್ನು ಲಾಂಗ್ ಆನ್ ಗೆರೆಯನ್ನು ದಾಟಿಸುವಲ್ಲಿ ಯಶಸ್ವಿಯಾದರು. ಆದರೆ ಅಬಾಟ್ ಓವರ್‌ಸ್ಟೆಪ್ ಮಾಡಿದ್ದರಿಂದ ನೋಬಾಲ್ ಆಗಿತ್ತು. ನಿಯಮದ ಪ್ರಕಾರ ಇದನ್ನು ಒಂದು ರನ್ ಎಂದು ಪರಿಗಣಿಸಲಾಯಿತು. ಸ್ಕೋರ್‌ಬುಕ್‌ನಲ್ಲಿ ಸಿಕ್ಸರ್ ಸೇರ್ಪಡೆಯಾಗಲಿಲ್ಲ.

ನಾಲ್ಕು ದಿನಗಳ ಹಿಂದಷ್ಟೇ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಸೋತಿದ್ದ ಭಾರತ ಇಲ್ಲಿ ಗೆಲುವಿನ ಸಂಭ್ರಮ ಆಚರಿಸಿತು. ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಇಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 50 ಎಸೆತಗಳಲ್ಲಿ 110 ರನ್ ಗಳಿಸಿದ ಜೋಶ್ ಇಂಗ್ಲಿಸ್ ಬಲದಿಂದ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 208 ರನ್ ಗಳಿಸಿತು. ಚುಟುಕು ಮಾದರಿಯಲ್ಲಿ ಆಸ್ಟ್ರೇಲಿಯಾ ತಂಡವು ಭಾರತದ ಎದುರು ದಾಖಲಿಸಿದ ಗರಿಷ್ಠ ಮೊತ್ತ ಇದು. ಜೋಶ್ ಅವರಿಗೂ ಇದು ಚೊಚ್ಚಲ ಶತಕ.

ಇನಿಂಗ್ಸ್ ಆರಂಭಿಸಿದ ಸ್ಟೀವನ್ ಸ್ಮಿತ್ (52; 41ಎ) ಮತ್ತು ಮ್ಯಾಥ್ಯೂ ಶಾರ್ಟ್ (13 ರನ್) ಉತ್ತಮ ಅಡಿಪಾಯ ಹಾಕುವ ಪ್ರಯತ್ನ ಮಾಡಿದರು. ಐದನೇ ಓವರ್‌ನಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ ಎಸೆತದಲ್ಲಿ ಶಾರ್ಟ್ ಕ್ಲೀನ್ ಬೌಲ್ಡ್ ಆದರು. ಅದೇ ಓವರ್‌ನಲ್ಲಿ ಸ್ಮಿತ್ ನೇರಕ್ಕೆ ಹೊಡೆದಿದ್ದ ಚೆಂಡನ್ನು ಕ್ಯಾಚ್ ಮಾಡುವ ರವಿ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಕ್ರೀಸ್‌ಗೆ ಬಂದ 28 ವರ್ಷದ ಬಲಗೈ ಬ್ಯಾಟರ್ ಜೋಶ್ ಎಲ್ಲ ಬೌಲರ್‌ಗಳನ್ನೂ ದಂಡಿಸಿದರು. ಕೇವಲ 29 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ನಂತರದ 18 ಎಸೆತಗಳಲ್ಲಿ ಶತಕದ ಗಡಿಯನ್ನೂ ದಾಟಿದರು.

ಅವರು ಸ್ಮಿತ್ ಜೊತೆಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 66 ಎಸೆತಗಳಲ್ಲಿ 130 ರನ್ ಸೇರಿಸಿದರು. ಅದರಲ್ಲಿ ಸ್ಮಿತ್ ಪಾಲು 36 ರನ್‌ಗಳು ಮಾತ್ರ. ಉಳಿದದ್ದು ಜೋಶ್ ಅವರ ಕಾಣಿಕೆ. ಭಾರತದ ಬೌಲರ್‌ಗಳು ದುಬಾರಿಯಾದರು.

ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಮೊದಲ ಓವರ್‌ನಲ್ಲಿ ಆಘಾತ ಎದುರಾಯಿತು. ಋತುರಾಜ್ ಗಾಯಕವಾಡ್ ರನ್‌ಔಟ್ ಆದರು. ಯಶಸ್ವಿ ಜೈಸ್ವಾಲ್ ಎಂಟು ಎಸೆತಗಳಲ್ಲಿ 21 ರನ್ ಗಳಿಸಿದರು. ಆದರೆ ಮೂರನೇ ಓವರ್‌ನಲ್ಲಿ ಔಟಾದರು. ಈ ಹಂತದಲ್ಲಿ ಜೊತೆಗೂಡಿದ ಇಶಾನ್ ಮತ್ತು ಸೂರ್ಯ ಜೊತೆಯಾಟ ದಲ್ಲಿ 112 ರನ್ ಸೇರಿದವು. ಇಶಾನ್ ಔಟಾದ ನಂತರವೂ ಸೂರ್ಯ ಬೀಸಾಟ ನಿಲ್ಲಲಿಲ್ಲ. ಅವರಿಬ್ಬರು ಒಂಬತ್ತು ಸಿಕ್ಸರ್‌ಗಳನ್ನೂ ಸಿಡಿಸಿದರು.

ಸ್ಕೋರ್ ಕಾರ್ಡ್

ಆಸ್ಟ್ರೇಲಿಯಾ 3ಕ್ಕೆ208 (20 ಓವರ್‌ಗಳಲ್ಲಿ)
ಸ್ಮಿತ್ ರನ್‌ಔಟ್ (ಪ್ರಸಿದ್ಧ/ಮುಕೇಶ್ ಕುಮಾರ್) 52 (41ಎ, 4X8)
ಶಾರ್ಟ್ ಬಿ ರವಿ 13 (11ಎ, 4X3)
ಇಂಗ್ಲಿಸ್ ಸಿ ಯಶಸ್ವಿ ಬಿ ಪ್ರಸಿದ್ಧ 110 (50ಎ, 4X11, 6X8)
ಸ್ಟೊಯಿನಿಸ್ ಔಟಾಗದೆ 7 (6ಎ)
ಡೇವಿಡ್ ಔಟಾಗದೆ 19 (13ಎ, 4X2, 6X1)
ಇತರೆ: 7 (ಲೆಗ್‌ಬೈ 2, ವೈಡ್ 4, ನೋಬಾಲ್ 1)
ವಿಕೆಟ್ ಪತನ: 1–31 (ಮ್ಯಾಥ್ಯೂ ಶಾರ್ಟ್: 4.4), 2–161 (ಸ್ಟೀವನ್ ಸ್ಮಿತ್; 15.5), 3–180 (ಇಂಗ್ಲಿಸ್; 17.2)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–41–0, ಪ್ರಸಿದ್ಧ ಕೃಷ್ಣ 4–0–50–1, ಅಕ್ಷರ್ ಪಟೇಲ್ 4–0–32–0, ರವಿ ಬಿಷ್ಣೋಯಿ 4–0–54–1, ಮುಕೇಶ್ ಕುಮಾರ್ 4–0–29–0

ಭಾರತ 8ಕ್ಕೆ 209 (20 ಓವರ್)
ಯಶಸ್ವಿ ಸಿ ಸ್ಮಿತ್ ಬಿ ಶಾರ್ಟ್ 21 (8ಎ, 4x2, 6x2)
ಋತುರಾಜ್ ರನ್‌ಔಟ್ (ಎಲಿಸ್ + ವೇಡ್) 0 (0ಎ)
ಇಶಾನ್ ಸಿ ಶಾರ್ಟ್ ಬಿ ಸಂಘಾ 58 (39ಎ, 4x2,6x5)
ಸೂರ್ಯಕುಮಾರ್ ಸಿ ಹಾರ್ಡಿ ಬಿ ಬೆಹ್ರನ್‌ಡಾರ್ಫ್ 80 (42ಎ, 4x9, 6x4)
ತಿಲಕ್ ಸಿ ಸ್ಟೊಯಿನಿಸ್ ಬಿ ಸಂಘಾ 12 (10ಎ, 4x2)
ರಿಂಕು ಔಟಾಗದೆ 22 (14ಎ, 4x4)
ಅಕ್ಷರ್ ಸಿ&ಬಿ ಅಬಾಟ್ 2 (6ಎ)
ರವಿ ರನ್‌ಔಟ್ (ವೇಡ್/ಅಬಾಟ್) 0 (1ಎ)
ಅರ್ಷದೀಪ್ ರನ್‌ಔಟ್ (ಸ್ಮಿತ್/ಅಬಾಟ್) 0 (0ಎ)
ಮುಕೇಶ್ ಔಟಾಗದೆ 0 (0 ಎ)
ಇತರೆ: 14 (ಬೈ 1, ನೋಬಾಲ್ 1, ವೈಡ್ 12)
ವಿಕೆಟ್ ಪತನ: 1–11 (ಋತುರಾಜ್ ಗಾಯಕವಾಡ, 0.5), 2–22 (ಯಶಸ್ವಿ ಜೈಸ್ವಾಲ್, 2.3), 3–134 (ಇಶಾನ್ ಕಿಶನ್, 12.3), 4–154 (ತಿಲಕ್ ವರ್ಮಾ, 14.5), 5–194 (ಸೂರ್ಯಕುಮಾರ್ ಯಾದವ್, 17.4), 6–207 (ಅಕ್ಷರ್ ಪಟೇಲ್, 19.3), 7–207 (ರವಿ ಬಿಷ್ಣೋಯಿ, 19.4), 8–208 (ಅರ್ಷದೀಪ್ ಸಿಂಗ್, 19.5)
ಬೌಲಿಂಗ್: ಮಾರ್ಕಸ್ ಸ್ಟೊಯಿನಿಸ್ 3–0–36–0, ಜೇಸನ್ ಬೆಹ್ರನ್‌ಡಾರ್ಫ್ 4–1–25–1, ಮ್ಯಾಥ್ಯೂ ಶಾರ್ಟ್ 1–0–13–1, ಸೀನ್ ಅಬಾಟ್ 4–0–43–1, ನೇಥನ್ ಎಲ್ಲಿಸ್ 4–0–44–0, ತನ್ವೀರ್ ಸಂಘಾ 4–0–47–2
ಪಂದ್ಯದ ಆಟಗಾರ: ಸೂರ್ಯಕುಮಾರ್ ಯಾದವ್

ಫಲಿತಾಂಶ: ಭಾರತಕ್ಕೆ ಎರಡು ವಿಕೆಟ್ ಜಯ

ಅಖಿಲ ಭಾರತ ಈಜು ನಾಳೆಯಿಂದ

ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ಸ್ಪರ್ಧೆ: 250 ಸ್ಪರ್ಧಿಗಳು ಭಾಗಿ

ಪ್ರಜಾವಾಣಿ ವಾರ್ತೆ


ನೆಟ್ಟಕಲ್ಲಪ್ಪ ಈಜು ಕೇಂದ್ರ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರವು (ಎನ್‌ಎಸಿ) ನವೆಂಬರ್ 25 ಹಾಗೂ 26ರಂದು 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್' ಆಯೋಜಿಸಲಿದೆ.

ಸತತ ಎರಡನೇ ವರ್ಷ ಆಯೋಜನೆಗೊಳ್ಳುತ್ತಿರುವ ಸ್ಪರ್ಧೆ ಇದಾಗಿದೆ. ಪದ್ಮನಾಭ ನಗರದಲ್ಲಿರುವ ಎನ್‌ಎಸಿ ಈಜುಕೊಳದಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ಬೇರೆ ಬೇರೆ ರಾಜ್ಯಗಳ 250 ಈಜುಪಟುಗಳು ಭಾಗವಹಿಸಲಿದ್ದಾರೆ. ಅದರಲ್ಲಿ 153 ಪುರುಷರು ಮತ್ತು 97 ಮಹಿಳೆಯರು ಸ್ಪರ್ಧಿಸಲಿದ್ದಾರೆ. ಹೋದವರ್ಷ ನಡೆದಿದ್ದ ಸ್ಕಿನ್ಸ್ ವಿಭಾಗದ ಸ್ಪರ್ಧೆಗಳು ಈ ಸಲವೂ ಆಯೋಜನೆಗೊಂಡಿವೆ.

'ಈಜುಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ನಗರದಲ್ಲಿ 2012ರಲ್ಲಿ ಎನ್‌ಎಸಿ ಆರಂಭಿಸಲಾಗಿದೆ. ಹೋದ ವರ್ಷ ಈಜು ಕೇಂದ್ರದ ದಶಮಾನೋತ್ಸವ ಆಚರಣೆ ಅಂಗವಾಗಿ ಕೂಟ ಆಯೋಜಿಸಲಾಗಿತ್ತು. ಉತ್ತಮ ಸಂಖ್ಯೆಯಲ್ಲಿ ಸ್ಪರ್ಧಿಗಳು ಭಾಗವಹಿಸಿದ್ದರು. ಈ ಬಾರಿಯೂ ಕರ್ನಾಟಕದ ನೂರಕ್ಕೂ ಹೆಚ್ಚು ಸ್ಪರ್ಧಿಗಳು ಇದ್ದಾರೆ. ಕೇರಳ, ತಮಿಳುನಾಡು, ಹರಿಯಾಣ, ಗುಜರಾತ್, ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ವಿವಿಧ ರಾಜ್ಯಗಳ ಈಜುಪಟುಗಳು ಭಾಗವಹಿಸಲಿದ್ದಾರೆ' ಎಂದು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜಾವನ್ ತಿಳಿಸಿದ್ದಾರೆ.

'ಇಂತಹ ದೊಡ್ಡಮಟ್ಟದ ಕೂಟವನ್ನು ಎರಡನೇ ವರ್ಷವೂ ಆಯೋಜಿಸುತ್ತಿರುವುದು ಹೆಮ್ಮೆಯ ವಿಷಯ.ಈಜು ಕ್ರೀಡೆಗೆ ಹೊಸ ದಿಶೆಯನ್ನು ತೋರುವುದು ನಮ್ಮ ಉದ್ದೇಶ. ಈ ಚಾಂಪಿಯನ್‌ಷಿಪ್ ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ಈಜು ಕ್ರೀಡೆ ಮತ್ತು ಈಜುಪಟುಗಳಿಗೆ ಉತ್ತಮ ಪ್ರೋತ್ಸಾಹ ನೀಡುವುದು ನಮ್ಮ ಧ್ಯೇಯ' ಎಂದರು.

ಒಲಿಂಪಿಯನ್ ಶ್ರೀಹರಿ ನಟರಾಜ್, ಸಜನ್ ಪ್ರಕಾಶ್, ಶಿವ ಶ್ರೀಧರ್, ರಿಧಿಮಾ ವೀರೇಂದ್ರಕುಮಾರ್, ಎ.ಎಸ್. ಆನಂದ್, ನೀನಾ ವೆಂಕಟೇಶ್, ಎಸ್. ಪಿ. ಲಿಖಿತ್, ಹರ್ಷಿತಾ ಜಯರಾಮ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಈಜುಪಟುಗಳು ಸ್ಪರ್ಧಿಸುವರು.

ಉದ್ಘಾಟನೆ ನಾಳೆ: ಬೆಂಗಳೂರಿನ ಉತ್ತರಹಳ್ಳಿ ಮುಖ್ಯರಸ್ತೆ, ಮುನಿರೆಡ್ಡಿ ಬಡಾವಣೆ, ಪದ್ಮನಾಭನಗರದಲ್ಲಿರುವ ಈಜುಕೇಂದ್ರದಲ್ಲಿ ನಡೆಯುವ ಕೂಟವನ್ನು ನ.25ರಂದು ಸಂಜೆ ರಾಜ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಉದ್ಘಾಟಿಸಲಿದ್ದಾರೆ.

ಈಜುಕೂಟದ ನೇರಪ್ರಸಾರ ವೀಕ್ಷಿಸಲು ಯೂಟ್ಯೂಬ್ ಲಿಂಕ್: https://youtube.com/live/yzEBk8rbV8Q?feature=share
https://youtube.com/live/zrpIDY0Sa5o?feature=share

ಟಿ20: ನಾಳೆಯಿಂದ ಟಿಕೆಟ್ ಮಾರಾಟ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡಿಸೆಂಬರ್ 3ರಂದು ನಡೆಯಲಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟಿ20 ಪಂದ್ಯದ ಟಿಕೆಟ್‌ಗಳ ಮಾರಾಟವು ಶನಿವಾರದಿಂದ ಆರಂಭವಾಗಲಿದೆ.

ಪೇಟಿಎಂ ಆ್ಯಪ್ ಅಥವಾ ಪೆಟಿಎಂ ಇನ್‌ಸೈಡರ್ ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಖರೀದಿಸಬಹುದು. ಶನಿವಾರ (ನ.25) ಸಂಜೆ 6ರಿಂದ ಲಭ್ಯವಿರಲಿವೆ.

ನ. 30ರಿಂದ ಡಿಸೆಂಬರ್ 2ರವರೆಗೆ ಬೆಳಿಗ್ಗೆ 10 ರಿಂದ 6ವರೆಗೆ ಆನ್‌ಲೈನ್ ಟಿಕೆಟ್ ವೋಚರ್ ಮತ್ತು ಫಿಸಿಕಲ್ ಟಿಕೆಟ್ ಪಡೆಯಲು ಅವಕಾಶ ನೀಡಲಾಗಿದೆ. ಗೇಟ್ 16ರಲ್ಲಿ ಪಿ ಕಾರ್ಪೊರೇಟ್, ಪಿ ಟೆರೆಸ್, ಎನ್ ಸ್ಟ್ಯಾಂಡ್, ಗ್ರ್ಯಾಂಡ್ ಟೆರೆಸ್, ಇ ಎಕ್ಸಿಕ್ಯುಟಿವ್ ಮತ್ತು ಡಿ ಕಾರ್ಪೊರೇಟ್ ಸ್ಟ್ಯಾಂಡ್ಸ್ ಗೆ ಟಿಕೆಟ್‌ಗಳಿವೆ. ಐದನೇ ಗೇಟ್‌ನಲ್ಲಿ ಬಿ ಸ್ಟ್ಯಾಂಡ್, ಎಚ್ ಅಪ್ಪರ್ ಮತ್ತು ಎಚ್ ಲೋವರ್ ಸ್ಟ್ಯಾಂಡ್ಸ್ ಟಿಕೆಟ್‌ಗಳು ಮತ್ತು ಗೇಟ್ 2ರಲ್ಲಿ ಎ ಮತ್ತು ಸಿ ಸ್ಟ್ಯಾಂಡ್ ಟಿಕೆಟ್‌ಗಳು ಇರಲಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪ್ರಕಟಣೆಯ ತಿಳಿಸಿದೆ.

ಸಾಮುಯೆಲ್ಸ್ ಮೇಲೆ 6 ವರ್ಷ ನಿಷೇಧ



ದುಬೈ (ಪಿಟಿಐ): ಎಮಿರೇಟ್ಸ್ ಕ್ರಿಕೆಟ್ ಮಂಡಳಿಯ ಭ್ರಷ್ಟಾಚಾರ ತಡೆ ಸಂಹಿತೆ ಉಲ್ಲಂಘಿಸಿದ ಕಾರಣಕ್ಕಾಗಿ ವೆಸ್ಟ್ ಇಂಡೀಸ್ ತಂಡದ ಮಾಜಿ ಆಟಗಾರ ಮರ್ಲಾನ್ ಸಾಮುಯೆಲ್ಸ್ ಅವರನ್ನು ಆರು ವರ್ಷಗಳ ಅವಧಿಗೆ ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿಷೇಧ ಹೇರಲಾಗಿದೆ.

42 ವರ್ಷದ ಸಾಮುಯೆಲ್ಸ್ 71 ಟೆಸ್ಟ್, 207 ಏಕದಿನ ಮತ್ತು 67 ಟಿ20 ಪಂದ್ಯಗಳನ್ನು ಆಡಿದ್ದಾರೆ. 2020ರಲ್ಲಿ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು. ಆರೋಪಗಳು 2019ರ ಅಬುಧಾಬಿ ಟಿ10 ಲೀಗ್‌ಗೆ ಸಂಬಂಧಿಸಿದೆ. 2021ರಲ್ಲಿ ದಾಖಲಾದ ನಾಲ್ಕು ಪ್ರತ್ಯೇಕ ಪ್ರಕರಣಗಳ ಆಧಾರದ ಮೇಲೆ ಶಿಕ್ಷೆ ವಿಧಿಸಲಾಗಿದೆ.

ಕ್ರಿಕೆಟ್ ಘನತೆಗೆ ಕುಂದುಂಟಾಗುವ ರೀತಿಯಲ್ಲಿ ಪಡೆದಿರುವ ಉಡುಗೊರೆ, ಹಣ, ಆತಿಥ್ಯ ಮತ್ತು ಇತರ ಲಾಭಗಳ ಬಗ್ಗೆ ಅವರು ಸಂಬಂಧಪಟ್ಟ ಭ್ರಷ್ಟಾಚಾರ ತಡೆ ಘಟಕದ ನಿಯೋಜಿತ ಅಧಿಕಾರಿಗೆ ವಿವರ ನೀಡಲು ವಿಫಲರಾಗಿದ್ದಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ. ಅವರ ನಿಷೇಧ ಶಿಕ್ಷೆ ನವೆಂಬರ್ 11 ರಿಂದ ಆರಂಭವಾಗಲಿದೆ.

ವಿಚಾರಣೆ ವೇಳೆ ನಿಯೋಜಿತ ಅಧಿಕಾರಿಗೆ ಅಸಹಕಾರ ತೋರಿದ ಆರೋಪವೂ ಅವರ ಮೇಲೆ ಇದೆ. ಮಾಹಿತಿಯನ್ನು ಬಚ್ಚಿಟ್ಟು, ತನಿಖೆ ಪ್ರಕ್ರಿಯೆ ವಿಳಂಬ ಮಾಡಿದ ಆರೋಪವೂ ಅವರ ಮೇಲಿದೆ ಎಂದು ಐಸಿಸಿ ತಿಳಿಸಿದೆ.

ಐಪಿಎಲ್‌ನಿಂದ ಹಿಂದೆ ಸರಿದ ಬೆನ್ ಸ್ಟೋಕ್ಸ್

ಚೆನ್ನೈ (ಪಿಟಿಐ): ಇಂಗ್ಲೆಂಡ್ ಕ್ರಿಕೆಟಿಗ ಬೆನ್ ಸ್ಟೋಕ್ಸ್ ಅವರು ಮುಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವುದಿಲ್ಲ.

ಕಾರ್ಯಭಾರ ನಿರ್ವಹಣೆಯ ಅಂಗವಾಗಿ ತಾವು ಈ ನಿರ್ಧಾರ ಕೈಗೊಂಡಿರುವುದಾಗಿ ಅವರು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಡಳಿತಕ್ಕೆ ತಿಳಿಸಿದ್ದಾರೆ.

2023ರ ಆವೃತ್ತಿಯಲ್ಲಿ ಅವರು ಚೆನ್ನೈ ತಂಡಕ್ಕೆ ಸೇರ್ಪಡೆಯಾಗಿದ್ದರು. ತಂಡವು ಅವರನ್ನು ₹ 16.25 ಕೋಟಿ ಮೌಲ್ಯಕ್ಕೆ ಪಡೆದಿತ್ತು. ಆದರೆ ಕೇವಲ ಎರಡು ಪಂದ್ಯಗಳಲ್ಲಿ ಆಡಿದ್ದರು. ಮಂಡಿನೋವು ಮತ್ತು ಗಾಯದಿಂದ ಬಳಲಿದ್ದರು.

'ಇಂಗ್ಲೆಂಡ್ ಟೆಸ್ಟ್ ತಂಡದ ನಾಯಕ ಮತ್ತು ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರು ಮುಂಬರುವ ಐಪಿಎಲ್‌ನಲ್ಲಿ ಆಡುವುದಿಲ್ಲವೆಂದು ತಿಳಿಸಿದ್ದಾರೆ. ತಮ್ಮ ಕಾರ್ಯಭಾರ ಒತ್ತಡವನ್ನು ನಿರ್ವಹಿಸಲು ಅವರು ನಿರ್ಧಾರ ಕೈಗೊಂಡಿದ್ದಾರೆ' ಎಂದು ಚೆನ್ನೈ ತಂಡದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಬೆನ್ ಸ್ಟೋಕ್ಸ್

ಇಂಗ್ಲೆಂಡ್ ತಂಡವು ಐಪಿಎಲ್‌ಗೂ ಮುನ್ನ ಭಾರತದ ಆತಿಥ್ಯದಲ್ಲಿ ನಡೆಯುವ ಐದು ಟೆಸ್ಟ್‌ಗಳ ಸರಣಿಯಲ್ಲಿ ಆಡಲಿದೆ. ಜೂನ್ ತಿಂಗಳಲ್ಲಿನಲ್ಲಿ ಟಿ20 ವಿಶ್ವಕಪ್ ನಡೆಯಲಿದೆ. ಆದ್ದರಿಂದ ಈ ಎರಡು ಮಹತ್ವದ ಸರಣಿಗಳಿಗಾಗಿ ಬೆನ್ ಸ್ಟೋಕ್ಸ್ ಐಪಿಎಲ್‌ನಿಂದ ದೂರವುಳಿದಿದ್ದಾರೆ.

ಮಯಂಕ್, ಸಮರ್ಥ್ ಶತಕ: ಕರ್ನಾಟಕ ಶುಭಾರಂಭ

ಅಹಮದಾಬಾದ್: ನಾಯಕ ಮಯಂಕ್ ಅಗರವಾಲ್ ಮತ್ತು ಆರ್. ಸಮರ್ಥ್ ಅವರಿಬ್ಬರೂ ಗಳಿಸಿದ ಅಬ್ಬರದ ಶತಕಗಳಿಂದ ಕರ್ನಾಟಕ ತಂಡವು ಗುರುವಾರ ನಡೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಮೊಟೇರಾದಲ್ಲಿರುವ ನರೇಂದ್ರ ಮೋದಿ ಬಿ ಗ್ರೌಂಡ್‌ನಲ್ಲಿ ನಡೆದ ಸಿ ಗುಂಪಿನ ಮೊದಲ ಪಂದ್ಯದಲ್ಲಿ ಕರ್ನಾಟಕವು 222 ರನ್‌ಗಳಿಂದ ಜಮ್ಮು–ಕಾಶ್ಮೀರ ವಿರುದ್ಧ ಜಯಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಕರ್ನಾಟಕ ತಂಡವು ಸಮರ್ಥ್ (123; 120ಎ, 4X11, 6X2) ಮತ್ತು ಮಯಂಕ್ (157; 133ಎ, 4X11, 6X8) ಅವರ ಶತಕಗಳ ಬಲದಿಂದ 50 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 402 ರನ್ ಗಳಿಸಿತು. ದೇವದತ್ತ ಪಡಿಕ್ಕಲ್ (71; 35ಎ) ಅಜೇಯ ಅರ್ಧಶತಕ ಗಳಿಸಿದರು.

ಗುರಿ ಬೆನ್ನಟ್ಟಿದ ಜಮ್ಮು –ಕಾಶ್ಮೀರ ತಂಡವು 30.4 ಓವರ್‌ಗಳಲ್ಲಿ 180 ರನ್ ಗಳಿಸಲಷ್ಟೇ ಶಕ್ತವಾಯಿತು. ಕರ್ನಾಟಕದ ವೇಗಿ ವೈಶಾಖ ವಿಜಯಕುಮಾರ್ ನಾಲ್ಕು ವಿಕೆಟ್ ಗಳಿಸಿದರು. ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಕೂಡ ಎರಡು ವಿಕೆಟ್ ಪಡೆದರು.

ವಿದ್ವತ್ ಕಾವೇರಪ್ಪ, ವಿ.ಕೌಶಿಕ್ ಮತ್ತು ಎಡಗೈ ಸ್ಪಿನ್ನರ್ ಜೆ. ಸುಚಿತ್ ಅವರು ತಲಾ ಒಂದು ವಿಕೆಟ್ ಗಳಿಸಿ ಎದುರಾಳಿ ತಂಡವನ್ನು ಕಟ್ಟಿಹಾಕಿದರು.

ಕರುಣ್ ಅರ್ಧಶತಕ: ಈ ಬಾರಿ ವಿದರ್ಭ ತಂಡವನ್ನು ಪ್ರತಿನಿಧಿಸುತ್ತಿರುವ ಕರುಣ್ ನಾಯರ್(67; 80ಎ, 4X5) ಮೇಘಾಲಯ ವಿರುದ್ಧದ ಪಂದ್ಯದಲ್ಲಿ ಅರ್ಧಶತಕ ಗಳಿಸಿದರು.



ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ (ಎಡ). ಕರ್ನಾಟಕದ ಬ್ಯಾಟರ್ ಆರ್. ಸಮರ್ಥ್

ಬಿ ಗುಂಪಿನ ಪಂದ್ಯದಲ್ಲಿ ವಿದರ್ಭ ತಂಡವು 32 ರನ್‌ಗಳಿಂದ ಮೇಘಾಲಯ ವಿರುದ್ಧ ಗೆದ್ದಿತು.

ಶ್ರೇಯಸ್‌ಗೆ ಎರಡು ವಿಕೆಟ್: ಕನ್ನಡಿಗ ಶ್ರೇಯಸ್ ಗೋಪಾಲ್ (ಔಟಾಗದೆ 21 ಮತ್ತು 29ಕ್ಕೆ2) ಆಲ್‌ರೌಂಡ್ ಆಟವಾಡಿದರು. ಕೇರಳ ತಂಡವು 3 ವಿಕೆಟ್‌ಗಳಿಂದ ಹಾಲಿ ಚಾಂಪಿಯನ್ ಸೌರಾಷ್ಟ್ರ ವಿರುದ್ಧದ ಪಂದ್ಯದಲ್ಲಿ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಸಿ ಗುಂಪು: ಕರ್ನಾಟಕ: 50 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 402 (ಆರ್. ಸಮರ್ಥ್ 123, ಮಯಂಕ್ ಅಗರವಾಲ್ 157, ದೇವದತ್ತ ಪಡಿಕ್ಕಲ್ ಔಟಾಗದೆ 71, ಮನೀಷ್ ಪಾಂಡೆ ಔಟಾಗದೆ 23, ರಸಿಕ್ ಸಲಾಮ್ 82ಕ್ಕೆ1, ಸಾಹಿಲ್ ಲೋತ್ರಾ 55ಕ್ಕೆ1) ಜಮ್ಮು–ಕಾಶ್ಮೀರ: 30.4 ಓವರ್‌ಗಳಲ್ಲಿ 180 (ಶುಭಮ್ ಖಜೂರಿಯಾ 29, ವಿವ್ರಾಂತ್ ಶರ್ಮಾ 41, ಯುಧ್‌ವೀರ್ ಸಿಂಗ್ ಚರಕ್ 64, ವೈಶಾಖ ವಿಜಯಕುಮಾರ್ 57ಕ್ಕೆ4, ಕೆ. ಗೌತಮ್ 45ಕ್ಕೆ2) **ಫಲಿತಾಂಶ:** ಕರ್ನಾಟಕ ತಂಡಕ್ಕೆ 222 ರನ್ ಜಯ.

ಬಿ ಗುಂಪು: ವಿದರ್ಭ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 243 (ಅಥರ್ವ್ ತೈಡೆ 35, ಕರುಣ್ ನಾಯರ್ 67, ಅಕ್ಷಯ್ ವಾಡಕರ್ 36, ಹರ್ಷ ದುಬೆ ಔಟಾಗದೆ 20, ದರ್ಶನ್ ನಾಲ್ಕಂಡೆ 20, ಆಕಾಶ್ ಚೌಧರಿ 47ಕ್ಕೆ2, ದಿಪು ಸಂಗ್ಮಾ 43ಕ್ಕೆ4) ಮೇಘಾಲಯ: 48.1 ಓವರ್‌ಗಳಲ್ಲಿ 211 (ರಾಜ್ ಬಿಸ್ವಾ 24, ನಕುಲ್ ಹರ್ಪಾಲ್ ವರ್ಮಾ 34, ಕಿಶನ್ ಲಿಂಗ್ಡೊ 57, ಸ್ವರಜೀತ್ ದಾಸ್ 44, ರಜನೀಶ್ ಗುರ್ಬಾನಿ 59ಕ್ಕೆ2, ದರ್ಶನ್ ನಾಲ್ಕಂಡೆ 35ಕ್ಕೆ3, ಅಕ್ಷಯ್ ಕರ್ಣೇಶ್ವರ್ 24ಕ್ಕೆ2) **ಫಲಿತಾಂಶ:** ವಿದರ್ಭ ತಂಡಕ್ಕೆ 32 ರನ್‌ಗಳ ಜಯ.

ಎ ಗುಂಪು: ಸೌರಾಷ್ಟ್ರ: 49.1 ಓವರ್‌ಗಳಲ್ಲಿ 185 (ವಿಶ್ವರಾಜ್ ಜಡೇಜ 98, ಜಯದೇವ್ ಉನದ್ಕತ್ 37, ಬಾಸಿಲ್ ಥಂಪಿ 42ಕ್ಕೆ2, ಅಖಿನ್ ಸತಾರ್ 39ಕ್ಕೆ4, ಶ್ರೇಯಸ್ ಗೋಪಾಲ್ 29ಕ್ಕೆ2) ಕೇರಳ: 47.4 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 188 (ಸಂಜು ಸ್ಯಾಮ್ಸನ್ 30, ಅಖಿಲ್ ಸ್ಕಾರಿಯಾ 28, ಅಬ್ದುಲ್ ಬಾಸಿತ್ 60, ಶ್ರೇಯಸ್ ಗೋಪಾಲ್ ಔಟಾಗದೆ 21, ಅಂಕುರ್ ಪನ್ವಾರ್ 50ಕ್ಕೆ4) **ಫಲಿತಾಂಶ:** ಕೇರಳ ತಂಡಕ್ಕೆ 3 ವಿಕೆಟ್ ಜಯ.

ಸ್ಕ್ವಾಷ್: ಅನಾಹತ್ ಸಿಂಗ್ ಚಾಂಪಿಯನ್

ಚೆನ್ನೈ (ಪಿಟಿಐ): ಉದಯೋನ್ಮುಖ ಆಟಗಾರ್ತಿ ಅನಾಹತ್ ಸಿಂಗ್ ಇಲ್ಲಿ ಗುರುವಾರ ನಡೆದ ರಾಷ್ಟ್ರೀಯ ಸ್ಕ್ವಾಷ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಗೆದ್ದರು.

15 ವರ್ಷದ ಅನಾಹತ್ ಅವರು ಈ ಸಾಧನೆ ಮಾಡಿದ ಎರಡನೇ ಕಿರಿಯ ಆಟಗಾರ್ತಿ ಎನಿಸಿಕೊಂಡರು. 2000ರಲ್ಲಿ ಜೋಷ್ನಾ ಚಿಣ್ಣಪ್ಪ ಅವರು 14ನೇ ವಯಸ್ಸಿನಲ್ಲಿ ಪ್ರಶಸ್ತಿ ಗೆದ್ದಿದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಸ್ಥಳೀಯ ನೆಚ್ಚಿನ ಆಟಗಾರ ವೆಲವನ್ ಸೆಂಥಿಲ್‌ಕುಮಾರ್ ಚಾಂಪಿಯನ್ ಆಗಿ ಹೊರಹೊಮ್ಮಿದರು.


ಚೀನಾ ಮಾಸ್ಟರ್ಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಎಂಟರ ಘಟ್ಟಕ್ಕೆ ಪ್ರಣಯ್, ಸಾತ್ವಿಕ್–ಚಿರಾಗ್

ಶೆಂಜೆನ್ (ಪಿಟಿಐ): ಭಾರತದ ಎಚ್. ಎಸ್. ಪ್ರಣಯ್ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ –ಚಿರಾಗ್ ಶೆಟ್ಟಿ ಅವರು ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಸಿಂಗಲ್ಸ್ ಮತ್ತು ಡಬಲ್ಸ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದ ಪ್ರಣಯ್ ಈ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಪದಕ ಜಯದ ಭರವಸೆ ಮೂಡಿಸಿರುವ ಭಾರತದ ಏಕೈಕ ಆಟಗಾರನಾಗಿದ್ದಾರೆ. ಪ್ರಿ ಕ್ವಾರ್ಟರ್‌ಫೈನಲ್‌ನಲ್ಲಿ ಅವರು 21–12, 21–18ರಿಂದ ಡೆನ್ಮಾರ್ಕಿನ ಮ್ಯಾಗ್ನಸ್ ಜಾನೆಸನ್ ವಿರುದ್ಧ ಜಯಿಸಿದರು.

40 ನಿಮಿಷಗಳ ಹೋರಾಟದಲ್ಲಿ ಪ್ರಣಯ್ ಪಾರಮ್ಯ ಮೆರೆದರು. ಅವರು ಈ ಟೂರ್ನಿಯಲ್ಲಿ ಎಂಟನೇ ಶ್ರೇಯಾಂಕದಲ್ಲಿದ್ದಾರೆ. ಮೊದಲ ಗೇಮ್‌ನಲ್ಲಿ ಅವರಿಗೆ ಅಷ್ಟೇನೂ ಕಷ್ಟದ ಸವಾಲು ಎದುರಾಗಲಿಲ್ಲ. ಆದರೆ ಎರಡನೇ ಗೇಮ್‌ನಲ್ಲಿ ಮ್ಯಾಗ್ನಸ್ ತುಸು ಹೋರಾಟ ತೋರಿದರು.


ಭಾರತದ ಎಚ್‌.ಎಸ್. ಪ್ರಣಯ್

15ನೇ ಅಂಕದವರೆಗೂ ಜಿದ್ದಾಜಿದ್ದಿ ಏರ್ಪಟ್ಟಿತ್ತು. ನಂತರ 18ರ ಅಂಕದಲ್ಲಿಯೂ ಸಮಬಲಕ್ಕೆ ಬಂದರು. ಈ ಹಂತದಲ್ಲಿ ತಮ್ಮ ಆಟವನ್ನು ಮತ್ತಷ್ಟು ಚುರುಕುಗೊಳಿಸಿದ ಪ್ರಣಯ್ ಎದುರಾಳಿಗೆ ಒಂದೂ ಪಾಯಿಂಟ್ ಬಿಟ್ಟುಕೊಡದೇ ಗೆಲುವಿನ ಗುರಿ ತಲುಪಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಣಯ್ ಜಪಾನಿನ ಕೊಡೊಯ್ ನರೋಕಾ ವಿರುದ್ಧ ಸೆಣಸುವರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಐದನೇ ಶ್ರೇಯಾಂಕದಲ್ಲಿರುವ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ಡಬಲ್ಸ್ ವಿಭಾಗದಲ್ಲಿ 21–15–21–16ರಿಂದ ಜಪಾನಿನ ಅಕಿರಾ ಕೊಗಾ ಮತ್ತು ತೈಚಿ ಸೈಟೊ ವಿರುದ್ಧ ಜಯಭೇರಿ ಬಾರಿಸಿದರು.

ಭಾರತದ ಜೋಡಿಯು ಈಚೆಗೆ ಚೀನಾದಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ಚಿನ್ನದ ಪದಕ ಜಯಿಸಿತ್ತು.

ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ಎಂಟರ ಘಟ್ಟದಲ್ಲಿ ಇಂಡೋನೇಷ್ಯಾದ ಲಿಯೊ ರೊಲಿ ಕಾರ್ನಾಡೊ ಮತ್ತು ಡೇನಿಲ್ ಮಾರ್ಟಿನ್ ವಿರುದ್ಧ ಸೆಣಸಲಿದೆ.

ಗುಜರಾತ್ ಜೈಂಟ್ಸ್‌ಗೆ ಫಝಲ್ ಸಾರಥ್ಯ



ನವದೆಹಲಿ (ಪಿಟಿಐ): ಇರಾನ್ ನ ರಕ್ಷಣೆ ಆಟಗಾರ ಫಝಲ್ ಅತ್ರಾಚಲಿ ಅವರು ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮುನ್ನಡೆಸಲಿದ್ದಾರೆ. ಈ ಬಾರಿಯ ಕಬಡ್ಡಿ ಲೀಗ್ ಡಿ.2ರಿಂದ ಫೆ.21ರ ವರೆಗೆ ನಡೆಯಲಿದೆ.

ರಾಮ್ ಮೆಹರ್ ಸಿಂಗ್ ಕೋಚ್ ಆಗಿರುವ ತಂಡಕ್ಕೆ ಉಪ ನಾಯಕರಾಗಿ ರೋಹಿತ್ ಗುಲಿಯಾ ಅವರನ್ನು ನೇಮಿಸಲಾಗಿದೆ. ಜೈಂಟ್ಸ್ ತಂಡವು ತವರು ಮೈದಾನದಲ್ಲಿ ತೆಲುಗು ಟೈಟಾನ್ಸ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ಜೈಂಟ್ಸ್ ತಂಡವು 2017 ಮತ್ತು 2018ರಲ್ಲಿ ಫೈನಲ್ ಪ್ರವೇಶ ಪಡೆದಿತ್ತು. ಈ ಬಾರಿ ಚೊಚ್ಚಲ ಪ್ರಶಸ್ತಿ ಜಯಿಸುವ ಗುರಿಯೊಂದಿಗೆ ಹೊಸ ತಂಡವನ್ನು ರಚಿಸಲಾಗಿದೆ. 31 ವರ್ಷದ ಫಝಲ್ ಅವರು 2017ರ ಆವೃತ್ತಿಯಲ್ಲಿ ಫೈನಲ್ ತಲುಪಿದ ಜೈಂಟ್ಸ್ ತಂಡದ ಭಾಗವಾಗಿದ್ದರು. ಅವರು ಎರಡು ಬಾರಿ ಪ್ರೊ ಕಬಡ್ಡಿ ವಿಜೇತ ತಂಡದಲ್ಲಿ ಮತ್ತು ಮೂರು ಬಾರಿ ಏಷ್ಯನ್ ಕ್ರೀಡಾಕೂಟದ ಪದಕ ವಿಜೇತ ತಂಡದಲ್ಲಿ ಆಡಿದ್ದಾರೆ.

ನವೀನ್ ನಾಯಕ: ದಬಾಂಗ್ ಡೆಲ್ಲಿ ತಂಡಕ್ಕೆ ರೈಡರ್ ನವೀನ್ ಕುಮಾರ್ ಗೋಯತ್ ಅವರು ನಾಯಕರಾಗಿದ್ದಾರೆ.

ಟಿ20: ಕರ್ನಾಟಕದ ವನಿತೆಯರಿಗೆ ಪ್ರಶಸ್ತಿ

ಬೆಂಗಳೂರು: ಮಿಥಿಲಾ ವಿನೋದ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ 19 ವರ್ಷದೊಳಗಿನ ಮಹಿಳೆಯರ ಟಿ20 ಟ್ರೋಫಿ ಟೂರ್ನಿಯ ಫೈನಲ್ ಪಂದ್ಯದಲ್ಲಿ 30 ರನ್‌ಗಳಿಂದ ಆಂಧ್ರಪ್ರದೇಶ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು.

ಹಿಮಾಚಲ ಪ್ರದೇಶದ ಅಮ್ತಾರ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 92 ರನ್ ಗಳಿಸಿತು. ಮಿಥಿಲಾ ವಿನೋದ್ 23, ಬಿ.ಜಿ. ತೇಜಸ್ವಿನಿ 19 ರನ್ ಗಳಿಸಿದರು.

ಗುರಿಯನ್ನು ಬೆನ್ನಟ್ಟಿದ ಆಂಧ್ರ ಪ್ರದೇಶ ತಂಡ 18 ಓವರ್‌ಗಳಲ್ಲಿ 62 ರನ್‌ಗೆ ಆಲೌಟ್ ಆಯಿತು. ಮಿಥಿಲಾ 3 ವಿಕೆಟ್ ಪಡೆದರು.

ಚೆಸ್: ಫೈನಲ್‌ನಲ್ಲಿ ಸೋತ ಹಾರಿಕಾ

ಚೆನ್ನೈ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಹಾರಿಕಾ ಅವರು ಜೂಲಿಯಸ್ ಬೇಯ ಮಹಿಳಾ ಆನ್‌ಲೈನ್ ಸ್ಪೀಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ರನ್ನರ್ ಅಪ್ ಸ್ಥಾನ ಪಡೆದರು. ಅವರು ಫೈನಲ್‌ನಲ್ಲಿ ಚೀನಾದ ಹೌ ಯಿಫಾನ್ ಅವರಿಗೆ 11–15ರಲ್ಲಿ ಮಣಿದರು.

ಹಾರಿಕಾ ಅವರು ತಾವು ಗೆದ್ದ ಪಂದ್ಯಗಳಿಗಾಗಿ ₹3.52 ಲಕ್ಷ ಬಹುಮಾನ ಪಡೆದರು. 'ನಾನು ಇಂದು ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ಬೆನ್ನುಬೆನ್ನಿಗೆ ಪಂದ್ಯಗಳನ್ನುಆಡಬೇಕಾಗಿತ್ತು. ತುಂಬಾ ದಣಿದಿದ್ದೆ' ಎಂದು ಟೂರ್ನಿಯ ನಂತರ ಹಾರಿಕಾ ಪ್ರತಿಕ್ರಿಯಿಸಿದರು.


ಡಿ.ಹಾರಿಕಾ

ಹಾರಿಕಾ ಸೆಮಿಫೈನಲ್‌ನಲ್ಲಿ 12–10 ರಿಂದ ಕ್ಯಾತರಿನಾ ಲಾಗ್ನೊ (ರಷ್ಯಾ) ಅವರನ್ನು ಸೋಲಿಸಿದ್ದರು.

ಅಗ್ರಸ್ಥಾನ ಪಡೆದ ಹೌ ಬಹುಮಾನವಾಗಿ 8.33 ಲಕ್ಷ ಚೆಕ್ ಪಡೆದರು. ಹೆಚ್ಚಿನ ಶೇಕಡವಾರು ಗೆಲುವಿಗಾಗಿ ₹4.80 ಲಕ್ಷ ಬಹುಮಾನ ಪಡೆದರು. ಮೊದಲ ನಾಲ್ಕು ಪಂದ್ಯಗಳಲ್ಲೇ ಹೌ ಅವರು ಮೂರು ಪಾಯಿಂಟ್ ಲೀಡ್ ಪಡೆದರು. ಅವರ ಎದುರಾಳಿ ನಂತರ ಎರಡು ಪಂದ್ಯಗಳನ್ನು ಗೆದ್ದರೂ, ಒಟ್ಟಾರೆ ಹೌ ಮುನ್ನಡೆಗೆ ಸಮಸ್ಯೆಯಾಗಲಿಲ್ಲ.

ಬಿಎಫ್‌ಸಿ ತಂಡಕ್ಕೆ ಕಿರೀಟ

ಬೆಂಗಳೂರು: ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಜಯಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡವು ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡದೊಂದಿಗೆ ಗೋಲುರಹಿತವಾಗಿ ಡ್ರಾ ಸಾಧಿಸಿತು.

ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಚಾಂಪಿಯನ್ ಬಿಎಫ್‌ಸಿ ತಂಡವು ಜಾರ್ಜ್ ಹೂವರ್ ಕಪ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

ರನ್ನರ್ ಅಪ್ ಆದ ಸ್ಪೋರ್ಟಿಂಗ್ ಕ್ಲಬ್ ತಂಡವು ಸಿ.ಎಂ.ಎಚ್.ಬಾಷಾ ಕಪ್ ಪಡೆಯಿತು.

ಫೇರ್ ಪ್ಲೇ ಪ್ರಶಸ್ತಿಯು ಎಚ್‌ಎಎಲ್ ಎಫ್‌ಸಿ ತಂಡದ ಪಾಲಾಯಿತು. ಕೊಡಗು ಎಫ್‌ಸಿ ತಂಡದ ಶ್ಲೋಕ್ ತಿವಾರಿ ಅವರು (17 ಗೋಲು) ಗರಿಷ್ಠ ಗೋಲು ಗಳಿಸಿದ ಆಟಗಾರ ಎನಿಸಿಕೊಂಡರು.

ಕರ್ನಾಟಕಕ್ಕೆ ಜಯ

ಬೆಂಗಳೂರು: ಕವಿಯಾ ಪಕ್ಕಿರಿಸ್ವಾಮಿ ಅವರ ಅದ್ಭುತ ಆಟದ ನೆರವಿನಿಂದ ಕರ್ನಾಟಕ ತಂಡದವರು ಗುರುವಾರ ನಡೆದ ಮಹಿಳೆಯರ 28ನೇ ರಾಷ್ಟ್ರೀಯ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿನ್‌ನ ಪಂದ್ಯದಲ್ಲಿ 8–0ಯಿಂದ ತ್ರಿಪುರ ತಂಡದ ವಿರುದ್ಧ ಸುಲಭ ಗೆಲುವು ಸಾಧಿಸಿದರು.

ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ಮಹಿಳಾ ಟೆನಿಸ್ ಟೂರ್ನಿ

ನಾಲ್ವರು ಶ್ರೇಯಾಂಕ ಆಟಗಾರ್ತಿಯರ ನಿರ್ಗಮನ

ಬೆಂಗಳೂರು: ಅಗ್ರ ಶ್ರೇಯಾಂಕದ ಆಟಗಾರ್ತಿ ನಿಗಿನಾ ಅಬ್ದುರೈಮೋವಾ ಅವರಿಗೆ ನೇರ ಸೆಟ್‌ಗಳಲ್ಲಿ ಸೋಲಿನ ಆಘಾತ ನೀಡಿದ ಭಾರತದ ಝೀಲ್ ದೇಸಾಯಿ ತಮ್ಮ ವೃತ್ತಿ ಬದುಕಿನಲ್ಲೇ ಬಹುದೊಡ್ಡ ಗೆಲುವನ್ನು ಸಂಪಾದಿಸಿದರು. ಬೌರಿಂಗ್ ಇನ್‌ಸ್ಟಿಟ್ಯೂಟ್ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್‌ನಲ್ಲಿ ಗುರುವಾರ ನಿಗಿನಾ ಸೇರಿದಂತೆ ನಾಲ್ವರು ಶ್ರೇಯಾಂಕ ಆಟಗಾರ್ತಿಯರು ಪ್ರಿ-ಕ್ವಾರ್ಟರ್‌ಫೈನಲ್ ಹಂತದಲ್ಲೇ ಹೊರಬಿದ್ದರು.

ಝೀಲ್ ಜೊತೆ ಭಾರತದ ಇನ್ನಿಬ್ಬರು ಆಟಗಾರ್ತಿಯರು– ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಮತ್ತು ವೈಷ್ಣವಿ ಅಡ್ಕರ್– ಅವರೂ ತಮಗಿಂತ ಪ್ರಬಲ ಎದುರಾಳಿಗಳ ವಿರುದ್ಧ ಜಯಗಳಿಸಿ ಎಂಟರ ಘಟ್ಟಕ್ಕೆ ಕಾಲಿಟ್ಟರು.

ಅಹಮದಾಬಾದ್‌ನ ಝೀಲ್ ದೇಸಾಯಿ 6–4, 6–4 ರಿಂದ ಉಜ್ಬೇಕಿಸ್ತಾನದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. 21 ವರ್ಷದ ರಶ್ಮಿಕಾ ಇನ್ನೊಂದು ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿ, ತಮ್ಮ ಡಬಲ್ಸ್ ಜೊತೆಗಾತಿ ವೈದೇಹಿ ಚೌಧರಿ ಅವರನ್ನು 4–6, 7–5, 7–5 ರಿಂದ ಸೋಲಿಸಿದರು. ವೈದೇಹಿ ಈ ಟೂರ್ನಿಯಲ್ಲಿ ನಾಲ್ಕನೇ ಶ್ರೇಯಾಂಕ ಪಡೆದಿದ್ದಾರೆ. ಆಪ್ತ ಸ್ನೇಹಿತೆಯರ ಈ ಹಣಾಹಣಿ 178 ನಿಮಿಷ ನಡೆಯಿತು.

ವೈಷ್ಣವಿ 6–3, 7–6 (7–1)ರಿಂದ 8ನೇ ಶ್ರೇಯಾಂಕದ ಪುನ್ನಿನ್ ಕೊವಾಪಿಟುಕ್ಟೆಡ್ (ಥಾಯ್ಲೆಂಡ್) ಅವರನ್ನು ಸೋಲಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಆರನೇ ಶ್ರೇಯಾಂಕದ ಜೆನ್ನಿ ಡರ್ಸ್ಟ್ (ಸ್ವಿಜರ್ಲೆಂಡ್) ಅವರೂ 3–6, 4–6 ರಲ್ಲಿ ಜರ್ಮನಿಯ ಅಂಟೋನಿಯಾ ಶ್ಮಿಡ್ ಎದುರು ಅನಿರೀಕ್ಷಿತ ಸೋಲನುಭವಿಸಿದರು.


ಭಾರತದ ಝೀಲ್ ದೇಸಾಯಿ ಆಟದ ವೈಖರಿ –ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಮೂರನೇ ಶ್ರೇಯಾಂಕದ ಋತುಜಾ ಭೋಸಲೆ ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಪ್ರಾಂಜಲಾ ಯಡ್ಲಪಲ್ಲಿ ಅವರನ್ನು 6–4, 6–3 ರಿಂದ ಸೋಲಿಸಿದರು. ದ್ವಿತೀಯ ಶ್ರೇಯಾಂಕದ ಲನ್ಲಾನಾ ತರಾರುದಿ (ಥಾಯ್ಲೆಂಡ್) ಅವರು 6–1, 6–1 ರಿಂದ ಭಾರತದ ಸುಹಿತಾ ಮರೂರು ಅವರನ್ನು ಹಿಮ್ಮೆಟ್ಟಿಸಿದರು. ಐದನೇ ಶ್ರೇಯಾಂಕದ ಝಿಬೆಕ್ ಕುಲಂಬಯೇವಾ (ಕಜಕಸ್ತಾನ) ಅವರು 6–1, 6–3 ರಿಂದ ಕ್ವಾಲಿಫೈರ್ ಪೂಜಾ ಇಂಗಳೆ ಮೇಲೆ 6–1, 6–3ರಲ್ಲಿ ಜಯಗಳಿಸಿದರು.

ಡಬಲ್ಸ್: ಡಬಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕದ ಋತುಜಾ ಭೋಸಲೆ– ಝಿಬೆಕ್ ಕುಲುಂಬಯೇವಾ 6–2, 6–0 ಯಿಂದ ಪೂಜಾ–ಸಂದೀಪ್ತಿ ಸಿಂಗ್ ರಾವ್ ಅವರನ್ನು, ಮೂರನೇ ಶ್ರೇಯಾಂಕದ ಶ್ರೀವಲ್ಲಿ ರಶ್ಮಿಕಾ– ವೈದೇಹಿ ಚೌಧರಿ 6–0, 6–3 ರಿಂದ ಕಶಿಶ್ ಭಟಿಯಾ–ವನ್ಶಿತಾ– ಪಟಾನಿಯಾ ಅವರನ್ನು ಸೋಲಿಸಿದರು.

ಎರಡನೇ ಶ್ರೇಯಾಂಕದ ಜೆನ್ನಿ ಡರ್ಸ್ಟ್/ ಎಕಟೆರಿನಾ ಯಶಿನಾ ಮತ್ತು ಡಿಲೆಟ್ಟಾ ಚೆರುಬಿನಿ (ಇಟಲಿ)/ ಅಂಟಾನಿಯಾ ಸ್ಮಿಟ್ ನಡುವಣ ಪಂದ್ಯವನ್ನು ಮಬ್ಬು ಕವಿದ ಕಾರಣ ಮುಂದೂಡಲಾಯಿತು. ಪುನ್ನಿನ್ / ಅನ್ನಾ ಉರೆಕೆ ಮತ್ತು ಸಾಯಿ ಸಂಹಿತಾ/ ಸೋಹಾ ಸಾದಿಕ್ ಜೋಡಿ ನಡುವಣ ಪಂದ್ಯವೂ ಮುಂದಕ್ಕೆ ಹೋಯಿತು.